ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಿಎಂ ಹಾಸನಾಂಬೆ ದರ್ಶನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಹಾಸನದ ಹಾಸನಾಂಬೆ ದೇವಿಯ ದರ್ಶನ ಪಡೆದರು. ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಕೆ.ಎನ್.ರಾಜಣ್ಣ ಮೊದಲಾದ ಗಣ್ಯರು ಇದ್ದರು.

ಸಚಿವ ಸಂಪುಟ ಸಭೆಯಲ್ಲಿ ಸರಕಾರದ ಮಹತ್ವದ ತೀರ್ಮಾನ
ನಿವೃತ್ತ ನ್ಯಾಯಾಧೀಶರ ನೇತೃತ್ವದ ಏಕಸದಸ್ಯ ಆಯೋಗ ರಚನೆ

ಒಳ ಮೀಸಲು ಜಾರಿಗೆ ಅಸ್ತು

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಒಳ ಮೀಸಲು ಜಾರಿಗೆ ಸಂಬಂಧಿಸಿದಂತೆ ಏಕಸದಸ್ಯ ಆಯೋಗ ರಚಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರಕಾರ ಕೈಗೊಂಡಿದೆ. ಈ ಮೂಲಕ ಉಪಚುನಾವಣೆಯಲ್ಲಿ ದಲಿತ ಸಮುದಾಯದಿಂದ ಎದುರಾಗಬಹುದಾದ ವಿರೋಧದಿಂದ ಸರಕಾರ ತಪ್ಪಿಸಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದು, ಪರಿಶಿಷ್ಟ ಜಾತಿಯ ಒಳಮೀಸಲು ಜಾರಿಗೆ ಯಾವ ಅಂಕಿಅಂಶಗಳನ್ನು ಪರಿಗಣಿಸಬೇಕು ಎನ್ನುವ ಬಗ್ಗೆ ಪರಿಶೀಲಿಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಏಕಸದಸ್ಯ ಆಯೋಗ ರಚಿಸಲು ತೀರ್ಮಾನಿಸಲಾಗಿದೆ. ಇದಿಷ್ಟೇ ಅಲ್ಲದೇ, ಆಯೋಗದ ವರದಿ ಬರುವ ತನಕ ಎಲ್ಲ ನೇಮಕಗಳನ್ನು ಮುಂದೂಡಲು ತೀರ್ಮಾನಿಸಲಾಗಿದ್ದು, ಸದ್ಯ ಚಾಲ್ತಿಯಲ್ಲಿರುವ ನೇಮಕ ಅಧಿಸೂಚನೆಯನ್ನು ತಡೆಹಿಡಿಯಲು ನಿರ್ಧರಿಸಲಾಗಿದೆ.

ಒಳ ಮೀಸಲಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯಲ್ಲಿಯೇ ಪರ-ವಿರೋಧ ಚರ್ಚೆಯಿರುವುದರಿಂದ ಇದನ್ನು ನಿಭಾಯಿಸುವ ಹಾಗೂ ಸರಕಾರ, ಪಕ್ಷಕ್ಕೆ ಇದರಿಂದ ಯಾವುದೇ ಸಮಸ್ಯೆಯಾಗದಂತೆ ಎಚ್ಚರವಹಿಸುವ ಜವಾಬ್ದಾರಿಯನ್ನು ಸಮುದಾಯದ ಸಚಿವರ ಹೆಗಲಿಗೆ ಹೇರಲಾಗಿದೆ. ಈ ಬಗ್ಗೆ ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಒಳಮೀಸಲಾತಿ ಕಲ್ಪಿಸುವ ಬಗ್ಗೆ ಚರ್ಚೆ ನಡೆದಿದೆ. ಸುಪ್ರೀಂಕೋರ್ಟ್ ಎಸ್‌ಸಿಗೆ ಒಳಮೀಸಲು ನೀಡುವ ಅಧಿಕಾರವನ್ನು ರಾಜ್ಯಕ್ಕೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗ ನೇಮಿಸಿ, ಯಾವ ದತ್ತಾಂಶ ಪಡೆಯಬೇಕು ಎಂಬುದನ್ನು ಪರಿಶೀಲಿಸಿ ಮೂರು ತಿಂಗಳಲ್ಲಿ ವರದಿ ನೀಡಲು ಸೂಚಿಸಲಾಗಿದೆ ಎಂದರು.

ಆಯೋಗ ನೀಡುವ ವರದಿಯನ್ನು ಸರಕಾರ ಜಾರಿ ಮಾಡಲಿದೆ. ಒಳ ಮೀಸಲಾತಿಗೆ ಪರಿಶೀಲನಾರ್ಹ ದತ್ತಾಂಶ ಎಲ್ಲಿಂದ ಪಡೆಯಬೇಕು ಎನ್ನುವುದನ್ನು ಆಯೋಗಕ್ಕೆ ಷರತ್ತುಗಳು ಮತ್ತು ನಿಯಮಗಳಲ್ಲಿ ತಿಳಿಸಲಾಗುವುದು.

→ 4

ಪ್ರಮುಖಾಂಶಗಳು

- ಒಳ ಮೀಸಲು ಕಲ್ಪಿಸುವುದಕ್ಕೆ ಸುಪ್ರೀಂಕೋರ್ಟ್ ರಾಜ್ಯಗಳಿಗೆ ಅಧಿಕಾರ ನೀಡಿದ ಹಿನ್ನೆಲೆಯಲ್ಲಿ ಈ ತೀರ್ಮಾನ
- ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗದಿಂದ 3 ತಿಂಗಳಲ್ಲಿ ವರದಿ ಪಡೆದು ಒಳ ಮೀಸಲು ಜಾರಿ
- ಆಯೋಗದ ವರದಿ ಬರುವ ತನಕ ಎಲ್ಲ ನೇಮಕಗಳು ಮುಂದೂಡಿಕೆ
- ಒಳ ಮೀಸಲಿಗೆ ವಿರೋಧಿಸುತ್ತಿರುವ ಸಮುದಾಯಗಳನ್ನು ವಿಶ್ವಾಸಕ್ಕೆ ಪಡೆಯುವ ಹೊಣೆ ದಲಿತ ಸಚಿವರಿಗೆ

ಜಾತಿಗಣತಿಯ ದತ್ತಾಂಶ ಬಳಕೆ?

ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಿನ ಬಗ್ಗೆ ತೀರ್ಮಾನ ಕೈಗೊಂಡರೂ, ಜಾತಿ ಗಣತಿಯ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದರು. ಮೂಲಗಳ ಪ್ರಕಾರ ಜಾತಿ ಗಣತಿಯ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದ್ದು, ಸಚಿವರು ಪರ-ವಿರೋಧ ಚರ್ಚೆಗಳು ನಡೆದಿವೆ. ಜಾತಿ ಗಣತಿಯಲ್ಲಿರುವ ದತ್ತಾಂಶವನ್ನು ಒಳ ಮೀಸಲು ಜಾರಿಗೆ ಬಳಸಿಕೊಳ್ಳುವುದರಿಂದಾಗುವ ಸಾಧಕ-ಬಾಧಕದ ಬಗ್ಗೆಯೂ ಆಲೋಚನೆಗಳು ನಡೆದಿವೆ ಎನ್ನಲಾಗುತ್ತಿದೆ. ಸುಪ್ರೀಂಕೋರ್ಟ್ ನಂಬಲಾರ್ಹ ದತ್ತಾಂಶ ಎನ್ನುವ ಮಾತನ್ನು ಹೇಳಿರುವುದರಿಂದ ಜಾತಿ ಗಣತಿಯ ಅಂಕಿ-ಅಂಶವನ್ನು ಒಳ ಮೀಸಲಿಗೆ ಬಳಸುವ ಬಗ್ಗೆ ಸಲಹೆಗಳು ಕೇಳಿಬಂದಿದ್ದು, ಈ ಬಗ್ಗೆ ಯಾವುದೇ ಅಂತಿಮ ತೀರ್ಮಾನ ಕೈಗೊಂಡಿಲ್ಲ ಎನ್ನಲಾಗಿದೆ.

30 ವರ್ಷಗಳ ಹೋರಾಟಕ್ಕೆ ಫಲ ಸಿಕ್ಕಿದೆ. ಸರಕಾರ ಒಳಮೀಸಲಾತಿ ಕಲ್ಪಿಸಲು ಒಪ್ಪಿದೆ. ಆಯೋಗಕ್ಕೆ ಮೂರು ತಿಂಗಳು ಕಾಲಾವಕಾಶ ಕೊಡಲಾಗಿದೆ. ನಾವೆಲ್ಲರೂ ಒಟ್ಟಿಗೆ ಸೇರಿ ಆಯೋಗಕ್ಕೆ ನೆರವು ನೀಡುತ್ತೇವೆ. ನಾವೆಲ್ಲರೂ ಒಗ್ಗಟ್ಟಾಗಿ ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಇದು ಸುಲಭದ ಕೆಲಸ ಅಲ್ಲ. ಮೂರು ತಿಂಗಳಲ್ಲಿ ವರದಿ ತರಿಸಿ ಇದನ್ನು ಜಾರಿ ಮಾಡುತ್ತೇವೆ.
– ಕೆ.ಎಚ್.ಮುನಿಯಪ್ಪ, ಸಚಿವ

ಪರಿಶಿಷ್ಟ ಜಾತಿಯ ಎಲ್ಲ ಎಡ, ಬಲ, ಬೋವಿ, ಲಂಬಾಣಿ ಸಮುದಾಯದ ಶಾಸಕರು ಮತ್ತು ಸಚಿವರು ಒಮ್ಮತದಿಂದ ಆಯೋಗ ರಚಿಸಲು ಒಪ್ಪಿಗೆ ನೀಡಿದ್ದಾರೆ. ಇದು ಕಾಲಹರಣ ಮಾಡುವ ತಂತ್ರವಲ್ಲ. ಸರಕಾರಕ್ಕೆ ಒಳಮೀಸಲಾತಿ ನೀಡುವ ಬಗ್ಗೆ ಬದ್ಧತೆಯಿದೆ.
– ಎಸ್.ಸಿ.ಮಹದೇವಪ್ಪ, ಸಚಿವ

ಕೇಂದ್ರ ಸರಕಾರದಿಂದ ಮಹತ್ವದ ನಿರ್ಧಾರ
2028ಕ್ಕೆ ಕ್ಷೇತ್ರ ಮರುವಿಂಗಡಣೆ ಪೂರ್ಣ

2025ಕ್ಕೆ ಜನಗಣತಿ

ದೆಹಲಿ: 2028ರ ಲೋಕಸಭೆ ಚುನಾವಣೆಗೂ ಮುನ್ನ ದೇಶದಲ್ಲಿ ಜನಗಣತಿ ಪೂರ್ಣಗೊಳಿಸಲು ಕೇಂದ್ರ ಸರಕಾರ ತಯಾರಿ ನಡೆಸುತ್ತಿದೆ ಎಂದು ತಿಳಿದುಬಂದಿದೆ. ಇದಕ್ಕೂ ಮುನ್ನ 2011ರಲ್ಲಿ ಜನಗಣತಿ ಯಾಗಿತ್ತು.

2021ರಲ್ಲಿ ನಡೆಯಬೇಕಿದ್ದ ಜನಗಣತಿ ಕರೋನಾ ಕಾರಣದಿಂದಾಗಿ ಮುಂದೆ ಹೋಗಿದೆ. 4 ವರ್ಷಗಳ ದೀರ್ಘ ವಿಳಂಬ ನಂತರ ಜನ ಗಣತಿ ನಡೆಯಲಿದೆ. 2025ರಲ್ಲಿ ಶುರುವಾಗಿ 2026ರಲ್ಲಿ ಪೂರ್ಣಗೊಳ್ಳಲಿದೆ ಎಂಬ ನಿರೀಕ್ಷೆಯಿದೆ. ಜನಗಣತಿ ನಂತರ ಜನಸಂಖ್ಯೆ ಆಧಾರ ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಆಗಲಿದೆ. 2028ಕ್ಕೆ ಲೋಕಸಭಾ ಚುನಾವಣೆ ನಡೆಯುವ ವೇಳೆಗೆ ಪೂರ್ಣ ಪ್ರಮಾಣದ ಜನಗಣತಿ ವರದಿ ಸರಕಾರದ ಕೈಸೇರಲಿದೆ ಎನ್ನಲಾಗಿದೆ. ಮುಂದಿನ ವರ್ಷ ನಡೆಯಲಿರುವ ಜನಗಣತಿ ಎಲ್ಲ ಧರ್ಮಗಳು, ಸಾಮಾನ್ಯ ಮತ್ತು ಎಸ್‌ಸಿ–ಎಸ್‌ಟಿ ವರ್ಗಗಳಲ್ಲಿನ ಒಳಪಂಗಡಗಳ ದತ್ತಾಂಶವನ್ನೂ ಒಳಗೊಳ್ಳಲಿದೆ ಎನ್ನಲಾಗಿದೆ. ಜನಗಣತಿ ಒಂದನ್ನೇ ನಡೆಸುವುದಕ್ಕೆ ಪ್ರತಿಪಕ್ಷಗಳು ವಿರೋಧಿಸುತ್ತಿವೆ. ಜಾತಿಗಣತಿಯನ್ನೂ ನಡೆಸಬೇಕು ಎಂಬುದು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳ ಒತ್ತಾಯವಾಗಿದೆ.

- 2026ಕ್ಕೆ ಜನಗಣತಿ ಪೂರ್ಣ
- ಡಿಜಿಟಲ್ ಆಧಾರಿತ ಗಣತಿ
- ಬಳಿಕ ಕ್ಷೇತ್ರ ಮರುವಿಂಗಡಣೆ
- 4 ವರ್ಷ ವಿಳಂಬದ ಬಳಿಕ ಗಣತಿ
- ಪರಿಶಿಷ್ಟರ ದತ್ತಾಂಶವೂ ಸಂಗ್ರಹ
- 28ರ ಎಲೆಕ್ಷನ್‌ಗೆ ಗಣತಿ ಆಧಾರ
- ಜಾತಿಗಣತಿಗೂ ವಿಪಕ್ಷ ಆಗ್ರಹ

ರಿಜಿಸ್ಟ್ರಾರ್ ಸೇವಾವಧಿ ವಿಸ್ತರಣೆ

ಜನಗಣತಿಗಾಗಿಯೇ ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮಿಷನರ್ ಆಗಿರುವ ಮೃತ್ಯುಂಜಯ್ ಕುಮಾರ್ ನಾರಾಯಣ್ ಅವರ ಸೇವಾವಧಿಯನ್ನು 2026ರ ಆಗಸ್ಟ್‌ವರೆಗೆ ವಿಸ್ತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಷ್ಟ್ರೀಯ ಜನಗಣತಿ ಈ ಬಾರಿ ಮೊಬೈಲ್‌ಫೋನ್ ಅಪ್ಲಿಕೇಶನ್ ಆಧರಿಸಿ ಪೂರ್ಣ ಡಿಜಿಟಲ್ ಆಗಿರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಹಿಂದೆ ಹೇಳಿದ್ದರು.

ಪುಟ ತೆರೆದಂತೆ...

ಹೊಂದಾಣಿಕೆ ರಾಜಕೀಯ ಹೊಸದೇನಲ್ಲ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಸೋಲಲೇಬಾರದೆಂಬ ಧೋರಣೆ ತರವಲ್ಲ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಮಾತಂದ್ರೆ ಮಾತು

ಕೇಸರಿ ಹಾಗೂ ಕಾವಿ ಬಗ್ಗೆ ಬಿ.ಕೆ. ಹರಿಪ್ರಸಾದ್ ಅವರಿಗೆ ಗೌರವವಿಲ್ಲ. ಅವರ ಡಿಎನ್‌ಎ ಪರೀಕ್ಷೆ ಮಾಡಿಸಿದರೆ ಅದರಲ್ಲಿ ಕೇಸರಿ ಇದೆಯೇ, ಹಸಿರು ಇದೆಯೇ ಬಿಳಿ ಇದೆಯೇ ಎಂದು ತಿಳಿಯುತ್ತದೆ. ಪುಡಿ ರಾಜಕಾರಣಿ ಯಾರೆಂಬುದು ಮಲ್ಲೇಶ್ವರದ ಗಲ್ಲಿ ಗಲ್ಲಿಗೆ ಗೊತ್ತಿದೆ. ಚುನಾವಣೆ ಗೆಲ್ಲಲು ಯೋಗ್ಯತೆ ಇಲ್ಲದ ಪುಡಿ ರಾಜಕಾರಣಿ ಅವರೇ.

– ಹರೀಶ್ ಪೂಂಜ
ಶಾಸಕ

ದಾರಿದೀಪೋಕ್ತಿ

ನೀರು ಸುತ್ತಲೂ ಇದ್ದರೆ ಹಡಗು ಮುಳುಗುವುದಿಲ್ಲ. ಅದು ಒಳಗೆ ಬಂದಾಗ ಮಾತ್ರ ಮುಳುಗುತ್ತದೆ. ನಿಮ್ಮ ಸುತ್ತಮುತ್ತ ಇರುವುದು ನಿಮ್ಮ ಒಳಗೆ ಬರದಂತೆ ನೋಡಿಕೊಳ್ಳಬೇಕು. ಅದರ ಭಾರ ನಿಮ್ಮನ್ನು ಮುಳುಗಿಸಬಾರದು.

ವಕ್ರತುಂಡೋಕ್ತಿ

ಹೆಂಗಸರ ನಾಲಗೆಯನ್ನು ಖಡ್ಗ ಅಂತಾರೆ. ಹೀಗಾಗಿ ಅದು ತುಕ್ಕು ಹಿಡಿಯದೇ ಹರಿತವಾಗಿರುತ್ತದೆ.

ಮೂವರು ಉಗ್ರರ ಹತ್ಯೆ

ಶ್ರೀನಗರ: ಜಮ್ಮುವಿನ ಗಡಿ ಜಿಲ್ಲೆ ಅಖ್ನೂರ್‌ನ ಬತಲ್ ಪ್ರದೇಶದಲ್ಲಿ ಮಿಲಿಟರಿ ವಾಹನದ ಮೇಲಿನ ದಾಳಿ ಬಳಿಕ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಉಗ್ರರನ್ನು ಹೊಡೆದು ರುಳಿಸಲಾಗಿದೆ. ಕಳೆದ ವಾರ ವಿಧಾನಸಭೆ ಚುನಾವಣಾ ಫಲಿತಾಂಶದ ಬಳಿಕ ಜಮ್ಮು ಮತ್ತು ಕಾಶ್ಮೀರವು ಸರಣಿ ಭಯೋತ್ಪಾದಕ ದಾಳಿಗೆ ಸಾಕ್ಷಿಯಾಗಿದೆ.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸಹೋದರನಿಗೆ ರಿಲೀಫ್

ಗೋಪಾಲ ಜೋಶಿ ಸೇರಿ ಮೂವರ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ

ಬೆಂಗಳೂರು: ಕಳೆದ ಲೋಕಸಭಾ ಚುನಾವಣೆ ಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ 2 ಕೋಟಿ ರು. ಸುಲಿಗೆ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಬಂಧಿತರಾಗಿರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸಹೋದರ ಗೋಪಾಲ ಜೋಶಿ ಮತ್ತಿತರರ ವಿರುದ್ಧದ ತನಿಖೆಗೆ ಹೈಕೋರ್ಟ್ ಸೋಮವಾರ ಮಧ್ಯಂತರ ತಡೆಯಾಜ್ಞೆ ನೀಡಿದ್ದು, ಪೊಲೀಸ್ ಕಸ್ಟಡಿಯಲ್ಲಿರುವ ಅರ್ಜಿದಾರರನ್ನು ಕಾನೂನಿನ ಅನ್ವಯ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಹುಬ್ಬಳ್ಳಿಯ ಗೋಪಾಲ ಜೋಶಿ ಮತ್ತು ಅಜಯ್ ಜೋಶಿ ಹಾಗೂ ಬೆಂಗಳೂರಿನ ವಿಜಯಲಕ್ಷ್ಮಿ ಜೋಶಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಆದೇಶದಲ್ಲಿ ಏನಿದೆ?: ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಿಸಲು 25 ಲಕ್ಷ ರು. ಹಣ ಪಡೆದಿದ್ದಾರೆ ಎನ್ನಲಾಗಿದೆ. ಇದು ಚುನಾವಣೆಗೂ ಮುನ್ನ ನಡೆದಿರುವ ಘಟನೆ. ಟಿಕೆಟ್ ಸಿಗದೇ ಇದ್ದದ್ದು ಗೊತ್ತಾದ ನಂತರ ಸುನೀತಾ ಚವ್ಹಾಣ್ ದೂರು ದಾಖಲಿಸಬಹುದಿತ್ತು. ಆದರೆ, ಆರು ತಿಂಗಳ ಬಳಿಕ 2024 ಅಕ್ಟೋಬರ್ 17ರಂದು ದೂರು ದಾಖಲಿಸಿದ್ದಾರೆ. ಈ ನಡುವೆ, ಪಡೆದಿರುವ ಹಣವನ್ನು ಹಿಂದಿರುಗಿಸುವುದಾಗಿ ಆರೋಪಿಗಳು ಹೇಳುತ್ತಲೇ ಬಂದಿದ್ದಾರೆ. ಹೀಗಾಗಿ, ಇದು ಹಣದ ವಿವಾದವಾಗಿದೆ. ಇದಕ್ಕೆ ಈಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯ ನಿಷೇಧ ಕಾಯಿದೆ ಬಣ್ಣ ನೀಡಲಾಗಿದೆ. ಅರ್ಜಿದಾರರ ಮನೆಯಲ್ಲಿ ಜಾತಿ ನಿಂದನೆಯಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

→ 4

- ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ 2 ಕೋಟಿ ರು. ಸುಲಿಗೆ ಮಾಡಿದ್ದಾರೆ ಎಂಬ ಆರೋಪ
- ಪ್ರಕರಣಕ್ಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ನಿಷೇಧ ಕಾಯಿದೆ ಬಣ್ಣ ನೀಡಲಾಗಿದೆ ಎಂದ ನ್ಯಾಯಾಲಯ

ನಟ ದರ್ಶನ್ ಜಾಮೀನು ಅರ್ಜಿ ವಿಚಾರಣೆ ಇಂದು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ರುವ ನಟ ದರ್ಶನ್ ಅವರ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಮುಂದಿನ ವಿಚಾರಣೆ ಯನ್ನು ಮಂಗಳ ವಾರಕ್ಕೆ ಮುಂದೂಡಿದೆ. ಇತ್ತೀಚೆಗೆ ಸೆಷನ್ಸ್ ಕೋರ್ಟ್ ನಟ ದರ್ಶನ್ ಅವರಿಗೆ ಜಾಮೀನು ನಿರಾಕರಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಪರ ವಕೀಲರು ಅನಾರೋಗ್ಯ ಕಾರಣ ನೀಡಿ ಹೈಕೋರ್ಟ್‌ಗೆ ತುರ್ತು ಜಾಮೀನು ಅರ್ಜಿ ಸಲ್ಲಿಸಿದ್ದರು. ಸೋಮವಾರ ವಿಚಾರಣೆ ನಡೆಸಿದ ನ್ಯಾ. ಎಸ್.ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ, ದರ್ಶನ್ ಆರೋಗ್ಯದ ಬಗ್ಗೆ ಬಳ್ಳಾರಿ ಜೈಲು ಅಧಿಕಾರಿಗಳು ಸಲ್ಲಿಸಿದ ವರದಿ ಯನ್ನು ಪರಿಶೀಲಿಸಿ, ವಿಚಾರಣೆಯನ್ನು ಮಂಗಳವಾರ ಮುಂದೂಡಿದೆ.

ರಾಕೇಶ್ ಪಾಪಣ್ಣ, ಮಾಜಿ ಆಯುಕ್ತ, ಬಿಲ್ಡರ್‌ಗಳ ಮನೆಯಲ್ಲಿ ಶೋಧ

ಮುಡಾ ಹಗರಣ: 9 ಕಡೆ ಇ.ಡಿ ದಾಳಿ

ಬೆಂಗಳೂರು/ಮೈಸೂರು: ಮುಡಾ ನಿವೇಶನ ಹಂಚಿಕೆಯಲ್ಲಿನ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಇ.ಡಿ ಅಧಿಕಾರಿಗಳು ಮೈಸೂರು ಹಾಗೂ ಬೆಂಗಳೂರಿನ 9ಕ್ಕೂ ಹೆಚ್ಚು ಕಡೆ ದಾಳಿ ಮಾಡಿ, ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ.

ಮೈಸೂರಿನ ದಟ್ಟಗಳ್ಳಿ, ಶ್ರೀರಾಮಪುರ, ಮೇಟಗಳ್ಳಿಗಳಲ್ಲಿ ದಾಳಿ ನಡೆಸಲಾಗಿದೆ. ಮೇಟಗಳ್ಳಿಯ ಮುಡಾ ಅಧಿಕಾರಿ ಮಂಜುನಾಥ್ ಅವರ ಮನೆ ಮೇಲೆ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಬೆಂಗಳೂರಿನ ಜೆ.ಪಿ.ನಗರದಲ್ಲಿರುವ ಬಿಲ್ಡರ್ ಎನ್.ಮಂಜುನಾಥ್ ಮನೆ ಮೇಲೆ ಬೆಳಗ್ಗೆ 7 ಗಂಟೆಗೆ ಆರು ಅಧಿಕಾರಿಗಳ ತಂಡ ಏಕಾಏಕಿ ದಾಳಿ ನಡೆಸಿತು. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವ ಎನ್. ಕೆ.ಕಾರ್ತಿಕ್ ಡೆವಲಪರ್ಸ್ ಮೂಲಕ ಮೈಸೂರಿನ ಮುಡಾದಲ್ಲಿ ಕಾರ್ತಿಕ್ ಅವರು ಬಡಾವಣೆ ನಿರ್ಮಿಸಿ 50:50ರ ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡಿದ್ದರು.

→ 4

ಮಾಜಿ ಆಯುಕ್ತರಿಗೆ ಶಾಕ್

ಮಲ್ಲೇಶ್ವರಂನ 10ನೇ ಕ್ರಾಸ್‌ನಲ್ಲಿರುವ ಮುಡಾ ಮಾಜಿ ಆಯುಕ್ತ ನಟೇಶ್ ಮನೆ ಮೇಲೆ ಕೂಡ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ. ಸೋಮವಾರ ಬೆಳಗ್ಗೆ ದಿನೇಶ್ ಕುಮಾರ್ ನೆಲೆಸಿದ್ದ ಬಾಣಸವಾಡಿಯ ದೀಪಿಕಾ ರಾಯಲ್ ಅಪಾರ್ಟ್ಮೆಂಟ್ ಮೇಲೆ ಇ.ಡಿ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಇಡಿ ಅಧಿಕಾರಿಗಳ ದಾಳಿಯ ವೇಳೆ ದಿನೇಶ್ ಕುಮಾರ್ ವಾಕಿಂಗ್ ಮಾಡುತ್ತಿದ್ದರು. ಇಡಿ ಅಧಿಕಾರಿಗಳು ಮನೆಗೆ ಬಂದ ವಿಚಾರ ತಿಳಿದು ವಾಕಿಂಗ್ ಮಾಡುತ್ತಿದ್ದ ಸ್ಥಳದಿಂದಲೇ ದಿನೇಶ್ ಕುಮಾರ್ ಪರಾರಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಫನ್‌ತರಂಗ
– ರಘುಪತಿ ಶೃಂಗೇರಿ –

ಗೋಲ್‌ಗಪ್ಪಾ ರುಚಿ ಹೆಚ್ಚಳ ಮಾಡಲು ಯೂರಿಯಾ ಗೊಬ್ಬರ, ಹಾರ್ಪಿಕ್ ಬಳಸುತ್ತಿದ್ದ ಹೋಟೆಲ್ಗಳು
ಸುದ್ದಿ



ಇಂದು ಆರೋಗ್ಯ ವಿಮೆ ಘೋಷಣೆ

ದೆಹಲಿ: ದೀಪಾವಳಿ ಹಬ್ಬದ ಮೊದಲ ದಿನವಾದ ಅ.29 ಆರೋಗ್ಯ ರಕ್ಷಣೆಗೆ ಸಂಬಂಧಿಸಿದ 'ಧನ್ವಂತ್ರಿ ಜಯಂತಿ' ದಿನ ಹಾಗೂ 9ನೇ ಆಯುರ್ವೇದ ದಿನವೂ ಹೌದು. ಹಾಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಅಖಿಲ ಭಾರತ ಆಯುರ್ವೇದ ಸಂಸ್ಥೆಯಲ್ಲಿ 12,850 ಕೋಟಿ ರು. ಮೊತ್ತದ ಆರೋಗ್ಯ ಸುರಕ್ಷಾ ಯೋಜನೆಗಳನ್ನು ಘೋಷಿಸಲಿದ್ದಾರೆ. ಆರೋಗ್ಯ ಕ್ಷೇತ್ರಕ್ಕೆ ಮೂಲಸೌಕರ್ಯ ಒದಗಿಸುವ ಹಲವಾರು ಯೋಜನೆಗಳಿಗೆ ಶಂಕುಸ್ಥಾಪನೆ ಯನ್ನೂ ನೆರವೇರಿಸಲಿದ್ದಾರೆ. 70 ವರ್ಷವಾಗಿ ರುವ ಹಿರಿಯ ನಾಗರಿಕರನ್ನು ಆಯುಷ್ಮಾನ್ ಭಾರತ್ ಪ್ರಧಾನ್ ಮಂತ್ರಿ ಜನ ಆರೋಗ್ಯ ಯೋಜನೆಗೂ ಒಳಪಡಿಸುವ ಘೋಷಣೆ ಮಾಡಲಿದ್ದಾರೆ.

ಇಂಡಿಗೋ ಸಂಸ್ಥೆಗೆ 987 ಕೋಟಿ ನಷ್ಟ

ದೆಹಲಿ: ಇಂಡಿಗೋ ಏರ್‌ಲೈನ್ಸ್ ನಿರ್ವಹಿಸುವ ಇಂಟರ್ ಗ್ಲೋಬ್ ಏವಿಯೇಷನ್ ಕಳೆದ ಜುಲೈ–ಸೆಪ್ಟೆಂಬರ್ ಅವಧಿಗೆ 987 ಕೋಟಿ ರು. ನಷ್ಟ ಅನುಭವಿಸಿದೆ. ಅದು ಹಿಂದಿನ ತ್ರೈಮಾಸಿಕದಲ್ಲಿ 2,729 ಕೋಟಿ ರು. ನಿವ್ವಳ ಲಾಭಕ್ಕೆ ತದ್ವಿರುದ್ಧವಾಗಿದೆ. ಇಂಡಿಗೋ ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ 295 ಕೋಟಿ ರು. ನಷ್ಟವನ್ನು ದಾಖಲಿಸುತ್ತದೆ ಎಂದು ಅಂದಾಜಿಸಲಾಗಿದೆ. ಹೆಚ್ಚಿನ ಇಂಧನ ವೆಚ್ಚಗಳು ಮತ್ತು ವ್ಯವಸ್ಥೆಯಲ್ಲಿ ಹೆಚ್ಚಿನ ಹಣ ವ್ಯಯವಾಗಿದೆ. ಇಂಟರ್ ಗ್ಲೋಬ್ ಏವಿಯೇಷನ್ ತ್ರೈಮಾಸಿಕದಲ್ಲಿ 16,970 ಕೋಟಿ ರು. ಆದಾಯ ದಾಖಲಿಸಿದೆ. ಇದು ತ್ರೈಮಾಸಿಕ ಆಧಾರದ ಮೇಲೆ ಶೇ.13.3 ಇಳಿಕೆಯಾಗಿದೆ.

ವಿಮಾನದ ಕ್ಯಾಬಿನ್‌ನಲ್ಲಿ ಇರುಮುಡಿಗೆ ಸಮ್ಮತಿ

ದೆಹಲಿ: ಶಬರಿಮಲೆ ಯಾತ್ರಾರ್ಥಿಗಳು ಇನ್ಮುಂದೆ ವಿಮಾನದಲ್ಲಿ ಇರುಮುಡಿ ಸಾಗಿಸಲು ತಾತ್ಕಾಲಿಕ ಅನುಮತಿ ನೀಡಲಾಗಿದೆ. ಯಾತ್ರಾರ್ಥಿಗಳ ಪ್ರಯಾಣಕ್ಕೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ನಾಗರೀಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಹೇಳಿದ್ದಾರೆ. ಶಬರಿಮಲೆಗೆ ನವೆಂಬರ್‌ನಿಂದ ಜನವರಿವರೆಗೆ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಯ್ಯಪ್ಪನ ದರ್ಶನಕ್ಕೆ ತೆರಳುತ್ತಾರೆ. ಹಾಗಾಗಿ 2025ರ ಜನವರಿ 20ರವರೆಗೆ ಯಾತ್ರಾರ್ಥಿಗಳು ವಿಮಾನಗಳ ಕ್ಯಾಬಿನ್ ಬ್ಯಾಗ್‌ನಲ್ಲಿ ಇರುಮುಡಿ ತೆಗೆದುಕೊಂಡು ಪ್ರಯಾಣಿಸಬಹುದು. ಇದು ಸೀಮಿತ ಅವಧಿಯವರಿಗೆ ಮಾತ್ರ ಇರುತ್ತದೆ ಎಂದರು.

ಮಂದಾರಗಿರಿ ಕೋಡಿಯಲ್ಲಿ ಸೆಲ್ಫಿ ತೆಗೆಯಲು ಹೋಗಿ ಕೊಚ್ಚಿ ಹೋಗಿದ್ದ ಹಂಸ, 12 ತಾಸು ಬಳಿಕ ರಕ್ಷಣೆ

ಸಾವನ್ನೇ ಗೆದ್ದು ಬಂದ ಎಂಜಿನಿಯರಿಂಗ್ ವಿದ್ಯಾರ್ಥಿನಿ

ತುಮಕೂರು: ತಾಲೂಕಿನ ಮಂದಾರಗಿರಿ ಬಳಿಯ ಮೈದಾಳ ಕೆರೆಕೋಡಿಯಲ್ಲಿ ಸೆಲ್ಫಿ ಕ್ಲಿಕ್ಕಿಸಲು ಹೋಗಿ ಕೊಚ್ಚಿ ಹೋಗಿದ್ದ ವಿದ್ಯಾರ್ಥಿನಿಯನ್ನು 12 ಗಂಟೆ ಕಾರ್ಯಾಚರಣೆ ನಡೆಸಿ ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ ರಕ್ಷಿಸುವಲ್ಲಿ ಯಶಸ್ವಿಯಾಗಿದೆ.

ಗುಬ್ಬಿ ತಾಲೂಕಿನ ಶಿವರಾಂಪುರದ ಹಂಸ (19) ತುಮಕೂರಿನ ಸಿದ್ದಗಂಗಾ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದು, ಭಾನುವಾರ ಸ್ನೇಹಿತರೊಂದಿಗೆ ವಿಹಾರಕ್ಕಾಗಿ ಕೆರೆ ಬಳಿ ಹೋದಾಗ ಈ ಘಟನೆ ಸಂಭವಿಸಿದೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿ ಜಯಿಸಿ ಬಂದಿದ್ದಾರೆ.

ಏನಿದು ಪ್ರಕರಣ?: ಸ್ನೇಹಿತರೊಂದಿಗೆ ವಿಹಾರಕ್ಕಾಗಿ ಹೋಗಿದ್ದ ಹಂಸ, ಮೈದಾಳ ಕೆರೆಕೋಡಿಯಲ್ಲಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವಾಗ ಕಾಲು ಜಾರಿ ಬಿದ್ದು, ನೀರಿನಲ್ಲಿ ಕೊಚ್ಚಿಹೋಗಿ ಕಲ್ಲಿನ ಪೊಟರೆಯಲ್ಲಿ ಸಿಲುಕಿದ್ದರು.

- ದುರ್ಗಮ ಜಾಗದಲ್ಲಿ ಇಡೀ ರಾತ್ರಿ ಒಂಟಿಯಾಗಿ ಕಳೆದು ಬದುಕಿ ಬಂದ ಯುವತಿ
- ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ

ಸೆಲ್ಫಿಯಂತಹ ಹುಚ್ಚಾಟಕ್ಕೆ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ. ಪೋಷಕರು ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಯುವತಿಯನ್ನು ರಕ್ಷಿಸಿರುವ ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿಯ ಕಾರ್ಯ ಶ್ಲಾಘನೀಯ.
– ಅಶೋಕ್ ತುಮಕೂರು ಎಸ್‌ಪಿ

ಮಂದಾರಗಿರಿ ಬಳಿಯ ಮೈದಾಳ ಕೆರೆಕೋಡಿಯಲ್ಲಿ ಕೊಚ್ಚಿ ಹೋಗಿ ಕಲ್ಲಿನ ಪೊಟರೆಯಲ್ಲಿ ಸಿಲುಕಿದ್ದ ಯುವತಿಯನ್ನು ರಕ್ಷಿಸಿದ ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ.

ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿ ಭಾನುವಾರ ತಡರಾತ್ರಿವರೆಗೂ ರಕ್ಷಣಾ ಕಾರ್ಯಾಚರಣೆ ನಡೆಸಿದ್ದರು. ಆದರೆ ಆಕೆ ಸಿಲುಕಿದ್ದ ಜಾಗಕ್ಕೆ ಹೋಗುವುದು ಸವಾಲಿನ ಕೆಲಸವಾಗಿತ್ತು. ಸೋಮವಾರ ಬೆಳಗ್ಗೆಯಿಂದ ರಕ್ಷಣಾ ಕಾರ್ಯಾಚರಣೆ ಪುನರಾರಂಭಿಸಿದ್ದರು. ಕೋಡಿಯ ನೀರು ರಭಸದಿಂದ ಹರಿಯುತ್ತಿದ್ದರಿಂದ ಯುವತಿ ರಕ್ಷಣೆಗೆ ತೊಡಕಾಗಿತ್ತು. ನೀರನ್ನು ಬೇರೆಡೆಗೆ ತಿರುಗಿಸುವ ಮೂಲಕ, ಆಕೆ ಸಿಲುಕಿದ್ದ ಕಲ್ಲಿನ ಪೊಟರೆಯ ಜಾಗಕ್ಕೆ ನೀರು ಹೋಗದಂತೆ ತಡೆದು, ಬಳಿಕ ಯುವತಿಯನ್ನು ರಕ್ಷಿಸಿ, ಆಸ್ಪತ್ರೆ ದಾಖಲಿಸಲಾಗಿದೆ. ಯುವತಿ ದುರ್ಗಮ ಜಾಗದಲ್ಲಿ ಇಡೀ ರಾತ್ರಿ ಒಂಟಿಯಾಗಿ ಕಳೆದು ಬದುಕಿ ಬಂದಿದ್ದಾರೆ. ಅಗ್ನಿಶಾಮಕ, ಪೊಲೀಸ್ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.



ಸಮಾಚಾರ ಸಣ್ಣದಲ್ಲ

ರಾಜ್ಯಮಟ್ಟದ ಕುಸ್ತಿ: ಬಾಲಕಿಯರು

ಹಳಿಯಾಳ: ಶಾಲಾ ಶಿಕ್ಷಣ ಇಲಾಖೆಯ ಈ ಸಾಲಿನ ರಾಜ್ಯಮಟ್ಟದ 14 ವರ್ಷದ ಒಳಗಿನ ಬಾಲಕಿಯರ ಮತ್ತು ಬಾಲಕರ ಕುಸ್ತಿ ಪಂದ್ಯಾಟದಲ್ಲಿ ಹಳಿಯಾಳ ಬಾಲಕಿಯರು ಸತತ ಮೂರನೇ ಬಾರಿ ವೀರಾಗ್ರಣಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ರಾಮನಗರ ಜಿಲ್ಲೆ ಕನಕಪುರ ತಾಲೂಕಿನಲ್ಲಿ ಪಂದ್ಯಾಟ ಆಯೋಜಿಸಲಾಗಿತ್ತು. ಹಳಿಯಾಳದ ಸಂಧ್ಯಾ ಗೌಡ 30 ಕೆಜಿ ವಿಭಾಗದಲ್ಲಿ ಪ್ರಥಮ, ಗಾಯತ್ರಿ ಬೇಕವಾಡಕರ 39 ಕೆ.ಜಿ ವಿಭಾಗದಲ್ಲಿ ಪ್ರಥಮ, 46 ಕೆ.ಜಿ ವಿಭಾಗದಲ್ಲಿ ಪ್ರತೀಕ್ಷಾ ಶೇರಕರ ಪ್ರಥಮ, 62 ಕೆಜಿ ವಿಭಾಗದಲ್ಲಿ ಒಕ್ಷೇಲಿಯಾ ಹರನೋಡಕರ ಪ್ರಥಮ ಸ್ಥಾನ ಪಡೆದರು.54 ಕೆಜಿ ವಿಭಾಗದಲ್ಲಿ ಮಾರಸಿಲೀನಿಯಾ ಸಿದ್ದಿ ದ್ವಿತೀಯ, 33 ಕೆಜಿ ವಿಭಾಗದಲ್ಲಿ ಸುಶ್ಮಿತಾ ಕಮ್ಮಾರ ತೃತೀಯ, 36 ಕೆಜಿ ವಿಭಾಗದಲ್ಲಿ ರಿಯಾ ಬಸ್ತವಾಡಕರ ತೃತೀಯ, 50 ಕೆಜಿ ವಿಭಾಗದಲ್ಲಿ ಶೇರಿನಾ ಕಾಮ್ರೇಕರ್ ತೃತೀಯ ಹಾಗೂ 58 ಕೆಜಿ ವಿಭಾಗದಲ್ಲಿ ವೆಲ್ಲಿಸ್ಲಿಯ ಫರ್ನಾಂಡಿಸ್ ತೃತೀಯ ಸ್ಥಾನ ಪಡೆದರು. ಬಾಲಕರ ವಿಭಾಗದ 48 ಕೆಜಿ ಶಂಕರ್ ಗೌಡ ಪಾಟೀಲ್ ದ್ವಿತೀಯ, 51ಕೆಜಿಯಲ್ಲಿ ಪ್ರಸಾದ್ ಮುತ್ನಾಳ ದ್ವಿತೀಯ ಸ್ಥಾನ ಪಡೆದರು. ಎಲ್ಲ ಕುಸ್ತಿಪಟ್ಟುಗಳಿಗೆ ಹಾಗೂ ತರಬೇತುದಾರರಿಗೆ ಶಾಸಕ ಆರ್.ವಿ. ದೇಶಪಾಂಡೆ ಅಭಿನಂದನೆಸಲ್ಲಿಸಿದ್ದಾರೆ.

ಒಳ ಮೀಸಲು ಜಾರಿಗೆ ಕೊರಮರ ವಿರೋಧ

ಕಾರವಾರ: ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತಾಗಿ ಅವೈಜ್ಞಾನಿಕ ದತ್ತಾಂಶ ಆಧರಿಸಿ ಒಳ ಮೀಸಲಾತಿ ಜಾರಿಗೆ ಮುಂದಾಗಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆಯಾಗಿದೆ ಎಂದು ಅಖಿಲ ಕರ್ನಾಟಕ ಕೊರಮರ ಸಂಘ ತಿಳಿಸಿದೆ. ಪರಿಶಿಷ್ಟ ಜಾತಿ 101 ಜಾತಿಗಳನ್ನು ಒಳಗೊಂಡಿದೆ. ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ದಿಢೀರ್ ಒಳ ಮೀಸಲಾತಿ ಜಾರಿಗೆ ಏಕ ಪಕ್ಷೀಯ ನಿರ್ಧಾರ ಕೈಗೊಳ್ಳಲು ಮುಂದಾಗಿರುವ ಸರ್ಕಾರದ ನಡೆ ಖಂಡನೀಯ. 2011ರ ಜನಗಣತಿಯ ಅಂಕಿ ಅಂಶ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಆಧಾರದ ಮೇಲೆ 2016ರ ಕಾಂತರಾಜ್ ಆಯೋಗದ ವರದಿ ಕೂಡಲೇ ಜಾರಿಗೊಳಿಸಬೇಕು. 101 ಜಾತಿಗಳ ಮುಖಂಡರು ಹಾಗೂ ಚಿಂತಕರೊಂದಿಗೆ ಸಮಾಲೋಚನೆ ನಡೆಸಬೇಕು. ಅವುಗಳಲ್ಲಿ 51 ಜಾತಿಗಳು ಅಲೆಮಾರಿ ಮತ್ತು ವಿಮುಕ್ತ ಸಮುದಾಯಗಳಾಗಿವೆ. ಇವುಗಳ ಶ್ರೇಯೋಭಿವೃದ್ಧಿಗಾಗಿ ಸೂಕ್ತ ದತ್ತಾಂಶ ಸಂಗ್ರಹಿಸಿ ತಜ್ಞರ ಸಲಹೆಯಂತೆ ಮುಂದುವರಿಯಬೇಕು. ಒಂದೊಮ್ಮೆ ಸರ್ಕಾರ ಒಳ ಮೀಸಲಾತಿ ಜಾರಿಗೆ ಮುಂದಾದಲ್ಲಿ ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ಕೈಗೊಳ್ಳುವುದಾಗಿ ಅಖಿಲ ಕರ್ನಾಟಕ ಕೊರಮರ ಸಂಘದ ಜಿಲ್ಲಾ ಅಧ್ಯಕ್ಷ ಅಶೋಕ ಭಜಂತ್ರಿ ರಾಜ್ಯ ಸಮಿತಿ ಸಂಘಟನಾ ಕಾರ್ಯದರ್ಶಿ ಉದಯ ಬಶೆಟ್ಟಿ ಪತ್ರಿಕಾ ಹೇಳಿಕೆಯಲ್ಲಿ ದೂರಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ 33/11 ಕೆ.ವಿ ಗೋಕರ್ಣ ಉಪಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಇರುವದರಿಂದ ಗೋಕರ್ಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಮಾದನಗೇರಿ, ಗೋಕರ್ಣ, ತದಡಿ, ಬಂಕಿಕೊಡ್ಲ, ಬಿಜ್ಜೂರು, ಗಂಗಾವಳಿ, ಓಂ ಬಿಚ್ ಫೀಡರಿನ ಎಲ್ಲಾ ಭಾಗಗಳಲ್ಲಿ ಸಂತೆಗುಳಿ, ಕಲ್ಲಬ್ಬೆ, ಹೊದ್ಕೆ-ಶಿರೂರು, ಉಳ್ಳೂರು ಮಠ, ಹೊದ್ಕೆ ಶಿರೂರು ನಗರ ಶಾಖೆಯ ಫೀಡರಗಳಾದ ಕುಮಟಾ ನಗರ, ಫೀಡರಿನ ಭಾಗದಲ್ಲಿ ಜಂಗಲ್ ಕಟ್ಟಿಂಗ್ ಇರುವುದರಿಂದ ಅ.30 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು (ವಿ), ಹೆಸ್ಕಾಂ, ಕುಮಟಾ ಇವರು ಪ್ರಕಟಣೆ ತಿಳಿಸಿದ್ದಾರೆ.

CHANGE OF NAME

I, **ANITA** wife of Army No.JC-315122A Rank: NB-SUB, Name: Ningappa Kulenur, R/o Madina Colony, Mehaboob Nagar, Dharwad, Karnataka 580008 have changed my name from **ANITA to ANITA N KULENUR AND DOB: 01-06-1987 TO 01-06-1986** vide Affidavit Dt: 28-10-2024 before Notary Knojanavar.I.G, Dharwad.

Misc. No.5/2023

IN THE COURT OF THE HON'BLE CIVIL JUDGE AND JMFC, NAVALGUND, AT: NAVALGUND

Petitioner: Smt. Mahadevi W/o. Irappa Karasangi @ Karatangi.

V/s.

Respondents: Smt. Dyamavva W/o Parameshwarappa Toragalla (Since deceased by her LR's) Smt. Manjavva W/o.Ashok Divatagi @ Divatagera.

CITATION

That the above petition has filed for seeking set- aside the order of dismissal of the suit for non prosecution in O.S. No. 74/2015 passed 27/10/2018 on the file of the Hon'ble Civil Judge and JMFC, Navalgund. The below mentioned persons are arrayed as respondent No.2 & 3 i.e.,

1. Smt. Manjavva W/o.Ashok Divatagi @ Divatagera Age:44 Years, Occ: Householdwork, R/o.Ghataprabha, Tq.Gokak, Dist. Belagavi. 2. Pradeep S/o.Ashok Divatagi @ Divatagera Age: 20 Years, Occ: Student, R/o. Ghataprabha, Tq.Gokak, Dist. Belagavi. and the above said persons have any objection for the above said petition may appear in the court on 30/11/2024 at 11-00 AM either in person or through Advocate and file their objection. Failing which the said petition would be decided in your absence.

Given under my signature and seal of the court this_28/10/2024.

By order of th court.
Sheristedar,
Civil Judge & JMFC Court Navalgund.
Navalgund.

Anil H. Budarpur.
Advocate for the Petitioner.

ಪ್ರೂರ್ವಿಕರಿಂದ ಬಂದ ಕೃಷಿ ಭೂಮಿ ಉಳಿಸಿಕೊಳ್ಳಿ

ಬಂಡಲದಲ್ಲಿ ಅಡಕೆ ಎಲೆ ಚುಕ್ಕಿ ರೋಗ ಕುರಿತ ಮಾಹಿತಿ ಕಾರ್ಯಾಗಾರ | ರಾಮಕೃಷ್ಣ ಹೆಗಡೆ ಕಡವೆ ಸಲಹೆ

ಶಿರಸಿ: ಇಂದಿನ ಕಾಲಮಾನದಲ್ಲಿ ರೈತರ ಮಕ್ಕಳು ಉದ್ಯೋಗ ಅರಸಿ ನಗರ ಪ್ರದೇಶಕ್ಕೆ ವಲಸೆ ಹೋಗುವುದು ಸಹಜವಾಗಿದೆ. ಸಂಸಾರ ನಿರ್ವಹಣೆಗೆ ಉದ್ಯೋಗ ಅನಿವಾರ್ಯವೂ ಆಗಿದೆ. ಆದರೆ ಈ ರೀತಿ ನಗರ ಪ್ರದೇಶಗಳಲ್ಲಿ ವಾಸವಿರುವ ಅನೇಕ ಕುಟುಂಬ ಇಂದು ತಮ್ಮ ಕೃಷಿ ಭೂಮಿಯನ್ನು ಮಾರಾಟ ಮಾಡಲು ಮುಂದಾಗಿವೆ. ಪಾರಂಪರಿಕವಾಗಿ ನಮಗೆ ಬಂದಂತಹ, ಹಿರಿಯರು ನಮಗೆ ಹಸ್ತಾಂತರಿಸಿದಂತಹ ನಮ್ಮ ಭೂಮಿಯನ್ನು ನಾವು ಎಂದಿಗೂ ಉಳಿಸಿಕೊಳ್ಳಬೇಕೆನ್ನುವ ಮನೋಭಾವನೆಯನ್ನು ನಮ್ಮ ಮಕ್ಕಳಲ್ಲಿ ಮೂಡಿಸಬೇಕು. ನಮ್ಮ ಭೂಮಿ ನಮ್ಮಲ್ಲೇ ಉಳಿಯಬೇಕು ಎಂದು ಟಿಆರ್‌ಸಿ ಅಧ್ಯಕ್ಷರು ಹಾಗೂ ಕೆಡಿಸಿಸಿ ಬ್ಯಾಂಕ್ ನಿರ್ದೇಶಕರಾದ ರಾಮಕೃಷ್ಣ ಶ್ರೀಪಾದ ಹೆಗಡೆ ಕಡವೆ ಹೇಳಿದರು.

ಅವರು ತೋಟಗಾರಿಕಾ ಇಲಾಖೆ, ಟಿಆರ್‌ಸಿ, ರಾಗಿಹೊಸಳ್ಳಿ ಸೇವಾ ಸಹಕಾರಿ ಸಂಘ ಮತ್ತು ಪ್ರಿಂಪ್ರೋಸ್ ಕೋ-ಆಪರೇಟಿವ್ ಸೊಸೈಟಿ, ಬಂಡಲ ಇವುಗಳ ಸಂಯುಕ್ತ ಆಶ್ರಯದಲ್ಲಿ ಬಂಡಲದ ವಿವೇಕಾನಂದ ಸಭಾಭವನದಲ್ಲಿ ನಡೆದ ಅಡಕೆ ಎಲೆಚುಕ್ಕಿ ರೋಗದ ಬಗ್ಗೆ ಮಾಹಿತಿ-ಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಹಿಂದೆ ಎಲ್ಲ ರೈತರಲ್ಲಿಯೂ ಸಾವಯವ ಪದ್ಧತಿಯಲ್ಲಿ ಅಡಕೆ ತೋಟ ನಿರ್ವಹಿಸುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಅಡಕೆಗೆ ನಾನಾ ತರಹದ ರೋಗಗಳು ಕಾಣಿಸಿಕೊಳ್ಳತೊಡಗಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಮಣ್ಣಿಗೆ ಅವಶ್ಯವಿರುವ ಪೋಷಕಾಂಶಗಳು ಪ್ರಕೃತಿದತ್ತವಾಗಿಯೇ ದೊರೆಯುತ್ತದೆ. ಬೆಟ್ಟದಲ್ಲಿನ ಹಸಿ ಸೊಪ್ಪು ಮುಚ್ಚಿಗೆಯಿಂದ ತೋಟಕ್ಕೆ ಅನೇಕ ರೀತಿಯಲ್ಲಿ ಫಲವತ್ತತೆಯನ್ನು ಕೊಡುತ್ತದೆ. ಆದರೆ ಈಗ ಬಹುತೇಕ ಕಡೆ ಸೊಪ್ಪಿನ ಬದಲಾಗಿ ಮಲ್ಚಿಂಗ್ ಶೀಟ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ಇವೆಲ್ಲವೂ ಸಹ ಒಂದಿಲ್ಲೊಂದು ರೀತಿಯಲ್ಲಿ ರೋಗ ಬಾಧೆಗೆ ಕಾರಣವಾಗಿದೆ ಎಂದರು.

ಸಾವಯವ ಕೃಷಿ ಪದ್ಧತಿಯಲ್ಲಿ ಬೆಟ್ಟ ನಿರ್ವಹಣೆ ಸಹ ಪ್ರಮುಖ ಪಾತ್ರವಹಿಸುತ್ತದೆ. ಇತ್ತಿಚಿನ ಕೆಲ ವರ್ಷಗಳಲ್ಲಿ ಇದರ ನಿರ್ವಹಣೆ ಸಹ ಕಡಿಮೆಯಾಗಿದೆ. ಬೆಟ್ಟ ಭೂಮಿ ಮುಂದೊಂದು ದಿನ ಸಂಪೂರ್ಣವಾಗಿ ರೈತರ ಕೈತಪ್ಪುವ ಸಾಧ್ಯತೆಯಿದೆ. ಈಗಾಗಲೇ ಉತ್ತರಕನ್ನಡ ಜಿಲ್ಲೆಯಲ್ಲಿ ತೋಟಕ್ಕೆ ಬಿಡಲಾದ ಬೆಟ್ಟಭೂಮಿಯ ಪಹಣಿಯಲ್ಲಿ ಬ ಖರಾಬ ಎಂದು ನಮೂದಿಸಲಾಗಿದೆ. ಇದನ್ನು ಸರಕಾರದ ಹಂತದಲ್ಲಿ ಸರಿಪಡಿಸಲು ಎಲ್ಲ ರೀತಿಯಿಂದಲೂ ಪ್ರಯತ್ನಿಸಲಾಗುತ್ತಿದೆ. ಯಾವುದೇ ರೈತರ ಬಳಿ ಬೆಟ್ಟ ಭೂಮಿ ಕುರಿತು ಯಾವುದೇ ಹಿಂದಿನ ಮಾಹಿತಿ, ದಾಖಲೆ ಪತ್ರಗಳಿದ್ದಲ್ಲಿ ಟಿಆರ್‌ಸಿ ಕಚೇರಿಗೆ ಅದನ್ನು ತಲುಪಿಸಿದಲ್ಲಿ ಈ ಬಗ್ಗೆ ಹೋರಾಟ ನಡೆಸಲು ಇನ್ನು ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಶಿರಸಿ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಸತೀಶ ಹೆಗಡೆ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 36 ಸಾವಿರ ಎಕರೆ ಪ್ರದೇಶದಲ್ಲಿ ಅಡಕೆ ಬೆಳೆ ಬೆಳೆಯಲಾಗುತ್ತಿದೆ. ಕಳೆದ ಸಾಲಿನಲ್ಲಿ ಕರ್ನಾಟಕದಾದ್ಯಂತ ಸುಮಾರು 75 ಸಾವಿರ ಎಕರೆ ಪ್ರದೇಶದಲ್ಲಿ ಹೊಸ ಅಡಕೆ ತೋಟವನ್ನು ನಿರ್ಮಿಸಲಾಗಿದೆ ಹಾಗೂ ದೇಶದಾದ್ಯಂತ 1.24 ಲಕ್ಷ ಎಕರೆ ಹೊಸ ತೋಟ ನಿರ್ಮಿಸಲಾಗಿದೆ. ಎಲೆಚುಕ್ಕಿ ರೋಗ ಇತರ ರೋಗಗಳಿಂದ ಇದರಲ್ಲಿ ಶೇಕಡಾ 50 ರಷ್ಟು ನಷ್ಟವಾದರೂ ಇನ್ನುಳಿದ 50ರಷ್ಟು ಅಡಕೆ ಇನ್ನು ಐದಾರು ವರ್ಷಗಳಲ್ಲಿ ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಆದ್ದರಿಂದ ಅಡಕೆ ದರ ಮುಂದೊಂದು ದಿನ ಗಣನೀಯವಾಗಿ ಕುಸಿತ ಕಂಡರೂ ಆಶ್ಚರ್ಯವಿಲ್ಲ. ಇದರಿಂದ ನೇರವಾಗಿ ಬಲಿಪಶುವಾಗುವುದು ಸಾಂಪ್ರದಾಯಿಕ ಅಡಿಕೆ ಬೆಳೆಗಾರರಾದ ಉತ್ತರಕನ್ನಡ ಜಿಲ್ಲೆಯ ರೈತರಾಗಿದ್ದಾರೆ. ಈಗ ಎದುರಾಗಿರುವ ಎಲೆಚುಕ್ಕಿ ರೋಗದ ನಿಯಂತ್ರಣವೊಂದೇ ನಮ್ಮ ಗುರಿಯಾಗಬಾರದು. ಅಡಿಕೆಗೆ ಪರ್ಯಾಯ ಮಾರ್ಗ ಕಂಡುಕೊಳ್ಳುವುದು ಇಂದು ಅನಿವಾರ್ಯವಾಗಿದೆ.

> ಹೆಚ್ಚಿನ ತೇವಾಂಶದಿಂದ ಕೂಡಿದ ತೋಟದಲ್ಲಿ ಹಾಗೂ ಬಸಿಗಾಲುವೆ ಸಮರ್ಪಕವಾಗಿ ಇಲ್ಲದ ತೋಟದಲ್ಲಿ ಎಲೆಚುಕ್ಕಿ ರೋಗದ ತೀವ್ರತೆ ಅಧಿಕವಾಗಿರುತ್ತದೆ. ಮಣ್ಣು ಹುಳಿಯಾಗಿದ್ದರೆ ಯಾವುದೇ ಔಷಧ ನೀಡಿದರೂ ಪ್ರಯೋಜನ ಕಡಿಮೆ. ಮಣ್ಣು ಪರೀಕ್ಷೆ ಮಾಡಿಸಿ ನಂತರ ಅಗತ್ಯವಿರುವ ಪೋಷಕಾಂಶಗಳನ್ನು ನೀಡಿ. ಡಿಸೆಂಬರ್ ಅಂತ್ಯದವರೆಗೆ ಹೆಚ್ಚಿನ ಜಾಗೃತಿ ಅತ್ಯಗತ್ಯ.
>
> -ಡಾ. ವಿನಾಯಕ ಹೆಗಡೆ, ಪ್ರಧಾನ ವಿಜ್ಞಾನಿಗಳು, ಸಿಪಿಸಿಆರ್‌ಐ ಕಾಸರಗೋಡ

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಸಿಪಿಸಿಆರ್‌ಐ ಕಾಸರಗೋಡಿನ ಪ್ರಧಾನ ವಿಜ್ಞಾನಿಗಳಾದ ಡಾ. ವಿನಾಯಕ ಹೆಗಡೆ ಮಾತನಾಡಿ, ಎಲೆಚುಕ್ಕಿ ರೋಗವು ಶಿಲೀಂದ್ರದಿಂದ ಬರುವಂತಹ ರೋಗ. ಇದು ಗಾಳಿಯ ಮೂಲಕವೂ ಹರಡುವುದರಿಂದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಬಹುಬೇಗ ಪಸರಿಸುತ್ತದೆ. ನಾವು ಕೋವಿಡ್ ಸಂದರ್ಭದಲ್ಲಿ ಹೇಗೆ ಎಲ್ಲರೂ ಒಗ್ಗೂಡಿ ಕೋವಿಡ್ ಸೋಂಕನ್ನು ಎದುರಿಸಿದ್ದೆವೋ ಅದೇ ಮಾದರಿಯಲ್ಲಿ ಎಲ್ಲರೂ ಒಂದಾಗಿ ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಮಂಜಗುಣಿ ಗ್ರಾ.ಪಂ. ಅಧ್ಯಕ್ಷರಾದ ಗೋಪಾಲಕೃಷ್ಣ ಹೆಗಡೆ, ಹಾಗೂ ಟಿಆರ್‌ಸಿ ನಿರ್ದೇಶಕರಾದ ಎಸ್.ಎನ್. ಹೆಗಡೆ ಹಾವಳಿಮನೆ, ವಿಘ್ನೇಶ್ವರ ರಾಮಚಂದ್ರ ಹೆಗಡೆ ಅಗ್ಗಾಲ ಕಿಬ್ಬಳ್ಳಿ ಟಿಆರ್‌ಸಿ ಪ್ರಭಾರಿ ಮುಖ್ಯಕಾರ್ಯನಿರ್ವಾಹಕರಾದ ಕಿರಣ ಭಟ್ ಮಾವಿನಕೊಪ್ಪ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬಂಡಲ ಜಾನ್ಮನೆ ಮಂಜಗುಣಿ ಭಾಗದ ನೂರಕ್ಕೂ ಹೆಚ್ಚಿನ ರೈತರು ಪಾಲ್ಗೊಂಡಿದ್ದರು.

ಪಟಾಕಿ ಸಿಡಿಸದೇ ದೀಪ ಬೆಳಗಿ ಹಬ್ಬ ಆಚರಿಸಿ

ರಾಷ್ಟ್ರೀಯ ಹಸಿರು ಪ್ರಾಧಿಕಾರ ಸೂಚಿಸಿದ ಹಸಿರು ಪಟಾಕಿಗಳ ಮಾತ್ರ ದೀಪಾವಳಿಗೆ ಬಳಸಿ

ಕಾರವಾರ: ಬೆಳಕಿನ ಹಬ್ಬ ದೀಪಾವಳಿಯನ್ನು ಸುರಕ್ಷಿತವಾಗಿ ಯಾವುದೇ ಅವಗಡಗಳು ಸಂಭವಿಸದಂತೆ ಆಚರಿಸೋಣ. ದೀಪಾವಳಿ ಹಬ್ಬದಂದು ಪಟಾಕಿಯನ್ನು ಸಿಡಿಸುವುದು ಸರ್ವೆ ಸಾಮಾನ್ಯವಾದರೂ ಪಟಾಕಿ ಸಿಡಿಸುವುದರಿಂದ ಆಗುವ ವಾಯುಮಾಲಿನ್ಯ, ಶಬ್ದಮಾಲಿನ್ಯ ಮತ್ತು ಪರಿಸರ ಮಾಲಿನ್ಯವಾಗಿ ಉತ್ತಮ ವಾತಾವರಣ ವಿರದೇ ಸುಮಾರು ಮೂರರಿಂದ ನಾಲ್ಕು ದಿನಗಳವರೆಗೆ ಹೊಗೆಯಿಂದ ಕೂಡಿದ ವಾತಾವರಣವಿರುತ್ತದೆ.

ಇದು ಚಿಕ್ಕ ಮಕ್ಕಳ, ವಯಸ್ಸಾದವರ ಹಾಗೂ ಪ್ರಾಣಿ, ಪಕ್ಷಿಗಳ ಆರೋಗ್ಯದ ಮೇಲೆ ತೀವ್ರವಾಗಿ ಪರಿಣಾಮ ಬೀರುತ್ತದೆ. ಆದ್ದರಿಂದ ಪಟಾಕಿ ಸಿಡಿಸದಿರುವುದು ಉತ್ತಮ. ಪಟಾಕಿಯನ್ನು ಸಿಡಿಸುವುದೇ ಆದರೆ ಹಸಿರು ಪಟಾಕಿಗಳನ್ನು ಸಿಡಿಸಿ ಹಾಗೂ ಹೆಚ್ಚಿನ ಹೊಗೆ ಉಂಟು ಮಾಡುವ ಪಟಾಕಿಗಳಾದ ಹಾವಿನಬಾಲ / ಹನುಮನಬಾಲ ಈ ತರಹದ ಪಟಾಕಿಗಳನ್ನು ಉಪಯೋಗಿಸಬೇಡಿ.

ರಾಷ್ಟ್ರೀಯ ಹಸಿರು ಪ್ರಾಧಿಕಾರದ ಆದೇಶದಂತೆ ಇವರು ಶಿಫಾರಸ್ಸು ಮಾಡಿದ ಹಸಿರು ಪಟಾಕಿಗಳನ್ನು ಮಾತ್ರ ಉಪಯೋಗಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟ ನಿರ್ದೇಶನಗಳನ್ನು ನೀಡಿರುತ್ತದೆ. ಹಸಿರು ಪಟಾಕಿಯ ಮೇಲೆ ಹಸಿರು ಬಣ್ಣದಲ್ಲಿ CSIR (Council of Scientific & Industrial Research) & NEERI (National Environmental Engineering Research Institute) ಚಿಹ್ನೆ ಮತ್ತು ಕ್ಯೂಆರ್ ಕೋಡ್‌ಗಳನ್ನು ಮುದ್ರಿಸಲಾಗಿರುತ್ತದೆ. ಅಂತಹ ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಮತ್ತು ಸಾರ್ವಜನಿಕರು ಬಳಸಲು / ಉಪಯೋಗಿಸಲು ಅವಕಾಶ ಇರುತ್ತದೆ. ರಾತ್ರಿ 8 ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಪಟಾಕಿಗಳನ್ನು ಸಿಡಿಸಲು ಅವಕಾಶವಿರುತ್ತದೆ. 10 ಗಂಟೆಯ ನಂತರ ಪಟಾಕಿ ಸಿಡಿಸಬಾರದಾಗಿ ತಿಳಿಸಲಾಗಿದೆ ಹಾಗೂ ಸಾರ್ವಜನಿಕರು ಸಹಕರಿಸಲು ಈ ಮೂಲಕ ಕೋರಲಾಗಿದೆ.

ಪಟಾಕಿ ಸಿಡಿಸುವುದರಿಂದ ಆಗುವ ಪರಿಣಾಮಗಳು: ಪಟಾಕಿಗಳಲ್ಲಿ ಭಾರಲೋಹವನ್ನು ಬಳಸುವುದರಿಂದ ಮಾನವನ, ಪ್ರಾಣಿಗಳ ಪಕ್ಷಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಲ್ಲದೇ, ಹೆಚ್ಚಾಗಿ ವಾಯು ಮಾಲಿನ್ಯದಿಂದ ಪುಪ್ಪಸ ಸಂಬಂಧಿ ರೋಗಗಳು ಹೆಚ್ಚಾಗುತ್ತವೆ. ಅತಿ ಶಬ್ದದಿಂದ ಹೃದಯಾಘಾತವಾಗುವ ಸಂಭವವಿರುತ್ತದೆ ಹಾಗೂ ಕಿವಿಗೆ ತೊಂದರೆಯಾಗುವ ಸಂಭವವಿರುತ್ತದೆ. ಪಟಾಕಿಯ ಗಂಧಕದ ಹೊಗೆ ಯಿಂದಾಗಿ ಉಸಿರುಗಟ್ಟುವ ವಾತಾವರಣ ನಿರ್ಮಾಣ ವಾಗುತ್ತದೆ ಹಾಗೂ ಪಟಾಕಿ ಸಿಡಿತದಿಂದ ಬೆಂಕಿ ಕಿಡಿ ಕಣ್ಣಿಗೆ ಬಿದ್ದರೆ ಕಣ್ಣು ಕಳೆದುಕೊಳ್ಳುವ ಸಂಭವ ವಿರುತ್ತದೆ.

3120 ಡೆಸಿಬಲ್‌ಗಿಂತ ಹೆಚ್ಚು ಪ್ರಮಾಣದ ಶಬ್ದವಿದ್ದರೆ ಕಿವಿಗಳಿಗೆ ಹಾನಿಕಾರಕ. ಇನ್ನೂ ಪಟಾಕಿಗಳ ಶಬ್ದ 100 ರಿಂದ 120 ಡೆಸಿಬಲ್‌ಗಳಷ್ಟಿರುತ್ತದೆ. ಇದರಿಂದ ಮಕ್ಕಳು, ವಯೋವೃದ್ಧರಿಗೆ, ಸಾಕು ಪ್ರಾಣಿಗಳಿಗೆ ಕಿವುಡುತನ ಉಂಟಾಗಬಹುದು. ಮುಂಜಾಗೃತಾ ಕ್ರಮಗಳು: ಹಸಿರು ಪಟಾಕಿ ಸಿಡಿಸದೇ ಇರುವುದರಿಂದ ವಾಯು ಮಾಲಿನ್ಯ, ಶಬ್ಧಮಾಲಿನ್ಯ ಮತ್ತು ಮತ್ತು ಪರಿಸರ ಮಾಲಿನ್ಯವಾಗುವುದಿಲ್ಲ ಹಾಗೂ ಉತ್ತಮ ವಾತಾವರಣವಿರುತ್ತದೆ. ಪಟಾಕಿ ಸಿಡಿಸುವುದಾದರೆ ಹಸಿರು ಪಟಾಕಿಗಳನ್ನು ಮಾತ್ರ ಸಿಡಿಸಿ ಹಾಗೂ ಮುಂಜಾಗೃತಾ ಕ್ರಮವಾಗಿ ಪಟಾಕಿ ಹೊಡೆಯುವ ಸ್ಥಳದಲ್ಲಿ ಒಂದು ಬಕೆಟ್‌ನಲ್ಲಿ ನೀರನ್ನು ಸನಿಹ ಇಟ್ಟುಕೊಳ್ಳುವುದು. ಹಸಿರು ಪಟಾಕಿ ಸಿಡಿಸುವ ಸಮಯದಲ್ಲಿ ನೈಲಾನ್ / ಸಿಂಥಟಿಕ್ ಬಟ್ಟೆಗಳನ್ನು ಧರಿಸದೇ ಕೇವಲ ಹತ್ತಿಯ (ಕಾಟನ್) ಬಟ್ಟೆಯನ್ನು ಧರಿಸುವುದು.

ಹಸಿರು ಪಟಾಕಿಗಳನ್ನು ಸಿಡಿಸಿದ ನಂತರ ಸಿಡಿದಿದೆಯೇ ಎಂದು ಪರಿಶೀಲಿಸಲು ಹೋಗಬಾರದು ಏಕೆಂದರೆ ತಕ್ಷಣವೇ ಸಿಡಿಯುವ ಸಂಭವವಿರುತ್ತದೆ ಅಂತಹ ಸಂದರ್ಭದಲ್ಲಿ ಉದ್ದ ಕೋಲಿನಿಂದ ದೂರ ತಳ್ಳುವುದು ಸುರಕ್ಷಿತ. ಹಸಿರು ಪಟಾಕಿಗಳನ್ನು ಸಿಡಿಸುವ ಸಂದರ್ಭದಲ್ಲಿ ತೀರ ಕತ್ತಲಿನಲ್ಲಿ ಸಿಡಿಸಬೇಡಿ ಹಾಗೂ ಹೆಚ್ಚಿನ ಬೆಳಕಿನಲ್ಲಿ ಪಟಾಕಿ ಸಿಡಿಸಿ ಹಾಗೂ ಸಣ್ಣ ಮಕ್ಕಳನ್ನು ದೂರವಿರಿಸಿ ಕಿವಿ, ಕಣ್ಣುಗಳಿಗೆ ಹಾನಿಯಾಗದಂತೆ ತಡೆಯುವುದು. ಹಸಿರು ಪಟಾಕಿ / ರಾಕೆಟ್‌ಗಳನ್ನು ಬಿಡುವಾಗ ಅವು ಇತರರ ಮನೆಗಳ ಮೇಲೆ / ಒಣಗಿದ ತೆಂಗಿನಗರಿ ಹೊದಿಸಿದ ಮಾಡಿನ ಮೇಲೆ ಬೀಳದಂತೆ ಕ್ರಮ ವಹಿಸಿ.

ಹಸಿರು ಪಟಾಕಿ ಸಿಡಿಸುವಾಗ ಪಟಾಕಿ ಹಚ್ಚಲು ಉಪಯೋಗಿಸುವ ಊದಬತ್ತಿ / ಗಂಧದಕಡ್ಡಿ ಹೆಚ್ಚಿನ ಉದ್ದವಿರುವಂತೆ ನೋಡಿಕೊಳ್ಳಿ ಹಾಗೂ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರನ್ನು, ಪಕ್ಕದಲ್ಲಿರುವವರನ್ನು ಗಮನವಿರಿಸಿ ಸುರಕ್ಷತೆಯಿಂದ ಹಸಿರು ಪಟಾಕಿ ಸಿಡಿಸುವುದು. ದೀಪಗಳನ್ನು ಬೆಳಗಿಸುವ ಮೂಲಕ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸೋಣ. ಪಟಾಕಿ ಸಿಡಿಸುವದೇ ಆದರೆ ಕೇವಲ ಹಸಿರು ಪಟಾಕಿಗಳನ್ನು ಸುರಕ್ಷತೆಯಿಂದ ಸಿಡಿಸುವಂತೆ ಕರಾಮಾನಿ ಮಂಡಳಿಯ ಕಾರವಾರ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀಪಾವಳಿ: ಖಾಸಗಿ ಬಸ್ ಟಿಕೆಟ್ ದರ ದುಪ್ಪಟ್ಟು..!

ಅಂಕೋಲಾ : ದೀಪಾವಳಿ ಹಬ್ಬದ ನಿಮಿತ್ತ ಖಾಸಗಿ ಬಸ್ ಟಿಕೆಟ್ ದರ ದುಪ್ಪಟ್ಟು ಮಾಡಿದ್ದು ಪ್ರಯಾಣಿಕರು ಸಾರಿಗೆ ಸಂಸ್ಥೆಯ ನಿಯಂತ್ರಣಾಧಿಕಾರಿಗಳಿಗೆ ದೂರವಾಣಿ ಮೂಲಕ ದೂರು ಸಲ್ಲಿಸಿದ್ದಾರೆ.

ದೀಪಾವಳಿ ಹಬ್ಬದ ನಿಮಿತ್ತ ಸಾಲು ಸಾಲು ರಜೆಗಳಿದ್ದು ಬೆಂಗಳೂರಿನಲ್ಲಿ ವಾಸಿಸುತ್ತಿರುವವರು ಅಂಕೋಲಾ ಸೇರಿದಂತೆ ಸುತ್ತಮುತ್ತಲಿನ ತಾಲೂಕುಗಳಿಗೆ ಆಗಮಿಸುತ್ತಿರುವುದು ಸಾಮಾನ್ಯವಾಗಿದೆ. ಈ ಹಿಂದೆ ಬೆಂಗಳೂರಿನಿಂದ ಅಂಕೋಲೆಗೆ 800 ರೂಪಾಯಿ ನಿಗದಿ ಪಡಿಸಿದ್ದ ಖಾಸಗಿ ಬಸ್ ಟಿಕೆಟ್ ಬೆಲೆ ಏಕಾಏಕಿ 1800 ರೂಪಾಯಿಗಳಿಗೆ ಏರಿಕೆಯಾಗಿದ್ದು ಪ್ರಯಾಣಿಕರು ಅನ್ಯ ದಾರಿ ಕಾಣದೆ ದುಪ್ಪಟ್ಟು ಹಣ ತೆತ್ತು ಪ್ರಯಾಣಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಹಬ್ಬಕ್ಕೆ ಬಸ್ ಟಿಕೆಟ್ ದರ ಏರಿಕೆ ಮಾಡಿದ್ದಲ್ಲಿ ಖಾಸಗಿ ಬಸ್ ಮಾಲೀಕರ ಪರವಾನಿಗೆ ಪತ್ರ ಹಾಗೂ ನೋಂದಣಿ ಪತ್ರವನ್ನು ರದ್ದು ಮಾಡಲಾಗುತ್ತದೆ ಎಂಬ ಸಾರಿಗೆ ಇಲಾಖೆಯ ಮಂತ್ರಿಗಳ ಮಾತಿಗೆ ಬೆಲೆ ಇಲ್ಲವೇ ಎಂದು ಪ್ರಯಾಣಿಕರು ಪ್ರಶ್ನಿಸುವಂತಾಗಿದೆ. ಬೆಂಗಳೂರಿನಿಂದ ನಾಲ್ಕೈದು ಖಾಸಗಿ ಕಂಪನಿಯ ಬಸ್ಸುಗಳು ನಿತ್ಯವೂ ಬೆಂಗಳೂರಿನಿಂದ ಅಂಕೋಲಾಕ್ಕೆ ಪ್ರಯಾಣ ಬೆಳೆಸುತ್ತವೆ. ಸರಿ ಸುಮಾರು 500 ರಷ್ಟು ಪ್ರಯಾಣಿಕರು ಪ್ರತಿನಿತ್ಯ ಪ್ರಯಾಣ ಮಾಡುತ್ತಿದ್ದು ಏರಿಕೆಯಾಗಿರುವ ಖಾಸಗಿ ಬಸ್ ಟಿಕೆಟ್ ದರದಿಂದ ಕಂಗಾಲಾಗಿದ್ದಾರೆ. ಖಾಸಗಿ ಕಂಪನಿ ಸೇರಿದಂತೆ ಹಲವೆಡೆ ಕೆಲಸ ನಿರ್ವಹಿಸುತ್ತಿರುವವರು ಪ್ರತಿ ತಿಂಗಳು 15 ರಿಂದ 20 ಸಾವಿರ ರೂಪಾಯಿ ವೇತನ ಪಡೆದುಕೊಳ್ಳುತ್ತಿದ್ದಾರೆ. ಹಬ್ಬಕ್ಕೆಂದು ಊರಿಗೆ ಬರುವ ಇವರಿಗೆ ಏಕಾಏಕಿ ಏರಿಕೆಯಾಗಿರುವ ಬಸ್ ಟಿಕೆಟ್ ದರ ಅರಗಿಸಿಕೊಳ್ಳಲಾರದಂತಾಗಿದೆ

ಈ ಕುರಿತು ಸಾರಿಗೆ ಸಂಸ್ಥೆಯ ನಿಯಂತ್ರಣಾಧಿಕಾರಿಗಳನ್ನು ಕೇಳಿದಲ್ಲಿ, ದೀಪಾವಳಿ ಹಬ್ಬದಲ್ಲಿ ಟಿಕೆಟ್ ದರ ಹೆಚ್ಚಳ ಮಾಡಿರುವ ಖಾಸಗಿ ಬಸ್ ಮಾಲೀಕರ ಮೇಲೆ ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ದರ ಹೆಚ್ಚಳ ಮಾತ್ರ ಹಿಂತೆಗೆದುಕೊಂಡಿಲ್ಲ.

ಬ್ಯಾಂಕಿನ ಮುಂದೆ ಬೈಕ್ ನಿಲುಗಡೆ, ತೊಂದರೆ

ಹಳಿಯಾಳ: ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ ಸಾಕಷ್ಟು ಪ್ರಮಾಣದಲ್ಲಿ ಜನದಟ್ಟಣೆ ಸೇರುವುದರಿಂದ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಹತ್ತಿರ ಬಸ್ ನಿಲ್ದಾಣ ಹಾಗೂ ಆಸ್ಪತ್ರೆ ಇರುವುದರಿಂದ ಸಾವಿರಾರು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಲು ಹಾಗೂ ರೋಗಿಗಳಿಗೆ ಓಡಾಡಲು ತೊಂದರೆ ಉಂಟಾಗುತ್ತಿದೆ.

ಇದರಿಂದ ಬಸ್ ನಿಲ್ದಾಣಕ್ಕೆ ಆಗಮಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ, ಸಂಚರಿಸುವ ನಾಲ್ಕು ಚಕ್ರದ ವಾಹನಗಳು, ಮೋಟಾರ್ ಸೈಕಲ್ ಹಾಗೂ ತುರ್ತು ಅಂಬುಲೇನ್ಸಗಳ ಓಡಾಟಕ್ಕೆ ತೀವ್ರ ತೊಂದರೆ ಉಂಟಾಗುತ್ತಿದೆ.

ಉಪವಿಭಾಗಾಧಿಕಾರಿ ಇಂದ ನೋಟಿಸ್ : ಕಳೆದ ವರ್ಷ ಸರ್ಕಾರದ ಜಾಗಿಯಲ್ಲಿ ಅತಿಕ್ರಮಣ ಮಾಡಿ ಗೂಡಂಗಡಿ ನಿರ್ಮಾಣ ಮಾಡಿದ ಅಂಗಡಿಗಳನ್ನು ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಎಸ್ಬಿಐ ಬ್ಯಾಂಕ್ ನಿಂದ ಸಾರ್ವಜನಿಕರು ದೂರಿದಾಗ ಒಂದು ಪರ್ಯಾಯ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳಿ ಇಲ್ಲದಿದ್ದರೆ ಬ್ಯಾಂಕ್ ಸ್ಥಳಾಂತರ ಮಾಡಿಕೊಳ್ಳಿ ಎಂದು ಅಂದಿನ ಎಸಿ ಅವರು ಕಟ್ಟಡದ ಮಾಲೀಕರಿಗೆ ದಂಡ ಪ್ರಕ್ರಿಯಾ ಸಂಹಿತೆ-1973 ರ ಕಲಂ. 133 ಪ್ರಕಾರ ನೋಟಿಸ್ ನೀಡಿದರು.

ಕ್ರಮ ಕೈಗೊಳ್ಳದ ಪುರಸಭೆ : ಪಾರ್ಕಿಂಗ್ ಸಮಸ್ಯೆಯಿಂದ ಹಳಿಯಾಳದ ಜನ ಸಾಕಷ್ಟು ಸಮಸ್ಯೆ ಅನುಭವಿಸಿದ್ದರು ಈ ಬಗ್ಗೆ ಎಸಿ ಕ್ರಮ ಕೈಗೊಂಡರು ಹೊರತು ಸ್ಥಳೀಯ ಪುರಸಭೆ ಮೌನಕ್ಕೆ ಜಾರಿರುವುದು ಸಾಕಷ್ಟು ಅನುಮಾನ ಮಾಡಿದೆ ಅಲ್ಲದೆ ಕಳೆದ ಎರಡು ಮೂರು ವರ್ಷಗಳ ಹಿಂದೆ ಪುರಸಭಾ ಸದಸ್ಯ ಅವರು ಎಸ್‌ಬಿಐ ಮುಂಭಾಗದಿಂದ ಚಲಿಸುತ್ತಿರುವಾಗ ಟ್ರಾಫಿಕ್ ಸಮಸ್ಯೆಯಿಂದ ಅಪಘಾತ ಹೊಂದಿ ಗಾಯಗೊಂಡಿದರು ಆದರೂ ಸಹ ಪುರಸಭೆಯವರು ಕ್ರಮ ಕೈಗೊಳ್ಳದಿರುವುದು ವಿಷಾದನೀಯ ಸಂಗತಿ.

ಜಮಾತುಲ್ ಮುಸ್ಲಿಮೀನ್ ಅಧ್ಯಕ್ಷರ ವಜಾಕ್ಕೆ ಆಗ್ರಹ

ಶಿರಸಿ: ಹೊನ್ನಾವರ ತಾಲೂಕಿನ ಚಂದಾವರದ ಜಮಾತುಲ್ ಮುಸ್ಲಿಮೀನ್ ಅಧ್ಯಕ್ಷ ಆಸಿಫ್ ಅಲಿ ಅಬ್ದುಲ್ ಗಫಾರ್ ಗನಿ ಹಾಗೂ ಕಮಿಟಿಯನ್ನು ಕೂಡಲೇ ವಜಾಗೊಳಿಸಿಬೇಕೆಂದು ಆಗ್ರಹಿಸಿ ಜಮಾತುಲ್ ಮುಸ್ಲಿಮೀನ್ ಸರ್ವಸಾಧಾರಣಾ ಸಭೆಯ ಸದಸ್ಯರು ಶಿರಸಿಯಲ್ಲಿರುವ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ಮನವಿ ನೀಡಿದರು.

ಚಂದಾವರದ ಜಮಾತುಲ್ ಮುಸ್ಲಿಮೀನ್ ಅಧ್ಯಕ್ಷರಾದ ಅಸೀಫ್ ಅಲಿ ಅಬ್ದುಲ್ ಫಾರ್ ಗನಿ ಹಾಗೂ ಸದಸ್ಯರು ಈ ಹಿಂದಿನಿಂದಲೂ ಮೌಲಾನ ಆಗಿ ಕಾರ್ಯನಿರ್ವಹಿಸುತ್ತ ಬಂದ ಅಶ್ರಾಕ್ ಅಹಮದ್ ಇಬ್ರಾಹೀಮ್ ಅನ್ಸಾರಿ ಅವರು ಉತ್ತಮ ರೀತಿಯಿಂದ ಸ್ವಾಸ್ಥ್ಯ ಕಾಪಾಡಿಕೊಂಡು ಸಾಮರಸ್ಯ ಸಹಬಾಳ್ವೆಯಿಂದ ಧಾರ್ಮಿಕ ಬೋಧನೆಗಳನ್ನು ಮಾಡಿಕೊಂಡಿದ್ದು, ಉತ್ತಮ ವ್ಯಕ್ತಿತ್ವದ ಸನ್ನಡತೆಯ ವ್ಯಕ್ತಿಗಳಾಗಿರುತ್ತಾರೆ. ಆದರೂ ಸಹ ಅಧ್ಯಕ್ಷರು ಮೌಲಾನ ಬದಲಾಯಿಸಲು ಹವಣಿಸುತ್ತಿದ್ದಾರೆ. ಕಾನೂನು ಬಾಹಿರವಾಗಿ ಈ ರೀತಿ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದ್ದಕ್ಕೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 102873/2024 ನ್ನು ಮೌಲಾನ ದಾಖಲಿಸಿದ್ದಾರೆ. ಆದರೆ ಜಮಾತಿನ ಅಧ್ಯಕರು ಹಾಗೂ ಸದಸ್ಯರು ತಮ್ಮ ವೈಯಕ್ತಿಕ ಸ್ವಾರ್ಥ ಸಾಧನೆಗೆ ಹೇಗಾದರೂ ಮಾಡಿ ಮೌಲಾನ ಸರಿಯಾಗಿ ಕೆಲಸ ಮಾಡುತ್ತಿದ್ದರೂ ಕೂಡ ಬದಲಾಯಿಸಲೇಬೇಕೆಂಬ ಹಠಕ್ಕೆ ಬಿದ್ದು ಸಮಾಜದಲ್ಲಿ ಸ್ವಾಸ್ಥ್ಯ ಹಾಳಾಗಲು ತಪ್ಪು ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಅಲ್ಲದೆ ಅ. 1,2024 ರಂದು ಮೌಲಾನ್ ಅಶ್ವಾಕ್ ಇವರು ಚಂದಾವರದ ಮುಸ್ಲಿಂ ಸಮಾಜದ ಹೆಣ್ಣು ಮಕ್ಕಳು ಹಾಗೂ ಹೆಂಗಸರಿಗೆ ಮಾಟಮಂತ್ರ ವಶೀಕರಣ ಮಾಡಿಕೊಂಡು ಅಕ್ರಮ ಕೃತ್ಯವನ್ನು ಮೌಲಾನ್ ಅಶ್ವಾಕ್ ಎಂಬುವರು ಎಸಗಿದ್ದಾರೆ ಎಂಬ ಅರ್ಥದಲ್ಲಿ ನೋಟಿಸ್ಸು ನೀಡಿದ್ದಾರೆ. ಕೇವಲ ಯಾವುದೇ ಸಾಕ್ಷ್ಯ ಆಧಾರಗಳಿಲ್ಲದೇ, ಸಂತ್ರಸ್ತ ವ್ಯಕ್ತಿಗಳ ದೂರು ಇಲ್ಲದೆ ಏಕಾಏಕಿ ಸುಳ್ಳು ಆರೋಪ ಮಾಡಿರುತ್ತಾರೆ. ಅಲ್ಲದೆ ತಪ್ಪು ಮಾಹಿತಿಗಳನ್ನು ಸಾರ್ವಜನಿಕ ವಲಯದಲ್ಲಿ ಹರಿದಾಡಲು ಕಾರಣರಾಗಿರುತ್ತಾರೆ ಎಂದು ತಿಳಿಸಿದ್ದಾರೆ.

ಸಭ್ಯ ಯುವತಿಯರು ಹಾಗೂ ಮಹಿಳೆಯರ ಸುಳ್ಳು ವದಂತಿಯನ್ನು ಹರಡಿದ ಕಾರಣ ಮಾನ ಹಾನಿಯಾಗಲು ಕಾರಣರಾಗಿರುತ್ತಾರೆ. ಈ ಹಿಂದೆ ಅಧ್ಯಕ್ಷರ ಕಾರ್ಯವೈಖರಿಗೆ ಬೇಸತ್ತು ಕಮೀಟಿಯ 5 ಸದಸ್ಯರು ರಾಜೀನಾಮೆ ಕೂಡ ವಕ್ಫ್ ಕಚೇರಿಗೆ ನೀಡಿದ್ದಾರೆ. ಕಾರಣ ಅಧ್ಯಕ್ಷ ಅಸೀಫ್ ಅಲಿ ಅಬ್ದುಲ್‌ಫಾರ್ ಗನಿ ಹಾಗೂ ಕಮೀಟಿಯನ್ನು ತಕ್ಷಣ ವಜಾಗೊಳಿಸಬೇಕೆಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮನವಿ ನೀಡುವ ಸಂದರ್ಭದಲ್ಲಿ ಜಾಮತುಲ್ ಮುಸ್ಲೀಮೀನ್ ಅಧ್ಯಕ್ಷರ ಭಾವಚಿತ್ರಕ್ಕೆ ಚಪ್ಪಲಿ ಹಾರಹಾಕಿ ಮೆಟ್ಟಿ ಉಗ್ರವಾಗಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯ ನೇತ್ರತ್ವವನ್ನು ಜಮಾತುಲ್ ಮುಸ್ಲಿಂಮೀನ್ ಕಮಟಿ ಮಾಜಿ ಅಧ್ಯಕ್ಷ ಇಮಾಮ್ ಗಣಿ, ಪಂಚಾಯತಿ ಸದಸ್ಯೆ ಹುದಾಹುಸೈನ್ ಶೇಖ್ ವಹಿಸಿದ್ದರು. ಪ್ರತಿಭಟನೆಯಲ್ಲಿ ನೂರಜಾನ್, ಕೌಸರ ಜಬೀರ ಶೇಖ್, ನಾಜೀಮಾ ಶೇಖ್, ಫರೀನಾ ಖಾನ್, ಝೀನತ್ ಖಾಜಿ, ನೂರಜಹಾನ್ ಖಾನ್, ಸಲ್ಮಾ ಗಣಿ, ಸಾಜಿದ್ ಸಂಶಿ, ಕುತೇಜಾ ಮುಲ್ಲಾ ಹೀಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಜಮಾಯಿಸಿದ್ದರು.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಇಂದು

ಕಾರವಾರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಯುಷ್ ಇಲಾಖೆ ಆರರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಕಾರವಾರ, ನಗರಸಭೆ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಧನ್ವಂತರಿ ಜಯಂತಿ ಅಂಗವಾಗಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಅ.29 ರಂದು ಬೆಳಗ್ಗೆ 10.30 ಕ್ಕೆ ಸರ್ಕಾರಿ ನೌಕರರ ಭವನ ಕಾರವಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಉಸ್ತುವಾರಿ ಸಚಿವ ಮಾಂಕಾಳ ಎಸ್ ವೈದ್ಯ, ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಏಜೆನ್ಸಿ ಲಿಮಿಟೆಡ್ ಅಧ್ಯಕ್ಷ ಸತೀಶ್ ಕೆ. ಸೈಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ದಿನೇಶ್ ಗುಂಡೂರಾವ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಉಳ್ವೇಕರ, ನಗರ ಸಭೆ ಅಧ್ಯಕ್ಷ ರವಿರಾಜ ಚಂದ್ರಹಾಸ ಅಕೋಲೇಕರ ಮತ್ತಿತರು ಪಾಲ್ಗೊಳ್ಳಲಿದ್ದಾರೆ.

ನರೇಗಾಕ್ಕೆ ಡಿಜಿಟಲ್ ತಂತ್ರಜ್ಞಾನ ಅಳವಡಿಕೆ

ಕಾರವಾರ: ಗ್ರಾಮೀಣ ಪ್ರದೇಶದಲ್ಲೂ ಸ್ಮಾರ್ಟ್ ಫೋನ್‌ಗಳ ಬಳಕೆ ಹಿನ್ನಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಯುಕ್ತಾಲಯವು ಮಹಾತ್ಮ ಗಾಂಧಿ ನರೇಗಾ ಯೋಜನೆಯ 2025-26ನೇ ಸಾಲಿನ ಕ್ರಿಯಾ ಯೋಜನೆ ತಯಾರಿಕೆಗಾಗಿ ಈ ಬಾರಿ ನರೇಗಾಕ್ಕೆ ಡಿಜಿಟಲ್ ತಂತ್ರಜ್ಞಾನ ಅಳವಡಿಸಿ ಕ್ಯೂಆರ್ ಕೋಡ್ ಅಭಿವೃದ್ಧಿಪಡಿಸಿದ್ದು, ಗ್ರಾಮೀಣ ಭಾಗದ ಪ್ರತಿಯೊಬ್ಬ ನಾಗರಿಕರು ತಮ್ಮ ಸ್ಮಾರ್ಟ್ ಫೋನ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅರ್ಜಿ ಸಲ್ಲಿಸಿ ನರೇಗಾದಡಿ ಸಿಗುವ ಕೂಲಿ ಕೆಲಸ ಹಾಗೂ ವೈಯಕ್ತಿಕ ಕಾಮಗಾರಿ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾರವಾರ ತಾಲೂಕು ಪಂಚಾಯತ್‌ನ ನರೇಗಾ ಸಹಾಯಕ ನಿರ್ದೇಶಕ ಸಂದೀಪ್ ಕೋಠಾರಕರ ಹೇಳಿದರು.

ಅವರು ಸೋಮವಾರ, ಕಾರವಾರ ತಾಲ್ಲೂಕಿನ ಚಂಡಿಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಾದ ನ್ಯಾಯಬೆಲೆ ಅಂಗಡಿ, ಬ್ಯಾಂಕ್, ಬಸ್ ನಿಲ್ದಾಣ, ಗ್ರಾಮ ಒನ್ ಕೇಂದ್ರದ ಮುಂಭಾಗದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 2025-26ನೇ ಸಾಲಿನ ಕ್ರಿಯಾ ಯೋಜನೆ ಸಿದ್ದಪಡಿಸುವ ಸಲುವಾಗಿ ಐಇಸಿ ಚಟುವಟಿಕೆಗಳಡಿ ಸೋಮವಾರ ಆಯೋಜಿಸಿದ್ದ ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ ಅಭಿಯಾನಲ್ಲಿ ಪಾಲ್ಗೊಂಡು ನರೇಗಾ ಮಾಹಿತಿ ಹಾಗೂ ಕ್ಯೂಆರ್ ಕೋಡ್‌ಯುಳ್ಳ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಿ ಅವರು ಮಾತನಾಡಿದರು.

ತಾಲೂಕಿನ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪ್ರತಿಯೊಂದು ಹಳ್ಳಿಗಳ ಜನಸಾಮಾನ್ಯರು ಹಾಗೂ ಸ್ವ-ಸಹಾಯ ಸಂಘದ ಮಹಿಳೆಯರು ಮಹಾತ್ಮ ಗಾಂಧಿ ನರೇಗಾದಡಿ ಲಭ್ಯವಿರುವ ವೈಯಕ್ತಿಕ ಕಾಮಗಾರಿಗಳ ಸೌಲಭ್ಯ ತೆಗೆದುಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ಆಧರಿಸಿ ಮುಂದಿನ ವರ್ಷದ ಕ್ರಿಯಾ ಯೋಜನೆಯಲ್ಲಿ ಅವರ ಹೆಸರು ಸೇರಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಸಾರ್ವಜನಿಕ ಸ್ಥಳಗಳಾದ ನ್ಯಾಯಬೆಲೆ ಅಂಗಡಿ, ಬ್ಯಾಂಕ್, ಬಸ್ ನಿಲ್ದಾಣ, ಗ್ರಾಮ ಒನ್ ಕೇಂದ್ರದ ಮುಂಭಾಗದಲ್ಲಿ ನರೇಗಾ ಮಾಹಿತಿ ಹಾಗೂ ಕ್ಯೂಆರ್ ಕೋಡ್‌ಯುಳ್ಳ ಕರಪತ್ರಗಳನ್ನು ಅಂಟಿಸುವುದು ಹಾಗೂ ಸಾರ್ವಜನಿಕರಿಗೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಪೂಜಾ ನಾಯ್ಕ್, ಉಪಾಧ್ಯಕ್ಷ ಜ್ಯೋಗಿ ಗುನಗಿ, ಸರ್ವ ಸದಸ್ಯರು, ಪಿಡಿಒ ಮಂಜುನಾಥ ಟಿ.ಸಿ., ತಾಪಂ ತಾಂತ್ರಿಕ ಸಂಯೋಜಕ ಸೂರಜ್ ಗುನಗಿ, ತಾಂತ್ರಿಕ ಸಹಾಯಕ ಪ್ರಕಾಶ ನಾಯ್ಕ, ಗ್ರಾಪಂ ಕಾರ್ಯದರ್ಶಿ, ಸಿಬ್ಬಂದಿ, ಎನ್‌ಆರ್‌ಎಲ್‌ಎಂ ಯೋಜನೆಯಡಿ ಕಾರ್ಯನಿರ್ವಹಿಸುವ ಸ್ವಸಹಾಯ ಸಂಘಗಳ ಸಿಬ್ಬಂದಿ ಉಪಸ್ಥಿತರಿದ್ದರು.

ನಮ್ಮ ಕ್ಲಿನಿಕ್‌ನಿಂದ ಆರೋಗ್ಯ ಸೇವೆ

ಯಲ್ಲಾಪುರ : 28 ಆರೋಗ್ಯ ಸೇವೆಗಳನ್ನು ಸಮುದಾಯಕ್ಕೆ ಇನ್ನಷ್ಟು ಹತ್ತಿರಗೊಳಿಸಲು 'ನಮ್ಮ ಕ್ಲಿನಿಕ' ಸಹಕಾರಿಯಾಗಿದ್ದು ಪಟ್ಟಣದ ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕ ಶಿವರಾಮ ಹೆಬ್ಬಾರ ಕರೆ ನೀಡಿದರು. ಅವರು ಉದ್ಯಮ ನಗರದಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟಿಸಿ ಮಾತನಾಡುತ್ತ. ವೈದ್ಯರು ಉತ್ತಮ ಗುಣಮಟ್ಟದ ಸೇವೆಯನ್ನು ಸಾರ್ವಜನಿಕರಿಗೆ ನೀಡಬೇಕೆಂದು ಕಿವಿ ಮಾತು ಹೇಳಿದರು.

ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ನಟರಾಜ್ ಕೆ. ಮಾತನಾಡಿ, ಪ್ರತಿ ತಾಲೂಕಿಗೆ ಒಂದರಂತೆ ನಗರ ಪ್ರದೇಶಕ್ಕೆ ಸೀಮಿತಗೊಳಿಸಿ ಒಂದು 'ನಮ್ಮ ಕ್ಲಿನಿಕ್' ಅನ್ನು 15ನೇ ಹಣಕಾಸು ಆಯವ್ಯಯದಲ್ಲಿ ಆರಂಭಿಸಿಲಾಗಿರುತ್ತದೆ. ಪಟ್ಟಣ ಪ್ರದೇಶದ 15-20 ಸಾವಿರ ಜನಸಂಖ್ಯೆಗೆ ಆರೋಗ್ಯ ಸೇವೆಗಳನ್ನು ಇನ್ನೂ ಗುಣಮಟ್ಟದ ಸೇವೆಗಳನ್ನು ನೀಡಲು ಅನುಕೂಲವಾಗುವಂತೆ 'ನಮ್ಮ ಕ್ಲಿನಿಕ್' ಸ್ಥಾಪಿಸಲಾಗಿದೆ. ಬಡ ಮತ್ತು ಮಧ್ಯಮ ವರ್ಗದ ಜನತೆಗೆ ಇದರಿಂದ ಹೆಚ್ಚಿನ ಪ್ರಯೋಜನವಾಗಲಿದೆ. 'ನಮ್ಮ ಕ್ಲಿನಿಕ್'ನಲ್ಲಿ ಯೋಗ ಶಿಕ್ಷಣ ಕೂಡ ನಡೆಯಲಿದೆ ಎಂದು ಹೇಳಿದರು. ಪಟ್ಟಣ ಪಂಚಾಯತ ಉಪಾಧ್ಯಕ್ಷ ಅಮಿತ ಅಂಗಡಿ, ಸದಸ್ಯ ಸತೀಶ ನಾಯ್ಕ, ಗೀತಾ ದೇಶಭಂಡಾರಿ, ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಸುನೀಲ ಗಾವಡೆ, ತಾಲೂಕು ಆರೋಗ್ಯಾಧಿಕಾರಿ ಡಾ. ನರೇಂದ್ರ ಪವಾರ, ನೇತ್ರ ತಜ್ಞ ಡಾ. ಸೌಮ್ಯ ಕೆ.ವಿ, 'ನಮ್ಮ ಕ್ಲಿನಿಕ್' ವೈದ್ಯ ಅಕ್ಷಿತಾ ವಿ. ಶ್ರೀನಿವಾಸ ನಾಯ್ಕ ಉಪಸ್ಥಿತರಿದ್ದರು.

ಮುಡಾ ಹಗರಣ: 9 ಕಡೆ ಇ.ಡಿ ದಾಳಿ

← ಮೊದಲಪುಟದಿಂದ

ನಿವೇಶನ ಮಂಜೂರಾತಿ ಮಾಡುವಾಗ ಮುಡಾ ಅಧಿಕಾರಿ ಗಳಿಗೆ ಭಾರೀ ಪ್ರಮಾಣದ ಲಂಚ ನೀಡಿದ ಆರೋಪದ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಬಿಲ್ಡರ್ ಮಂಜುನಾಥ್ ಅವರ ಪಿಎ ಕಾರಿನಲ್ಲಿ 30 ಲಕ್ಷ ದುಡ್ಡು ಎಣಿಸುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಮುಡಾದಲ್ಲಿ ಮಂಜುನಾಥ್ 40ಕ್ಕೂ ಹೆಚ್ಚು ನಿವೇಶನ ಪಡೆದಿದ್ದಾರೆ ಎಂದು ಆರೋಪಿಸ ಲಾಗಿತ್ತು. ಸ್ನೇಹ ಮಯಿ ಕೃಷ್ಣ ಅವರು ಮೈಸೂರಿನ ಲೋಕಾಯುಕ್ತ ಕಚೇರಿಗೆ ತೆರಳಿ ಬಿಲ್ಡರ್ ಮಂಜುನಾಥ್ ವಿರುದ್ಧ ದೂರು ಸಲ್ಲಿಸಿದ್ದರು. ಲೋಕಾಯುಕ್ತ ಎಸ್‌ಪಿ ಟಿ. ಜೆ.ಉದೇಶ್‌ಗೆ ದೂರು ಸಲ್ಲಿಕೆ ಮಾಡಿ ಮಂಜುನಾಥ್‌ಗೆ ಈ ಹಿಂದೆ ಆಯುಕ್ತ ರಾಗಿದ್ದ ನಟೇಶ್ ದಿನೇಶ್ ಅಕ್ರಮವಾಗಿ ಸೈಟುಗಳನ್ನು ನೀಡಿದ್ದಾರೆ ಎಂದು ಆರೋಪಿಸಿದ್ದರು. ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರ ಅಣ್ಣನ ಪುತ್ರ ನವೀನ್ ಬೋಸ್, ಮುಡಾದ ಮಾಜಿ ಅಧ್ಯಕ್ಷ ಮರಿಗೌಡ, ಸಂಬಂಧಿಗೂ ನಿವೇಶನ ನೀಡಲಾಗಿದೆ. ಮುಡಾ ಹಗರಣ ಪ್ರಕರಣಕ್ಕೆ ಇಡಿ ಅಧಿಕಾರಿಗಳು ಮುಡಾ ಮಾಜಿ ಆಯುಕ್ತರ ಮನೆಗಳ ಮೇಲೂ ದಾಳಿ ನಡೆಸಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ, ಸಿಎಂ ಸಿದ್ದರಾಮಯ್ಯ ಆಪ್ತರಾಗಿರುವ ರಾಕೇಶ್ ಪಾಪಣ್ಣ ಅವರ ಮೈಸೂರಿನ ಹಿನ್ಕಲ್ ಗ್ರಾಮದಲ್ಲಿನ ಮನೆ ಮೇಲೆ ಇ.ಡಿ ದಾಳಿ ಮಾಡಿದೆ. 50-50 ನಿಯಮದಲ್ಲಿ 20ಕ್ಕೂ ಹೆಚ್ಚು ಮುಡಾ ಸೈಟ್ ಪಡೆದಿದ್ದ ಆರೋಪ ರಾಕೇಶ್ ಪಾಪಣ್ಣ ಅವರ ವಿರುದ್ಧ ಕೇಳಿಬಂದಿದೆ. ಹೀಗಾಗಿ ಇ.ಡಿ ಅಧಿಕಾರಿಗಳು ದಾಳಿ ಮಾಡಿದ್ದು, ರಾಕೇಶ್ ಪಾಪಣ್ಣ ಅವರನ್ನು ವಿಚಾರಣೆ ನಡೆಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಕಾಇಂ(ಕ)/ಸಕಾಇಂ(ವಿ)-1/ಎಫ್-154/2024-25/ 5391-99 ದಿನಾಂಕ: 25.10.2024
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ ಬಿಎಂಎಝುಡ್(ಎಸ್)/ಇಇ(ಓ)/ಎಇಇ-1/ಇ.ಪಿ.ಆರ್- 16 ರಿಂದ ಇ.ಪಿ.ಆರ್-57, ದಿನಾಂಕ: 23.10.2024 ಬೆಂಗಳೂರು, ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ, ವ್ಯಾಪ್ತಿಯಲ್ಲಿ ಬರುವ ವಿವಿಧ 400ಕೆವಿ/220ಕೆವಿ ಮತ್ತು 66ಕೆವಿ ಉಪಕೇಂದ್ರಗಳಲ್ಲಿ ಪಾಳಿ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾರ್ಯಗಳನ್ನು ವ್ಯವಸ್ಥೆಗೊಳಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.
ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ಪದ್ಧತಿಯ ಮೂಲಕ ಮಾತ್ರವೇ ಸ್ವೀಕರಿಸಲಾಗುವುದು, ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 29.10.2024 ಅಥವಾ ತದನಂತರ ಲಾಗಿನ್ ಆಗುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ),
ಬೆಂ.ಮ.ಕ್ಷೇ.ವ, ದಕ್ಷಿಣ ವೃತ್ತ, ಕವಿಪ್ರನಿನಿ, ಕಛೇರಿ ಸಂಕೀರ್ಣ, ನೆಲ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009. ದೂರವಾಣಿ: 080-22386686/85

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ
ಸಂಖ್ಯೆ:ಪಂ.ರಾ.ಇಂ.ವಿ.ಧಾ/ಸ.ಇಂ.-1/MGNREGA/2024-25/1959 ದಿನಾಂಕ: 28-10-2024
ಅಲ್ಪಾವಧಿ ಟೆಂಡರ್ ಪ್ರಕಟಣೆ - 14/2023-24
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಂದ 2022-23 ನೇ ಸಾಲಿನಲ್ಲಿ MGNREGA ಯೋಜನೆ ಅಡಿಯಲ್ಲಿ NRLM Work Shed ನಿರ್ಮಾಣ ಕಾಮಗಾರಿಗಳಿಗೆ ಸಾಮಗ್ರಿಗಳನ್ನು ಪೂರೈಸುವ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಅರ್ಹ ನೋಂದಾಯಿತ ಏಜೆನ್ಸಿ / ಫರ್ಮಗಳಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ KG-2 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರಮೆಂಟ್‌ನ **www.kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.
Indent No : 4135
ಕ್ಯಾಲೆಂಡರ್ ಆಫ್ ಇವೆಂಟ್ಸ್: **1)** Date of Commencement of downloading Tender Document: **29-10-2024. 2)** Last Date and Time for Receipt of Tenders: **12-11-2024 @ 16.00. 3)** Time and Date of Opening of Electronic Document, First (Technical Bid): **13-11-2024 @ 16.30. 4)** Time and Date of Opening of Electronic Document, Second (Financial Bid): **14-11-2024 @ 16.30. 5)** Place of Opening of Tenders: **Executive Engineer, P.R.E Division, Dharwad. 6)** Address for Communication: **O/o Executive Engineer, PRE Division Office, Dharwad. 7)** For More information regarding tenders Contact No & e-Mail ID: **0836-2749018 / zpeddwd@rediffmail.com**
ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/- (ಆರ್.ಎಂ. ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ಧಾರವಾಡ.
ವಾಸಾಸಂಇ/ಧಾರವಾಡ/559/ಅಡ್ವರ್ಟೋ/2024-25

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332-225213.
ಸಂಖ್ಯೆ:ಕನೀನಿನಿ/ಜಿಆರ್‌ಬಿಸಿಸಿವಿ-3/ಡಿಬಿ/ಲೆ.ಶಿ. 4701 ಎಂ& ಎಂ.ಆಯ್ /ಟೆಂಡರ್/2024-25/05 ದಿನಾಂಕ:25-10-2024
ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ/ಎರಡನೇ ಕರೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ KW-1 BID DOCUMENT, KW-2 BID DOCUMENT, KW-3 Bid Document, & KPW-4 Bid Document) ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಶೇಕಡಾ ವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಲೆಕ್ಕ ಶೀರ್ಷಿಕೆ 4701 ಎಂ. & ಎಂ.ಆಯ್ ಅಡಿಯಲ್ಲಿ ಕಿತ್ತೂರ ವಿಧಾನಸಭಾ ಮತಕ್ಷೇತ್ರದಡಿ ಕಾಮಗಾರಿಗಳು)
1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಕಾಮಗಾರಿಗಳು (03). ಕಾಮಗಾರಿಗಳ ಇಂಡೆಂಟ್ ನಂಬರುಗಳು, 1216, 1218 & 1243 ಟೆಂಡರಿಗಿಟ್ಟ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 14.995 ಲಕ್ಷಗಳು, ರೂ.19.99 ಲಕ್ಷಗಳು, ರೂ.48.47 ಲಕ್ಷಗಳು ಕ್ರಮವಾಗಿ ಇರುತ್ತವೆ. 2.ಸಾಮಾನ್ಯ ಕಾಮಗಾರಿಗಳು (02).ಕಾಮಗಾರಿಗಳ ಇಂಡೆಂಟ್ ನಂಬರುಗಳು. 1346 & 1347 ಇಟ್ಟ ಅಂದಾಜು ಟೆಂಡರ ಮೊತ್ತವು (ಜಿ.ಎಸ್.ಟಿ.ಒಳಗೊಂಡಿರುತ್ತದೆ) ರೂ. 63.11 ಲಕ್ಷಗಳು & ರೂ. 117.94 ಲಕ್ಷಗಳು ಕ್ರಮವಾಗಿ ಇರುತ್ತವೆ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯ ಟೆಂಡರಗಳನ್ನು ದಿ:29-10-2024 ರಿಂದ ದಿ: 08-11-2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ ಪೂರ್ವ ಭಾವಿ ಸಭೆ ದಿನಾಂಕ04-11-2024 11.00 ಗಂಟೆಗೆ.ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ 06-11-2024, 17.00 ಗಂಟೆಯವರೆಗೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ & ಸಮಯವು 08-11-2024 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 11-11-2024, 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.
ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆಗಳು/ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ - ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/-(ಹೆಚ್.ಎಸ್.ಕಾಖಂಡಕಿ)
ಕಾರ್ಯನಿರ್ವಾಹಕ ಇಂಜನೀಯರು,
DIPR/BGM/RO-NO-1053/KSMCA/2024-25 ಕನೀನಿನಿ ಜಿಆರ್‌ಬಿಸಿ ವಿಭಾಗ ನಂ-3, ಗೋಕಾಕ.

25 ವಿಷಯಾಧಾರಿತ, 44 ಅರ್ಹ ಯೋಜನೆಗಳ ಪ್ರಸ್ತಾವ | ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು

ನೂತನ ಪ್ರವಾಸೋದ್ಯಮ ನೀತಿ ಜಾರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಮುಂದಿನ 5 ವರ್ಷದಲ್ಲಿ ಕರ್ನಾಟಕ ವನ್ನು ಪ್ರವಾಸಿ ಕ್ಷೇತ್ರದಲ್ಲಿ ದೇಶದ ಮೊದಲ ಮೂರು ರಾಜ್ಯಗಳಲ್ಲಿ ಒಂದು ರಾಜ್ಯವನ್ನಾಗಿಸುವ ಮಹತ್ವದ ಉದ್ದೇಶದೊಂದಿಗೆ ನೂತನ ಪ್ರವಾಸೋದ್ಯಮ ನೀತಿಗೆ ಸಚಿವ ಸಂಪುಟ ಸಭೆ ಅನುಮತಿ ನೀಡಿದೆ.

ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ಕರ್ನಾಟಕ ಪ್ರವಾಸೋದ್ಯಮ ನೀತಿ 2024-29ನ್ನು ರಾಜ್ಯ ಸಚಿವ ಸಂಪುಟ ಅಂಗೀಕರಿಸಿದೆ. ಕರ್ನಾಟಕ ಪ್ರವಾಸೋದ್ಯಮದ ಹೊಸ ನೀತಿಯು ಪ್ರವಾಸೋದ್ಯಮ ಕ್ಷೇತ್ರವನ್ನು ಅತ್ಯಂತ ಆದ್ಯತೆಯ ಉತ್ಸಾಹದಾಯಕ ಮತ್ತು ಪುಷ್ಟೀಕರಿಸಿದ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಸಮಾಜದ ಎಲ್ಲಾ ಸ್ಥರಗಳ ಬಡ, ಮಧ್ಯಮ ವರ್ಗದ ಮತ್ತು ಮೇಲ್ಮಧ್ಯಮ ವರ್ಗದ ಹಾಗೂ ಗಣ್ಯ ವರ್ಗದ ಪ್ರವಾಸಿ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಹೊಸ ನೀತಿಯನ್ನು ರಚಿಸಲಾಗಿದೆ ಎಂದರು.

ಈ ನೀತಿಯು ಕರ್ನಾಟಕದಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸುತ್ತಿದೆ. ಉತ್ತಮ ಗುಣಮಟ್ಟದ ಪ್ರವಾಸಿ ಸೌಕರ್ಯಗಳನ್ನು ಕಲ್ಪಿಸಲು ಕ್ರಮವಹಿಸುತ್ತದೆ. ಆಕರ್ಷಣೀಯ ಮತ್ತು ವಿಹಾರದಾಯಕ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಪ್ರವಾಸೋದ್ಯಮ ವಲಯದಲ್ಲಿ ಸಾರ್ವಜನಿಕ ಖಾಸಗಿ ಭಾಗವಹಿಸುವಿಕೆಯನ್ನು ಉತ್ತೇಜಿಸಲಾಗುವುದು. ಅದಕ್ಕಾಗಿ ಕರ್ನಾಟಕವನ್ನು ಆದ್ಯತೆಯ ತಾಣವನ್ನಾಗಿ ಪರಿವರ್ತಿಸಲು ಹೂಡಿಕೆ ಸ್ನೇಹಿ ನೀತಿಗಳೊಂದಿಗೆ ಅನುಕೂಲಕರ ವಾಣಿಜ್ಯ ವಾತಾವರಣವನ್ನು ಉತ್ತೇಜಿಸಲಾಗುವುದು ಎಂದು ಹೇಳಿದರು.

ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿಗೆ ಒಪ್ಪಿಗೆ: ಇನ್ನುಳಿದಂತೆ ಬೀಜೋತ್ಪಾದನಾ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಜೈವಿಕ ನಿಯಂತ್ರಣ/ಪರತಂತ್ರ ಜೀವಿ ಪ್ರಯೋಗಾಲಯಗಳು ಈ ನಾಲ್ಕು ಘಟಕಗಳನ್ನು ಒಂದೇ ಸೂರಿನಡಿ ತಂದು ಅಭಿವೃದ್ಧಿಪಡಿಸಲು 'ಕರ್ನಾಟಕ ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ' ಸ್ಥಾಪಿಸಲು ಒಪ್ಪಿಗೆ ಸಚಿವ ಸಂಪುಟದಲ್ಲಿ ಅನುಮತಿ ನೀಡಲಾಗಿದೆ.

23 ಜಿಲ್ಲೆಗಳಲ್ಲಿ 45 ಬೀಜೋತ್ಪಾದನ ಕೇಂದ್ರಗಳು ಒಟ್ಟು 893 ಹೆಕ್ಟೇರ್ ವಿಸ್ತೀರ್ಣದ ಭೂಮಿಯಲ್ಲಿ ಬಿತ್ತನೆ ಬೀಜಗಳನ್ನು ಉತ್ಪಾದಿಸುತ್ತಿವೆ. 742 ರೈತ ಸಂಪರ್ಕ ಕೇಂದ್ರಗಳು ಹೋಬಳಿಗೊಂದರಂತೆ ಕಾರ್ಯನಿರ್ವಹಿಸುತ್ತಿವೆ. 6 ಜೈವಿಕ ನಿಯಂತ್ರಣ / ಪರತಂತ್ರ ಜೀವಿ ಪ್ರಯೋಗಾಲಯಗಳು ಮಂಡ್ಯ, ಕಲಬುರಗಿ, ಗಂಗಾವತಿ, ದಾವಣಗೆರೆ, ಧಾರವಾಡ ಮತ್ತು ಬೈಲಹೊಂಗಲಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜೈವಿಕ ನಿಯಂತ್ರಣಕಾರಕ ಟ್ರೈಕೋಗ್ರಾಮ್ ಹಾಗೂ ಜೈವಿಕ ಪೀಡೆನಾಶಕಗಳಾದ ಟ್ರೈಕೋಡರ್ಮಾ, ಸುಡೊಮೊನಾಸ್ ಮತ್ತು ಮೆಟರೈಸಿಯಂ ಉತ್ಪಾದಿಸಿ ವಿತರಣೆ ಮಾಡಲಾಗುತ್ತಿದೆ ಎಂದು ವಿವರಿಸಿದರು. ಇನ್ನುಳಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಹೊಸದಾಗಿ ಮಂಜೂರು ಮಾಡಿದ ವಿದ್ಯಾರ್ಥಿನಿಲಯಗಳಿಗೆ ಮೂಲ ಸೌಕರ್ಯಗಳನ್ನು 39.07 ಕೋಟಿಗಳ ಮೊತ್ತದಲ್ಲಿ ಒದಗಿಸಲು ಆಡಳಿತಾತ್ಮಕ ಅನುಮೋದನೆ. ಬೆಂಗಳೂರಲ್ಲಿ ಪೊಲೀಸ್ ಭವನ ನಿರ್ಮಾಣ ಕಾಮಗಾರಿಗಾಗಿ 102.80 ಕೋಟಿ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ ಎಂದು ಎಚ್.ಕೆ. ಪಾಟೀಲ್ ವಿವರಿಸಿದರು.

ವಿಷಯಾಧಾರಿತ ಪ್ರವಾಸೋದ್ಯಮ

- ಸಾಹಸ ಪ್ರವಾಸೋದ್ಯಮ
- ಕೃಷಿ ಪ್ರವಾಸೋದ್ಯಮ
- ಕಾರವಾನ್ ಪ್ರವಾಸೋದ್ಯಮ
- ಬೀಚ್ ಪ್ರವಾಸೋದ್ಯಮ
- ಸಾಂಸ್ಕೃತಿಕ ಪ್ರವಾಸೋದ್ಯಮ
- ಪಾರಂಪರಿಕ ಪ್ರವಾಸೋದ್ಯಮ
- ಶೈಕ್ಷಣಿಕ ಪ್ರವಾಸೋದ್ಯಮ
- ಸಾಹಿತ್ಯ ಪ್ರವಾಸೋದ್ಯಮ
- ಆಧ್ಯಾತ್ಮಿಕ ಪ್ರವಾಸೋದ್ಯಮ
- ಬುಡಕಟ್ಟು ಪ್ರವಾಸೋದ್ಯಮ



ಪ್ರಮುಖ ಯೋಜನೆಗಳು

- ಸೇವಾ ಅಪಾರ್ಟ್‌ಮೆಂಟ್‌ಗಳ ನಿರ್ಮಾಣ
- ಬೀಚ್ ಶ್ಯಾಕ್, ಬೆಡ್‌ಗಳ ಯೋಜನೆ
- ಅಮ್ಯೂಸ್ಮೆಂಟ್ ಪಾರ್ಕ್
- ಕಾರವಾನ್ ಪಾರ್ಕ್
- ಕ್ರೂಸ್ ಪ್ರವಾಸೋದ್ಯಮ ಯೋಜನೆ
- ಸಾಂಸ್ಕೃತಿಕ ಗ್ರಾಮ- ಚಲನಚಿತ್ರ ನಗರ
- ಗಾಲ್ಫ್ ಕೋರ್ಸ್
- ರೋಪ್-ವೇ- ಥೀಮ್ ಪಾರ್ಕ್
- ಪ್ರವಾಸೋದ್ಯಮ ಮತ್ತು ಆತಿಥೇಯ ತರಬೇತಿ ಸಂಸ್ಥೆ

ವಿಶೇಷ ಪೊಲೀಸ್ ಠಾಣೆ

ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪಿಸಲು ಅನುಮತಿ ನೀಡಲಾಗಿದ್ದು, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ 33 ಘಟಕಗಳನ್ನು ವಿಶೇಷ ಪೊಲೀಸ್ ಠಾಣೆಗಳೆಂದು ಘೋಷಿಸಲು ಹಾಗೂ ಸದರಿ ಠಾಣೆಗಳ ನಿರ್ವಹಣೆಗಾಗಿ ಅಗತ್ಯವಿರುವ 450 ವಿವಿಧ ಹುದ್ದೆಗಳಿಗೆ ಮಂಜೂರಾತಿಯನ್ನು ಸಚಿವ ಸಂಪುಟವು ನೀಡಿದೆ ಎಂದು ಸಚಿವರು ತಿಳಿಸಿದರು.

ಪ್ರಮುಖ ನಿರ್ಣಯಗಳು

- ದೌರ್ಜನ್ಯ ಪ್ರಕರಣ ತುರ್ತು ವಿಲೇವಾರಿಗಾಗಿ 33 ವಿಶೇಷ ಪೊಲೀಸ್ ಠಾಣೆ
- ಹಾಸನ ನಗರಪಾಲಿಕೆಗೆ ಮಹಾನಗರಪಾಲಿಕೆ ಸ್ಥಾನ
- ಒಬಿಸಿ ಹಾಸ್ಟೆಲ್ ಗಳಿಗೆ ಮೂಲ ಸೌಕರ್ಯ ಕಲ್ಪಿಸಲು 39.07 ಕೋಟಿ ವೆಚ್ಚ
- ಮೈಸೂರು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಆವರಣದಲ್ಲಿ ಬಹುಕೌಶಲ್ಯ ಕೇಂದ್ರ ಸ್ಥಾಪನೆ
- ಕೃಷಿ ಅಭಿವೃದ್ಧಿ ಏಜೆನ್ಸಿ ಸ್ಥಾಪನೆಗೆ ಅನುಮೋದನೆ
- ಡಿಸೆಂಬರ್ 2 ಇಲ್ಲವೇ 3ನೇ ವಾರ ಬೆಳಗಾವಿ ಚಳಿಗಾಲದ ಅಧಿವೇಶನ

ಸಂಪುಟದ ಪ್ರಮುಖಾಂಶ

- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2024ಕ್ಕೆ ಅನುಮೋದನೆ.
- ಕರ್ನಾಟಕ ಗೃಹ ಮಂಡಳಿಯ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲೂಕು, ಸೂರ್ಯ ನಗರ 1ನೇ ಹಂತದ ನಿವೇಶನ ಸಂಖ್ಯೆ 953 ಮತ್ತು 454, 455ರಲ್ಲಿ ಆಧುನಿಕ ಸೌಲಭ್ಯಗಳನ್ನು ಒಳಗೊಂಡ 2 ಬಹುಮಹಡಿ ವಸತಿ ಸಮುಚ್ಚಯಗಳನ್ನು (50 ಮತ್ತು 40 ಫ್ಲಾಟ್‌ಗಳು) ನಿರ್ಮಿಸುವ ಒಟ್ಟು 101 ಕೋಟಿ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.
- ಶಿವಮೊಗ್ಗ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿಗೆ 127.44 ಕೋಟಿ ರು.ಗಳ ಹೆಚ್ಚುವರಿ ಮೊತ್ತಕ್ಕೆ ಅನುಮೋದನೆ.
- ದೇವನಹಳ್ಳಿ - ವಿಜಯಪುರ - ಎಚ್. ಕ್ರಾಸ್ - ಮಾಲೂರು ತಮಿಳುನಾಡು ಗಡಿವರೆಗೆ (ಮಾಲೂರು-ಹೊಸಕೋಟೆ ರಸ್ತೆ ಸೇರಿದಂತೆ) 110.40 ಕಿ.ಮೀ ಉದ್ದದ ರಸ್ತೆಯನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ 3,190 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆ.
- ಸರಕಾರಿ ಶಾಲೆಯಲ್ಲಿನ 4 ಮತ್ತು 5ನೇ ತರಗತಿ ವಿದ್ಯಾರ್ಥಿಗಳಿಗೆ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಕಲಿಕಾ ಸಾಮಗ್ರಿಗಳನ್ನು ವಿನ್ಯಾಸಗೊಳಿಸಿ, ಮುದ್ರಿಸಿ, ವಿತರಿಸಲು ಹಾಗೂ ಶಿಕ್ಷಕರಿಗೆ ಅಗತ್ಯ ತರಬೇತಿ ನೀಡುವ 14.24 ಕೋಟಿಗಳ ಅಂದಾಜು ಮೊತ್ತದ 'ಓದು ಕರ್ನಾಟಕ' ಚಟುವಟಿಕೆಗೆ ಅನುಮೋದನೆ.

ಒಳ ಮೀಸಲು ಜಾರಿಗೆ ಅಸ್ತು

← ಮೊದಲಪುಟದಿಂದ

ಸದಾಶಿವ ಆಯೋಗದ ವರದಿಯನ್ನು 2022 ರಲ್ಲಿ ಬಿಜೆಪಿ ಸರಕಾರ ತಿರಸ್ಕರಿಸಿದೆ. ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯಿನ್ನೂ ಅಂಗೀಕರಿಸಿಲ್ಲ. ಅದರಲ್ಲಿನ ದತ್ತಾಂಶ ಗೊತ್ತಾಗಿಲ್ಲ. ಹೀಗಾಗಿ ದತ್ತಾಂಶ ಪಡೆಯುವ ವಿಚಾರವನ್ನು ಆಯೋಗಕ್ಕೆ ಒಪ್ಪಿಸಲಾಗುವುದು ಎಂದು ಸಚಿವ ಎಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ದತ್ತಾಂಶದ ಬಗ್ಗೆ ಸಚಿವರಲ್ಲಿಯೇ ಗೊಂದಲ: ದತ್ತಾಂಶದ ವಿಷಯದಲ್ಲಿ ಸಂಪುಟದ ಸಚಿವರಲ್ಲಿಯೇ ಗೊಂದಲವಿರುವುದು ಸುದ್ದಿಗೋಷ್ಠಿಯಲ್ಲಿ ಸ್ಪಷ್ಟವಾಗಿತ್ತು. ಜಾತಿ ಗಣತಿಯ ದತ್ತಾಂಶ ಪರಿಗಣಿಸಬೇಕೋ ಅಥವಾ ಇತರೆ ದತ್ತಾಂಶ ಪರಿಗಣಿಸಬೇಕೋ ಎನ್ನುವ ಗೊಂದಲಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿದಾಗ ಸ್ಪಷ್ಟ ಉತ್ತರವನ್ನು ಸಚಿವರು ನೀಡಿಲ್ಲ. ಸುಪ್ರೀಂಕೋರ್ಟ್ ಒಳಮೀಸಲಿಗೆ ನಂಬಲರ್ಹ ದತ್ತಾಂಶವನ್ನು ಪರಿಗಣಿಸಬೇಕು ಎಂದು ಹೇಳಿದೆ. ಯಾವ ದತ್ತಾಂಶವೆನ್ನುವ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು ಎನ್ನುವ ಮಾತುಗಳನ್ನು ಸಚಿವರು ಹೇಳಿದ್ದಾರೆ.

ಚರ್ಚೆಯಾದ ಇತರ ವಿಷಯಗಳು

- ಹಾಸನ ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ
- ರಾಯಚೂರು ವಿವಿಗೆ ಮಹರ್ಷಿ ವಾಲ್ಮೀಕಿ ವಿವಿ ಪುನರ್‌ನಾಮಕರಣಕ್ಕೆ ಅನುಮೋದನೆ
- ಬೆಳಗಾವಿಯಲ್ಲಿ ಡಿಸೆಂಬರ್ 2ನೇ ವಾರದಲ್ಲಿ ವಿಧಾನಮಂಡಲ ಅಧಿವೇಶನಕ್ಕೆ ತೀರ್ಮಾನ
- 2024-29ರ ವೇಳೆಗೆ ಹೊಸ ಪ್ರವಾಸೋದ್ಯಮ ನೀತಿ ಜಾರಿ
- ದಲಿತರ ಮೇಲಿನ ದೌರ್ಜನ್ಯ ತಡೆಗೆ 33 ವಿಶೇಷ ಪೊಲೀಸ್ ಠಾಣೆ ಪರಿವರ್ತಿಸಲು ಕ್ರಮ
- ಬೆಂಗಳೂರು-ಬೀದರ್-ಬೆಂಗಳೂರು ಮಾರ್ಗವಾಗಿ ವಿಮಾನಯಾನ ಕಾರ್ಯಾಚರಣೆಗೆ ಅನುಮತಿ
- ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಿಗೆ ಮಾದರಿ ನೀತಿ ಸಂಹಿತೆ ಅನುಷ್ಠಾನಕ್ಕೆ ಒಪ್ಪಿಗೆ.

ಹಾಸನಾಂಬೆ ಮಹೋತ್ಸವವನ್ನು ಅಚ್ಚುಕಟ್ಟಾಗಿ ಸಂಘಟಿಸಿದ ದೇವಾಲಯದ ಆಡಳಿತಾಧಿಕಾರಿ ಮತ್ತು ವಿಭಾಗಾಧಿಕಾರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿದರು. ಜಿಲ್ಲಾಧಿಕಾರಿ ಸತ್ಯಭಾಮ ಇದ್ದರು. ◀◀ ಚಿತ್ರ: 1 ಕೇಂದ್ರ ಸಚಿವ ವಿ.ಸೋಮಣ್ಣ ಸೋಮವಾರ ಹಾಸನದಲ್ಲಿ ಹಾಸನಾಂಬೆ ದರ್ಶನ ಪಡೆದರು. ◀◀ ಚಿತ್ರ: 2

ಹಾಸನಾಂಬೆ ದರ್ಶನಕ್ಕೆ ಕಿ.ಮೀ. ಗಟ್ಟಲೆ ಭಕ್ತರ ಸಾಲು

ಹಾಸನ: ಹಾಸನಾಂಬೆ ದೇವಿ ದರ್ಶನಕ್ಕೆ ಭಕ್ತ ಸಾಗರವೇ ಹರಿದು ಬಂದಿದ್ದು ಕಿಲೋಮೀಟರ್ ಗಟ್ಟಲೆ ಭಕ್ತರು ಸಾಲಿನಲ್ಲಿ ನಿಂತಿದ್ದು, ಇದರ ಒತ್ತಡ ನಿವಾರಣೆಗೆ ಖುದ್ದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಫೀಲ್ಡಿಗಿಳಿದಿದ್ದಾರೆ. ಸರತಿ ಸಾಲಿನಲ್ಲಿ ಗಂಟೆಗಟ್ಟಲೆ ನಿಂತು ದರ್ಶನ ಪಡೆಯುತ್ತಿರುವ ಸಾವಿರಾರು ಭಕ್ತರಿಂದ ಧರ್ಮದರ್ಶನ ಮಾತ್ರವಲ್ಲದೇ ವಿವಿಐಪಿ, 1000 ರು., 300 ರು. ಟಿಕೆಟ್ ನ ವಿಶೇಷ ದರ್ಶನದ ಸಾಲುಗಳೂ ತುಂಬಿ ತುಳುಕುತ್ತಿವೆ. ಭಕ್ತರ ಸಂಖ್ಯೆಯಲ್ಲಿ ಭಾರಿ ಏರಿಕೆಯಾದ ಹಿನ್ನೆಲೆಯಲ್ಲಿ ಖುದ್ದು ಫೀಲ್ಡ್ ಗಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಹಾಸನಾಂಬೆ ದೇಗುಲದ ಮುಂದೆ ನಿಂತು ನೂಕುನುಗ್ಗಲಾಗ ದಂತೆ ಜನರನ್ನು ದೇವಿ ದರ್ಶನಕ್ಕೆ ಕಳುಹಿಸು ತ್ತಿದ್ದಾರೆ. ಮುಂಜಾನೆಯಿಂದಲೂ ಲಕ್ಷಕ್ಕೂ ಅಧಿಕ ಭಕ್ತರು ಹಾಸನಾಂಬೆ ದೇವಿ ದರ್ಶನ ಪಡೆಯುತ್ತಿದ್ದಾರೆ.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009, ದೂರವಾಣಿ: 080-22273511-16
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಹಾಗೂ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಕ್ರ. ಸಂ	ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ & ಐಎಫ್‌ಟಿ ನಂ.	ಟೆಂಡರ್‌ಗಿಟ್ಟ ಮೊತ್ತ(ರೂ ಗಳಲ್ಲಿ)	ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ
1.	ತುಮಕೂರು ಜಿಲ್ಲೆ ಕುಣಿಗಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ತರಗತಿ ಕೊಠಡಿಗಳು/ ಶೌಚಾಲಯ/ಪ್ರಯೋಗಾಲಯ ಮತ್ತು ಇತರೆ ಕಟ್ಟಡ ನಿರ್ಮಾಣ ಕಾಮಗಾರಿ,	Tender Reference Number KHB/2024-25/ BD/ WORK_INDENT 327/Call-2 & IFT No. 95/2024-25, Date: 28.10.2024	1,51,98,725/-	05.11.2024 ಸಂಜೆ 4.00 ಗಂಟೆವರೆಗೆ
2.	ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಪ್ರಥಮ ದರ್ಜೆ ಕಾಲೇಜಿಗೆ ಆಡಿಟೋರಿಯಂ ಕಟ್ಟಡ ನಿರ್ಮಾಣ ಕಾಮಗಾರಿ,	Tender Reference Number KHB/2024-25/ BD/ WORK_INDENT 288/Call-2 & IFT No. 62/2024-25, Date: 28.10.2024	1,13,72,510/-	

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ದೂರವಾಣಿ: 080-22273511/ 080-22100077 website:https://kppp.karnataka.gov.in
ಸಹಿ/-
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/2807/Zen/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ-3/.ಟೆಂಡರ್.ಅಧಿಸೂಚನೆ/2024-25/4054 ದಿನಾಂಕ: 25.10.2024
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ 5054 ಅಪೆಂಡಿಕ್ಸ್-ಇ ಯೋಜನೆಯಡಿಯಲ್ಲಿ ಒಟ್ಟು (04) ಕಾಮಗಾರಿಗಳು ವರ್ಕ ಇಂಡೆಂಟ್ : 16428, 16430, 16432 & 12025 KPPP Portal ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿಗಾಗಿ ಇಟ್ಟ ಅಂದಾಜು ಮೊತ್ತ : **ಕನಿಷ್ಠ ರೂ. 211.56 ಲಕ್ಷಗಳು ಮತ್ತು ಗರಿಷ್ಠ ರೂ. 423.65 ಲಕ್ಷಗಳು** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೇ ದರ್ಜೆ ಮೇಲ್ಪಟ್ಟ ನೋಂದಯಿತ ಸಿವಿಲ್ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ KPPP Portal ನಂತೆ, ಇ.ಎಮ್.ಡಿ. ಮೊತ್ತ ಕನಿಷ್ಠ ರೂ. 3,18,000.00 ಮತ್ತು ಗರಿಷ್ಠ ರೂ. 6,35,000.00, 5) ಪ್ರೀ ಬಿಡ್ ಸಭೆ ದಿನಾಂಕ: **16/11/2024 (11.00 ಗಂಟೆಗೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **19/11/2024 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **21/11/2024 (16.00 ಗಂಟೆ),** 8) ತಾಂತ್ರಿಕ ಬಿಡ್ ತೆರೆವುಗೊಳಿಸುವ ದಿನಾಂಕ: **22/11/2024 (16.30 ಗಂಟೆ),** 9) ಆರ್ಥಿಕ ಬಿಡ್ ತೆರೆವುಗೊಳಿಸುವ ದಿನಾಂಕ: **25/11/2024 (16.30 ಗಂಟೆ),** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in, 12) ಗಮನಿಸಬೇಕಾದ ಅಂಶಗಳು: ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಮರು ಟೆಂಡರ್/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ, ಟೆಂಡರ್ ರದ್ದುಗೊಳಿಸುವ/ ಮರು ಟೆಂಡರ್/ಟೆಂಡರ್ ನಿರಾಕರಿಸುವಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/571/ಕೆ.ಎಸ್.ಎಂ.ಸಿ.&ಎ/2024-25

ದರ್ಶನ್‌ಗೆ ಶಸ್ತ್ರಚಿಕಿತ್ಸೆ ಅಗತ್ಯ: ವೈದ್ಯಕೀಯ ವರದಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ನಟ ದರ್ಶನ್‌ಗೆ ಫಿಸಿಯೋಥೆರಪಿ ಹಾಗೂ ಬೆನ್ನುಹುರಿ ನೋವಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆ. ಬಳ್ಳಾರಿ ಅಥವಾ ಬೆಂಗಳೂರಿನಲ್ಲಿ ಶಸ್ತ್ರಚಿಕಿತ್ಸೆ ನಡೆಸಬಹುದು ಎಂದು ಹೈಕೋರ್ಟ್‌ಗೆ ಸೋಮವಾರ ಸಲ್ಲಿಸಲಾಗಿರುವ ವೈದ್ಯಕೀಯ ವರದಿಯಲ್ಲಿ ಹೇಳಲಾಗಿದೆ.

ದರ್ಶನ್ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್ ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ಆರಂಭವಾಗುತ್ತಿದ್ದಂತೆ ಪೀಠವು ಮುಚ್ಚಿದ ಲಕೋಟೆಯಲ್ಲಿದ್ದ ವರದಿಯನ್ನು ಪರಿಶೀಲಿಸಿತು.

ದರ್ಶನ್‌ಗೆ ಫಿಸಿಯೊಥೆರಪಿ ಹಾಗೂ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಬಳ್ಳಾರಿ ಅಥವಾ ಬೆಂಗಳೂರಿನಲ್ಲಿ ಶಸ್ತ್ರಚಿಕಿತ್ಸೆ ನಡೆಸಬಹುದು ಎಂದೂ ಹೇಳಲಾಗಿದೆ ಎನ್ನುವ ಅಂಶವನ್ನು ಗಮನಿಸಿತು.

ಆಗ ವಿಶೇಷ ಸರಕಾರಿ ಅಭಿಯೋಜಕ ಪಿ.ಪ್ರಸನ್ನ ಕುಮಾರ್ ಅವರು ದರ್ಶನ್ ಅವರ ವೈದ್ಯಕೀಯ ವರದಿಯ ಪ್ರತಿಯನ್ನು ನಮಗೆ ನೀಡಬೇಕು. ಅದನ್ನು ಪರಿಶೀಲಿಸಿ, ಅಗತ್ಯಬಿದ್ದರೆ ಆಕ್ಷೇಪಣೆ ಸಲ್ಲಿಸಲಾಗುವುದು. ಆನಂತರ ವಾದ ಮಂಡಿಸಲಾಗುವುದು ಎಂದರು.

ದರ್ಶನ್ ಜಾಮೀನು ಅರ್ಜಿ ವಿಚಾರಣೆ ಇಂದು: ದರ್ಶನ್ ಪರ ಹಿರಿಯ ವಕೀಲ ಸಿ.ವಿ. ನಾಗೇಶ್ ಅವರು ದರ್ಶನ್ ಅವರು ಬೆನ್ನು ಹುರಿ ಸಮಸ್ಯೆಯಿಂದ ಬಳಲುತ್ತಿದ್ದು, ವಿಜಯನಗರ ವೈದ್ಯಕೀಯ ಸಂಸ್ಥೆಯು ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ಹೇಳಿದೆ. ಶಸ್ತ್ರಚಿಕಿತ್ಸೆ ಮಾಡದಿದ್ದರೆ ಮೂತ್ರಪಿಂಡ ಮತ್ತಿತರ ಅಂಗಾಗಳಿಗೆ ಸಮಸ್ಯೆಯಾಗಲಿದೆ. ಬಳ್ಳಾರಿಯಲ್ಲಿ ಸೌಲಭ್ಯದ ಕೊರತೆಯಿರುವುದರಿಂದ ಬೆಂಗಳೂರಿನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಲು ಅನುಮತಿಸಬೇಕು ಎಂದರು. ಉಭಯ ವಾದ ಆಲಿಸಿದ ಪೀಠವು ವೈದ್ಯಕೀಯ ವರದಿಯ ಪ್ರತಿಯನ್ನು ವಿಶೇಷ ಸರಕಾರಿ ಅಭಿಯೋಜಕರಿಗೆ ನೀಡಬೇಕು. ಅದನ್ನು ಪರಿಶೀಲಿಸಿ ಅವರು ವಾದ ಮಂಡನೆ ಮಾಡಲಿದ್ದಾರೆ ಎಂದು ವಿಚಾರಣೆಯನ್ನು ಮಂಗಳವಾರ ಮಧ್ಯಾಹ್ನ 2.30ಕ್ಕೆ ಮುಂದೂಡಿತು.

ಗೋಪಾಲ ಜೋಶಿ ಸೇರಿ ಮೂವರ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ

← ಮೊದಲಪುಟದಿಂದ

ಇದು ನಾಲ್ಕು ಗೋಡೆಗಳ ನಡುವೆ ನಡೆದಿರುವ ಘಟನೆ. ಅದು ಸಾರ್ವಜನಿಕ ಸ್ಥಳವಲ್ಲ. ಹೀಗಾಗಿ, ಎಸ್ಸಿ/ಎಸ್ಟಿ ಕಾಯಿದೆ ಸೆಕ್ಷನ್ 3(1) ಆರ್ ಮತ್ತು ಎಸ್ ಅಡಿ ಅಪರಾಧವಾಗುವುದಿಲ್ಲ ಎಂದು ನ್ಯಾಯಾಲಯವು ಆದೇಶದಲ್ಲಿ ವಿವರಿಸಿದೆ. ಹೀಗಾಗಿ, ಮುಂದಿನ ಪ್ರಕ್ರಿಯೆ/ತನಿಖೆಗೆ ಅನುಮತಿಸುವುದು ಲಲಿತ್ ಚತುರ್ವೇದಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ತನಿಖೆ ಹಾಗೂ ದೂರಿನ ಆಧಾರದಲ್ಲಿ ಆನಂತರ ಕೈಗೊಂಡಿರುವ ಎಲ್ಲ ಕ್ರಮಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಕಸ್ಟಡಿಯಲ್ಲಿರುವ ಅರ್ಜಿದಾರರನ್ನು ಕಾನೂನಿನ ಅನ್ವಯ ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯ ಆದೇಶಿಸಿದೆ. ಇದಕ್ಕೂ ಮುನ್ನ, ರಾಜ್ಯ ಸರಕಾರದ ಪರ ಪ್ರತಿನಿಧಿಸಿದ್ದ ಹೆಚ್ಚುವರಿ ವಿಶೇಷ ಸರಕಾರಿ ಅಭಿಯೋಜಕರಾದ ಬಿ.ಎನ್.ಜಗದೀಶ್ ಅವರು ತನಿಖಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಇಡಲಾಗಿದೆ. ಈಡೇರಿಸುವ ಆಶ್ವಾಸನೆಗಳನ್ನು ಆರೋಪಿಗಳು ನೀಡಿರಲಿಲ್ಲ. ತನಿಖಾ ವರದಿಯನ್ನು ನೋಡಿ. ಕೃತ್ಯಕ್ಕೆ ಕೇಂದ್ರ ಸಚಿವರ ಕಚೇರಿಯನ್ನು ಬಳಕೆ ಮಾಡಲಾಗಿದೆ. ತನಿಖೆಯ ಸಂದರ್ಭದಲ್ಲಿ ಕೆಲವು ವಿಡಿಯೋ ಮತ್ತು ಆಡಿಯೋಗಳು ಲಭ್ಯವಾಗಿವೆ. ಹಣ ಕೇಳಿದಾಗ ಆರೋಪಿಗಳು ಜಾತಿ ಹೆಸರಿಡಿದು ನಿಂದನೆ ಮಾಡಿದ್ದಾರೆ. ಆರೋಪಿಗಳು ಒಬ್ಬೇ ಒಬ್ಬ ವ್ಯಕ್ತಿಯಿಂದ ಮಾತ್ರ ಹಣ ಸಂಗ್ರಹಿಸಿಲ್ಲ ಎಂದರು.

ಲೋಕಾಯುಕ್ತಕ್ಕೆ ಸ್ನೇಹಮಯಿ ಕೃಷ್ಣ ಮತ್ತೊಂದು ದೂರು

ಮೈಸೂರು: ಮುಡಾದಿಂದ 928 ನಿವೇ ಶನಗಳು ಅಕ್ರಮವಾಗಿ ಹಂಚಿಕೆಯಾಗಿವೆ ಎಂದು ಮೈಸೂರು ಲೋಕಾಯುಕ್ತ ಕಚೇರಿ ಯಲ್ಲಿ ಆರ್‌ಟಿಐ ಕಾರ್ಯಕರ್ತ ಸ್ನೇಹ ಮಯಿ ಕೃಷ್ಣ ಅವರು ಮತ್ತೊಂದು ದೂರು ನೀಡಿದ್ದಾರೆ. ಇವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಿಸಿರುವ ಪ್ರಕರಣಕ್ಕೆ ಈಗಾಗಲೇ ತನಿಖೆಗೆ ಅನುಮತಿ ದೊರೆತಿದ್ದು, ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. 50:50 ಅನುಪಾತದ ಅಡಿ ಯಲ್ಲಿ 928 ನಿವೇಶನಗಳು ಅಕ್ರಮವಾಗಿ ಹಂಚಿಕೆಯಾಗಿವೆ. 928 ನಿವೇಶನಗಳ ಹಂಚಿಕೆ ಯಲ್ಲಿ ಅತಿ ಹೆಚ್ಚು ಅಕ್ರಮ ನಡೆದಿ ರುವುದು ಹಿಂದೆ ಮುಡಾದ ಆಯುಕ್ತ ರಾಗಿದ್ದ ಡಿಬಿ ನಟೇಶ್ ಮತ್ತು ದಿನೇಶ್ ಕುಮಾರ್ ಅಧಿಕಾರ ಅವಧಿಯಲ್ಲಿ. ಅಕ್ರಮವಾಗಿ ನಿವೇಶನ ಪಡೆದವರ ಜೊತೆಗೆ ನಟೇಶ್ ಮತ್ತು ದಿನೇಶ್ ಕುಮಾರ್ ಮೇಲೂ ಕ್ರಮ ಕೈಗೊಳ್ಳಬೇಕು ಎಂದು ಸ್ನೇಹ ಮಯಿ ಕೃಷ್ಣ ಆಗ್ರಹಿಸಿದ್ದಾರೆ.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುವ ಉಪಚುನಾವಣೆಯಲ್ಲಿ ಮೂರನ್ನೂ ಗೆಲ್ಲುವ ಅವಕಾಶ ನಮಗಿದೆ.ಈ ನಿಟ್ಟನಲ್ಲಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ತಮ್ಮ ಸಂಪೂರ್ಣ ಶ್ರಮ ಹಾಕಬೇಕು. ನಮ್ಮ ಸರಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ನಮ್ಮ ಜತೆ ನಿಲ್ಲಲಿದ್ದಾರೆ. ಪ್ರತಿಪಕ್ಷಗಳು ಹರಡುವ ಸುಳ್ಳು ಸುದ್ದಿ, ಅಪಪ್ರಚಾರಗಳನ್ನು ಸಮರ್ಥವಾಗಿ ಎದುರಿಸಿದರೆ ಜಯ ನಮ್ಮದೇ..!



ಮಧು ಅಭಿಮಾನ್, ಬೆಂಗಳೂರು

ಒಳಮೀಸಲಾತಿ ಜಾರಿಮಾಡಲಿಲ್ಲ ಅಂದ್ರೆ ಮುಂಬರುವ ಎಲ್ಲ ಚುನಾವಣೆಗಳಲ್ಲಿ ಅದರ ಪರಿಣಾಮ ಎದುರಿಸಬೇಕಾಗುತ್ತದೆ..!

ವಿಶ್ವವಾಣಿ ಕ್ಲಬ್ ಹೌಸ್
ಕಾರ್ನರ್ 29.10.2024

ಮಂಗಳವಾರದ ಅತಿಥಿ
ಡಾ. ಡಿ.ವಿ.ಗುರುಪ್ರಸಾದ್
ವಿಷಯ
ಸಂದರ್ಶನ ಎದುರಿಸುವುದು ಹೇಗೆ ?
ಸಂಜೆ: 06.55 ರಿಂದ 08.05 ರವರೆಗೆ
vishwavani.news

ದೂರು ದುಮ್ಮಾನ

- **ಸ್ಥಳ : ವಾಜನಹಳ್ಳಿ,** ಬೆಂಗಳೂರು ದಕ್ಷಿಣ
- **ಸಮಸ್ಯೆ ಯೇನು?**
  ವಾಜರಹಳ್ಳಿಯಲ್ಲಿರುವ ಪರಿಶಿಷ್ಟ ವರ್ಗದ ಸರಕಾರಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಮೂಲಸೌಕರ್ಯದ ಕೊರತೆ
- **ಸಮಾಜ ಕಲ್ಯಾಣ ಇಲಾಖೆ**
  ಮುಖ್ಯಮಂತ್ರಿ ಕಚೇರಿಯ ಕ್ರಮ : ಹಾಸ್ಟೆಲ್ ನಲ್ಲಿರುವ ಮೂಲಸೌಕರ್ಯ ಸರಿಪಡಿಸಲು ಮೂರು ದಿನದಲ್ಲಿ ಸರಿಪಡಿಸದಿದ್ದರೆ ವಾರ್ಡನ್ ವಿರುದ್ಧ ಶಿಸ್ತು ಕ್ರಮ
- **ಪರಿಹಾರ**
  ವಿದ್ಯಾರ್ಥಿನಿಲಯಕ್ಕೆ ಅಧಿಕಾರಿಗಳು ಭೇಟಿ ನೀಡಿ, ವಿದ್ಯಾರ್ಥಿಗಳ ಸಮಸ್ಯೆ ಆಲಿಸಿ ಶೀಘ್ರದಲ್ಲಿಯೇ ಸರಿಪಡಿಸುವ ಭರವಸೆ
- **ನಿಮ್ಮ ಸಮಸ್ಯೆಯನ್ನು ತಿಳಿಸಲು**
  ಇಮೇಲ್ : <officeofosdtocm@gmail.com>
  ದೂರವಾಣಿ : 08022033347
  ವಿಳಾಸ : ಡಾ. ವೈಷ್ಣವಿ, ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಸಾರ್ವಜನಿಕ ಕುಂದುಕೊರತೆ ವಿಭಾಗ, 241 ವಿಧಾನಸೌಧ

ಸಮಾಚಾರ ಸಣ್ಣದಲ್ಲ

ಬಿಜೆಪಿಯ ಶಾಸಕರು ಕಾಂಗ್ರೆಸ್ ಸೇರಲ್ಲ

ಬಳ್ಳಾರಿ: ಬಿಜೆಪಿಯಿಂದ ಕಾಂಗ್ರೆಸ್‌ಗೆ ಯಾವ ಶಾಸಕರೂ ಹೋಗುವುದಿಲ್ಲ. ಶಾಸಕ ಎಸ್.ಟಿ ಸೋಮಶೇಖರ್ ಹುಚ್ಚುಚ್ಚಾಗಿ ಮಾತನಾಡಬಾರದು. ಬೇರೆಯವರ ತೇಜೋವಧೆ ಮಾಡಬಾರದು' ಎಂದು ಕೆ.ಆರ್. ಪುರದ ಬಿಜೆಪಿ ಶಾಸಕ ಬೈರತಿ ಬಸವರಾಜ ಹೇಳಿದ್ದಾರೆ. ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವೇಣಿವೀರಾಪುರ, ಏಳುಬೆಂಚಿ, ಕುಡುತಿನಿ, ದರೋಜಿಯಲ್ಲಿ ಸೋಮವಾರ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರ ಪ್ರಚಾರ ಕೈಗೊಂಡ ಅವರು, ಶಾಸಕ ಎಸ್.ಟಿ ಸೋಮ ಶೇಖರ್ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ತಮ್ಮ ವೈಯಕ್ತಿ ಲಾಭಕ್ಕಾಗಿ ಸೋಮಶೇಖರ್ ಹೀಗೆಲ್ಲ ಮಾತನಾಡುತ್ತಿದ್ದಾರೆ. ಬಿಜೆಪಿಯ ಯಾವ ಶಾಸಕರೂ ಕಾಂಗ್ರೆಸ್‌ಗೆ ಹೋಗುತ್ತಿಲ್ಲ. ಯಾರಾದರೂ ಕಾಂಗ್ರೆಸ್‌ಗೆ ಹೋಗುತ್ತಿರುವ ಬಗ್ಗೆ ಅವರಿಗೆ ಗೊತ್ತಿದ್ದರೆ ಹೆಸರು ಹೇಳಲಿ. ಹೆಸರೇ ಹೇಳದೇ ಸುಮ್ಮನೆ ಮಾತನಾ ಡಿದರೆ ಹೇಗೆ?' ಎಂದು ಅವರು ಪ್ರಶ್ನೆ ಮಾಡಿದರು.

ವಿರಾಮ
ಪ್ರತಿ ಭಾನುವಾರ

ಗೆಲುವಿಗಾಗಿ ಅಖಾಡದಲ್ಲಿ ಬಿಜೆಪಿ -ಕಾಂಗ್ರೆಸ್ ಮಹಾತಂತ್ರ | ಭರತ್ ಬೊಮ್ಮಾಯಿ- ಯಾಸೀರ್‌ಖಾನ್ ಪಠಾಣ್ ಭರ್ಜರಿ ಪ್ರಚಾರ

ಬೊಮ್ಮಾಯಿ ಭದ್ರಕೋಟೆ ಗೆಲ್ಲಲು ಕೈ ರಣತಂತ್ರ

ಹಾವೇರಿ: ಜಿದ್ದಾಜಿದ್ದಿನ ಸ್ಪರ್ಧಾಕಣವಾಗಿರುವ ಶಿಗ್ಗಾವಿ- ಸವಣೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಾಗಿ ಪಕ್ಷಗಳ ನಡುವೆ ಬಿರುಸಿನ ಪ್ರಚಾರ ನಡೆದಿದೆ. ಬಿಜೆಪಿಯಿಂದ ಭರತ ಬೊಮ್ಮಾಯಿ ಮತ್ತು ಕಾಂಗ್ರೆಸ್‌ನಿಂದ ಯಾಸೀರ್ ಖಾನ್ ಪಠಾಣ್ ನಡುವೆ ನೇರ ಪೈಪೋಟಿ ನಡೆದಿದ್ದು, ಭರ್ಜರಿ ಪ್ರಚಾರ ನಡೆಸಿದ್ದಾರೆ.

ಕಳೆದ 20 ವರ್ಷದಿಂದ ಈ ಕ್ಷೇತ್ರದ ಮೇಲೆ ಬಸವರಾಜ ಬೊಮ್ಮಾಯಿ ತಮ್ಮದೇ ಹಿಡಿತ ಹೊಂದಿದ್ದು ಶಾಸಕರಾಗಿ ,ಸಚಿವರಾಗಿ ಮತ್ತು ಮುಖ್ಯಮಂತ್ರಿಯಾಗಿ ಈ ಕ್ಷೇತ್ರವನ್ನು ಜನತೆ ನೋಡುವಂತೆ ಮಾಡಿದ್ದಾರೆ. ಅವರು ಸಂಸದರಾದ ಮೇಲೆ ರಾಜೀನಾಮೆ ಸಲ್ಲಿಸಿದ ನಂತರ ಉಪಚುನಾವಣೆ ಘೋಷಣೆ ನಡೆಯುತ್ತಿದ್ದು, ತಮ್ಮ ಪುತ್ರನಿಗೆ ಬಿಜೆಪಿ ಟಿಕೆಟ್ ಪಡೆದು ಅಖಾಡಕ್ಕೆ ಇಳಿಸಿದ್ದಾರೆ.

ಬೊಮ್ಮಾಯಿ ಭದ್ರಕೋಟೆ ಕೈವಶಕ್ಕೆ ಕಾಂಗ್ರೆಸ್ ತಂತ್ರ: ಶಿಗ್ಗಾವಿ-ಸವಣೂರು ಕ್ಷೇತ್ರವನ್ನು ಸುಲಭವಾಗಿ ಜಯ ಸಾಧಿಸಲು ಸಾಧ್ಯವಿಲ್ಲ ಎಂದು ಅರಿತ ಕಾಂಗ್ರೆಸ್, ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡುವ ಮುನ್ನವೇ ತಳಮಟ್ಟದಲ್ಲಿ ಪಕ್ಷದ ಸಂಘಟಿಸುವಲ್ಲಿ ಪ್ರಮುಖ ನಾಯಕರನ್ನು ನಿಯೋಜಿಸಿತು. ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ, ಸಚಿವರಾದ ಸತೀಶ ಜಾರಕಿಹೊಳಿ, ಈಶ್ವರ ಖಂಡ್ರೆ, ಶಿವಾನಂದ ಪಾಟೀಲ್, ಜಮೀರ್ ಅಹ್ಮದ್ ಖಾನ್, ವಿನಯ ಕುಲಕರ್ಣಿ ಹಾಗೂ ಶಾಸಕರಾದ ಬಸವರಾಜ ಶಿವಣ್ಣವರ, ಶ್ರೀನಿವಾಸ ಮಾನೆ, ರುದ್ರಪ್ಪ ಲಮಾಣಿ, ಸಲೀಂ ಅಹ್ಮದ್, ಪ್ರಕಾಶ್ ಕೋಳಿವಾಡ ಈ ಕ್ಷೇತ್ರದಲ್ಲಿ ನಿರಂತರ ಸಂಚರಿಸಿ ಸದಸ್ಯತ್ವ ಅಭಿಯಾನ, ಕಾಂಗ್ರೆಸ್ ಸರಕಾರದ ಕೊಡುಗೆ, ಭವಿಷ್ಯದ ಅಭಿವೃದ್ಧಿ ಯೋಜನೆಗಳ ಬಗ್ಗೆ ಮತದಾರರಲ್ಲಿ ಸಾಕಷ್ಟು ಜಾಗೃತಿ ಮೂಡಿಸಿದ್ದಾರೆ. ಈ ಮೂಲಕ ಬಿಜೆಪಿ ಭದ್ರಕೋಟೆ ಭೇದಿಸಿಲು ಕಾಂಗ್ರೆಸ್ ಪಕ್ಷ ಸಂಘಟನೆ ಕೂಡಾ ಬಲವಾದ ಅಸ್ತ್ರವಾಗಿದೆ.

ಭದ್ರಕೋಟೆ ಉಳಿಸಿಕೊಳ್ಳಲು ಬೊಮ್ಮಾಯಿ ಮಾಸ್ಟರ್ ಪ್ಲಾನ್: ಬೊಮ್ಮಾಯಿ ಮಗನನ್ನು ಕಣಕ್ಕಿಸಿದ ನಂತರದಲ್ಲಿ ಸ್ಥಳಿಯ ಬಿಜೆಪಿ ಮುಖಂಡರು ತಿರುಗಿಬಿದ್ದು ಕುಟುಂಬ ರಾಜಕೀಯದ ವಿರುದ್ಧ ಧ್ವನಿವೆತ್ತಿದ್ದರು.

ಈ ಅಪಸ್ವರ ತಿಳಿಗೊಳಿಸಲು ನಾಮಪತ್ರ ದಿನದಂದೇ ಮಾಜಿ ಸಿ.ಎಂ ಬಿ.ಎಸ್ ಯಡಿಯೂರಪ್ಪ ಸೇರಿದಂತೆ ಎಲ್ಲ ನಾಯಕರನ್ನು ಒಂದೇ ವೇದಿಕೆಗೆ ಕರೆಸಿದ ಬೊಮ್ಮಾಯಿ ಭರ್ಜರಿ ರೋಡ್‌ಶೋ ನಡೆಸಿ , ಮಗನ ಬಗ್ಗೆ ಇರುವ ಜನಶಕ್ತಿಯ ಪ್ರದರ್ಶನ ಮಾಡಿಸಿದರು. ನಂತರ ತಾವೇ ಸ್ವತ: ಹಳ್ಳಿಗಳಿಗೆ ಓಡಾಡಿ ಭರ್ಜರಿ ಪ್ರಚಾರ ಕೈಗೊಂಡು ಇದು ನನ್ನ ಮಗನ ಚುನಾವಣೆ ಅಲ್ಲ ನನ್ನ ಚುನಾವಣೆ . ಭರತ್‌ನನ್ನು ಗೆಲ್ಲಿಸಿ ಎಂದು ಮತದಾರರಲ್ಲಿ ಬಸವರಾಜ ಬೊಮ್ಮಾಯಿ ಮನವಿ ಮಾಡುತ್ತಿದ್ದಾರೆ.

ಪಠಾಣ್‌ಗೆ ಸಚಿವರ ಸಾಥ್ : ಈ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಕಣಕ್ಕಿಳಿದಿರುವ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ ಕೂಡಾ, ಸಿ.ಎಂ ಸಿದ್ದರಾಮಯ್ಯ ಕಾಂಗ್ರೆಸ್ ಸರಕಾರ ನೀಡುತ್ತಿರುವ ಗ್ಯಾರಂಟಿ ಯೋಜನೆ ಮುಂದಿಟ್ಟುಕೊಂಡು ವ್ಯಾಪಕ ಪ್ರಚಾರ ನಡೆಸಿದ್ದಾರೆ. ಅವರಿಗೆ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್ ಸೇರಿದಂತೆ ವಿವಿಧ ಸಚಿವರ ದಂಡು ಸಾಥ್ ನೀಡುತ್ತಿದೆ.

> ನಾನೊಬ್ಬ ಬಡ ಕುಟುಂಬದಿಂದ ಬಂದವನು, ಕಾಂಗ್ರೆಸ್ ಬಡವರ ಹಾಗೂ ಕಾರ್ಯಕರ್ತರ ಪಕ್ಷ . ಶಿಗ್ಗಾವಿಯಲ್ಲಿ ಬಸವರಾಜ ಬೊಮ್ಮಾಯಿ ಅಭಿವೃದ್ಧಿ ಹೆಸರಲ್ಲಿ ಲೂಟಿ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ನೆಮ್ಮದಿಯಿಂದ ಓಡಾಡಲು ರಸ್ತೆ ಇಲ್ಲ, ಕುಡಿಯುವ ನೀರಿಲ್ಲ, ಅವರಿಗೆ ನಾಲ್ಕು ಬಾರಿ ಗೆಲ್ಲಿಸಿದ್ದಿರಿ, ಜನರ ಆಶೋತ್ತರಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಈ ಬಾರಿ ಕಾಂಗ್ರೆಸ್ ಗೆಲ್ಲಿಸಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡುತ್ತೇನೆ.
>
> **ಯಾಸೀರ್ ಪಠಾಣ್,** ಕಾಂಗ್ರೆಸ್ ಅಭ್ಯರ್ಥಿ

> ಅನೇಕ ವರ್ಷಗಳಿಂದ ಕ್ಷೇತ್ರದ ಜನರೊಟ್ಟಿಗೆ ಇದ್ದೇನೆ. ಕೇತ್ರದಲ್ಲಿ ಓಡಾಡಿ ತಂದೆ ಪರ , ಬಿಜೆಪಿ ಪರ ಮತಯಾಚಿಸಿದ್ದೇನೆ. ತಂದೆಯವರು ಸಚಿವರಾದ ವೇಳೆ ಕೈಗಾರಿಕೆ, ಸ್ಥಾಪನೆ, ಬಡವರಿಗೆ ಉದ್ಯೋಗ ಕೊಡಿಸುವ ವಿಚಾರದಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ತಂದೆಯವರ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತೇನೆ. ಜನರ ಆಶೀರ್ವಾದ ನಮ್ಮ ತಂದೆ ಮೇಲೆ ಇರುವವರೆಗೂ ಇಲ್ಲಿ ಬಿಜೆಪಿಯಾಗಲಿ ನಾನಾಗಲಿ ಸೋಲುವ ಪ್ರಶ್ನೆ ಇಲ್ಲ .
>
> **ಭರತ್ ಬೊಮ್ಮಾಯಿ,** ಬಿಜೆಪಿ ಅಭ್ಯರ್ಥಿ

ಕ್ಷೇತ್ರದ ಮತಗಳ ವಿವರ

ಪುರುಷರು: 1,21,067
ಮಹಿಳೆಯರು: 1,15,717
ಇತರರು:06
ಒಟ್ಟು ಮತದಾರರು:2,36,790
(ಈ ಬಾರಿ 10,564 ಯುವ ಮತದಾರರ ಸೇರ್ಪಡೆ)

2023ರ ಫಲಿತಾಂಶ

ಬಿಜೆಪಿಯ ಬಸವರಾಜ ಬೊಮ್ಮಾಯಿ ಪಡೆದ ಮತ: 1,00016
ಕಾಂಗ್ರೆಸ್‌ನ ಯಾಸೀರ್ ಪಡೆದ ಮತ: 64,038
ಬಿಜೆಪಿಗೆ 35,978 ಮತಗಳ ಅಂತರದ ಗೆಲುವು

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆಗೆ ಮಣಿದ ವಿಜಯೇಂದ್ರ

ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸಿದ ವಕ್ಫ್ ವಿವಾದ

ವಿಜಯಪುರ: ವಿಜಯಪುರದಲ್ಲಿ ವಕ್ಫ್ ವಿವಾದ ಬಗ್ಗೆ ಬಿಜೆಪಿಯ ಅಧ್ಯಯನ ತಂಡದಲ್ಲಿ ವರಿಷ್ಠರು ಬದಲಾವಣೆ ಮಾಡಿದ್ದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹಾಗೂ ಸಂಸದ ರಮೇಶ ಜಿಗಜಿಣಗಿ ಅವರನ್ನು ಸೇರ್ಪಡೆಗೊಳಿಸಿದ್ದಾರೆ.

ತಂಡದಲ್ಲಿ ಹೆಸರು ಕೈಬಿಟ್ಟ ಹಿನ್ನಲೆಯಲ್ಲಿ ಸೋಮವಾರ ಬೆಳಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೆಂದ್ರ ವಿರುದ್ಧ ಶಾಸಕ ಯತ್ನಾಳ ವಾಗ್ದಾಳಿ ನಡೆಸಿ ಪಕ್ಷ ರಚಿಸಿದ ತಂಡವನ್ನು ಬಹಿಷ್ಕರಿಸುವುದಾಗಿ ಪ್ರಕಟಿಸಿದ್ದರು. ಯತ್ನಾಳ ವಾಗ್ದಾಳಿ ಬೆನ್ನಲ್ಲೇ ತಂಡದಲ್ಲಿ ಬದಲಾವಣೆ ಮಾಡಿ ಇಬ್ಬರ ಹೆಸರುಗಳನ್ನು ಸೇರಿಸಲಾಗಿದೆ.

ಈ ಹಿಂದೆ ತಂಡದಲ್ಲಿ ಮಾಜಿ ಡಿಸಿಎಂ, ಸಂಸದ ಗೋವಿಂದ ಕಾರಜೋಳ, ಶಾಸಕ ಹರೀಶ್ ಪೂಂಜಾ, ಶಾಸಕ ಮಹೇಶ ಟೆಂಗಿನಕಾಯಿ, ಮಾಜಿ ಎಂಎಲ್ ಸಿ ಅರುಣ್ ಶಹಾಪುರ ಹಾಗೂ ಮುಖಂಡ ಕಲ್ಮರುಡಪ್ಪ ಇದ್ದರು. ಇದೀಗ ತಂಡಕ್ಕೆ ವಿಜಯಪುರ ಶಾಸಕ ಯತ್ನಾಳ ಹಾಗೂ ವಿಜಯಪುರ ಸಂಸದ ಜಿಗಜಿಣಗಿ ಮತ್ತು ಮುಖಂಡ ಎಂಜಿ ಜಿರಲಿ ಸೇರ್ಪಡೆ ಮಾಡಲಾಗಿದೆ. ತಂಡವು ಅ.29 ಇಂದು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಮಾಡಿ ರೈತರ ಅಹವಾಲು ಆಲಿಸಿ ವರಿಷ್ಠರಿಗೆ ವರದಿ ಸಲ್ಲಿಸಲಿದೆ.

ಫೈರ್ ಬ್ರ್ಯಾಂಡ್ ನಾಯಕನ ಗುಡುಗು

ಇದಕ್ಕೂ ಮುನ್ನ ನಡೆಸಿದ ಸುದ್ದಿಗೋಷ್ಠಿಯಲ್ಲಿ ವಕ್ಫ್ ಸಮಸ್ಯೆ ಪರಿಶೀಲನೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಚಿಸಿದ ತಂಡದಲ್ಲಿ ಶಾಸಕರಾದ ತಮ್ಮನ್ನು ಮತ್ತು ಸಂಸದ ರಮೇಶ್ ಜಿಗಜಿಣಗಿಯನ್ನು ಸೇರಿಸದ ಬಗ್ಗೆ ಬಸನಗೌಡ ಪಾಟೀಲ್ ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದ್ದರು. ತಮ್ಮನ್ನು ವರಿಷ್ಠರು ಕಡೆಗಣಿಸಿದ್ದರಿಂದ ವಕ್ಫ್ ತಂಡವನ್ನು ಬಹಿಷ್ಕರಿಸುವುದಾಗಿ ಅವರು ಎಚ್ಚರಿಕೆ ನೀಡಿದ್ದರು. ರಾಜ್ಯದಲ್ಲಿ ವಕ್ಫ್ ಕುರಿತು ಹೋರಾಟ ಆರಂಭಿಸಿದ್ದೇ ನಾನು. ವಕ್ಫ್ ಮಂಡಳಿಯಿಂದ ರೈತರಿಗಾದ ಅನ್ಯಾಯದ ವಿರುದ್ಧ ಮೊದಲು ಧ್ವನಿ ಎತ್ತಿದ್ದ ತಮ್ಮನ್ನೇ ಕಡೆಗಣಿಸಿದ್ದರಿಂದ ನಿಜವಾದ ಹೋರಾಟಗಾರರನ್ನು ತುಳಿದಂತಾಗಿದೆ ಎಂದು ವಿಜಯೇಂದ್ರರ ಕಟುಟೀಕಾಕಾರರಾದ ಯತ್ನಾಳ್ ಹೂಂಕರಿಸಿದ್ದರು. ಈ ಬೆದರಿಕೆಗೆ ಮಣಿದ ರಾಜ್ಯ ಬಿಜೆಪಿ ವರಿಷ್ಠರು ತಂಡದಲ್ಲಿ ಮಾರ್ಪಾಡು ಮಾಡಿ ಯತ್ನಾಳ್ ಮನವೊಲಿಸುವ ಪ್ರಯತ್ನ ಮಾಡಿದ್ದಾರೆ.

- ವಕ್ಫ್ ಸಮಸ್ಯೆಯ ಬಗ್ಗೆ ಧ್ವನಿ ಎತ್ತಿದ್ದೇ ನಾನು.
- ನಿಜವಾದ ಹೋರಾಟಗಾರರನ್ನು ತುಳಿದಂತಾಗಿದೆ: ಯತ್ನಾಳ್

ರಾಜ್ಯದ ಹಿತದೃಷ್ಟಿಯಿಂದ ಜಲಸಂಪನ್ಮೂಲ ಖಾತೆ ಬಿಟ್ಟುಕೊಡಲಿ

ಡಿಕೆಶಿ ಪಾರ್ಟ್ ಟೈಂ ನೀರಾವರಿ ಮಂತ್ರಿ

ಬೆಳಗಾವಿ: ಡಿಸಿಎಂ ಡಿ.ಕೆ. ಶಿವಕುಮಾರ್ ಪಾರ್ಟ್ ಟೈಂ ನೀರಾವರಿ ಮಂತ್ರಿ, ಫುಲ್ ಟೈಂ ಬಿಬಿಎಂಪಿ. ಅವರೇ ಬೇಕಾದರೆ ಬೆಂಗಳೂರಿನಲ್ಲಿ ಸುತ್ತಾಡಿಕೊಂಡು ಇರಲಿ. ರಾಜ್ಯದ ಹಿತದೃಷ್ಟಿಯಿಂದ ಜಲಸಂಪನ್ಮೂಲ ಖಾತೆ ಬಿಟ್ಟುಕೊಡಲಿ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಸರಕಾರದಲ್ಲಿ ನಾನು ನೀರಾವರಿ ಮಂತ್ರಿ ಆಗಿದ್ದ ಸಂದರ್ಭದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಜೊತೆ ನೀರು ವಿನಿಮಯ ಒಪ್ಪಂದಕ್ಕೆ ಪ್ರಯತ್ನಿಸಿದ್ದೆ. ಆದರೆ ನಮ್ಮ ಕೆಟ್ಟ ಸಮಯ ಸಚಿವಸ್ಥಾನ ಹೋಯ್ತು. ಮತ್ತೊಮ್ಮೆ ಜಲಸಂಪನ್ಮೂಲ ಖಾತೆ ಪಡೆಯುವೆ. ಸದ್ಯ ಇರುವ ಜಲಸಂಪನ್ಮೂಲ ಸಚಿವರಿಂದ ಯಾವುದೇ ನೀರಾವರಿ ಕೆಲಸ ಆಗುತ್ತಿಲ್ಲ. ಜನರ ಹಿತದೃಷ್ಟಿಯಿಂದ ಖಾತೆ ಬಿಟ್ಟುಕೊಡಲಿ ಎಂದು ಡಿಕೆಶಿ ವಿರುದ್ಧ ಹರಿಹಾಯ್ದರು.

ಉಪ ಚುನಾವಣೆಯ ಮೂರು ಕ್ಷೇತ್ರದ ಪ್ರಚಾರ ಕಾರ್ಯಕ್ಕೆ ನಾವು ಹೋಗುವುದಿಲ್ಲ. ವಿಜಯೇಂದ್ರ ಅಧ್ಯಕ್ಷ ಆಗಿರುವರೆಗೆ ನಾವು ವೇದಿಕೆ ಹಂಚಿಕೊಳ್ಳುವು ದಿಲ್ಲ. ಆದರೆ ಚುನಾವಣೆಯಲ್ಲಿ ಪಕ್ಷಕ್ಕೆ ಒಳಿತಾಗಲಿ ಎಂದು ಬಯಸುತ್ತೇನೆ ಎಂದರು.

ಯತ್ನಾಳ್ ಮಾತು ನೂರಕ್ಕೆ ನೂರು ಸತ್ಯ

ಯಡಿಯೂರಪ್ಪ ಸರಕಾರ ಬರಲು ಸಿ.ಪಿ ಯೋಗೇಶ್ವರ್ ಕಾರಣ ಎಂಬ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಹೌದು ಈ ಮಾತು ನೂರಕ್ಕೆ ನೂರು ಸತ್ಯ. ಸಮ್ಮಿಶ್ರ ಸರಕಾರ ಕೆಡವಲು ನಾನು ಯೋಗೇಶ್ವರ್ ಹಾಗೂ ಎನ್.ಆರ್ ಸಂತೋಷ್ ಮಹತ್ವದ ಪಾತ್ರ ವಹಿಸಿದ್ದೆವು. ಆಗ ನಾವು ಮಂತ್ರಿಯಾಗಿ ಪ್ರಮಾಣ ವಚನ ಪಡೆಯುವ ಮೊದಲೇ ಸರಕಾರ ಬೀಳಿಸುವ ಕುರಿತು ನಿರ್ಧಾರ ಮಾಡಿದ್ದೆವು. ಉಪ ಚುನಾ ವಣೆ ಇರುವು ದರಿಂದ ಪಕ್ಷಕ್ಕೆ ಮುಜುಗರ ಆಗಬಾರದೆಂದು ನಾನು ಹೆಚ್ಚು ಮಾತನಾಡಲ್ಲ ಎಂದರು.

ಎಚ್‌ಡಿಡಿ ಕುಟುಂಬ ವಿರೋಧಿಗಳಿಗೆ ಚನ್ನಪಟ್ಟಣ ಜನತೆ ಉತ್ತರ

ಎಲ್ಲರನ್ನೂ ಧಿಕ್ಕರಿಸಿದ ಯೋಗಿ

ರಾಮನಗರ: ನನ್ನ ಬಗ್ಗೆ, ನನ್ನ ತಂದೆಯ ಬಗ್ಗೆ ವಿರೋಧಿಗಳು ಕೀಳುಮಟ್ಟದ ಭಾಷೆ ಬಳಕೆ ಮಾಡುತ್ತಿದ್ದಾರೆ. ಚನ್ನಪಟ್ಟಣ ಜನರೇ ತೀರ್ಪು ಕೊಡುತ್ತಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣ ತಾಲೂಕಿನ ಗ್ರಾಮಗಳಲ್ಲಿ ಪುತ್ರ ನಿಖಿಲ್ ಪರ ಪ್ರಚಾರ ಕೈಗೊಂಡು ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ನನ್ನನ್ನು ನಿಂದನೆ ಮಾಡಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ನಾನು ಅಭಿವೃದ್ಧಿ ವಿಚಾರ ಇಟ್ಟುಕೊಂಡು ಪ್ರಚಾರ ಮಾಡುತ್ತಿದ್ದೇನೆ. ಅವರಿಗೂ ನನಗೂ ಇರುವ ವ್ಯತ್ಯಾಸ ಇಷ್ಟೆ ಎಂದರು.

ಚನ್ನಪಟ್ಟಣ ಕ್ಷೇತ್ರವನ್ನು ಬಿಟ್ಟುಕೊಡಲು ನಿರ್ಧಾರ ಮಾಡಿದ್ದೆವು. ಆದರೆ, ಎಲ್ಲರ ಮಾತನ್ನು ಧಿಕ್ಕರಿಸಿ, ಕಾಲಿನಲ್ಲಿ ಒದ್ದು ಅವರು ಕಾಂಗ್ರೆಸ್ ಸೇರಿಕೊಂಡರು. ಈಗ ನೋಡಿದರೆ ಹಾದಿಬೀದಿಯಲ್ಲಿ ಸುಳ್ಳು ಪ್ರಚಾರ ಮಾಡಿಕೊಂಡು ಓಡಾಡುತ್ತಿದ್ದಾರೆ ಎಂದರು.

ಕುಮಾರಸ್ವಾಮಿಗೆ ಚನ್ನಪಟ್ಟಣದಲ್ಲಿ ಎಷ್ಟು ಕೆರೆಗಳು ಇವೆ ಎಂಬುದೇ ಗೊತ್ತಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಹೇಳಿದ್ದಾರೆ. ಆದರೆ, ನಾನು ಏನು ಮಾಡಿದ್ದೇನೆ ಎಂಬುದು ಹಳ್ಳಿಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ ಎಂದು ತಿರುಗೇಟು ನೀಡಿದರು.

ಚನ್ನಪಟ್ಟಣ ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

> ಮುಡಾ ಹಗರಣದ ವಿರುದ್ಧ ಬೆಂಗಳೂರಿನಿಂದ ಮೈಸೂರುವರೆಗೂ ನಡೆದ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು. ಅವರಿಗೆ ಮುಂದೆ ಒಳ್ಳೆಯ ನಾಯಕನಾಗಿ ಬೆಳೆಯುವ ಎಲ್ಲಾ ಅವಕಾಶಗಳು ಇವೆ. ಅಂತಹ ಅವಕಾಶಕ್ಕೆ ಚನ್ನಪಟ್ಟಣದ ಜನರೇ ನಾಂದಿ ಹಾಡಬೇಕು.
>
> **-ಯದುವೀರ್ ಒಡೆಯರ್,** ಸಂಸದ

ಖುರ್ಸಾಪುರ ಸುತ್ತಮುತ್ತ ಭರತ್ ಬೊಮ್ಮಾಯಿ ಭಾರಿ ಪ್ರಚಾರ

ಶಿಗ್ಗಾವಿಯಲ್ಲಿ ಬಿಜೆಪಿ ಪರ ಅಲೆ

ಶಿಗ್ಗಾವಿ: ಶಿಗ್ಗಾವಿ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಬಿಜೆಪಿ ಅಲೆ ಕಾಣಿಸುತ್ತಿದೆ. ಜನರು ಸ್ವಯಂ ಪ್ರೇರಿತರಾಗಿ ಪ್ರಚಾರ ಮಾಡುತ್ತಿದ್ದಾರೆ. ಭರತ್ ಪರವಾಗಿ ಯುವಕರು ಪ್ರಚಾರ ಮಾಡುತ್ತಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ನಾಲ್ಕೈದು ದಿನದಲ್ಲಿ ಮೊದಲ ಹಂತದ ಪ್ರಚಾರ ಕಾರ್ಯ ಮುಕ್ತಾಯವಾಗಿಲಿದ್ದು, ದೀಪಾವಳಿ ನಂತರ ರಾಜ್ಯ ನಾಯಕರು ಪ್ರಚಾರದಲ್ಲಿ ತೊಡಗಿಕೊಳ್ಳಲಿದ್ದಾರೆ ಎಂದು ಹೇಳಿದರು.

ಬಸವರಾಜ ಬೊಮ್ಮಾಯಿಯವರು ಜನರಿಗೆ ಹಣ ಹೆಂಡ ಹಂಚಿ ಚುನಾವಣೆ ಗೆಲ್ಲುತ್ತಾರೆ ಎಂಬ ಕಾಂಗ್ರೆಸ್ ಅಭ್ಯರ್ಥಿಯ ಆರೋಪಕ್ಕೆ ಪ್ರತಿಕ್ರಿಯಿಸಿ , ಅವರು ಸೋಲನ್ನು ಒಪ್ಪಿಕೊಳ್ಳುತ್ತಿದ್ದಾರೆ. ಶಿಗ್ಗಾವಿ ಸವಣೂರು ಜನರು ಸ್ವಾಭಿಮಾನಿಗಳು ಪ್ರಜ್ಞಾವಂತರಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಅವರಿಗೆ ಅವಮಾನ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರು ದೊಡ್ಡ ಪ್ರಮಾಣದಲ್ಲಿ ಹಣ ಹೆಂಡ ಖರ್ಚು ಮಾಡುವವರಿದ್ದಾರೆ. ಹಣ ಹೆಂಡ ಹೇಗೆ ಬರುತ್ತಿದೆ. ಎಲ್ಲಿ ಬರುತ್ತಿದೆ ಎಂದು ಎಲ್ಲವೂ ಗೊತ್ತಿದೆ. ಮಂತ್ರಿಗಳು, ಶಾಸಕರು ಚುನಾವಣೆಗೆ ಬರಿಕೈಯಲ್ಲಿ ಸುಮ್ಮನೇ ಬರುತ್ತಾರಾ ಎಂದು ಪ್ರಶ್ನಿಸಿದರು.



ಶಿಗ್ಗಾವಿ -ಸವಣೂರು ಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಸೋಮವಾರ ಖುರ್ಸಾಪುರ ಸೇರಿದಂತೆ ಹಲವು ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು.

> ನನ್ನ ನಾಮಿನೇಷನ್‌ಗೆ ಯಡಿಯೂರಪ್ಪ, ಪ್ರಲ್ಹಾದ್ ಜೋಶಿಯವರು, ಅರವಿಂದ್ ಬೆಲ್ಲದ್, ನಿರಾಣಿಯವರು ಛಲವಾದಿ ನಾರಾಯಣಸ್ವಾಮಿ ಬಂದಿದ್ದರು. ಎಲ್ಲಾ ನಾಯಕರ ಆಶೀರ್ವಾದ ನನ್ನ ಮೇಲಿದೆ. ಸರಕಾರ ಇದ್ದಾಗ ಚುನಾವಣೆ ಮಾಡಲು ಸಚಿವರೆಲ್ಲಾ ಬಂದೇ ಬರುತ್ತಾರೆ. ನ.23 ರಂದು ಡಬ್ಬಿ ತೆರೆದು ನೋಡಿದಾಗ ಅವರಿಗೆ ಗೊತ್ತಾಗುತ್ತದೆ. ಜನ ಆಶೀರ್ವಾದ ಮಾಡುತ್ತಾರೆ. ನೂರಕ್ಕೆ ನೂರು ನಾವೇ ಗೆಲ್ಲುತ್ತೇವೆ.
>
> **ಭರತ್ ಬೊಮ್ಮಾಯಿ,** ಬಿಜೆಪಿ ಅಭ್ಯರ್ಥಿ

ಗ್ಯಾರಂಟಿ ಯೋಜನೆಗಳೇ ನಮಗೆ ಶ್ರೀರಕ್ಷೆ

ಬಿಸಿಲೂರು ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭೆ ಕ್ಷೇತ್ರಕ್ಕೆ ನಡೆಯುತ್ತಿರುವ ಉಪ ಚುನಾವಣೆ ದಿನದಿಂದ ದಿನಕ್ಕೆ ರಂಗೇರುತ್ತಿದ್ದು ಚುನಾವಣಾ ಅಖಾಡದಲ್ಲಿ ಸ್ಪರ್ಧಿಗಳು ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಕ್ಷೇತ್ರಾದ್ಯಂತ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಓಡಾಡುತ್ತಿದ್ದಾರೆ. ಈ ಎಲ್ಲದರ ನಡುವೆ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ಅವರು ವಿಶ್ವವಾಣಿ ಪತ್ರಿಕೆಗೆ ನೀಡಿದ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ಅನಂತ ಪದ್ಮನಾಭ ರಾವ್, ಹೊಸಪೇಟೆ

ಸಂಡೂರು ಕ್ಷೇತ್ರಕ್ಕೆ ಟಿಕೆಟ್ ದೊರೆತಿರುವುದಕ್ಕೆ ಏನು ಹೇಳಲು ಬಯಸುತ್ತೀರಿ?

ನನಗೆ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಹಾಗೂ ಸಮಾನತೆ ಆಧಾರದಡಿ ಟಿಕೆಟ್ ಲಭಿಸಿದೆ. ಮಹಿಳೆಗೆ ಟಿಕೆಟ್ ನೀಡಿರುವುದು ನನಗೆ ಮಾತ್ರ ಗೌರವ ದೊರೆತಿಲ್ಲ ಬದಲಿಗೆ ಇಡೀ ಕ್ಷೇತ್ರದ ಮಹಿಳೆಯರಿಗೆ ನೀಡಿದ ಗೌರವವಾಗಿದೆ ಎಂದು ಹೇಳಲು ಬಯಸುವೆ.

ತುಕಾರಾಂ ಅವರು ನಾಲ್ಕು ಬಾರಿ ಶಾಸಕರಾಗಿದ್ದು ಈಗ ಸಂಸದರಾಗಿದ್ದಾರೆ, ಇದು ಎಷ್ಟರ ಮಟ್ಟಿಗೆ ಸಹಕಾರಿಯಾಗಲಿದೆ?

ಸಂಸದ ತುಕಾರಾಂ ಅವರು 2008ರಿಂದ ನಾಲ್ಕು ಬಾರಿ ಶಾಸಕರಾಗಿದ್ದಾರೆ. ಅವರ ಅಭಿವೃದ್ಧಿ ಕಾರ್ಯಗಳು ನಮ್ಮಗೆ ಶ್ರೀರಕ್ಷೆಯಾಗಲಿದೆ. ಸಚಿವ ಸಂತೋಷ್ ಲಾಡ್ ಹಾಗೂ ಸಂಸದರಾದ ತುಕಾರಾಂ ಅವರು ಹಲವಾರು ಅಭಿವೃದ್ಧಿ ಕಾರ್ಯಗಳು ಈಗಾಗಲೇ ಕೈಗೊಂಡಿದ್ದಾರೆ. ಅವರ ಕಾರ್ಯ, ಅಭಿವೃದ್ಧಿಗಳು ಗೆಲುವಿಗೆ ಸಹಕಾರಿಯಾಗಲಿದೆ. ಅಲ್ಲದೇ ನಾನು ಸಹ ಕಳೆದ ಹಲವಾರು ವರ್ಷಗಳಿಂದ ಕ್ಷೇತ್ರದಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿರುವೆ, ಅದರಿಂದಲೂ ಜನರು ಪರಿಚಯವಿದ್ದಾರೆ. ಈ ಎಲ್ಲದರಿಂದ ಗೆಲ್ಲುವ ವಿಶ್ವಾಸವಿದೆ.

ಟಿಕೆಟ್ ಲಭಿಸಿದ ಹಿನ್ನೆಲೆ ಕೆಲವರಲ್ಲಿ ಅಸಮಾಧಾನದ ಬಗ್ಗೆ ಕ್ಷೇತ್ರದಲ್ಲಿ ಚರ್ಚೆ ನಡೆದಿದೆ ಇದಕ್ಕೆ ಏನ್ನು ಹೇಳುತ್ತಿರಿ?

ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಕುಟುಂಬದಲ್ಲಿ ಸಹಜವಾಗಿ ಕೆಲವು ಸಣ್ಣಪುಟ್ಟ ಗೊಂದಲ, ಅಸಮಾಧಾನ ಸಹಜ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಮರು ಚುನಾವಣೆಯಲ್ಲಿ ಎದುರಾಳಿ ಬಿಜೆಪಿಯನ್ನು ಸಮರ್ಥವಾಗಿ ಎದುರಿಸುತ್ತೇವೆ.

ಕ್ಷೇತ್ರದ ಅಭಿವೃದ್ಧಿ ಬಗ್ಗೆ ಏನಾದರೂ ಯೋಜನೆ ಇದೆಯಾ?

ಕ್ಷೇತ್ರದಲ್ಲಿ ಈಗಾಗಲೇ ಹಲವಾರು ಅಭಿವೃದ್ಧಿ ಕಾರ್ಯಗಳು ಆಗಿದೆ. ಆಗುತ್ತಿವೆ. ಅವೆಲ್ಲವನ್ನು ಮುಂದುವರಿಸಿಕೊಂಡು ಹೋಗುವೆ. ಸಂಸದ ತುಕಾರಾಂ ಅವರು ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವುದರ ಜೊತೆಗೆ ಕ್ಷೇತ್ರದ ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದ ಜನರ ಕಲ್ಯಾಣಕ್ಕೂ ಅಗತ್ಯ ಯೋಜನೆಗಳನ್ನು ರೂಪಿಸುವ ಯೋಜನೆ ಇದೆ.

ಕ್ಷೇತ್ರದ ಮತದಾರರಿಗೆ ಏನು ಹೇಳಲು ಬಯಸುವಿರಿ?

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಂಕಣ ಬದ್ಧರಾಗಿರುವೆ. ಕ್ಷೇತ್ರದ ಹಾಗೂ ತಾಲೂಕಿನ ಜನರ ಸಮಗ್ರ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡುವೆ. ಜನರ ಸಮಸ್ಯೆ, ಕಷ್ಟಗಳಿಗೆ ಸದಾ ಸ್ಪಂದಿಸುವೆ. ಜನರ ಮಧ್ಯೆ ಇದ್ದೂ ಕೆಲಸ ಮಾಡಿರುವೆ, ಮುಂದೆಯೂ ಹೆಚ್ಚಿನ ರೀತಿಯಲ್ಲಿ ಕಾರ್ಯ ನಿರ್ವಹಿಸುವೆ. ಮತದಾರರು ಈ ಮರು ಚುನಾ ವಣೆಯಲ್ಲಿಯೂ ಹೆಚ್ಚಿನ ಮತ ನೀಡಿ ಗೆಲ್ಲಿಸುವ ವಿಶ್ವಾಸವಿದೆ.

ಬಿಜೆಪಿ ಘಟಾನುಘಟಿ ನಾಯಕರನ್ನು ಹೇಗೆ ಎದುರಿಸುವಿರಿ?

2008ರಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ ತುಕಾರಾಂ ಅವರು ಸಾಕಷ್ಟು ಹೋರಾಟ ನಡೆಸಿದ್ದಾರೆ. ಬಿಜೆಪಿ ನಾಯಕರನ್ನು ಈ ಹಿಂದನಿಂದಲೂ ಸಮರ್ಥವಾಗಿ ಎದುರಿಸಿದ್ದೇವೆ. ರಾಮುಲು, ಜನಾರ್ದನ ರೆಡ್ಡಿ ಸೇರಿದಂತೆ ಏರೇ ಬಂದರೂ ಸಮರ್ಥವಾಗಿ ಎಲ್ಲರೂ ಒಗ್ಗೂಡಿ ಎದುರಿಸುತ್ತೇವೆ. ಚುನಾವಣೆ ಪ್ರಚಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವಾರು ಸಚಿವರು, ಶಾಸಕರು ಸೇರಿದಂತೆ ಇತರರು ಬರಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೈಗೊಂಡ ಗ್ಯಾರಂಟ ಯೋಜನೆಗಳು ಸಹಕಾರಿಯಾಗಲಿದೆ. ಪ್ರತಿಯೊಂದು ವರ್ಗದ ಜನರಿಗೂ ಈ ಎಲ್ಲಾ ಯೋಜನೆಗಳು ತಲುಪಿವೆ. ಈ ಎಲ್ಲಾ ವಿಚಾರಗಳು ಚುನಾವಣೆಯಲ್ಲಿ ಗೆಲ್ಲುವ ಭರವಸೆ ಇದೆ.

ವಿಶ್ವವಾಣಿ

ಸಂಪಾದಕೀಯ

ಈ ಅಕ್ರಮವೂ 'ಸಕ್ರಮ'ವಾಗುವುದೇ?

ಬೆಂಗಳೂರು ಮಹಾನಗರಿಯ ಬಾಬುಸಾಪಾಳ್ಯ ಬಡಾವಣೆಯಲ್ಲಿ ಕಟ್ಟಡ ಕುಸಿತ ಸಂಭವಿಸಿ ಸಾಕಷ್ಟು ಮಂದಿ ಪ್ರಾಣ ಕಳೆದುಕೊಂಡಿದ್ದು ನಿಜಕ್ಕೂ ದುಃಖದ ಸಂಗತಿ. ಈ ದುರಂತ ಸಂಭವಿಸಿದ ತರುವಾಯದಲ್ಲಿ ಅಕ್ರಮ ಕಟ್ಟಡಗಳಿಗೆ ಸಂಬಂಧಿಸಿದ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಅಕ್ರಮ ಕಟ್ಟಡಗಳಿಗೆ ಲಗಾಮು ಹಾಕಲು ಪ್ರತ್ಯೇಕ ನೀತಿ-ನಿಯಮಗಳನ್ನು ರೂಪಿಸಲು ಸರಕಾರ ಸಜ್ಜಾಗಿದೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಆದರೆ, ಅಕ್ರಮವೊಂದು ರಾಜಮಾರ್ಗದಲ್ಲೇ ರಾಜಾರೋಷವಾಗಿ ಜರುಗುತ್ತಿರುವುದರ ಬಗೆಗಿನ ಸುದ್ದಿಯೂ ಜತೆಯಲ್ಲೇ ಹರಿದಾಡುತ್ತಿದೆ. ಅದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದೆಡೆಗೆ ಸಾಗುವ ಹೆದ್ದಾರಿಯಲ್ಲೇ 6 ಅಂತಸ್ತಿನ ಕಟ್ಟಡವೊಂದು ರೂಪುಗೊಳ್ಳುತ್ತಿದ್ದರೂ ಅಧಿಕಾರಿಗಳು ಗೊತ್ತಿಲ್ಲದವರಂತೆ ನಟಿಸುತ್ತಿದ್ದಾರೆ ಎಂಬ ಸುದ್ದಿ. ಸದರಿ ಕಟ್ಟಡ ನಿರ್ಮಾಣದಿಂದಾಗಿ ಸಾವಿರಾರು ಸ್ಥಳೀಯ ಕುಟುಂಬಗಳಿಗೆ ತೊಂದರೆ ಯಾಗುತ್ತಿದೆ ಎಂದು ನಾಗರಿಕರೊಬ್ಬರು ಸಂಬಂಧಿತ ಪಿಡಿಒಗೆ ದೂರು ನೀಡಿ, ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಮೇಲಧಿಕಾರಿಗಳು ಸೂಚಿಸಿದ್ದರೂ, ಸ್ಥಳೀಯ ಮಟ್ಟದ ಅಧಿಕಾರಿಗಳು ಅದಕ್ಕೆ ಜಗ್ಗದೆ ಕಟ್ಟಡ ನಿರ್ಮಾತೃವಿಗೇ ಅನುಕೂಲವಾಗುವಂತೆ ಕ್ರಮ ಕೈಗೊಳ್ಳುತ್ತಿದ್ದಾರೆ ಎನ್ನಲಾಗಿದೆ. ಒಂದೊಮ್ಮೆ ಇದು ನಿಜವೇ ಆಗಿದ್ದಲ್ಲಿ ಅದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯೇ. ಜತೆಗೆ, ರಾಜ್ಯದ ಉದ್ದಗಲಕ್ಕೂ ಇಂಥ ಅಕ್ರಮ ಕಟ್ಟಡಗಳು ಅದಿನ್ನಾವ ಪರಿಯಲ್ಲಿ ಮೈದಳೆಯುತ್ತಿರಬಹುದು ಎಂಬುದನ್ನು ಊಹಿಸುವುದಕ್ಕೂ ಅದು ಇಂಬುಕೊಡಬಲ್ಲದು. ಮೇಲಿನ ನಿದರ್ಶನದಲ್ಲಿ, ನಾಗರಿಕರೊಬ್ಬರು ನೀಡಿದ ದೂರಿಗೆ ಸ್ಪಂದಿಸಿದ ಮೇಲಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳಲು ಸೂಚಿಸಿದ್ದರೂ ಅದನ್ನು ನಿರ್ಲಕ್ಷಿಸುವಷ್ಟು ಧಾರ್ಷ್ಟ್ಯವನ್ನು ಕೆಳಹಂತದ ಅಧಿಕಾರಿಗಳು ತೋರಿದ್ದಾದರೂ ಹೇಗೆ? ಅದಕ್ಕೆ ಅವರಿಗೆ ಬಲ ನೀಡಿರುವ ಶಕ್ತಿಯಾದರೂ ಯಾವುದು? ಎಂಬುದಿಲ್ಲಿ ಪ್ರಶ್ನೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬುದು ಲೋಕಾರೂಢಿಯ ಮಾತು. ಆದರೆ, 100 ರುಪಾಯಿ ಲಂಚ ತೆಗೆದುಕೊಂಡವನನ್ನು ಮುಲಾಜಿಲ್ಲದೆ ಸೇವೆಯಿಂದ ತೆಗೆದುಹಾಕುವ 'ಮೇಲಿನವರು' ಇಂಥ ಧಾರ್ಷ್ಟ್ಯವನ್ನು, ಗಜಗಾತ್ರದ ಅಕ್ರಮಗಳನ್ನು ನಿರ್ಲಕ್ಷಿಸುವ ಮೂಲಕ 'ಒಂದು ಕಣ್ಣಿಗೆ ಸುಣ್ಣ, ಮತ್ತೊಂದಕ್ಕೆ ಬೆಣ್ಣೆ' ಎಂಬ ಧೋರಣೆಯನ್ನು ಅನುಸರಿಸುತ್ತಿದ್ದಾರೆಯೇ ಎಂಬ ಅನುಮಾನ ಕಾಡುತ್ತದೆ.

ಸೊಂಪಾದಕೀಯ

ಹೀಗೊಂದು 'ವಿಜಯ'ಯಾತ್ರೆ

ನಮ್ಮ ದೇಶದಲ್ಲಿ ಚಿತ್ರರಂಗ ಮತ್ತು ರಾಜಕೀಯ ರಂಗದ ನಡುವೆ ಇರುವ ನಂಟು ಎಲ್ಲರಿಗೂ ಗೊತ್ತೇ ಇದೆ. ರಾಜಕೀಯ ರಂಗದಲ್ಲಿ ಹೆಸರು ಮಾಡಿದವರು ಆಗಾಗ ಬಣ್ಣ ಹಚ್ಚಿ ಚಿತ್ರರಂಗದಲ್ಲಿ ಮುಖ ತೋರಿಸಿದ ಅನೇಕ ಉದಾಹರಣೆಗಳಿವೆ. ಆದರೆ ಅದಕ್ಕಿಂತ ದೊಡ್ಡ ಮಟ್ಟದಲ್ಲಿ ಚಿತ್ರರಂಗದಲ್ಲಿ ಹೆಸರು ಮಾಡಿದವರು ನಂತರ ರಾಜಕೀಯ ರಂಗದಲ್ಲಿ ಅದೇ ಜನಪ್ರಿಯತೆಯನ್ನು ಬಳಸಿಕೊಂಡು ಬೆಳೆಯಲು ಯೋಚನೆ ಮಾಡುವುದು ಕೂಡ ಇದೆ. ಈಗ ಈ ಪಟ್ಟಿಗೆ ಹೊಸದಾಗಿ ಸೇರಿಕೊಂಡಿರುವುದು ತಮಿಳುನಾಡಿನ ಸ್ಟಾರ್ ನಟ ವಿಜಯ್. 'ದಳಪತಿ' ಎಂದು ಹೆಸರು ಮಾಡಿರುವ ವಿಜಯ್ ಈಗ ರಾಜಕೀಯದಲ್ಲಿ ತಮ್ಮ ದಾಳ ಉರುಳಿಸಲು ಸಿದ್ಧರಾಗಿದ್ದಾರೆ. ಆದರೆ ಅಲ್ಲಿನ ಮತದಾರರು ಇವರ ತಾಳಕ್ಕೆ ತಕ್ಕಂತೆ ಕುಣಿಯುತ್ತಾರಾ ಅನ್ನುವ ಕುತೂಹಲ ಎಲ್ಲರದು. ಮೊನ್ನೆ ಭರ್ಜರಿ ಸಮಾವೇಶ ಮಾಡಿ ತಮ್ಮ ರಾಜಕೀಯ ಎಂಟ್ರಿಯನ್ನು ಘೋಷಣೆ ಮಾಡಿದ್ದಾರೆ ವಿಜಯ್. 'ಸಿನಿಮಾ ರಂಗದಲ್ಲಿ ಗಳಿಸಿದ ದೊಡ್ಡ ಹೆಸರು, ಅಷ್ಟೊಂದು ಸಂಭಾವನೆ ಬರುವ ಅವಕಾಶ ಇವೆಲ್ಲವನ್ನೂ ಬಿಟ್ಟು ನಿಮ್ಮ ಸೇವೆಗಾಗಿ ರಾಜಕೀಯಕ್ಕೆ ಬಂದಿದ್ದೇನೆ' ಎಂದು ಎಮೋಷನಲ್ ಆಗಿ ಮಾತಾಡಿದ್ದಾರೆ ವಿಜಯ್. ಅಲ್ಲದೆ ಬಿಜೆಪಿ ಮತ್ತು ಡಿಎಂಕೆ ನಮ್ಮ ವಿರೋಧಿಗಳು ಎಂದು ಅವರು ಘೋಷಣೆ ಮಾಡಿದ್ದಾರೆ. ಚಿತ್ರರಂಗದಲ್ಲಿ ಮಾರ್ಕೆಟ್ ಬಿದ್ದು ಹೋದ ಮೇಲೆ ರಾಜಕೀಯ ಪ್ರವೇಶಿಸುವ ಕೆಲವರನ್ನು ನಾವು ನೋಡಿದ್ದೇವೆ. ಆದರೆ ಚಿತ್ರರಂಗದ ವೃತ್ತಿಜೀವನದಲ್ಲಿ ಉತ್ತುಂಗದಲ್ಲಿ ಇರುವಾಗಲೇ ಎಲ್ಲವನ್ನೂ ಬಿಟ್ಟು 'ಚಿತ್ರಸನ್ಯಾಸ' ತೆಗೆದುಕೊಂಡು ರಾಜಕೀಯ ರಂಗಕ್ಕೆ ಬಂದಿದ್ದಾರೆ ವಿಜಯ್. ಈಗಾಗಲೇ ತಮ್ಮ ಕೊನೆಯ ಚಿತ್ರವನ್ನು ಘೋಷಣೆ ಮಾಡಿರುವ ಅವರು ಇದಾದ ನಂತರ ಸಿನಿಮಾ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಚಿತ್ರರಂಗದಲ್ಲಿ ವಿಜಯ್ ಅವರ ಇತ್ತೀಚಿನ ಯಶಸ್ಸಿನ ಗ್ರಾಫ್ ನೋಡಿದರೆ ಅದು ಅಷ್ಟು ಆಶಾದಾಯಕವಾಗೇನೂ ಇಲ್ಲ. ಆದರೂ ಅವರ ಮಾರ್ಕೆಟ್‌ಗೆ ಯಾವ ಕುತ್ತೂ ಬಂದಿಲ್ಲ. ಎಲ್ಲವನ್ನೂ ಬಿಟ್ಟು ಈಗ ಪೊಲಿಟಿಷಿಯನ್ ಆಗಲು ಹೊರಟಿರುವ ವಿಜಯ್ ಅವರ ಕೊರಳಿಗೆ 2026ರ ತಮಿಳುನಾಡು ಚುನಾವಣೆಯಲ್ಲಿ 'ವಿಜಯಮಾಲೆ' ಬೀಳುತ್ತಾ ಎನ್ನುವುದು ಎಲ್ಲರ ಕುತೂಹಲ.

ಸಂಪಾದಕರ ಸದ್ಯಶೋಧನೆ

ಫಿಡೊ ಎಂಬ ನಾಯಿ

ಇಟಲಿಯ ಫ್ಲಾರೆನ್ಸ್ ನಗರದಿಂದ ಸುಮಾರು 20 ಕಿ.ಮೀ. ದೂರದಲ್ಲಿ ಬೋರ್ಗೋ ಸ್ಯಾನ್ ಲೊರೆಂಝೋ ಎಂಬ ಸಣ್ಣ ಊರಿದೆ. ಆ ಊರಿನ ಜನಸಂಖ್ಯೆ 15,000 ಇದ್ದಿರಬಹುದು. ಈ ಊರು ತನ್ನ ಭೌಗೋಳಿಕ ಸೌಂದರ್ಯದಿಂದ ಪ್ರಸಿದ್ಧವಾಗಿದೆ. ಫ್ಲಾರೆನ್ಸ್‌ಗೆ ಬಂದವರು ಬೋರ್ಗೋ ಸ್ಯಾನ್ ಲೊರೆಂಝೋಕ್ಕೆ ಒಂದು ನಾಯಿಯ ಸ್ಮಾರಕ ನೋಡಲು ಆಗಮಿಸುತ್ತಾರೆ ಅಂದರೆ ಆಶ್ಚರ್ಯವಾಗಬಹುದು. ಆ ಊರಿನಲ್ಲಿ ಫಿಡೊ ಎಂಬ ಇಟಾಲಿಯನ್ ನಾಯಿಯ ಸ್ಮಾರಕವಿದೆ. ಆ ನಾಯಿ 17 ವರ್ಷಗಳ ಕಾಲ ಬದುಕಿತ್ತು. ಫಿಡೊ ತನ್ನ ಯಜಮಾನನಿಗೆ ಅಚಲ ನಿಷ್ಠೆಯನ್ನು ಪ್ರದರ್ಶಿಸಿದ್ದರ ದ್ಯೋತಕವಾಗಿ ಆ ಸ್ಮಾರಕವನ್ನು ಸ್ಥಾಪಿಸಲಾಗಿದೆ. ಆ ನಾಯಿಯ ಕುರಿತು ಅನೇಕ ಇಟಾಲಿಯನ್ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳು ಹಾಗೂ ಪತ್ರಿಕೆಗಳಲ್ಲಿ ಸಾವಿರಾರು ಲೇಖನಗಳು ಪ್ರಕಟವಾಗಿರಬಹುದು. 1941ರಲ್ಲಿ ಫಿಡೊ, ಬೊರ್ಗೊ ಸ್ಯಾನ್ ಲೊರೆಂಝೋ ಪುರಸಭೆಯ ಸಣ್ಣ ಪಟ್ಟಣದಲ್ಲಿ ಒಂದು ಬೀದಿ ನಾಯಿಯಾಗಿತ್ತು. ಅದೇ ವರ್ಷ ಒಂದು ರಾತ್ರಿ, ಕಾರ್ಲೋ ಸೊರಿಯಾನಿ ಎಂಬ ಇಟ್ಟಿಗೆಗೂಡು ಕೆಲಸಗಾರ, ಬಸ್ ನಿಲ್ದಾಣದಿಂದ ಮನೆಗೆ ಹೋಗುತ್ತಿದ್ದಾಗ, ರಸ್ತೆ ಬದಿಯ ಕಂದಕದಲ್ಲಿ ಗಾಯಗೊಂಡು ಬಿದ್ದಿದ್ದ ನಾಯಿಯನ್ನು ನೋಡಿದ. ನಾಯಿ ಯಾರದ್ದು ಎಂದು ತಿಳಿಯದೆ, ಸೊರಿಯಾನಿ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿ ಪ್ರೀತಿಯಿಂದ ಸಾಕಿದ. ಸೊರಿಯಾನಿ ಮತ್ತು ಅವನ ಪತ್ನಿ ನಾಯಿಯನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದರು. ಅದಕ್ಕೆ ಫಿಡೋ (ಲ್ಯಾಟಿನ್ ಭಾಷೆಯಲ್ಲಿ ಫಿಡೊ ಅಂದ್ರೆ ನಿಷ್ಠಾವಂತ ಎಂದರ್ಥ) ಎಂದು ನಾಮಕರಣ ಮಾಡಿದರು. ಫಿಡೋ ಚೇತರಿಸಿಕೊಂಡ ನಂತರ, ಸೊರಿಯಾನಿ ಪ್ರತಿದಿನ ಕೆಲಸಕ್ಕೆ ಹೋಗುವಾಗ ಆತನನ್ನು ಹಿಂಬಾಲಿಸಲಾರಂಭಿಸಿತು. ಸಂಜೆ ಬಸ್ಸಿನಿಂದಿಳಿದು ಹಿಂತಿರುಗಿದಾಗ, ಫಿಡೋ ಸೊರಿಯಾನಿಯನ್ನು ಸ್ವಾಗತಿಸಿ ಮನೆಗೆ ಹಿಂಬಾಲಿಸುತ್ತಿತ್ತು. ಇದು 2 ವರ್ಷಗಳವರೆಗೆ ನಡೆಯಿತು. 1943ರಲ್ಲಿ ಬೋರ್ಗೋ ಸ್ಯಾನ್ ಲೊರೆಂಝೋ ಎರಡನೇ ಮಹಾಯುದ್ಧದ ಸಮಯದಲ್ಲಿ ಮಿತ್ರರಾಷ್ಟ್ರಗಳ ಬಾಂಬ್ ದಾಳಿಗೆ ತುತ್ತಾಯಿತು. ಆ ಸಮಯದಲ್ಲಿ ಸೊರಿಯಾನಿ ಸತ್ತುಹೋದ. ಅದೇ ದಿನ ಸಂಜೆ, ಫಿಡೋ ಬಸ್ ನಿಲ್ದಾಣದಲ್ಲಿ ಎಂದಿನಂತೆ ಕಾಣಿಸಿಕೊಂಡಿತು. ಆದರೆ ಸೊರಿಯಾನಿ ಇಳಿಯುವುದನ್ನು ನೋಡಲಿಲ್ಲ. ಫಿಡೋ ನಂತರ ಮನೆಗೆ ಹಿಂದಿರುಗಿತು, ಆದರೆ 14 ವರ್ಷಗಳ ಕಾಲ (5,000ಕ್ಕಿಂತ ಹೆಚ್ಚು ಬಾರಿ), ಸಾಯುವ ದಿನದವರೆಗೆ, ಪ್ರತಿದಿನ ಸ್ಟಾಪ್‌ಗೆ ಹೋಗುತ್ತಿತ್ತು. ತನ್ನ ಯಜಮಾನ ಬರಬಹುದು ಎಂದು ನಿತ್ಯವೂ ಕನವರಿಸುತ್ತಿತ್ತು. ಫಿಡೋ ಸ್ವಾಮಿನಿಷ್ಠೆಯ ಪರಾಕಾಷ್ಠೆಯ ಕಥೆ ಕೇವಲ ಆ ಊರಿಗೆ ಮಾತ್ರವಲ್ಲ, ಇಟಲಿಯ ಆಚೆಗೂ ಹರಡಿತು. ಸಾಯಂಕಾಲವಾಗುತ್ತಿದ್ದಂತೆ ಯಜಮಾನನ ದಾರಿ ನೋಡಲು ಬಸ್ ನಿಲ್ದಾಣಕ್ಕೆ ಬರುವುದನ್ನು ನೋಡಲು ಸಾವಿರಾರು ಜನ ಸೇರುತ್ತಿದ್ದರು. ಅದರ ಜೀವಿತಾವಧಿಯಲ್ಲಿ ಮಾಧ್ಯಮದ ಆಸಕ್ತಿಯೂ ಬೆಳೆಯಿತು. ಇಟಾಲಿಯನ್ ನಿಯತಕಾಲಿಕೆಗಳು ಫಿಡೊ ಕಥೆಯನ್ನು ಪ್ರಕಟಿಸಿದವು. ಇದು ಹಲವಾರು ನ್ಯೂಸ್ ರೀಲ್‌ಗಳಲ್ಲಿ ಕಾಣಿಸಿಕೊಂಡಿತು. 1958ರಲ್ಲಿ ಫಿಡೊ ತೀರಿಕೊಂಡಾಗ, ಲೊರೆಂಝೋ ಊರಿನ ಜನ ಕಂಬನಿ ಮಿಡಿದರು. ಸ್ವತಃ ಆ ಊರಿನ ಮೇಯರ್ ಶೋಕಸಭೆಯನ್ನು ಏರ್ಪಡಿಸಿದ. ಫಿಡೊ ನಿಧನ ವಾರ್ತೆ ಇಟಲಿಯ ಎಲ್ಲ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಪ್ರಕಟವಾಯಿತು. 'ಟೈಮ್' ಮ್ಯಾಗಜಿನ್ ಕೂಡ ಲೇಖನ ಪ್ರಕಟಿಸಿತು. ಫಿಡೊ ಸಾಯುವುದಕ್ಕಿಂತ ಒಂದು ವರ್ಷ ಮುಂಚೆಯೇ, ಆ ಊರಿನ ಜನ ಅದರ ನೆನಪಿಗಾಗಿ ಒಂದು ಸ್ಮಾರಕವನ್ನು ನಿರ್ಮಿಸಲು ನಿರ್ಧರಿಸಿದ್ದರು. ಫಿಡೊ ತಾನು ಬದುಕಿರುವಾಗಲೇ, ತನ್ನ ಸ್ಮಾರಕವನ್ನು ನೋಡಲಿ ಎಂಬುದು ಅವರ ಆಶಯವಾಗಿತ್ತು. ಕವಿ ಡಾಂಟೆ ವೃತ್ತದ ಸನಿಹ ಊರಿನ ಕೇಂದ್ರ ಭಾಗದಲ್ಲಿ ಫಿಡೊಗೆ ಸ್ಮಾರಕವನ್ನು ನಿರ್ಮಿಸಲಾಯಿತು. ನಾಯಿಯ ಪ್ರತಿಮೆಯ ಕೆಳಗೆ To Fido, example of loyalty ಎಂದು ಬರೆಯಲಾಗಿದೆ. ಸೊರಿಯಾನಿ ಪತ್ನಿ ಮತ್ತು ಫಿಡೊ ಸಮ್ಮುಖದಲ್ಲಿಯೇ ಆ ಪ್ರತಿಮೆಯನ್ನು ಮೇಯರ್ ಉದ್ಘಾಟಿಸಿದ್ದು ವಿಶೇಷ. ಫಿಡೊ ಇದನ್ನೆಲ್ಲಾ ಕಣ್ತುಂಬಿಕೊಳ್ಳಲಿ ಎಂದು ಊರಿನವರೆಲ್ಲ ಬಯಸಿದ್ದರು.

ಹೊಂದಾಣಿಕೆ ರಾಜಕೀಯ ಹೊಸದೇನಲ್ಲ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ರಾಜಕೀಯದಲ್ಲಿ ಹಲವು ಪಟ್ಟುಗಳಿರುತ್ತವೆ. ಅವುಗಳ ಪೈಕಿ, ಉತ್ತಮ ರಾಜಕಾರಣಿಯಾಗಲು 'ರೈಟ್ ಟೈಮ್-ರೈಟ್ ಡಿಸಿಷನ್' ಅಂದರೆ 'ಸೂಕ್ತ' ಸಮಯದಲ್ಲಿ 'ಸರಿಯಾದ' ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಕೂಡ ಒಂದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಯಶಸ್ವಿ ರಾಜಕಾರಣಿಯಾಗಿ, ಪಕ್ಷ ಮೀರಿ ಎಲ್ಲರೊಂದಿಗೆ ಉತ್ತಮ ಸಂಬಂಧ ಹೊಂದುವುದಕ್ಕೆ ಸೂಕ್ತ ತೀರ್ಮಾನಗಳಿಗಿಂತ ಹೆಚ್ಚಾಗಿ, 'ತಪ್ಪು' ಹೆಜ್ಜೆಗಳನ್ನು ಇಡಬೇಕಾಗುತ್ತದೆ. ಇಲ್ಲವೇ ಎದುರಾಳಿ ಇಡುವಂತೆ ನೋಡಿಕೊಳ್ಳಬೇಕಾಗುತ್ತದೆ. ಹಲವು ಸಮಯದಲ್ಲಿ ತಾವು ಗೆಲ್ಲುವುದಕ್ಕಿಂತ ವಿರೋಧಿಗಳು ಗೆಲ್ಲದಂತೆ ನೋಡಿಕೊಳಲು 'ಮೂಗುದಾರ' ಹಾಕಿದರೂ ರಾಜಕೀಯ ಗೆದ್ದಂತೆ ಎನ್ನುವುದು ಈ ಅಖಾಡದ ಅಲಿಖಿತ ನಿಯಮ.

ಈ ನಿಯಮವನ್ನು ಬಹುತೇಕ ರಾಜಕಾರಣಿಗಳು ಅಳವಡಿಸಿಕೊಂಡಿದ್ದರೂ, 'ಅಳವಡಿಸಿಕೊಂಡಿಲ್ಲ' ಎನ್ನುವಂತೆಯೇ ಓಡಾಡಬೇಕಾಗುತ್ತದೆ. ಈ ಹೊಂದಾಣಿಕೆ ಸ್ವಭಾವವಿರದೆ ರಾಜಕೀಯದಲ್ಲಿ ಹೋರಾಡಲು ಹೋದರೆ, ಹೆಚ್ಚು ದಿನಗಳ ಕಾಲ 'ಅಧಿಕಾರ'ದಲ್ಲಿರಲು ಆಗುವುದಿಲ್ಲ ಎನ್ನುವುದು ಬಹುತೇಕರ ಅಭಿಪ್ರಾಯ. ಏಕೆಂದರೆ, ರಾಜಕೀಯದಲ್ಲಿ 'ಶಾಶ್ವತ ಶತ್ರುತ್ವಕ್ಕಾಗಲಿ, ಶಾಶ್ವತ ಮಿತ್ರತ್ವ'ಕ್ಕಾಗಲಿ ಹೆಚ್ಚಿನ ಬೆಲೆಯಿಲ್ಲ. ಅನೇಕ ವೇಳೆ ನಮ್ಮ ರಾಜ್ಯ, ದೇಶದ ರಾಜಕೀಯದಲ್ಲಿ ಈ ರೀತಿಯ ನಿಯಮಗಳಿಂದಲೇ ದಶಕಗಳ ಕಾಲ 'ಗೆದ್ದು' ಗದ್ದುಗೆ ಏರಿದ ಉದಾಹರಣೆಗಳಿವೆ. ಕರ್ನಾಟಕದಲ್ಲಿಯೂ ಕಳೆದ ಕೆಲ ಚುನಾವಣೆಯನ್ನು ಗಮನಿಸಿದರೆ, ಸ್ವಂತ ಶಕ್ತಿಗಿಂತ ಹೆಚ್ಚಾಗಿ, ಎದುರಾಳಿಯ ಗೆಲುವಿಗೆ ಮೂಗುದಾರ ಹಾಕಿದ್ದಕ್ಕಾಗಿ ಹಲವರಿಗೆ ಜಯ ಸಿಕ್ಕಿದೆ ಎನ್ನುವುದು ಸ್ಪಷ್ಟ.

ಮೂವರು ಹಾಲಿ ಶಾಸಕರು 2024ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರಿಂದ ರಾಜ್ಯದಲ್ಲೀಗ ಉಪಚುನಾವಣೆ ಎದುರಾಗಿದೆ. ಕುಮಾರಸ್ವಾಮಿ ರಾಜೀನಾಮೆಯಿಂದ ಚನ್ನಪಟ್ಟಣ ತೆರವಾಗಿದ್ದರೆ, ತುಕಾರಾಂ ರಾಜೀನಾಮೆಯಿಂದ ಸಂಡೂರು ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆಯಿಂದ ಶಿಗ್ಗಾಂವಿಗೆ ಉಪಚುನಾವಣೆ ಎದುರಾಗಿದೆ. ಈಗಾಗಲೇ ಮೂರೂ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆಯಾಗಿದೆ. ಹೀಗೆ ಸಲ್ಲಿಕೆಯಾಗಿರುವ ನಾಮಪತ್ರಗಳ ಪಟ್ಟಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮೂರೂ ಕ್ಷೇತ್ರದಲ್ಲಿ ಯಾರ ರಾಜೀನಾಮೆಯಿಂದ ಸ್ಥಾನ ತೆರವಾಗಿತ್ತೋ, ಅವರ ಕುಟುಂಬಿಕರಿಗೆ ಟಿಕೆಟ್ ಹಂಚಿಕೆಯಾಗಿದೆ. ಕ್ರಮವಾಗಿ ಚನ್ನಪಟ್ಟಣ ಹಾಗೂ ಶಿಗ್ಗಾಂವಿಯಲ್ಲಿ ಮಾಜಿ ಸಿಎಂಗಳ ಪುತ್ರರಾದ ನಿಖಿಲ್ ಕುಮಾರಸ್ವಾಮಿ ಹಾಗೂ ಭರತ್ ಬೊಮ್ಮಾಯಿ ಅವರಿಗೆ ಟಿಕೆಟ್ ನೀಡಲಾಗಿದೆ. ಸಂಡೂರಿನಲ್ಲಿ ಆರಂಭದಲ್ಲಿ ತುಕಾರಾಂ ಪುತ್ರಿಗೆ ಟಿಕೆಟ್ ನೀಡಬೇಕೆಂದು ತೀರ್ಮಾನವಾಗಿತ್ತಾದರೂ, ಸ್ಥಳೀಯರ ಭಾರಿ ವಿರೋಧದಿಂದ ತುಕಾರಾಂ ಪತ್ನಿ ಅನ್ನಪೂರ್ಣ ಅವರನ್ನು ಕಣಕ್ಕೆ ಇಳಿಸಲಾಗಿದೆ.

ಕುಟುಂಬಿಕರಿಗೆ ಟಿಕೆಟ್ ನೀಡಿರುವುದು ಒಂದು ಭಾಗವಾದರೆ, ಅವರಿಗೆ ಸ್ವಂತ ಬಲದ ಮೇಲೆ ಗೆಲ್ಲುವುದಕ್ಕೆ ಬೇಕಾದಷ್ಟು 'ಶಕ್ತಿ' ಇಲ್ಲ ಎಂಬುದು ಅರಿವಾಗುತ್ತಿದ್ದಂತೆ ಎದುರಾಳಿಯನ್ನು ದುರ್ಬಲಗೊಳಿಸುವ ಅಥವಾ ದುರ್ಬಲರನ್ನೇ ತಮ್ಮ ಎದುರಾಳಿ ಮಾಡಿಕೊಳ್ಳುವ 'ಪ್ರಯತ್ನ' ಮೂರೂ ಕ್ಷೇತ್ರದಲ್ಲಿ ನಡೆದಿದೆ ಎನ್ನುವುದು ಸ್ಪಷ್ಟ. ಈ ಕಾರಣಕ್ಕಾಗಿಯೇ ಶಿಗ್ಗಾಂವಿಯಲ್ಲಿ ಭಾರಿ ಪ್ರಮಾಣದ ಬಂಡಾಯ ಕಾಣಿಸಿಕೊಂಡು ಬಳಿಕ ಸದ್ದಿಲ್ಲದೇ ಶಮನವಾಗಿದ್ದು.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆಯ ಪೈಕಿ ಭಾರಿ ಕುತೂಹಲ, ಸದ್ದು ಮಾಡಿದ್ದು ಚನ್ನಪಟ್ಟಣ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಯಾರಾಗಬೇಕು ಎನ್ನುವ ವಿಷಯದಲ್ಲಿನ ಮೇಲಾಟದಿಂದಾಗಿ ಬಿಜೆಪಿಯ 'ಸೈನಿಕ' ಪಕ್ಷಾಂತರ ಮಾಡಿ 'ಕೈ' ಹಿಡಿದು ಅಭ್ಯರ್ಥಿಯಾಗಿ ಪ್ರಚಾರ ಆರಂಭಿಸಿದ್ದಾರೆ. ಯೋಗೇಶ್ವರ ಅವರಿಗೆ ಬಿಜೆಪಿ ಟಿಕೆಟ್ ಸಿಗದಂತೆ ನೋಡಿಕೊಂಡು, ಪಕ್ಷಾಂತರವಾಗುವಂತೆ ಮಾಡುವುದಕ್ಕೂ ಮುಖ್ಯ ಕಾರಣ ಕುಮಾರಸ್ವಾಮಿ ಅವರ ಭವಿಷ್ಯದ ಚಿಂತೆ.

ಈ ಎಲ್ಲ ಕಾರಣಕ್ಕೆ ಚನ್ನಪಟ್ಟಣ ಕುತೂಹಲ ಮೂಡಿಸಿದ್ದರೂ, ಭಾರಿ ಬಂಡಾಯದ ಬಿಸಿ ಕಾಣಿಸಿಕೊಂಡಿದ್ದು ಶಿಗ್ಗಾಂವಿಯಲ್ಲಿ ಎಂದರೆ ತಪ್ಪಾಗುವುದಿಲ್ಲ. ಹಾಗೆ ನೋಡಿದರೆ, ಬಸವರಾಜ ಬೊಮ್ಮಾಯಿ ಅವರು ರಾಜೀನಾಮೆ ನೀಡುತ್ತಿದ್ದಂತೆ ಶಿಗ್ಗಾಂವಿಯಲ್ಲಿ ಪುತ್ರ ಭರತ್‌ರನ್ನು ಪ್ರತಿಷ್ಠಾಪನೆ ಮಾಡುತ್ತಾರೆ ಎಂದೇ ವಿಶ್ಲೇಷಿಸಲಾಗಿತ್ತು. ಆದರೆ ಟಿಕೆಟ್ ಘೋಷಣೆಗೆ ಕೆಲ ದಿನಗಳ ಮೊದಲು ಸ್ವತಃ ಬೊಮ್ಮಾಯಿ ಅವರು, 'ನನ್ನ ಪುತ್ರನಿಗೆ ಟಿಕೆಟ್ ಬೇಡ. ಸಾಮಾನ್ಯ ಕಾರ್ಯಕರ್ತರಿಗೆ ನೀಡುವಂತೆ ವರಿಷ್ಠರಿಗೆ ಮನವಿ ಮಾಡಲಾಗುವುದು' ಎಂದು ಬಹಿರಂಗವಾಗಿಯೇ ಹೇಳಿದ್ದರು. ಆದರೆ ಅಂತಿಮವಾಗಿ 'ವರಿಷ್ಠರ ಒತ್ತಡ'ಕ್ಕೆ ಮಣಿದು ಪುತ್ರನ ಸ್ಪರ್ಧೆಯನ್ನು ಒಪ್ಪಿಕೊಂಡೆ ಎಂದು ಬೊಮ್ಮಾಯಿ ಹೇಳಿದರು. ಈ ಹೇಳಿಕೆ ನೀಡುವಾಗ, 'ಪಕ್ಷ ಸಂಘಟನೆ ಹಾಗೂ ಪಕ್ಷಕ್ಕೆ ಅನುಕೂಲವಾಗಲೆಂದು ವರಿಷ್ಠರು ಭರತ್ ಹೆಸರನ್ನು ಅಂತಿಮಗೊಳಿಸಿದ್ದಾರೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಆದರೆ, ಭರತ್ ಇದಕ್ಕೂ ಮೊದಲು ಪಕ್ಷದ ಯಾವ ಚಟುವಟಿಕೆಯಲ್ಲಿ ತೊಡಗಿದ್ದರು ಎನ್ನುವುದಕ್ಕೆ ಅವರಲ್ಲಿ ಉತ್ತರವಿರಲಿಲ್ಲ.

ವರಿಷ್ಠರ ಈ ತೀರ್ಮಾನಕ್ಕೆ ಪಕ್ಷದ ಹಲವು ಕಾರ್ಯಕರ್ತರು ತಿರುಗಿಬಿದ್ದರು. ಬಳಿಕ ಮೇಲ್ನೋಟಕ್ಕೆ ಎಲ್ಲವನ್ನೂ 'ಹ್ಯಾಂಡಲ್' ಮಾಡುವಲ್ಲಿ ಬೊಮ್ಮಾಯಿ ಯಶಸ್ವಿಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿಗಿಂತ ಹೆಚ್ಚು ಬಂಡಾಯ ಕಾಣಿಸಿದ್ದು ಕಾಂಗ್ರೆಸ್‌ನಲ್ಲಿ ಎನ್ನುವುದು ಮುಖ್ಯ. ಕಾಂಗ್ರೆಸ್‌ನಲ್ಲಿನ ಬಂಡಾಯಕ್ಕೆ, 'ಸುಲಭವಾಗಿ ಗೆಲ್ಲುವ ಕ್ಷೇತ್ರವನ್ನು ಕೈಯಾರೆ ಬಿಟ್ಟುಕೊಡುವ ಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ' ಎನ್ನುವುದೇ ಪ್ರಮುಖ ಕಾರಣ ಎಂಬುದು ಗೋಚರಿಸುತ್ತದೆ. ಏಕೆಂದರೆ, ಈ ಬಾರಿಯೂ ಕಾಂಗ್ರೆಸ್‌ನಲ್ಲಿ 'ಸಂಪ್ರದಾಯ'ದಂತೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಲಾಗಿದೆ. ಆದರೆ ಶಿಗ್ಗಾಂವಿಯಲ್ಲಿ ಮುಸ್ಲಿಮರಿಗೆ ಟಿಕೆಟ್ ಘೋಷಿಸುವ ಬದಲು ಪಂಚಮಸಾಲಿ ಲಿಂಗಾಯತ ಅಥವಾ ಲಿಂಗಾಯತ ಸಮುದಾಯದ ಯಾವುದೇ ಉಪಪಂಗಡದ ನಾಯಕನಿಗೆ ಟಿಕೆಟ್ ಕೊಟ್ಟಿದ್ದರೂ ಕಾಂಗ್ರೆಸ್ ಗೆಲುವು ಖಚಿತ ಎನ್ನಲಾಗಿತ್ತು. ಇದೇ ಮಾತನ್ನು ಬಂಡಾಯವಾಗಿ ಸ್ಪರ್ಧಿಸಿದ್ದ ಮಂಜುನಾಥ್ ಕುನ್ನೂರ್ ಕೆಲ ದಿನಗಳ ಹಿಂದೆ ಹೇಳಿದ್ದರು. 'ಶಿಗ್ಗಾಂವಿಯಲ್ಲಿ ಎಷ್ಟು ವರ್ಷಗಳ ಕಾಲ ಕಾಂಗ್ರೆಸ್ ಮುಸ್ಲಿಮರಿಗೆ ಟಿಕೆಟ್ ನೀಡುವುದೋ ಅಷ್ಟು ವರ್ಷ ಬಸವರಾಜ ಬೊಮ್ಮಾಯಿ ಗೆಲ್ಲುತ್ತಾರೆ' ಎಂದಿದ್ದರು ಅವರು. ಎರಡೂ ಪಕ್ಷದಿಂದ ಲಿಂಗಾಯತರೇ ಸ್ಪರ್ಧಿಸಿದರೆ, ಲಿಂಗಾಯತ ಮತಗಳು 'ವಿಭಜನೆ'ಯಾಗಿ ಅಹಿಂದ ಮತಗಳು ಕಾಂಗ್ರೆಸ್‌ಗೆ ಬರುತ್ತವೆ. ಒಂದು ವೇಳೆ ಹಿಂದೂ ವರ್ಸಸ್ ಮುಸ್ಲಿಂ ಫೈಟ್ ಆದರೆ ಸಹಜವಾಗಿಯೇ ಲಿಂಗಾಯತ ಮತಗಳು ವಿಭಜನೆಯಾಗದೇ ಬಸವರಾಜ ಬೊಮ್ಮಾಯಿ ಅವರಿಗೆ ಸುಲಭ ಗೆಲುವು ದಕ್ಕುತ್ತದೆ.

ಈ ಸರಳ ರಾಜಕೀಯ ಗಣಿತ ಕಾಂಗ್ರೆಸ್ ನಾಯಕರಿಗೆ ತಿಳಿದಿಲ್ಲವೆಂದಲ್ಲ. ಆದರೆ ಮೇಲೆ ವಿವರಿಸಿರುವಂತೆ ಶಿಗ್ಗಾಂವಿ ಅಭ್ಯರ್ಥಿ ವಿಷಯದಲ್ಲಿ 'ಜಾಣ ತಪ್ಪುಹೆಜ್ಜೆ' ಇಡುವ ಮೂಲಕ ಸಹಾಯ ಮಾಡಿಕೊಡುವುದು ಕಾಂಗ್ರೆಸ್ಸಿಗರಿಗೆ ಸಾಮಾನ್ಯವಾಗಿದೆ. ಈ ಹಿಂದೆಯೂ ಬೊಮ್ಮಾಯಿ ಅವರಿಗೆ ಸಹಾಯ ಮಾಡುವ ಕಾರಣಕ್ಕೆ ಕಾಂಗ್ರೆಸ್‌ನ ಕೆಲವು ಪ್ರಮುಖ ನಾಯಕರು ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ವಾದಿಸಿ, ಕಾಂಗ್ರೆಸ್ ಸೋಲುವಂತೆ ಮಾಡಿದ್ದಾರೆ. ಈ ಬಾರಿಯೂ ಇದು ಪುನರಾವರ್ತನೆಯಾಗುವುದೇ ಅಥವಾ ಮುಸ್ಲಿಮರೊಂದಿಗೆ ಪಂಚಮಸಾಲಿ ಲಿಂಗಾಯತರೂ ಕಾಂಗ್ರೆಸ್‌ನ ಕೈಹಿಡಿಯುವರೇ? ಅಥವಾ ಬಸವರಾಜ ಬೊಮ್ಮಾಯಿ ಅವರಿಗೆ ಸಿಕ್ಕ ಪಂಚಮಸಾಲಿ ಲಿಂಗಾಯತ ಮತದಾರರ 'ಸಾಲಿಡ್' ಬೆಂಬಲ ಪುತ್ರ ಭರತರಿಗೆ ವರ್ಗಾವಣೆಯಾಗುವ ವೇಳೆ ಡೈಲ್ಯೂಟ್ ಆಗುವುದೇ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಆದರೆ ಈ ಉಪಚುನಾವಣೆಯ ಮಟ್ಟಿಗೆ ಹೊಂದಾಣಿಕೆಯಿಲ್ಲದೇ ನೇರಾನೇರ ಸ್ಪರ್ಧೆಯಿರುವ ಕ್ಷೇತ್ರ ಎನಿಸಿರುವುದು ಚನ್ನಪಟ್ಟಣ ಮಾತ್ರ. ಮೂರನೇ ಬಾರಿಗೆ ಅದೃಷ್ಟ ಪರೀಕ್ಷೆಗಿಳಿದಿರುವ ನಿಖಿಲ್ ಕುಮಾರಸ್ವಾಮಿ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕಳೆದ ಎರಡು ಬಾರಿ ಚಕ್ರವ್ಯೂಹ ಭೇದಿಸುವಲ್ಲಿ ವಿಫಲರಾಗಿದ್ದ ನಿಖಿಲ್ ಈ ಬಾರಿ 'ಅರ್ಜುನ'ನ ರೀತಿ ಚಕ್ರವ್ಯೂಹ ಭೇದಿಸಲಿದ್ದಾರೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದರೆ, ಇತ್ತ ಎರಡು ಬಾರಿ ಸೋತಿರುವ ನಿಖಿಲ್‌ಗೆ ಮೂರನೇ ಸೋಲಿನ ರುಚಿ ತೋರಿಸುವ ಉತ್ಸಾಹದಲ್ಲಿದ್ದ ಕಾಂಗ್ರೆಸ್ಸಿಗರು ಯೋಗೇಶ್ವರ ಅವರನ್ನು ಸಮರ್ಥ ಅಭ್ಯರ್ಥಿಯೆಂದು ಬಿಜೆಪಿಯಿಂದ ಕರೆದುಕೊಂಡು ಬಂದು ಟಿಕೆಟ್ ಕೊಟ್ಟು ನಿಲ್ಲಿಸಿದ್ದಾರೆ. ಮೇಲ್ನೋಟಕ್ಕೆ ಈ ಚುನಾವಣೆ 'ಬಿಜೆಪಿ-ಜೆಡಿಎಸ್' ವರ್ಸಸ್ 'ಕಾಂಗ್ರೆಸ್' ಎನಿಸಿದರೂ, ಸ್ಥಳೀಯ ಮಟ್ಟದಲ್ಲಿ ಬಿಜೆಪಿಯ ಹಲವು ನಾಯಕರು ನಿಖಿಲ್ ಹ್ಯಾಟ್ರಿಕ್ ಸೋಲು ಬಯಸಿ ತಟಸ್ಥ ಅಥವಾ ಕಾಂಗ್ರೆಸ್ ಪರ 'ಹೊಂದಾಣಿಕೆ' ರಾಜಕೀಯ ನಡೆಸಲು ಸಜ್ಜಾಗಿದ್ದಾರೆ.

ಹಾಗೆ ನೋಡಿದರೆ, ಈ ರೀತಿಯ ಹೊಂದಾಣಿಕೆ ರಾಜಕೀಯ ರಾಜ್ಯದಲ್ಲಿ ಹೊಸದೇನಲ್ಲ. ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿ ಸೋಲಲಿ ಎನ್ನುವ ಕಾರಣಕ್ಕೆ ಸ್ವಪಕ್ಷದವರೇ ಪ್ರತಿಪಕ್ಷದವರೊಂದಿಗೆ ಕೈಜೋಡಿಸಿರುವ ಸಾಕಷ್ಟು ನಿದರ್ಶನಗಳಿವೆ. ಇನ್ನು ಕೆಲವೊಮ್ಮೆ ಪಕ್ಷದ ನಾಯಕರೇ 'ತಪ್ಪು ಹೆಜ್ಜೆಯ' ನೆಪದಲ್ಲಿ ಸೋಲುವ ಅಭ್ಯರ್ಥಿಗೆ ಟಿಕೆಟ್ ನೀಡುವ ಮೂಲಕ ಎದುರಾಳಿಗೆ 'ರೆಡ್ ಕಾರ್ಪೆಟ್' ಹಾಕುತ್ತಾರೆ. ಕರ್ನಾಟಕದ ಮಟ್ಟಿಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ರೀತಿಯ 'ಹೊಂದಾಣಿಕೆ' ಮಾಡಿಕೊಂಡು ಅಭ್ಯರ್ಥಿಗಳ ಗೆಲುವಿಗೆ ಸ್ವಪಕ್ಷದವರಷ್ಟೇ ಪ್ರತಿಪಕ್ಷದ ನಾಯಕರೂ ಶ್ರಮಿಸಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸತ್ಯ.

ಕುಟುಂಬಕ್ಕಾಗಿನ ಈ ರೀತಿಯ 'ಹೊಂದಾಣಿಕೆ'ಗಳು ದೇಶದ ರಾಜಕೀಯದಲ್ಲಿಯೂ ಹೊಸದೇನಲ್ಲ. ಆದರೆ ಕುಟುಂಬ ರಾಜಕಾರಣದ ವಿರುದ್ಧ ಹೋರಾಡಿಕೊಂಡೇ ಅಧಿಕಾರದ ಗದ್ದುಗೆ ಹಿಡಿದ, ಕುಟುಂಬ ರಾಜಕಾರಣಕ್ಕೆ ಒತ್ತು ನೀಡುವುದಿಲ್ಲ ಎನ್ನುವ ಮಾತನ್ನು ಹೇಳಿ ಅನೇಕ 'ಸಮರ್ಥ'ರ ಬದಲಿಗೆ ಹೊಸ ಮುಖಗಳನ್ನು ಪರಿಚಯಿಸಿದ ಬಿಜೆಪಿಯ ತೀರ್ಮಾನ ಹಲವು ನಿಷ್ಠಾವಂತರನ್ನು 'ತಟಸ್ಥ'ರಾಗುವಂತೆ ಮಾಡಿದೆ ಎನ್ನುವುದು ಸುಳ್ಳಲ್ಲ. ಹೊಂದಾಣಿಕೆ ಹಾಗೂ ಕುಟುಂಬ ರಾಜಕಾರಣವನ್ನು ಮೀರಿದ ಆಯ್ಕೆ ಬೇಕೆನ್ನುವುದು ಪಕ್ಷನಿಷ್ಠರ ನಿರೀಕ್ಷೆಯಾದರೂ, ರಾಜಕೀಯವಾಗಿ ಇದು ಸಾಧ್ಯವೇ ಎನ್ನುವುದು ಪ್ರಶ್ನೆ. ಇದಕ್ಕೆ ಬಹುತೇಕರ ಬಳಿ ಉತ್ತರವಿಲ್ಲ. ಈ ಎಲ್ಲದರ ಹೊರತಾಗಿ ಮೂರೂ ರಾಜಕೀಯ ಪಕ್ಷಗಳು ಇದೀಗ ಉಪಚುನಾವಣಾ ಸಿದ್ಧತೆಯಲ್ಲಿ ತೊಡಗಿಸಿಕೊಂಡಿವೆ. ದೀಪಾವಳಿಯ ಬಳಿಕ ಉಪಸಮರದ ಹೋರಾಟ ಇನ್ನಷ್ಟು ಹೆಚ್ಚಾಗುವುದು ಬಹುತೇಕ ಖಚಿತ. ಕ್ಷೇತ್ರದ ಜನರು ಅಪ್ಪಂದಿರನ್ನು ನೋಡಿಕೊಂಡು ಮಕ್ಕಳಿಗೆ ಮನ್ನಣೆ ನೀಡುವರೋ ಅಥವಾ ಇತರೆ ಮಾನದಂಡಗಳನ್ನು ಅನುಸರಿಸುವರೋ ಎಂಬ ಪ್ರಶ್ನೆಗೆ ಫಲಿತಾಂಶದ ದಿನವೇ ಉತ್ತರ ಸಿಗಲಿದೆ!

ಒದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಾರ್ಥಕ್ಯದ ಪರಿಯಿದು

ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಮನಸ್ಸು ಕೊರಡು, ಹೃದಯ ಬರಡು, ಕಿವಿ ಕಿವುಡು. ಯಾರೇನೇ ಸಲಹೆ ನೀಡಲಿ, ಆಕ್ಷೇಪಿಸಲಿ, ಸಾಹಿತ್ಯ ಸಮ್ಮೇಳನದಲ್ಲಿ 'ಭೂರಿ ಭೋಜನ'ವೇ ಪ್ರಮುಖ ಆಕರ್ಷಣೆಯಾಗಿರುತ್ತದೆ. ಪುಢಾರಿ-ಪ್ರಭಾವಿಗಳೇ ವೇದಿಕೆಯ ಬಹುಭಾಗವನ್ನು ಆಕ್ರಮಿಸಿರುತ್ತಾರೆ. (ಇಬ್ಬರು) ಅಧ್ಯಕ್ಷರ ವೈಭವದ ಮೆರವಣಿಗೆಯೇ ಪ್ರಥಮ ದಿನದ ಗೋಷ್ಠಿಗಳನ್ನು ಮಸುಕಾಗಿಸುತ್ತದೆ. ಎಲ್ಲ ದಿನಗಳ ಎಲ್ಲ ಗೋಷ್ಠಿಗಳನ್ನೂ 'ನಡೆಸುವುದರ' ಬದಲು 'ಓಡಿಸಲಾಗುತ್ತದೆ', ಬಹುಸಂಖ್ಯೆಯ ಅನರ್ಹರನ್ನು ಸನ್ಮಾನಿಸಲಾಗುತ್ತದೆ. ಕೊನೆಯ ದಿನ, (ಪೂರ್ವನಿರ್ಧರಿತ) 'ಗೊತ್ತುವಳಿ'ಗಳೆಂಬ ಹಲ್ಲಿಲ್ಲದ ಹಾವನ್ನು ಬುಟ್ಟಿಯಿಂದ ಹೊರಕ್ಕೆ ಹರಿಬಿಟ್ಟು ಸಮ್ಮೇಳನಕ್ಕೆ ಇತಿಶ್ರೀ ಹಾಡಲಾಗುತ್ತದೆ. ಮುಂದಿನ ವರ್ಷ 'ಅಸಾಹಿತಿ'ಯೊಬ್ಬರು ಸಮ್ಮೇಳನಾಧ್ಯಕ್ಷ ಪದವಿಯನ್ನು ಅಲಂಕರಿಸಬಹುದು ಕೂಡ.

ಸಾಹಿತ್ಯ ಪರಿಷತ್ತಿಗೆ ಯಥೇಚ್ಛ ಹಣ ನೀಡುವುದನ್ನು ಸರಕಾರವು ಸಂಪೂರ್ಣ ನಿಲ್ಲಿಸಬೇಕು, ಇಲ್ಲವೇ ಸಿಂಹಪಾಲು ಕಡಿತಗೊಳಿಸಬೇಕು. ಪರಿಷತ್ತಿನ ಅಧ್ಯಕ್ಷ ಸ್ಥಾನದ ಅಭ್ಯರ್ಥಿಗೆ ಮತ್ತು ಮತದಾರರಿಗೆ ಕೆಲವು ಸಾಹಿತ್ಯಕ ಅರ್ಹತೆಗಳನ್ನು ನಿಗದಿಪಡಿಸಬೇಕು. ಆಗ ಮಾತ್ರ ಸಾಹಿತ್ಯ ಸಮ್ಮೇಳನವು ಅನ್ವರ್ಥಕವೂ ಸಾರ್ಥಕವೂ ಆಗುವ ದಿಸೆಯಲ್ಲಿ ಹೆಜ್ಜೆಯಿರಿಸಲು ಆರಂಭಿಸೀತು.

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಮೂಡಲಿ ಜನಜಾಗೃತಿ

ಪ್ರಧಾನಿ ನರೇಂದ್ರ ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಸೈಬರ್ ಕ್ರೈಂ ವಿಷಯದ ಬಗ್ಗೆ ಮಾತನಾಡಿ, ಡಿಜಿಟಲ್ ವಂಚನೆಗೊಳಗಾಗದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿರುವುದು ಶ್ಲಾಘನೀಯ. ಸೈಬರ್ ವಂಚನೆಗಳ ಬಗ್ಗೆ ಪ್ರತಿದಿನವೂ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದರೂ, ಮೋಸಹೋಗುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಜನರು ಅನಾಮಿಕ ಕರೆಗಳಿಗೆ ಉತ್ತರಿಸದಿದ್ದರೆ ಮತ್ತು ಅವರು ಕಳಿಸಿದ ಲಿಂಕ್‌ಗಳನ್ನು ಒತ್ತದಿದ್ದರೆ ಸಾಕಷ್ಟು ಸೈಬರ್ ವಂಚನೆಗಳಿಂದ ತಪ್ಪಿಸಿಕೊಳ್ಳಬಹುದು. ಒಟ್ಟಿನಲ್ಲಿ ನಮ್ಮ ಜಾಗ್ರತೆಯಲ್ಲಿ ನಾವಿರಬೇಕು.

ಅಂದಹಾಗೆ, ಕಳೆದ ವಾರದ 'ಶಿಶಿರಕಾಲ' ಅಂಕಣ ತುಂಬಾ ಚೆನ್ನಾಗಿತ್ತು. ಬದುಕಿನ ಬಗ್ಗೆ ಅನೇಕರು ಹೇಳಿದ್ದನ್ನು ತಿಳಿಸಿಕೊಟ್ಟಿದ್ದಲ್ಲದೆ, 'ನಮ್ಮ ಮುಂದೇನಿದೆಯೋ ಅದುವೇ ಬದುಕು' ಎಂಬ ಸರಳ ಸತ್ಯವನ್ನು ಅಂಕಣಕಾರರು ಚೆನ್ನಾಗಿ ವಿವರಿಸಿದ್ದಾರೆ. ಅವರಿಗೆ ಧನ್ಯವಾದಗಳು.

- ರಾಘವೇಂದ್ರ ಜೋಯಿಸ್, ಮೈಸೂರು

ಓದಿ ನಾಚಿಕೆಯಾಯಿತು!

ಸಂಪಾದಕರ ಸದ್ಯಶೋಧನೆ ವಿಭಾಗದಲ್ಲಿ (ವಿಶ್ವವಾಣಿ ಅ.28) ಕೊರಿಯನ್ ಮನೆಯೊಂದರ ರೀತಿ ನೀತಿಗಳ ಬಗ್ಗೆ ಓದಿದ ನಂತರ, ನಮ್ಮ ಮನೆಯ ಸ್ಥಿತಿಗತಿ ಕುರಿತು ಅತೀವ ನಾಚಿಕೆಯಾಯಿತು. ಯಾವಾಗಲೂ ಪಶ್ಚಿಮದ ಕಡೆಗೇ ನೋಡುವ ನಾವು, ಇನ್ನಾದರೂ ಪೂರ್ವದ ಕಡೆಗೆ ಮುಖ ಮಾಡಬೇಕು. ಮೌಲ್ಯಯುತ ಬರಹಕ್ಕಾಗಿ ವಿಶ್ವೇಶ್ವರ ಭಟ್ಟರಿಗೆ ಧನ್ಯವಾದಗಳು.

- ಜಿ.ಕೆ.ವೆಂಕಟೇಶ್ ಮೂರ್ತಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಉಪನಿಷತ್ತು ಮತ್ತು ಆಧುನಿಕ ವಿಜ್ಞಾನದ ಒಡನಾಟ

ನಿರ್ಮಲನುಡಿ

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ
vveditoped@gmail.com

ಭಾಗ 2

ಒಂದು ಕಾಲದಲ್ಲಿ ಪಶ್ಚಿಮ ದೇಶಗಳಲ್ಲಿ ವಿಜ್ಞಾನ ಮತ್ತು ಧರ್ಮಗಳ ನಡುವೆ ತೀವ್ರವಾದ ಸಂಘರ್ಷ ಏರ್ಪಟ್ಟಿತ್ತು. ಸತ್ಯದ ಹುಡುಕಾಟ ದೈವದ್ರೋಹದ ಕೆಲಸವಾಗಿತ್ತು, ಒಂದು ಅಪರಾಧವಾಗಿತ್ತು. ಸತ್ಯದ ಹುಡುಕಾಟಕ್ಕೆ ಹೊರಟ ಕೋಪರ್ನಿಕಸ್, ಆರ್ಕಿಮಿಡೀಸ್, ಗಿಯಾರ್ಡನೋ ಬ್ರೂನೋ, ಹೈಪಾಷಿಯಾ ಮುಂತಾದ ಸಾಕಷ್ಟು ವಿಜ್ಞಾನಿಗಳನ್ನು ಕೊಲ್ಲಲಾಗಿತ್ತು, ಸಂಶೋಧನೆಯಲ್ಲಿ ತೊಡಗದಂತೆ ಅವರುಗಳ ಮೇಲೆ ನಿಷೇಧ ಹೇರಲಾಗಿತ್ತು. ಆದರೆ ಭಾರತದಲ್ಲಿ ಇಂಥ ಪರಿಸ್ಥಿತಿ ನಿರ್ಮಾಣವಾಗಲಿಲ್ಲ. ಏಕೆಂದರೆ ಇಲ್ಲಿ ವೈಜ್ಞಾನಿಕ ಹುಡುಕಾಟವೇ ಧಾರ್ಮಿಕ ಹುಡುಕಾಟಕ್ಕೆ ತಳಹದಿ ನಿರ್ಮಿಸಿಕೊಟ್ಟಿತ್ತು.

ಪಶ್ಚಿಮ ದೇಶದಲ್ಲಿ ನಡೆದ ಈ ಹೋರಾಟದಲ್ಲಿ ಅಂತಿಮವಾಗಿ ಸತ್ಯಕ್ಕೆ ಜಯ ಸಂದಿತು, ಆಧುನಿಕ ಯುಗದಲ್ಲಿ ವಿಜ್ಞಾನ ಮೇಲುಗೈ ಸಾಧಿಸಿತು. ಆದರೆ ಹೀಗೆ ಮೇಲುಗೈ ಸಾಧಿಸಿದ ವಿಜ್ಞಾನ ತಾನು ಎಲ್ಲವನ್ನೂ ಅರಿಯಬಲ್ಲೆ, ಎಲ್ಲದರ ಕುರಿತೂ ಖಚಿತ ಭವಿಷ್ಯವಾಣಿ ನುಡಿಯಬಲ್ಲೆ, ಇನ್ನು ಹೊಸದಾಗಿ ಅರಿಯಬೇಕಾದ ಯಾವ ಸತ್ಯವೂ ಇಲ್ಲವೆಂಬ ಗರ್ವ ಬೆಳೆಸಿಕೊಂಡಿತು. ಶಾಶ್ವತ ಸಿದ್ಧಾಂತ, ಪ್ರಮೇಯಗಳನ್ನು ಪ್ರತಿಪಾದಿಸಲಾರಂಭಿಸಿತು. ನ್ಯೂಟನ್ ಹಲವು ನಿಯಮಗಳನ್ನು ರೂಪಿಸಿದ. ಅವು ಇಂದಿಗೂ ಪ್ರಸ್ತುತ. ಆದರೆ ಈ ನಿಯಮಗಳು ಭೌತವಸ್ತುವನ್ನು ಸ್ಥೂಲ ಹಂತದಲ್ಲಿ ಗಮನಿಸಿ ರೂಪಿಸಲಾದಂಥವಾಗಿವೆ. ಆದರೆ 20ನೆಯ ಶತಮಾನಕ್ಕೆ ಪದಾರ್ಪಣೆ ಮಾಡುವ ವೇಳೆಗೆ ವಿಜ್ಞಾನ ಬೆಳೆಸಿಕೊಂಡಿದ್ದ ಈ ಗರ್ವದ ಧೋರಣೆ ಕ್ರಮೇಣ ಕಂಪಿಸಲಾರಂಭಿಸಿತು. ಪರಮಾಣುವಿನ ಶೋಧನೆ ಮುಂದುವರಿದಂತೆ ಆತನಕ ರೂಪಿಸಿಕೊಂಡಿದ್ದ ನಿಯಮಗಳೆಲ್ಲವೂ ಅಪ್ರಸ್ತುತವಾಗಲಾರಂಭಿಸಿ ಕ್ವಾಂಟಮ್ ಭೌತಶಾಸ್ತ್ರವೆಂಬ ಹೊಸ ಜ್ಞಾನಶಾಖೆಯೇ ಉದಯಿಸಿತು.

ಸಬ್‌ಅಟಾಮಿಕ್ ಕಣಗಳನ್ನು ಪರಿಶೀಲಿಸುವಾಗ ಅವು ವಿಚಿತ್ರ ರೀತಿಯಲ್ಲಿ ವರ್ತಿಸುತ್ತವೆ. ಅದರ ವರ್ತನೆಯನ್ನು ವಿವರಿಸಲು ವಿಜ್ಞಾನಿಗಳು ತಿಣುಕಾಡುತ್ತಿದ್ದಾರೆ. ಈ ಕಣಗಳು ಒಮ್ಮೆ ಅಲೆಯ ರೂಪದಲ್ಲೂ, ಮತ್ತೊಮ್ಮೆ ಕಣಗಳ ರೂಪದಲ್ಲೂ ಅವಸ್ಥಾಂತರಗೊಳ್ಳುತ್ತಿರುತ್ತವೆ. ಅಲೆಗಳ ರೂಪದಲ್ಲಿರುವಾಗ ವಿಜ್ಞಾನಿ ಅದನ್ನು ಅವಲೋಕಿಸಿದೊಡನೆಯೇ ಆ ಅಲೆಗಳು ಕಣಗಳ ರೂಪಕ್ಕೆ ಪರಿವರ್ತನೆಯಾಗುತ್ತವಂತೆ. ಅಂದರೆ ವ್ಯಕ್ತಿಯೊಳಗಿನ ಪ್ರಜ್ಞೆ ಹೊರಗಿನ ಭೌತದ್ರವ್ಯಗಳ ಮೇಲೆ ಪ್ರಭಾವ ಉಂಟುಮಾಡಬಲ್ಲದು. ಇದು ಹೊಸ ಒಳನೋಟವೇನಲ್ಲ, ದೃಕ್-ದೃಶ್ಯ ಪರಿಕಲ್ಪನೆಯನ್ನು ಉಪನಿಷತ್ತುಗಳು ಪ್ರಾರಂಭದಿಂದಲೂ ಪ್ರತಿಪಾದಿಸುತ್ತ ಬಂದಿವೆ. ನೋಡುವವನ ಮತ್ತು ನೋಟದ ಕುರಿತು ಆದಿಶಂಕರರು ಉಪನಿಷತ್ತುಗಳ ಹಿನ್ನೆಲೆಯಲ್ಲಿ 'ದೃಕ್-ದೃಷ್ಟಿ ವಿವೇಕ' ಎಂಬ ಕೃತಿಯಲ್ಲಿ ಈ ಬಗ್ಗೆ ಚರ್ಚಿಸಿದ್ದಾರೆ ಕಳೆದೊಂದು ಶತಮಾನದಿಂದಲೂ ವಿಜ್ಞಾನಿಗಳು ಭೌತಕಣಗಳ ಈ ಅನಿರೀಕ್ಷಿತ ವರ್ತನೆ, ಅವಸ್ಥಾಂತರದ ಸ್ವರೂಪವನ್ನು ಶೋಧಿಸುವ ಯತ್ನದಲ್ಲೇ ಇದ್ದಾರೆ.

ಯೋಗ ಮತ್ತು ಉಪನಿಷತ್ತಿನ ಚಿಂತನೆ ಅಸಲಿಗೆ ಧಾರ್ಮಿಕ ಅಥವಾ ಸೈದ್ಧಾಂತಿಕ ಚಿಂತನೆ ಅಲ್ಲವೇ ಅಲ್ಲ, ತನ್ನ ಸ್ವರೂಪದಲ್ಲೇ ಅದು ವೈಜ್ಞಾನಿಕ ಚಿಂತನೆಯಾಗಿದೆ. ಯೋಗ ಮೂಲತಃ ಒಂದು ಮನೋವೈಜ್ಞಾನಿಕ ಅಧ್ಯಯನ ವಿಧಾನ. ಪಶ್ಚಿಮದ ಮನೋವಿಜ್ಞಾನ ರೋಗಗ್ರಸ್ತ ಮನಸ್ಸಿನ ಅಧ್ಯಯನವಾದರೆ ಪೂರ್ವದ ಮನೋವಿಜ್ಞಾನ ಸ್ವಸ್ಥ ಮನಸ್ಸಿನ ಅಧ್ಯಯನವಾಗಿದೆ ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಜ್ಞಾನಕ್ಕಾಗಿ ಹೊರಜಗತ್ತಿನಲ್ಲಿ ನಡೆಸುವ ಹುಡುಕಾಟ ಕೀಳೆಂದೂ, ಒಳಜಗತ್ತಿನಲ್ಲಿ ನಡೆಸುವ ಹುಡುಕಾಟ ಮೇಲೆಂದೂ ನಾನು ಭಾವಿಸಿಲ್ಲ. ಎರಡೂ ಜ್ಞಾನಪ್ರಾಪ್ತಿಗಿರುವ 2 ವಿಭಿನ್ನ ವಿಧಾನಗಳು. ಜ್ಞಾನಾರ್ಜನೆಗೆ ಎರಡೂ ಅತ್ಯಗತ್ಯ, ಎರಡರಲ್ಲೂ ಪರಿಶ್ರಮವಿರತಕ್ಕದ್ದು. ಕೊನೆಗೆ ಜ್ಞಾನಪ್ರಾಪ್ತಿಯಾದ ಮೇಲೆ ಅವೆರಡೂ ಬೇರೆಬೇರೆಯಲ್ಲ ಎಂದು ತಿಳಿಯುತ್ತದೆ. ವಿಜ್ಞಾನದ ಆಧುನಿಕ ಆವಿಷ್ಕಾರಗಳು ವೇದಾಂತದ ಒಳನೋಟಗಳನ್ನೇ ಪ್ರತಿಧ್ವನಿಸಲಿವೆ ಎಂದಿದ್ದರು ವಿವೇಕಾನಂದರು. ಅಂತರ್ಯದಲ್ಲಿ ಎಲ್ಲವೂ ಒಂದೇ, ಹಲವಲ್ಲ ಎಂದು ಉಪನಿಷತ್ತುಗಳು ಸಾರುತ್ತವೆ. ವಿಜ್ಞಾನಿಗಳೂ ಇದನ್ನೇ ಹೊಸ ಪರಿಭಾಷೆಯಲ್ಲಿ ಹೇಳುತ್ತಿದ್ದಾರೆ. ಉಪನಿಷತ್ ದ್ರಷ್ಟಾರರೂ ಕ್ವಾಂಟಂ ಭೌತಶಾಸ್ತ್ರಜ್ಞರ ಈ ದ್ವಂದ್ವದ ಪರಿಭಾಷೆಯಲ್ಲೇ ಮಾತನಾಡುತ್ತಾರೆ. ಭೌತ ಪ್ರಕೃತಿಯ 8 ರೂಪಗಳಲ್ಲಿ ಮನಸ್ಸೂ ಒಂದು ಎನ್ನುವ ಇವರು ಮನಸ್ಸನ್ನು ಭೌತದ್ರವ್ಯವೆಂದೂ ಕರೆವರು. ಹಾಗೆಯೇ ಮನಸ್ಸು ಅಲೆಗಳ (ಚಿತ್ತವೃತ್ತಿಗಳ) ರೂಪದ್ದು ಎಂದೂ ಪ್ರತಿಪಾದಿಸುವರು. ನೊಬೆಲ್ ಪುರಸ್ಕೃತ ಮ್ಯಾಕ್ಸ್ ಪ್ಲಾಂಕ್, 'ಪ್ರಜ್ಞೆಯೇ ಮೂಲಭೂತವಾದುದು, ಭೌತದ್ರವ್ಯವೇನಿದ್ದರೂ ಪ್ರಜ್ಞೆಯಿಂದ ನಿಷ್ಪನ್ನವಾದ ತತ್ವವಾಗಿದೆ' ಎಂದಿದ್ದರು.

ಟೆಕ್ಸಾಸ್ ವಿಶ್ವವಿದ್ಯಾಲಯದ ಭೌತಶಾಸ್ತ್ರಜ್ಞ ಡಾ. ಜಾರ್ಜ್ ಸುದರ್ಶನ್ ದಶಕಗಳಿಂದಲೂ ಉಪನಿಷತ್ತಿನ ಮೂಲತತ್ವಗಳ ಹಿನ್ನೆಲೆಯಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. 9 ಸಲ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿರುವ ಅವರು ತಮ್ಮ 'ಡೌಟ್ ಆ್ಯಂಡ್ ಸರ್ಟೆನಿಟಿ' ಎಂಬ ಕೃತಿಯಲ್ಲಿ ಪ್ರಜ್ಞೆ ಮತ್ತು ಭೌತದ್ರವ್ಯಗಳ ನಡುವಿನ ಸಂಬಂಧದ ಕುರಿತ ಸಂಶೋಧನಾ ಫಲಿತಗಳನ್ನು ದಾಖಲಿಸಿದ್ದಾರೆ. ಶ್ರೋಡಿಂಗರ್, ವರ್ನರ್ ಹೈಸೆನ್‌ಬರ್ಗ್ ಮುಂತಾದ ಭೌತವಿಜ್ಞಾನಿಗಳು ಉಪನಿಷತ್ತು ಗಳ ಹಿನ್ನೆಲೆಯಲ್ಲಿ ಕ್ವಾಂಟಂ ಮೆಕ್ಯಾನಿಕ್ ಕುರಿತು ಸಂಶೋಧನೆ ನಡೆಸಿರುವರು. ಅನಿಶ್ಚಿತತೆಯ ತತ್ವವನ್ನು ಪ್ರತಿಪಾದಿಸಿದ ಹೈಸೆನ್‌ಬರ್ಗ್ ಕ್ವಾಂಟಮ್ ಫಿಸಿಕ್ಸ್ ಕುರಿತು ಚಿಂತಿಸುವಾಗಲೆಲ್ಲ ಉಪನಿಷತ್ತುಗಳ ಕುರಿತು ಚಿಂತಿಸುತ್ತಿರುವೆನೇ ಎಂದು ನನಗೆ ದಿಗಿಲಾಗುತ್ತದೆ. ನಾನು ಕಳೆದ 35 ವರ್ಷಗಳಿಂದ ಭೌತವಸ್ತುವಿನ ಕುರಿತು ಅಧ್ಯಯನ ಮಾಡುತ್ತಿದ್ದು ಭೌತವಸ್ತು ಎಂಬುದಿಲ್ಲ ಎಂದು ಕಂಡುಕೊಂಡಿದ್ದೇನೆ. ಉಪನಿಷತ್ತುಗಳು ಸಹ ಭೌತವಸ್ತು ಎಂಬುದಿಲ್ಲ ಎಂದೇ ಪ್ರತಿಪಾದಿಸಿವೆ ಎಂದಿದ್ದಾರೆ.

ಪ್ರಸಿದ್ಧ ಭೌತಶಾಸ್ತ್ರಜ್ಞ ಡಾ.ಡೇವಿಡ್ ಬೋಹ್ಮ್ 'ನೋಡುವವನು ಮತ್ತು ನೋಟ'ದ ಕುರಿತು (ದಿ ಅಬ್ಸರ್ವರ್ ಆ್ಯಂಡ್ ದಿ ಅಬ್ಸರ್ವ್ಡ್) ಆಧುನಿಕ ಯುಗದ ಉಪನಿಷತ್ ದ್ರಷ್ಟಾರರೆಂದು ಕರೆಯಬಹುದಾದ ಜೆ.ಕೃಷ್ಣಮೂರ್ತಿಯವರೊಂದಿಗೆ ದಶಕಗಳ ಕಾಲ ಸಂವಾದಿಸಿ ತಮ್ಮ ಸಂಶೋಧನಾ ನಿರ್ಣಯಗಳನ್ನು ಮರುಪರಿಶೀಲಿಸಿಕೊಂಡಿದ್ದರು. ತಮ್ಮ ಸಂಶೋಧನೆಗೆ ಉಪನಿಷತ್ತುಗಳ ಒಳನೋಟಗಳನ್ನು ಬಳಸಿಕೊಂಡ ಅಸಂಖ್ಯ ಭೌತವಿಜ್ಞಾನಿಗಳನ್ನು (ಪೀಟರ್ ರಸೆಲ್, ಸ್ಟೀಫನ್ ವೇಯಿನ್‌ಬರ್ಗ್, ಸರ್ ಜಾನ್ ಎಕ್ಲಿಸ್, ಸರ್ ಆರ್ಥರ್ ಎಡಿಂಗ್ಟನ್, ಕಾರ್ಲ್ ಪಿಯರ್ಸನ್, ನೀಲ್ಸ್ ಬೋರ್, ಮ್ಯಾಕ್ಸ್ ಪ್ಲಾಂಕ್, ಆಲ್ಬರ್ಟ್ ಐನ್‌ಸ್ಟೀನ್) ಉಲ್ಲೇಖಿಸಬಹುದು. ವ್ಯಕ್ತಿನಿಷ್ಠ ಮನಸ್ಸು ಮತ್ತು ವಸ್ತುನಿಷ್ಠ ಭೌತದ್ರವ್ಯಗಳು ಬೇರೆ ಬೇರೆಯಲ್ಲ, ಕಾಣುವ ವಸ್ತುವನ್ನು ನೋಡುವ ವ್ಯಕ್ತಿಯಿಂದ ಬೇರ್ಪಡಿಸಲಾಗದು. ಫ್ರಿಟ್ಜಾಫ್ ಕಾಪ್ರಾ ಬರೆದಿರುವ 'ದಿ ತಾವೋ ಆಫ್ ಫಿಸಿಕ್ಸ್' ಈ ಸಂಬಂಧವನ್ನು ವಿವೇಚಿಸುವ ಕಳೆದ ಶತಮಾನದ ಮಹತ್ವದ ಕೃತಿಯಾಗಿದೆ.

ಸಂವಾದವೇ ಪ್ರಧಾನವಾದ ಉಪನಿಷತ್ತುಗಳು ಜ್ಞಾನಪ್ರಾಪ್ತಿಗೆ ಬೌದ್ಧಿಕತೆ, ವೈಚಾರಿಕತೆಗಳ ಬಳಕೆಯನ್ನು ಎಂದಿಗೂ ನಿರಾಕರಿಸಿಲ್ಲ. ಆದರೆ ಬೌದ್ಧಿಕತೆ, ವೈಚಾರಿಕತೆಗಳು ಒಂದು ಹಂತದವರೆಗೆ ಉಪಯುಕ್ತವಾದುದು, ಅವೇ ಅಂತಿಮ ಉಪಾಧಿಗಳಲ್ಲ ಎನ್ನುತ್ತವೆ. ಶ್ರುತಿ, ಯುಕ್ತಿ ಮತ್ತು ಅನುಭೂತಿಗಳ ಸಾಮರಸ್ಯದಿಂದ ಸತ್ಯಪ್ರಾಪ್ತಿಯಾಗುತ್ತದೆ ಎಂದು ಪ್ರತಿಪಾದಿಸುತ್ತವೆ. ಆಲ್ಬರ್ಟ್ ಐನ್‌ಸ್ಟೀನ್ ಗೊತ್ತಿದ್ದೋ ಗೊತ್ತಿಲ್ಲದೆಯೋ ಇದೇ ನಿರ್ಣಯಕ್ಕೆ ಬಂದಿದ್ದರು: ನಮ್ಮ ಎಲ್ಲ ಬೌದ್ಧಿಕ ಪ್ರಯತ್ನಗಳೂ ಅಂತಿಮವಾಗಿ ವಿಫಲವಾಗುತ್ತವೆ. ಅಂತಿಮ ಸತ್ಯವನ್ನರಿಯಲು ತಾರ್ಕಿಕ ನಿಯಮಗಳಿಲ್ಲ, ಅಂತಃಸ್ಫೂರ್ತಿ ಮತ್ತು ಅನುಭೂತಿಗಳಿಂದ ಅದನ್ನು ಅರಿಯಬಹುದು (ಕಲೆಕ್ಟೆಡ್ ಪೇಪರ್ಸ್ ಸಂ.7).

ವಸ್ತುನಿಷ್ಠ (ಆಬ್ಜೆಕ್ಟಿವ್) ಅಧ್ಯಯನವಾದ ಭೌತಶಾಸ್ತ್ರವಿಂದು ವ್ಯಕ್ತಿನಿಷ್ಠ (ಸಬ್ಜೆಕ್ಟಿವ್) ಅಧ್ಯಯನವಾಗಿ ಪರಿಣಮಿಸುತ್ತಿದೆ. ಇಂದಿನ ಭೌತವಿಜ್ಞಾನಕ್ಕೆ ಭೌತದ್ರವ್ಯದ ಪರಿಶೀಲನೆ ಗೌಣವಾಗಿದೆ, ಮನೋವೃತ್ತಿಯೇ ಪ್ರಧಾನವಾಗಿದೆ. ಗಮನಿಸುವ ವಸ್ತುವಿಗಿಂತ ಗಮನಿಸುವವನ ಪ್ರಜ್ಞೆಗೆ ಪ್ರಾಧಾನ್ಯ ನೀಡುತ್ತಿದೆ. ಇಂದಿನ ವಿಜ್ಞಾನ ಮನುಷ್ಯನ ಆಧ್ಯಾತ್ಮಿಕ ಅನುಭವದ ಬಗ್ಗೆ ವಿಶೇಷ ಕುತೂಹಲ ಬೆಳೆಸಿಕೊಂಡಿದೆ. ತಾನು ಪರಿಶೀಲಿಸುವ ವಸ್ತುವಿನ ಹಿಂದಿರುವ ನಿಗೂಢವಾದ, ಸಕಲವನ್ನೂ ಐಕ್ಯಗೊಳಿಸುವ ಪರಬ್ರಹ್ಮ ತತ್ವದ ಬಗ್ಗೆ ಆಸಕ್ತಿ ತಳೆದಿದೆ. ಪರಿವರ್ತನಾಶೀಲವಾದ ಭೌತವಸ್ತುವಿನ ಹಿಂದಿರುವ ಮೂಲಭೂತ ತತ್ವವು ಕ್ವಾಂಟಮ್ ಸಿದ್ಧಾಂತದ ತಳಹದಿಯಾಗಿದೆ, ಮಾತ್ರವಲ್ಲ ಪೂರ್ವದೇಶದ ಲೋಕದೃಷ್ಟಿಯನ್ನು ರೂಪಿಸಿದೆ. ಆ ಮೂಲಭೂತ ತತ್ವವೇ ನಿಜವಾದ ಸತ್ಯವೆಂದೂ, ಅದರ ಅಭಿವ್ಯಕ್ತಿ ರೂಪದ ಕ್ಷಣಭಂಗುರವಾದ ಲೋಕಸತ್ಯವು ಮಿಥ್ಯೆಯೆಂದೂ ಉಪನಿಷತ್ತಿನ ಋಷಿಗಳು ಸಾರಿಹೇಳುತ್ತಾರೆ. ಆ ಪರಮಸತ್ಯವನ್ನು ಪೂರ್ವದೇಶದ ಅನುಭಾವಿಗಳು ಧರ್ಮವೆಂದೂ, ಬೌದ್ಧ ದಾರ್ಶನಿಕರು ಧರ್ಮಕಾಯವೆಂದೂ, ತಾವೋ ವಾದಿಗಳು ತಾವೋ ಎಂದೂ ನಿರ್ವಚಿಸುತ್ತಾರೆ. ಅದನ್ನು ಕೇವಲ ಒಂದು ಜ್ಞಾನಶಾಖೆಯನ್ನು ಅವಲಂಬಿಸಿ ಅನುಸಂಧಾನ ಮಾಡಲಾಗದು.

ಯಾವೆಲ್ಲ ವಸ್ತುವಿಷಯಗಳು ಆಧುನಿಕ ವಿಜ್ಞಾನದ ಕಾಳಜಿಯ ವಿಚಾರಗಳಾಗಿವೆಯೋ ಆ ಎಲ್ಲ ವಸ್ತುವಿಷಯಗಳೂ ಉಪನಿಷತ್ತುಗಳು ಚರ್ಚಿಸುವ ಪ್ರಧಾನ ಸಂಗತಿಗಳೂ ಆಗಿವೆ. ಅದು ಸೃಷ್ಟಿಯ ಏಕತೆಯನ್ನು ಪ್ರತಿಪಾದಿಸುವ ಪರಬ್ರಹ್ಮ ಮತ್ತು ಅದ್ವೈತದ ಪರಿಕಲ್ಪನೆ ಇರಬಹುದು, ಸೃಷ್ಟಿಯ ಮೂಲವನ್ನು ಅರಿಯಬೇಕೆಂದು ತವಕಿಸುವ ಮನುಷ್ಯಪ್ರಜ್ಞೆ ಇರಬಹುದು, ಪರಿವರ್ತನಾಶೀಲ ಭೌತಿಕ ಪ್ರಪಂಚದ ಮಿಥ್ಯತ್ವದ ವಿವೇಚನೆ ಇರಬಹುದು, ಕಾಲದೇಶಗಳ ಪರಿಕಲ್ಪನೆ ಇರಬಹುದು ಅಥವಾ ಸತ್ಯವನ್ನು ಅರಿಯಬೇಕೆಂದು ಹೊರಡುವ ವ್ಯಕ್ತಿಯ ವಿವೇಕ, ನೈತಿಕತೆ, ಪ್ರಾಮಾಣಿಕತೆಗಳ ಪ್ರಶ್ನೆ ಇರಬಹುದು. ವಿಜ್ಞಾನ-ವೇದಾಂತಗಳ ನಡುವಿನ ಅಂತಸಂಬಂಧ ಕುತೂಹಲಕರವಾದುದು. ಅವೆರಡರ ಅನ್ವೇಷಣಾ ವಿಧಾನದಲ್ಲಿ ವ್ಯತ್ಯಾಸವಿರಬಹುದು. ಆದರೆ ಆಶಯ ಒಂದೇ. ಮನುಷ್ಯ ಪ್ರಜ್ಞೆಯನ್ನು, ಮನುಷ್ಯನ ಲೋಕದೃಷ್ಟಿಯನ್ನು, ಮನುಷ್ಯ ಬದುಕನ್ನು ಇನ್ನಷ್ಟು ಹಸನುಗೊಳಿಸುವುದು. ಇದುವೇ ಎಲ್ಲ ಜ್ಞಾನಾನ್ವೇಷಣೆಗಳ ಮೂಲ ಆಶಯವಾಗಿದೆ. ಈಶಾವಾಸ್ಯ ಉಪನಿಷತ್ತು ದಶೋಪನಿಷತ್ತುಗಳಲ್ಲಿ ಅತ್ಯಂತ ಕಿರಿದಾದ ಉಪನಿಷತ್ತಾಗಿದೆ. ಶುಕ್ಲ ಯಜುರ್ವೇದದ ಕೊನೆಯ ಭಾಗದಲ್ಲಿ ಬರುವ ಈ ಉಪನಿಷತ್ತಿನಲ್ಲಿ 18 ಮಂತ್ರಗಳಿವೆ. ಕಾವ್ಯದ ಮೊದಲಸಾಲೇ ಕಾವ್ಯದ ಶೀರ್ಷಿಕೆಯಾಗಿದೆ ಎಂದು ಕಾವ್ಯ ಮೀಮಾಂಸಕಾರರು ಹೇಳುತ್ತಾರೆ. ಈ ಉಪನಿಷತ್ತು 'ಈಶಾವಾಸ್ಯಮಿದಂ ಸರ್ವಂ' ಎಂದು ಪ್ರಾರಂಭವಾಗುವುದರಿಂದ ಇದು ಈಶಾವಾಸ್ಯೋಪನಿಷತ್ ಎಂದು ಹೆಸರಾಗಿದೆ.

ಮ್ಯಾಕ್ಸ್ ಮುಲ್ಲರ್, ರಾಜಾರಾಮ ಮೋಹನರಾಯ್ ಮುಂತಾದ ಆಧುನಿಕ ಪೂರ್ವಯುಗದ ವಿದ್ವಾಂಸರುಗಳಿಂದ ಹಿಡಿದು ಗಾಂಧಿ ವಿನೋಬಾ ಭಾವೆವರೆಗಿನ ನೂರಾರು ಚಿಂತಕರು, ತತ್ವಜ್ಞಾನಿಗಳು, ಸಮಾಜ ಸುಧಾರಕರು ಈ ಉಪನಿಷತ್ತಿನ ಕುರಿತು ಮತ್ತೆ ಮತ್ತೆ ಚರ್ಚಿಸಿದ್ದಾರೆಂದರೆ ಇದರ ಮಹತ್ವ ಎಂಥದೆಂದು ಮನವರಿಕೆಯಾಗದಿರದು. ಗಾಂಧೀಜಿಯಂತೂ ಮುಂದೊಂದು ದಿವಸ ಎಲ್ಲ ಉಪನಿಷತ್ತುಗಳೂ, ಎಲ್ಲ ಶಾಸ್ತ್ರಗ್ರಂಥಗಳೂ ಸುಟ್ಟು ಬೂದಿಯಾಗಿ, ಈಶಾವಾಸ್ಯ ಉಪನಿಷತ್ತಿನ ಮೊದಲ ಮಂತ್ರದ ಮೊದಲ ಸಾಲು ಮಾತ್ರ ಉಳಿದುಕೊಂಡರೂ ಸಾಕು ಹಿಂದೂಧರ್ಮ ಅಬಾಧಿತವಾಗಿ, ಶಾಶ್ವತವಾಗಿ ಬೆಳೆಯುತ್ತಿರುತ್ತದೆ ಎಂದಿದ್ದರು.

ಅಪರೂಪದ ಅನುಭಾವಿ ಜಿಡ್ಡು ಕೃಷ್ಣಮೂರ್ತಿಯವರು ಜ್ಞಾನವನ್ನು ಸಂಪಾದಿಸುವ ಬಗೆ ಹೇಗೆ ಎಂಬ ಪ್ರಶ್ನೆಗೆ ಉತ್ತರಿಸುತ್ತ 'ಫ್ರೀಡಂ ಫ್ರಂ ದಿ ನೋನ್' (ತಿಳಿದುದರಿಂದ ಬಿಡುಗಡೆಯಾಗಬೇಕು) ಎಂದಿದ್ದರು. ತಿಳಿದುದರಿಂದ ಬಿಡುಗಡೆಯಾದಾಗ ಮನಸ್ಸು ಸ್ವತಂತ್ರವಾಗುತ್ತದೆ, ಹೊಸದರ ಗ್ರಹಿಕೆಗೆ ಸಿದ್ಧವಾಗುತ್ತದೆ. ಹಾಗಲ್ಲದೇ ತಿಳಿದುದರಿಂದ ಬಿಡುಗಡೆಯಾಗದಿದ್ದಲ್ಲಿ, ಮನಸ್ಸು ಹೊಸದಕ್ಕೂ ಹಳೆಯ ತಿಳಿವಳಿಕೆಯ ಬಣ್ಣ ಹಚ್ಚಿ ವ್ಯಾಖ್ಯಾನಿಸುತ್ತದೆ. ಕೃಷ್ಣಮೂರ್ತಿಯವರ ಈ ಒಳನೋಟವನ್ನು ಈಶಾವಾಸ್ಯ ಉಪನಿಷತ್ತಿನಲ್ಲೂ ಕಾಣಬಹುದು. ಅವಿದ್ಯೆಯನ್ನು ಉಪಾಸನೆ ಮಾಡುವವರು ಗಾಢವಾದ ಕತ್ತಲೆಯ ಲೋಕವನ್ನು ಪ್ರವೇಶಿಸುತ್ತಾರೆ. ಯಾರು ವಿದ್ಯೆಯನ್ನು ಉಪಾಸನೆ ಮಾಡುವರೋ ಅವರು ಇನ್ನೂ ಹೆಚ್ಚಿನ ಕತ್ತಲೆಯ ಲೋಕವನ್ನು ಪ್ರವೇಶಿಸುವರು (ಈಶ 9).

ಇದೇ ಈಶಾವಾಸ್ಯೋಪನಿಷತ್ತಿನಲ್ಲಿ ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ। ತತ್ತ್ವಂ ಪೂಷನ್ನ ಪಾವೃಣು ಸತ್ಯಧರ್ಮಾಯ ದೃಷ್ಟಯೇ॥ (ಸತ್ಯದ (ಪರಮಾತ್ಮನ) ಮುಖವು ಸ್ವರ್ಣಮಯ ಪಾತ್ರೆಯಿಂದ ಮುಚ್ಚಲ್ಪಟ್ಟಿದೆ. ಹೇ ವಿಶ್ವಪೋಷಕನಾದ ಪ್ರಭುವೇ ಸತ್ಯ ಧರ್ಮದ ಉಪಾಸಕನಾದ ನನಗೆ ಸತ್ಯ ದರ್ಶನಕ್ಕಾಗಿ ಅದನ್ನು ಪಕ್ಕಕ್ಕೆ ಸರಿಸು) (ಈಶ 15) ಎಂಬ ಆಶೀರ್ವಚನ ಮಂತ್ರವಿದೆ. ಉಪನಿಷತ್ತು ಸತ್ಯಪ್ರಾಪ್ತಿಗೆ ನಮ್ಮ ಬುದ್ಧಿ, ತರ್ಕ, ವಿವೇಕ, ವೈಚಾರಿಕತೆ, ಸಾಧನೆಗಳಷ್ಟೇ ಸಾಲದು. ಅಖಂಡ ಬ್ರಹ್ಮಾಂಡವನ್ನು ವ್ಯಾಪಿಸಿರುವ ಆ ಪರಮಚೈತನ್ಯದ ಅನುಗ್ರಹವೂ ಬೇಕು ಎಂಬ ವಿನಯವನ್ನು ಕಲಿಸುತ್ತದೆ. ಅಂಥ ಪರಮಸತ್ಯದ ಕಾಣ್ಕೆಗಾಗಿ ಜೀವಿತವನ್ನು ಮುಡಿಪಾಗಿಟ್ಟಿರುವ ಎಲ್ಲ ಸಾಧಕರಿಗೆ, ವಿಜ್ಞಾನಿಗಳಿಗೆ ಶ್ರೇಯಸ್ಸು ಉಂಟಾಗಲಿ, ಅವರ ಚಿತ್ತವನ್ನು ಆವರಿಸಿರುವ ಆ ಚಿನ್ನದ ಪರದೆ ಪಕ್ಕಕ್ಕೆ ಸರಿದು ಸತ್ಯಧರ್ಮಗಳ ದರ್ಶನವಾಗಲಿ, ಶ್ರೀ ಕಾಲಭೈರವೇಶ್ವರನ ಕೃಪಾಶೀರ್ವಾದ ಅವರ ಮೇಲಿರಲಿ.

(ಲೇಖಕರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು)

ಭಟ್ಟರ್ ಸ್ಕಾಚ್

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
  ಭಟ್ರೇ, ಮರದಿಂದ ಮರಕ್ಕೆ ಜಿಗಿಯುವ ಕೋತಿಗೂ, ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ರಾಜಕಾರಣಿಗಳಿಗೂ ವ್ಯತ್ಯಾಸವೇನು?
- **ಏನೂ ಇಲ್ಲ.. ಅಷ್ಟೂ ಸಾಲದೆಂಬಂತೆ ನಂತರ ವಿಧಾನಸೌಧಕ್ಕೆ ಬಂದು ಏನೂ ವ್ಯತ್ಯಾಸ ಇಲ್ಲ ಎಂದು ಪ್ರೂವ್ ಮಾಡ್ತವೆ!**

- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ಪಟಾಕಿ ಹೊಡೆಯುವವರನ್ನು ಕಂಡರೆ ನಿಮಗೇಕೆ ಕೋಪ?
- **ಕೋಪ ಅಲ್ಲ, ಮೈ-ಕೈ ಸುಟ್ಟುಕೊಂಡಾರು ಅಂತ ಕರುಣೆ!**

- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೇ, ದರ್ಶನ್‌ಗೆ ಬೇಲ್ ಇಲ್ಲ ಅಂತ ದಿನವೂ ಪತ್ರಿಕೆಯಲ್ಲಿ ಬರುತ್ತದಲ್ಲ?
- **ಅವರು ದಿನವೂ ಬೇಲ್ ಅಪ್ಲಿಕೇಶನ್ ಹಾಕ್ತಾರಲ್ಲ?!**

- **ವಿ.ಹೇಮಂತಕುಮಾರ್, ಬೆಂಗಳೂರು**
  ಭಟ್ರೇ, ಮನುಷ್ಯನೇ ಶಾಶ್ವತ ಅಲ್ಲ, ಇನ್ನು ನೋವು ಶಾಶ್ವತಾನಾ?
- **ಹಾಗಂತ ಬದುಕಿದ್ದಷ್ಟು ದಿನ ಎಷ್ಟೂಂತ ನೋವು ಅನುಭವಿಸೋದು?!**

- **ವಿ.ಮಂಜೇಶ್ವರ, ಶನಿವಾರಸಂತೆ**
  ಭಟ್ರೇ, ನಿಮ್ಮ ಪತ್ರಿಕೆಯನ್ನು ಓದಲು ಎರಡು ಗಂಟೆಗಳಾದರೂ ಬೇಕಲ್ಲ?
- **ಇದೇನು ಪ್ರಶಂಸೆಯೋ, ಹಿಂಸೆಯೋ?!**

- **ವಿ.ಕೆ.ನಕುಲ, ಚಿತ್ರದುರ್ಗ**
  ಭಟ್ರೇ, ಬೇರೆಯವರ ಮನಸ್ಸಿನಲ್ಲಿ ಏನಿದೆ ಅನ್ನೋದನ್ನು ತಿಳಿದುಕೊಳ್ಳೋದು ಹೇಗೆ?
- **ಅದಕ್ಕೆ ಬ್ರೇನ್ ಮ್ಯಾಪಿಂಗ್ ಮಾಡಬೇಕಿಲ್ಲ!**

- **ನವೀನ ಶೆಣೈ, ಕುಂದಾಪುರ**
  ಭಟ್ರೇ, ವಿದೇಶಗಳಿಗೆ ಮನೆ-ಮಂದಿಯೆಲ್ಲ ಹೋಗುವಾಗ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಬಾರದು ಅಂತಾರಲ್ಲ?
- **ಗೊತ್ತಾದರೆ ನೀವು ಬರುವ ಮುನ್ನ ಕಳ್ಳರು ಮನೆಯನ್ನು ಶೃಂಗಾರ ಮಾಡಿರುತ್ತಾರಲ್ಲ!**

- **ಕೊಣ್ಣೂರು ಮಹಾದೇವ, ಶಿವಮೊಗ್ಗ**
  ಭಟ್ರೇ, ಸರಕಾರ ಸಾರಾಯಿ ಭತ್ಯೆಯನ್ನೂ ಕೊಟ್ಟರೆ ಚೆನ್ನಾಗಿರುತ್ತೆ ಅಲ್ವಾ?
- **ಆ ಹೆಸರಿನಲ್ಲಿ ಕೊಡೋಕಾಗುತ್ಯೇ.. ಹೀಗಾಗಿ ಬೇರೆ ಹೆಸರಿನಲ್ಲಿ ಅದೇ ಉದ್ದೇಶಕ್ಕೆ ಕೊಟ್ಟರೋದು!**

- **ನಾಗೇಶ ಕೊಂದೂರು, (ಇಮೇಲ್ ಮೂಲಕ)**
  ಭಟ್ರೇ, ಗಂಡಸರೇಕೆ ಕೆಲವೊಮ್ಮೆ ಹೆಂಗಸರ ಥರಾ ಆಡ್ತಾರೆ?
- **ಇಲ್ಲಿ 'ಕೆಲವೊಮ್ಮೆ' ಪದ ಬೇಕಿರಲಿಲ್ಲ!**

- **ಬಿಂದಿ ಗಣೇಶ, ಬೆಳಗಾವಿ**
  ಭಟ್ರೇ, ಹುಡುಗ ಕನ್ನಡಿಗ, ಹುಡುಗಿ ಮರಾಠಿ, ಹಾಸಿಗೆಯಲ್ಲೂ ಜಗಳ ಆಡ್ತಾರಲ್ಲ?
- **ಅದು ಜಗಳ ಅಲ್ಲ ಗಡಿತಂಟೆ!**

ಸೋಲಲೇಬಾರದೆಂಬ ಧೋರಣೆ ತರವಲ್ಲ!

ಸೋಲುಗಳನ್ನು ಗೆಲುವಿನ ಹಾರವನ್ನಾಗಿ ಬದಲಾಯಿಸಿಕೊಂಡವರ ಸಂಖ್ಯೆ ಅಸಂಖ್ಯ. ಇವರೆಲ್ಲರಲ್ಲೂ ಇದ್ದ ಒಂದು ಕಾಮನ್ ಫ್ಯಾಕ್ಟರ್ ಎಂದರೆ, ಇವರಾರೂ ಸೋಲಿಗೆ ಹೆದರಲಿಲ್ಲ, ಮಾಡುತ್ತಿದ್ದ ಕೆಲಸವನ್ನು ಬಿಡಲಿಲ್ಲ. ಸೋಲಿಗೆ ತಲೆ ತಗ್ಗಿಸದೆ ನಿಂತು ಹೋರಾಡುವುದು ಕಷ್ಟದ ಕೆಲಸ. ಇವರೆಲ್ಲರೂ ಆ ಮಾರ್ಗವನ್ನೇ ಆಯ್ದುಕೊಂಡವರು.

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಥಾಮಸ್ ಅಲ್ವಾ ಎಡಿಸನ್ ಹೆಸರನ್ನು ಕೇಳದವರು ಕಡಿಮೆ. ಆತ ಅಮೆರಿಕನ್ ಸಂಶೋಧಕ, ಬ್ಯುಸಿನೆಸ್‌ಮ್ಯಾನ್. ಆತ ಜಗತ್ತಿಗೆ ನೀಡಿರುವ ಕಾಣಿಕೆಗಳ ಪಟ್ಟಿ ಬಹಳ ದೊಡ್ಡದು. ಮೋಷನ್ ಪಿಕ್ಚರ್ ಕ್ಯಾಮೆರಾ, ಬಲ್ಬ್, ಇಲೆಕ್ಟ್ರಿಕ್ ಪವರ್ ಜೆನರೇಷನ್, ಮಾಸ್ ಕಮ್ಯುನಿಕೇಷನ್ ಈತನ ಸಂಶೋಧನೆಯಲ್ಲಿ ಮುಖ್ಯವಾದವು. ನಿಮಗೆಲ್ಲಾ ಗೊತ್ತಿರಲಿ ಈ ಯಶಸ್ಸು ಅಥವಾ ಜಯ ಎನ್ನುವುದು ಅಷ್ಟೊಂದು ಸುಲಭವಾಗಿ ಯಾರ ಕೈಗೂ ಎಟುಕುವುದಿಲ್ಲ. ಅದು ಸಾಧಕನಾಗುವವನ ತಾಳ್ಮೆಯನ್ನು, ಸಹನೆಯನ್ನು ಪರೀಕ್ಷಿಸುತ್ತದೆ. ಪದೇ ಪದೆ ಕೈಕೊಡುವ ತನ್ನ ಬುದ್ಧಿಯಿಂದ ಸಾಧಕನ ದಿಕ್ಕು ತಪ್ಪಿಸುವ, 'ಗಿವ್-ಅಪ್' ಮಾಡುವ ಮನೋಸ್ಥಿತಿಗೆ ದೂಡುತ್ತದೆ. ಇವೆಲ್ಲವನ್ನೂ ಸಹಿಸಿಕೊಳ್ಳುವ ಗುಣವುಳ್ಳವನಿಗೆ ಮಾತ್ರ ಇದು ಒಲಿಯುತ್ತದೆ.

ಥಾಮಸ್ ಅಲ್ವಾ ಎಡಿಸನ್‌ಗೆ ಕೂಡ ಹೀಗೇ ಆಗುತ್ತದೆ. ಆತ ನಡೆದು ಬಂದ ಹಾದಿ ಯಾವ ರೋಲರ್ ಕೋಸ್ಟರ್‌ಗೂ ಕಡಿಮೆಯೇನಿಲ್ಲ. ಸತತ ಸೋಲುಗಳಿಂದ ಎಡಿಸನ್ ಕಂಗೆಡಲಿಲ್ಲ, ಸಂಶೋಧನೆ ನಿಲ್ಲಿಸಲಿಲ್ಲ. ಬದಲಿಗೆ ಆತ ಹೇಳುತ್ತಾನೆ 'I failed my way to success'. ಗೆಲುವಿನ ಹಾದಿಯನ್ನು ಸೋಲಿಸಿದೆ ಎನ್ನುತ್ತಾನೆ. ಗೆಲುವಿನ ಹಾದಿ ಕಠಿಣ ಹೀಗಾಗಿ ಈ ಮಾತನ್ನು ಹೇಳಿದ್ದಾನೆ. ಜತೆಗೆ ಹತ್ತು ಸಾವಿರ ದಾರಿಗಳಿಂದ ಗೆಲುವು ಸಾಧ್ಯವಿಲ್ಲ ಎನ್ನುವುದನ್ನು ನಾನು ಕಲಿತೆ ಎನ್ನುತ್ತಾನೆ. ಹತ್ತು ಸಾವಿರ ಪ್ರಯತ್ನದಲ್ಲಿ ನಾನು ಸೋತೆ ಎನ್ನುವ ಮಾತನ್ನು ಆತ ಆಡುವುದಿಲ್ಲ, ಹತ್ತು ಸಾವಿರ ದಾರಿಯಲ್ಲಿ ಗೆಲುವು ಸಿಗುವುದಿಲ್ಲ ಎನ್ನುವುದು ಸರಿಯಾದ ದಾರಿಯಿಂದ ತಿಳಿಯಿತು ಎನ್ನುತ್ತಾನೆ. ಸೋಲಿಗೆ ಹೆದರಿ ಮಾಡುವ ಕೆಲಸವನ್ನು ಬಿಟ್ಟಿದ್ದರೆ? ನಾವು ಇಂದು ಎಡಿಸನ್ ಬಗ್ಗೆ ಮಾತನಾಡುತ್ತಿರಲಿಲ್ಲ.

ನಮ್ಮ ಕನಸು ಮತ್ತು ಜಯದ ನಡುವೆ ಏನಾದರೂ ಇದ್ದರೆ ಅದು ಸೋಲಿನ ಬಗೆಗಿನ ಭಯ ಮಾತ್ರ. ಸೋಲಿಗಿಂತ, ಸೋಲಿನ ಭಯ ದೊಡ್ಡದು. ಸೋಲು ಆ ಕ್ಷಣದಲ್ಲಿ ಆಗುವಂಥದ್ದು, ಆದರೆ ಸೋಲಿನ ಭಯವಿದೆಯಲ್ಲ ಅದು ದಿನದ ಇಪ್ಪತ್ನಾಲ್ಕು ಗಂಟೆ ಜತೆಯಾಗಿರುತ್ತದೆ. ಮನುಷ್ಯನನ್ನು ಹೈರಾಣು ಮಾಡಿಬಿಡುತ್ತದೆ. ಸೋಲಲೇಬಾರದು ಎಂದು ಬದುಕುವುದು ಕೂಡ ಸೋಲಿಗಿಂತ ಕಡಿಮೆಯಿಲ್ಲ. ಸೋಲಬಾರದು ಎನ್ನುವ ಮನಸ್ಥಿತಿಯೇ ತಪ್ಪು. ಇಟ್ಸ್ ಓಕೆ ಟು ಫೇಲ್. ಮಕ್ಕಳನ್ನು ನೋಡಿ, ಅವು ಅದೆಷ್ಟು ಸಹಜವಾಗಿ ಬೀಳುತ್ತವೆ, ಅಷ್ಟೇ ಸಹಜವಾಗಿ ಎದ್ದು ನಡೆಯಲು ಪ್ರಾರಂಭಿಸುತ್ತವೆ. ಅವುಗಳಲ್ಲಿ ಬಿದ್ದೆ, ಸೋತೆ ಎನ್ನುವ ಭಯವಿಲ್ಲ, ಅದಕ್ಕೆ ಮಕ್ಕಳು ಸಹಜವಾಗಿ ಮೇಲೇಳುತ್ತಾರೆ. ನಡೆಯುವುದನ್ನು ಕಲಿಯುತ್ತಾರೆ. ಅವರಿಗೆ ಆ ವಯಸ್ಸಿನಲ್ಲೇ 'ದೊಡ್ಡವರ' ಮನಸ್ಥಿತಿ ಬಂದುಬಿಟ್ಟಿದ್ದರೆ? ಮುಕ್ಕಾಲು ಪಾಲು ಮಕ್ಕಳು ನಡೆಯುವುದನ್ನೇ ಕಲಿಯುತ್ತಿರಲಿಲ್ಲ.

ಗಮನಿಸಿ ನೋಡಿ ನಾವು ನಮ್ಮ ಸೋಲು, ಭಯ, ನಿರಾಸೆ, ಅಸಮರ್ಥತೆಯನ್ನು ಮಕ್ಕಳಿಗೆ ನಮಗೆ ಗೊತ್ತಿಲ್ಲದೇ ವರ್ಗಾಯಿಸಿಬಿಡುತ್ತೇವೆ. 'ಹುಷಾರು, ಬಿದ್ದೀಯ, ಅದು ಮಾಡಬೇಡ, ಇದು ಬೇಡ..' ಹೀಗೆ ನೆಗೆಟಿವ್ ಮಾತುಗಳ ಪಟ್ಟಿ ಬಹಳ ದೊಡ್ಡದು. 40ರ ಪ್ರಾಯದ ಪ್ರಮಾಣ ತಪ್ಪಿದ ದೇಹ ಮತ್ತು ತೂಕವುಳ್ಳ ಪೋಷಕರು ನಾಲ್ಕು ಮೆಟ್ಟಿಲಿನಿಂದ ಎಗರುವುದು ಆಗದ ಮಾತು. ಅದೇ ಮಕ್ಕಳು ನೋಡಿ ಲೀಲಾಜಾಲವಾಗಿ ನೆಗೆದುಬಿಡುತ್ತವೆ. ಅವರಲ್ಲಿ ಇರುವ ಈ ಸಹಜ ಉತ್ಸಾಹವನ್ನು, ಸಾಮರ್ಥ್ಯವನ್ನು ಚಿವುಟುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಕುಣಿಯುವ, ಎಗರುವ ಉತ್ಸಾಹಿ ಮಕ್ಕಳನ್ನು ಕಂಡ ತಕ್ಷಣ ಹೊರಡುವ ಮಾತು 'ಹುಷಾರು ಬಿದ್ದೀಯ'. ನಮ್ಮಲ್ಲಿನ ತಲ್ಲಣಗಳನ್ನು ಅದೆಷ್ಟು ಬೇಗ ವರ್ಗಾಯಿಸಿಬಿಡುತ್ತೇವೆ. ಯಾರೊಬ್ಬರೂ 'ಎಗರು ಕಂದ, ನಾನಿದ್ದೇನೆ' ಎನ್ನುವುದು ಕೇಳಿಬರುವುದಿಲ್ಲ. ಬಿದ್ದರೆ ಎನ್ನುವ ಭಯದ ಮಹಾತ್ಮೆ. ಬದುಕಿನಲ್ಲಿ ಇನ್ನೊಂದು ದರ್ಜೆಗೆ ಏರಲು ಕಡಿವಾಣ ಹಾಕುವುದು ಕೂಡ ಇದೇ ಫಿಯರ್ ಆಫ್ ಫೇಲ್ಯೂರ್.

ಒಂದು ಗೆಲುವು ಸುಮ್ಮನೆ ಸಿಕ್ಕುವುದಿಲ್ಲ, ಗೆಲುವು ಒಂದೊಳ್ಳೆ ನಿರ್ಧಾರದ ಫಲ. ಒಂದೊಳ್ಳೆ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಅನುಭವ ಬೇಕೇಬೇಕು. ಇಂಥ ಅನುಭವ ಪುಕ್ಕಟೆ ಸಿಗುವುದಿಲ್ಲ ಅಥವಾ ಅದು ಮಾರುಕಟ್ಟೆಯಲ್ಲಿ ಬಿಕರಿಗೂ ಇಲ್ಲ. ಪುಸ್ತಕವನ್ನು ಓದಿ ಒಂದಷ್ಟು ಕಲಿಯಬಹುದು ಎನ್ನುವುದು ಕೂಡ ಅಲ್ಪ ಸಮಾಧಾನ. ಇಂಥ ಅನುಭವಗಳು ಬರುವುದು ಕೆಟ್ಟ ನಿರ್ಧಾರಗಳಿಂದ, ಆ ನಿರ್ಧಾರಗಳ ಫಲದಿಂದ ಬಂದ ಸೋಲಿನಿಂದ! ಹೀಗಾಗಿ ಇದೊಂದು ಸೈಕಲ್. ಒಂದಿಲ್ಲದೆ ಇನ್ನೊಂದಿಲ್ಲ. ನಿರ್ಧಾರಗಳು ಕೂಡ ಆ ಕ್ಷಣದ ನಿರ್ಧಾರಗಳು. ಅಂದಿಗೆ ಅದು ಒಳ್ಳೆಯದು ಅಥವಾ ಕೆಟ್ಟದ್ದು ಎನ್ನುವುದಿಲ್ಲ, ನಿರ್ಧಾರ ಒಳಿತೇ ಅಥವಾ ಕೆಟ್ಟದ್ದೇ ಎನ್ನುವುದನ್ನು ಸಮಯ ಮತ್ತು ಫಲಿತಾಂಶ ನಿರ್ಧರಿಸುತ್ತವೆ. ಹೀಗೆ ಅಂದಿನ ನಿರ್ಧಾರಗಳನ್ನು ತೆಗೆದುಕೊಂಡು ಉತ್ತಮ ಫಲಿತಾಂಶ ಸಿಗದೇ ಸೋತ ಮಹನೀಯರ ಪಟ್ಟಿ ನಮ್ಮ ಬಳಿಯಿದೆ. ಸೋತೆ ಎಂದು ಕುಗ್ಗದ ಕಾರಣಕ್ಕೆ ಅವರು ಗೆದ್ದಿದ್ದಾರೆ, ಜನಮಾನಸದಲ್ಲಿ ಇಂದಿಗೂ ಉಳಿದಿದ್ದಾರೆ.

ಇಂಥ ಮಹನೀಯರ ಪಟ್ಟಿಯಲ್ಲಿ ಮೊದಲಿಗೆ ಬರುವುದು ಅಬ್ರಹಾಂ ಲಿಂಕನ್. 1860ರಲ್ಲಿ ಅಮೆರಿಕ ದೇಶದ ಪ್ರೆಸಿಡೆಂಟ್ ಹುದ್ದೆಗೆ ಏರುವ ಮುನ್ನ ಅವರ ಹಾದಿಯನ್ನು ಒಮ್ಮೆ ಗಮನಿಸಿ ನೋಡಿ. 1832ರಲ್ಲಿ, ಹೊಟ್ಟೆಪಾಡಿಗಾಗಿ ಮಾಡುತ್ತಿದ್ದ ಕೆಲಸವನ್ನು ಕಳೆದುಕೊಳ್ಳುತ್ತಾರೆ. ಲೆಜಿಸ್ಲೇಟರ್ ಸ್ಪರ್ಧೆಯಲ್ಲಿ ಅದೇ ವರ್ಷ ಸೋಲು ಕಾಣುತ್ತಾರೆ, ಮುಂದಿನ ವರ್ಷ ಅಂದರೆ 1833ರಲ್ಲಿ ತಾವು ಶುರುಮಾಡಿದ್ದ ಬಿಸಿನೆಸ್‌ನಲ್ಲಿ ಸೋಲು ಕಾಣುತ್ತಾರೆ. 1834ರಲ್ಲಿ ಲೆಜಿಸ್ಲೇಟರ್ ಆಗಿ ಆಯ್ಕೆಯಾಗುತ್ತಾರೆ. 1835ರಲ್ಲಿ ತಮ್ಮ ಮನದನ್ನೆಯನ್ನು ಕಳೆದುಕೊಳ್ಳುತ್ತಾರೆ, ಇದರ ಪರಿಣಾಮ 1836ರಲ್ಲಿ ಮೆಂಟಲ್ ಬ್ರೇಕ್‌ಡೌನ್‌ಗೆ ತುತ್ತಾಗುತ್ತಾರೆ. 1838ರಲ್ಲಿ ಸ್ಪೀಕರ್ ಹುದ್ದೆಗೆ ಸ್ಪರ್ಧಿಸಿ ಸೋಲುತ್ತಾರೆ. ಕಾಂಗ್ರೆಸ್ ನಾಮಿನೇಷನ್ 1843ರಲ್ಲಿ ವಿಫಲವಾಗುತ್ತದೆ. 1848ರಲ್ಲಿ ಮರುಪ್ರಯತ್ನದಲ್ಲಿ ವಿಫಲರಾಗುತ್ತಾರೆ. 1849ರಲ್ಲಿ ಲ್ಯಾಂಡ್ ಆಫೀಸರ್ ಪದವಿಗೂ ರಿಜೆಕ್ಷನ್ ಅನುಭವಿಸುತ್ತಾರೆ. 1854ರಲ್ಲಿ ಸೆನೆಟ್ ಚುನಾವಣೆಯಲ್ಲಿ ಸೋಲು ಕಾಣುತ್ತಾರೆ. 1856ರಲ್ಲಿ ವೈಸ್ ಪ್ರೆಸಿಡೆಂಟ್ ಹುದ್ದೆಗೆ ನಾಮಿನೇಷನ್ ಹಂತದಲ್ಲೇ ಸೋಲು ಕಾಣುತ್ತಾರೆ. ಮತ್ತೆ 1858ರಲ್ಲಿ ಸೆನೆಟರ್ ಚುನಾವಣೆಯಲ್ಲಿ ಕೂಡ ಸೋಲುತ್ತಾರೆ. ಕಟ್ಟಕಡೆಗೆ 1860ರಲ್ಲಿ ಅಮೆರಿಕದ ಪ್ರೆಸಿಡೆಂಟ್ ಹುದ್ದೆಗೆ ಗೆದ್ದು ಬರುತ್ತಾರೆ. ಅಬ್ಬಾ ಅದೇನು ಪ್ರಯಾಣ! ಲಿಂಕನ್ ಅವರ ಜೀವನದ ಟೈಮ್‌ಲೈನ್ ಗಮನಿಸಿ ನೋಡಿ, ಅಲ್ಲಿ ಬಹುತೇಕ ಸೋಲುಗಳಿವೆ, ಇನ್‌ಫ್ಯಾಕ್ಟ್ ಸೋಲುಗಳ ಪಟ್ಟಿಯೇ ದೊಡ್ಡದು. ತಮ್ಮ ಸೋಲಿನಿಂದ ಹತಾಶರಾಗಿದ್ದರೆ ಅವರು ಅಮೆರಿಕ ದೇಶದ ಪ್ರೆಸಿಡೆಂಟ್ ಆಗಲು ಸಾಧ್ಯವಾಗುತ್ತಿರಲಿಲ್ಲ. ಅವರು 'ಗಿವ್-ಅಪ್' ಮಾಡಿದ್ದರೆ ಇಂದಿಗೆ ಅವರನ್ನು ನಾವು ನೆನಪಿಟ್ಟುಕೊಳ್ಳುತ್ತಿರಲಿಲ್ಲ. ಸೋಲು ಮತ್ತು ಗೆಲುವು ಒಂದೇ ನಾಣ್ಯದ ಎರಡು ಮುಖಗಳು. ಗೆಲುವಿನ ಹಿಂದೆ ಸೋಲು ಸದಾ ಹೊಂಚುಹಾಕಿ ಕಾಯುತ್ತಿರುತ್ತದೆ. ಗೆಲುವು ಕೂಡ ಸೋಲಿನ ಹಿಂದೆ ಇದ್ದೆ ಇರುತ್ತದೆ. ಈ ಸತ್ಯವನ್ನು ನಾವು ತಿಳಿದುಕೊಂಡರೆ ಬದುಕು ಸುಂದರ.

ಇನ್ನಷ್ಟು ಸಾಧಕರ ಸೋಲಿನ ಪಟ್ಟಿ ನೀಡುವೆ. ಇದರ ಉದ್ದೇಶವಿಷ್ಟೇ, ಸೋಲು ಕೇವಲ ನಮಗೆ ಮಾತ್ರವಲ್ಲ; ಗೆದ್ದವರು, ಸಾಧಕರು ಎಂದು ಇಂದಿಗೆ ನಾವು ಯಾರನ್ನು ಕರೆಯುತ್ತೇವೆಯೋ ಅವರನ್ನು ಕೂಡ ಸೋಲು ಬಿಟ್ಟಿಲ್ಲ. ಗೆಲುವು ಮತ್ತು ಸೋಲು ಎರಡೂ ಅಂತಿಮ ನಿಲ್ದಾಣವಲ್ಲ. ಬದುಕು ಅದೊಂದು ಪ್ರಯಾಣ.

1) ಹೆಸರಾಂತ ಬಾಸ್ಕೆಟ್‌ಬಾಲ್ ಆಟಗಾರ ಮೈಕಲ್ ಜೋರ್ಡನ್ ತನ್ನ ಹೈಸ್ಕೂಲ್ ಟೀಮ್‌ಗೆ ಸೆಲೆಕ್ಟ್ ಆಗುವುದರಲ್ಲಿ ವಿಫಲನಾಗಿದ್ದ.

2) ಹೆಸರಾಂತ ಚಲನಚಿತ್ರ ನಿರ್ದೇಶಕ ಸ್ಟೀವನ್ ಸ್ಪಿಲ್‌ಬರ್ಗ್ ಒಂದಲ್ಲ ಎರಡಲ್ಲ ಮೂರು ಬಾರಿ ಫಿಲಂ ಸ್ಕೂಲ್‌ನಲ್ಲಿ ಪ್ರವೇಶ ಪಡೆಯಲು ವಿಫಲನಾಗಿದ್ದ.

3) ವಾಲ್ಟ್ ಡಿಸ್ನಿ ಕಥೆ ಇನ್ನೂ ಕೌತುಕದ್ದು, ಈತನಿಗೆ ಇಮ್ಯಾಜಿನೇಶನ್ ಕೊರತೆಯಿದೆ ಎನ್ನುವ ಕಾರಣ ಕೊಟ್ಟು ಈತ ಕೆಲಸ ಮಾಡುತ್ತಿದ್ದ ಪತ್ರಿಕೆ ಕೆಲಸದಿಂದ ತೆಗೆದುಹಾಕಿರುತ್ತದೆ. ನಂತರ ಈತನ ಇಮ್ಯಾಜಿನೇಶನ್‌ನಿಂದ ಮಿಕ್ಕಿ ಮೌಸ್ ಸೃಷ್ಟಿಯಾದದ್ದು, ಜಾಗತಿಕ ಮನ್ನಣೆ ಗಳಿಸಿದ್ದು ಇಂದಿಗೆ ಇತಿಹಾಸ.

4) ಜಾಗತಿಕ ಮನ್ನಣೆ ಪಡೆದಿರುವ ಆಲ್ಬರ್ಟ್ ಐನ್‌ಸ್ಟೀನ್ ಎನ್ನುವ ವಿಜ್ಞಾನಿಯನ್ನು ಶಾಲೆಯಿಂದ ಹೊರದಬ್ಬಲಾಗಿತ್ತು. ಓದಿನಲ್ಲಿ ಹಿಂದೆ ಬಿದ್ದಿದ್ದಾನೆ, ಗ್ರಹಣಶಕ್ತಿ ಕಡಿಮೆ ಎನ್ನುವ ಕಾರಣವನ್ನು ಅದಕ್ಕೆ ನೀಡಲಾಗಿತ್ತು.

5) ಜಗದ್ವಿಖ್ಯಾತ ಹ್ಯಾರಿ ಪಾಟರ್ ಕಥೆಯನ್ನು ಬರೆಯುವಾಗ ಜೆ.ಕೆ.ರೋಲಿಂಗ್ ವಿಚ್ಛೇದಿತ ಮಹಿಳೆ; ಆಕೆಯು ಮಾನಸಿಕವಾಗಿ, ದೈಹಿಕವಾಗಿ ಬೆಸ್ಟ್ ಆಗಿರದ ದಿನಗಳವು. ಕೈಯಲ್ಲಿ ಪುಡಿಗಾಸು ಇರದ ಕಾರಣ ಸರಕಾರ ನಡೆಸುವ ಸೋಷಿಯಲ್ ವೆಲ್‌ಫೇರ್ ಕಿಚನ್‌ನಲ್ಲಿ ಊಟ-ತಿಂಡಿಯನ್ನು ಮಾಡುತ್ತಿದ್ದರು.

6) ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಓಪ್ರಾ ವಿನ್‌ಫ್ರೇ ಎಂಬ ಟಿವಿ ನಿರೂಪಕಿಯನ್ನು, 'ಈಕೆ ಈ ಜಾಗಕ್ಕೆ ಸೂಕ್ತವಲ್ಲ' ಎಂದು ನಿರಾಕರಿಸಲಾಗಿತ್ತು.

ಹೀಗೆ ಸೋಲುಗಳನ್ನು ಗೆಲುವಿನ ಹಾರವನ್ನಾಗಿ ಬದಲಾಯಿಸಿಕೊಂಡ ಮಹನೀಯರ, ಮಹಿಳೆಯರ ಸಂಖ್ಯೆ ಅಸಂಖ್ಯ. ಇವರೆಲ್ಲರಲ್ಲೂ ಇದ್ದ ಒಂದು ಕಾಮನ್ ಫ್ಯಾಕ್ಟರ್ ಏನು ಎನ್ನುವುದನ್ನು ಈ ವೇಳೆಗೆ ಬುದ್ಧಿವಂತ ಓದುಗ ಗ್ರಹಿಸಿರುತ್ತಾನೆ. ಇವರಾರೂ ಸೋಲಿಗೆ ಹೆದರಲಿಲ್ಲ, ಮಾಡುತ್ತಿದ್ದ ಕೆಲಸವನ್ನು ಬಿಡಲಿಲ್ಲ. 'ಗಿವ್-ಅಪ್' ಮಾಡುವುದು ಅತ್ಯಂತ ಸುಲಭದ ಮಾರ್ಗ. ಸೋಲಿಗೆ ತಲೆ ತಗ್ಗಿಸದೆ ನಿಂತು ಹೋರಾಡುವುದು ಕಷ್ಟದ ಕೆಲಸ. ಇವರೆಲ್ಲರೂ ಕಷ್ಟದ ಮಾರ್ಗವನ್ನೇ ಆಯ್ಕೆ ಮಾಡಿಕೊಂಡವರು.

ಹೋಗುವ ಮುನ್ನ: ಸೋಲಿಗಿಂತ ಸೋಲಿನ ಭಯ ದೊಡ್ಡದು. ಬಹುತೇಕ ಸಮಯ ಆ ಭಯವೇ ಸೋಲಿಗೆ ಕಾರಣ. ಎಡಿಸನ್ ಮನಸ್ಥಿತಿ ನಮ್ಮದಾಗಿರಲಿ. ನೂರು ಬಾರಿ ಸೋತೆ ಎನ್ನುವುದಕ್ಕಿಂತ ಗೆಲುವಿನ ದಾರಿ ಹುಡುಕುವ ನೂರು ಪ್ರಯತ್ನವನ್ನು ಮಾಡಿದೆ ಎನ್ನುವ ಮನೋಭಾವ ಬಹಳಷ್ಟು ಬದಲಾವಣೆಗೆ ಕಾರಣವಾಗಬಲ್ಲದು. ಮಾಡುವ ಕೆಲಸದ ಮೇಲಿನ ನಂಬಿಕೆ ಮತ್ತು 'ನೆವರ್ ಗಿವ್-ಅಪ್' ಮನಸ್ಥಿತಿ ಬೆಳೆಸಿಕೊಳ್ಳುವುದು ಅತಿ ಮುಖ್ಯ. ಇದನ್ನೇ 'ಎಡಿಸನ್ ಮನಸ್ಥಿತಿ' ಎನ್ನುತ್ತಾರೆ.

ನಮ್ಮ ಹುಟ್ಟು, ಪರಿಸರ, ವಿದ್ಯಾಭ್ಯಾಸ, ಅನುಭವಗಳು ನಾವ್ಯಾರು ಎನ್ನುವುದನ್ನು ಬಹುಪಾಲು ನಿರ್ಧರಿಸುತ್ತವೆ. ಆದರೆ ಈ ವಿಶ್ವದಲ್ಲಿ ಯಾವುದನ್ನೂ 'ಇದಮಿತ್ಥಂ' ಎಂದು ಹೇಳಲಾಗುವುದಿಲ್ಲ. ಪರಿಸರ ಕೂಡ ಬಹಳ ಮುಖ್ಯಪಾತ್ರ ವಹಿಸುತ್ತದೆ. ನಮ್ಮ ದೇಶದಲ್ಲಿ, ಜಗತ್ತಿನಲ್ಲಿರುವ ಎಲ್ಲಾ ಭಯಗಳ ಜತೆಗೆ ಇನ್ನೊಂದು ಭಯ ಕೂಡ ಇದೆ. ಅದೇ ಸಮಾಜದ ಭಯ! ಟೀಕಾಕಾರರ ಭಯ. ನನ್ನ ಬಗ್ಗೆ ಯಾರೇನು ಅಂದುಕೊಳ್ಳುತ್ತಾರೆ ಎನ್ನುವ ಭಯ. ಅವರಿವರು ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೆ ಎನ್ನುವುದಕ್ಕಿಂತ ನಾವು ನಮ್ಮ ಬಗ್ಗೆ ಏನಂದುಕೊಳ್ಳುತ್ತೇವೆ ಎನ್ನುವುದು ಬಹಳ ಮುಖ್ಯ. ನೆನಪಿರಲಿ- ಕೊನೆಗೂ ಚರಿತ್ರೆಯಲ್ಲಿ ಸಾಧಕನ ಹೆಸರು ಮಾತ್ರ ಉಳಿದುಕೊಳ್ಳುತ್ತದೆ. ಟೀಕಾಕಾರರ ಹೆಸರು ಎಲ್ಲಿಯೂ ದಾಖಲಾಗುವುದಿಲ್ಲ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ದವಾಖಾನೆಯೋ ಕೊಂಪೆಯೋ?!

ಶಂಕರ್‌ನಾಗ್ ಅಭಿನಯದ 'ಇಂದಿನ ಭಾರತ' ಎಂಬ ಚಲನಚಿತ್ರದಲ್ಲಿ 'ಅತ್ತೆ ಹೋಗೋಣಾ ಬಾ, ನಮ್ಮೂರ ದವಾಖಾನೆಗೆ' ಎಂಬ ಜಾನಪದ ಧಾಟಿಯ ಗೀತೆಯೊಂದಿದೆ. ಇದರಲ್ಲಿ, ಸರಕಾರಿ ಆಸ್ಪತ್ರೆಯೊಂದರ ಸ್ಥಿತಿಗತಿ ಮತ್ತು ಭ್ರಷ್ಟಾಚಾರಗಳನ್ನು ಎಳೆಎಳೆಯಾಗಿ ಬಿಡಿಸಿಡಲಾಗಿದೆ. 'ಸೊಸೆಯು ಬಸುರಿಯಾದಾಗ ನಾನು ಅಲ್ಲಿ ಹೋದಾಗ, ಆ್ಯಂಬುಲೆನ್ಸ್‌ಗೆ ಹದಿನೈದು ವಾರ್ಡು ಬಾಯ್‌ಗೆ ಇನ್ನೈದು; ಹೆಣ್ ಹುಟ್ಟಿದರೆ ಎಂಟು, ಗಂಡಾದರೆ ಹದಿನೆಂಟು, ಮಂಚಕ್ಕೆ ಇಪ್ಪತ್ತು ಔಷಧಿಗೂ ಆಪತ್ತು' ಎಂಬ ಸಾಲು ಇದಕ್ಕೊಂದು ಸಾಕ್ಷಿ. ಇದನ್ನು ನೆನಪಿಸುವ ಆಸ್ಪತ್ರೆಗಳು ಬಿಹಾರ ರಾಜ್ಯದಲ್ಲಿ ದಂಡಿಯಾಗಿವೆಯಂತೆ! ಬಿಹಾರವು ತನ್ನ 'ರೋಗಗ್ರಸ್ತ' ಆರೋಗ್ಯ ಸೌಲಭ್ಯಗಳಿಂದಾಗಿ ಕುಖ್ಯಾತಿ ಪಡೆದಿದೆ. ಅಲ್ಲಿನ ಸರಕಾರಿ ಆಸ್ಪತ್ರೆಗಳಲ್ಲಿ ಕಸ-ಕಡ್ಡಿಗಳು ತುಂಬಿಕೊಂಡು ನಾರುತ್ತಿರುವ ಆವರಣ, ಸ್ವಿಮ್ಮಿಂಗ್ ಪೂಲ್‌ನಂತಾ ಗಿರುವ ಶಸ್ತ್ರಚಿಕಿತ್ಸಾ ಕೊಠಡಿಗಳು, ಪಡಸಾಲೆಯ ಉದ್ದಕ್ಕೂ ನವಜಾತ 'ಕುನ್ನಿ'ಗಳೊಂದಿಗೆ ಠಳಾಯಿಸುವ ನಾಯಿಗಳು ಇಂಥ ದೃಶ್ಯಗಳೆಲ್ಲಾ ಕಾಮನ್! ಬಿಹಾರದ ಆರೋಗ್ಯ ಸಚಿವ ಮಂಗಲ್ ಪಾಂಡೆಯವರು ಬೇಗುಸರಾಯ್‌ನ ಜಿಲ್ಲಾಸ್ಪತ್ರೆಗೆ ಭೇಟಿನೀಡಿದಾಗ ಮೇಲೆ ಉಲ್ಲೇಖಿಸಿ ರುವಂಥ ದೃಶ್ಯಗಳು ಅವರ ಕಣ್ಣಿಗೆ ಬಿದ್ದು ತುಂಬಾ ಮುಜುಗರವನ್ನು ಉಂಟುಮಾಡಿದವಂತೆ. ಸಚಿವ ಮಹಾಶಯರು ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಇತರ ಅಧಿಕಾರಿಗಳೊಂದಿಗೆ ಹೀಗೆಯೇ ಸುತ್ತುಹಾಕುವಾಗ, ಷೂ ಕವರ್ ಒಂದನ್ನು ಅವರಿಗೆ ನೀಡಲಾಗಿತ್ತಂತೆ; ಇದನ್ನವರು ಕ್ಯಾಪ್‌ನಂತೆ ತಲೆಯಲ್ಲಿ ಧರಿಸಿ ಆಸ್ಪತ್ರೆಯಲ್ಲಿ ತಿರುಗಾಡಿದ್ದೂ ಉಂಟಂತೆ! ಈ ಘಟನೆಯ ಫೋಟೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದಾಗ, ಜನರು ಹೊಟ್ಟೆಹುಣ್ಣಾಗುವಂತೆ ನಕ್ಕಿದ್ದರ ಜತೆಗೆ, 'ಬಿಹಾರದ ಆರೋಗ್ಯ ಇಲಾಖೆಯೇ ಅನಾರೋಗ್ಯದ ಗೂಡಾಗಿಬಿಟ್ಟಿದೆಯಲ್ಲಾ ಸ್ವಾಮೀ?' ಎಂದೂ ಪ್ರಶ್ನಿಸತೊಡಗಿದರಂತೆ!

ಹೀಗೊಂದು ಬಹುಮುಖ ಪ್ರತಿಭೆ

ಲೋಕಸಭಾ ಸದಸ್ಯ ಮನೋಜ್ ತಿವಾರಿ, ತಮ್ಮ ಮತಕ್ಷೇತ್ರವಾದ ಈಶಾನ್ಯ ದೆಹಲಿಯಲ್ಲಿ ಆಯೋಜಿಸಲಾಗಿದ್ದ ರಾಮ್‌ಲೀಲಾ ಮತ್ತು ದಸರಾ ಸಂಭ್ರಮಾಚರಣೆಗಳಲ್ಲಿ 'ಸೂಪರ್‌ಹಿಟ್' ಪ್ರದರ್ಶನಗಳನ್ನು ನೀಡುವ ಮೂಲಕ ಸುದ್ದಿಯಾದರಂತೆ. ರಾಜಕೀಯದ ಅಖಾಡಕ್ಕೆ ಇಳಿಯುವುದಕ್ಕೂ ಮುನ್ನ ಭೋಜ್‌ಪುರಿ ಚಲನಚಿತ್ರಗಳ ಮೂಲಕ ಜನಪ್ರಿಯ ನಟರೆನಿಸಿಕೊಂಡಿದ್ದ ತಿವಾರಿ ಒಳ್ಳೆಯ ಹಾಡುಗಾರರೂ ಹೌದು. ಈ ವೈಶಿಷ್ಟ್ಯವೇ ಸದರಿ ಸಂಭ್ರಮಾಚರಣೆಗಳಲ್ಲಿ ಅವರ ಕೈಹಿಡಿದು ನಡೆಸಿತು ಎನಿಸುತ್ತದೆ. ಒಂದಾದ ಮೇಲೊಂದರಂತೆ ಆಯೋಜನೆಗೊಂಡ ಇಂಥ ಕಾರ್ಯಕ್ರಮಗಳಲ್ಲಿ ತಿವಾರಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದೂ ಉಂಟಂತೆ. ಸಾಲದೆಂಬಂತೆ, ಪ್ರೇಕ್ಷಕರ ಒತ್ತಾಯದ ಮೇರೆಗೆ ಭಜನ್‌ಗಳನ್ನೂ ಹಾಗೂ ಈ ಸಂದರ್ಭಕ್ಕೆಂದೇ ತಾವು ಬರೆದಿದ್ದ ಒಂದು ಹಾಡನ್ನೂ ಹಾಡಿ ಜನರ ಮನಗೆದ್ದರಂತೆ ತಿವಾರಿ. ಅಷ್ಟೇ ಅಲ್ಲ, ರಾಮಾಯಣದ ಒಂದಷ್ಟು 'ಡೈಲಾಗು'ಗಳನ್ನೂ ಪಟಪಟನೆ ಉದುರಿಸಿದರಂತೆ, ರಾಮ್‌ಲೀಲಾ ಪ್ರದರ್ಶನವೊಂದರಲ್ಲಿ ಪರಶುರಾಮನ ಪಾತ್ರವನ್ನೂ ನಿರ್ವಹಿಸಿ ಜನರಿಂದ ಶಹಭಾಸ್‌ಗಿರಿ ಪಡೆದರಂತೆ. ಹೀಗಿರುವಾಗ ಮನೋಜ್ ತಿವಾರಿಯವರನ್ನು 'ಬಹುಮುಖ ಪ್ರತಿಭೆ' ಎನ್ನಲು ಏನಡ್ಡಿ?!

ನಾರಾಯಣ ನಾರಾಯಣ!

'ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ' ಎಂಬ 'ದೊಡ್ಡೋರ್ ಹೇಳೋ ಮಾತು' ಸುಳ್ಳಲ್ಲ ಕಣಣ್ಣಾ, ಜಾಣ ಕೇಳಣ್ಣಾ ಎನ್ನಬೇಕಾಗಿ ಬಂದಿದೆ. ಈ ಅಭಿಪ್ರಾಯಕ್ಕೆ ಕಾರಣವಾಗಿರೋದು ಕಲಬುರಗಿಯ ಒಬ್ಬ ಕಾಂಗ್ರೆಸ್ ನಾಯಕಿ. ಈಕೆ 'ಹನಿ' ಟ್ರ್ಯಾಪ್ ಮೂಲಕ ಜಿಲ್ಲೆಯ ಘಟಾನುಘಟಿ ರಾಜಕಾರಣಿಗಳಿಗೆ, ಶ್ರೀಮಂತರಿಗೆ, ಉದ್ಯಮಿಗಳಿಗೆ 'ಹಳ್ಳ' ತೋಡುವ ಹವಣಿಕೆಯಲ್ಲಿ ಇದ್ದುದು ಈಗ ಜಗಜ್ಜಾಹೀರು! ಇದನ್ನು ನಮ್ಮ ಚಿತ್ರಸಾಹಿತಿ ವಿಜಯ ನಾರಸಿಂಹ ಅವರು ದಶಕಗಳ ಹಿಂದೆಯೇ ಮುನ್ನಂದಾಜಿಸಿ(!) 'ಬಂಗಾರದ ಮನುಷ್ಯ' ಚಲನಚಿತ್ರಕ್ಕೆಂದು ಮೇಲಿನ ಆ ಹಾಡನ್ನು ಬರೆದುಬಿಟ್ಟರಾ? ಎಂಬುದು ಕಲಹಪ್ರಿಯ ನಾರದರ ಗುಮಾನಿ!

ಸಾವೇ, ನೀನೆಲ್ಲಿ ಕುಟುಕುತ್ತೀಯೆ ಎಂಬುದು ನಮಗೆ ಗೊತ್ತು!

ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ವಯಸ್ಸೆಂಬ ಗುಸುಗುಸು ಈಗ ದೊಡ್ಡ ಅರಚಾಟವಾಗಿ ಬದಲಾಗಿದೆ. ನಾನಿನ್ನು ಬದುಕುತ್ತೇನೋ ಇಲ್ಲವೋ ಎಂದು ನೀವು ಅನುಮಾನಿಸಲು ಆರಂಭಿಸಿದ ಕ್ಷಣದಿಂದಲೇ ನಿಮಗೆ ವಯಸ್ಸಾಗಲು ಶುರುವಾಗುತ್ತದೆ. ಸಾಯುತ್ತೇವೆ ಎಂಬುದು ಎಲ್ಲರಿಗೂ ಗೊತ್ತು. ಯಾವಾಗ ಸಾಯುತ್ತೇವೆ ಎಂಬುದಷ್ಟೇ ಪ್ರಶ್ನೆ. ಮುಂದೆಂದೋ ಬರಬಹುದು ಎಂಬ ಯೋಚನೆಯಲ್ಲಿದ್ದ ಆ ಸಾವು ಈಗಲೇ ಯಾವಾಗ ಬೇಕಾದರೂ ಬರಬಹುದು ಎಂಬ ಯೋಚನೆ ಶುರುವಾದರೆ ಇದ್ದಕ್ಕಿದ್ದಂತೆ ನಮಗೆ ವಯಸ್ಸಾಗಿಬಿಡುತ್ತದೆ.

ಈ ರೂಪಾಂತರ ಯಾರ ಬದುಕಿನಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಆಗಬಹುದು. 2012ರ ಒಲಿಂಪಿಕ್ಸ್ ಚಾಂಪಿಯನ್ ಒಬ್ಬ, 'ಕ್ಯಾನ್ಸರ್ ಬಂದಕೂಡಲೇ ನನಗೆ 80 ವರ್ಷ ಆಗಿಬಿಟ್ಟಿತ್ತು' ಎಂದು ಹೇಳಿದ್ದ. ಅಂದರೆ ಯೌವನದಿಂದ ತುಂಬಿ ತುಳುಕುತ್ತಿದ್ದ ಅವನು ಇದ್ದಕ್ಕಿದ್ದಂತೆ ವಯೋವೃದ್ಧನಂತೆ ಯೋಚಿಸಲು ಆರಂಭಿಸಿದ್ದ. ಸಾವನ್ನು ಎದುರುನೋಡುವವರು ಶೂನ್ಯವನ್ನು ಎದುರುನೋಡುತ್ತಿರುತ್ತಾರೆ. ಗಾಜಾದಲ್ಲಿ ಒತ್ತೆಯಾಳಾಗಿ ಕೂಡಿಹಾಕಲ್ಪಟ್ಟ ನತದೃಷ್ಟರು ಎಷ್ಟು ಸಲ ಸತ್ತಿರಬಹುದು? ಅಥವಾ ಪ್ಯಾಲೆಸ್ತೀನ್‌ನಲ್ಲಿ ಬಾಂಬ್‌ನಿಂದ ಧ್ವಂಸಗೊಂಡ ಕಟ್ಟಡದ ಅವಶೇಷಗಳಡಿ ಸಮಾಧಿಯಾದ ಮಗು ಎಷ್ಟು ಬದುಕನ್ನು ಕಳೆದುಕೊಂಡಿರಬಹುದು? ಆ ಬಾಂಬ್‌ನಲ್ಲೇ 'ಪ್ರತೀಕಾರ ಎಷ್ಟು ಪಟ್ಟು ಬೇಕಾದರೂ ತೀವ್ರವಾಗಿರಬಹುದು' ಎಂಬ ಸಂದೇಶವೂ ಇದ್ದಿರುತ್ತದೆ. ಅದು ಇನ್ನೂ ಭಯಾನಕ.

ಯುದ್ಧವೆಂದರೆ ಕ್ರೌರ್ಯ. ಅದಕ್ಕೆ ಬೇರಾವುದೇ ತತ್ವ ಅಥವಾ ಸಿದ್ಧಾಂತವಿಲ್ಲ. ಯುದ್ಧಕ್ಕೆ ನೀವು ಎಷ್ಟು ಬೇಕಾದರೂ ಸಮರ್ಥನೆ ನೀಡಬಹುದು. ಶಾಂತಿ ಸ್ಥಾಪನೆಗೆ ಯುದ್ಧವೇ ಬೇಕೆಂದು ವಾದಿಸಬಹುದು. ನನಗೆ ಅನ್ಯಾಯವಾಗಿದೆ, ಹೀಗಾಗಿ ಯುದ್ಧ ಮಾಡುತ್ತೇನೆ ಎಂದು ಸಮರ್ಥಿಸಿಕೊಳ್ಳಬಹುದು. ಆದರೆ ದಿನದ ಅಂತ್ಯಕ್ಕೆ ಯುದ್ಧವೆಂದರೆ ಹಿಂಸಾಚಾರವಲ್ಲದೆ ಮತ್ತೇನೂ ಅಲ್ಲ. ಯುದ್ಧದಲ್ಲಿ ಒಂದಷ್ಟು ಬಿಲಿಯನೇರ್‌ಗಳು ಇನ್ನೊಂದಷ್ಟು ಒತ್ತೆಯಾಳುಗಳ ಸ್ವಾತಂತ್ರ್ಯವನ್ನು ಖರೀದಿಸಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ನಗದು ಹಣವು ಯುದ್ಧದ ಕರೆನ್ಸಿ ಅಲ್ಲ ಎಂದು ಅವರಿಗೆ ಯಾರೂ ಹೇಳಿಲ್ಲ. ಬಾಂಬ್ ದಾಳಿಯಲ್ಲಿ ಧ್ವಂಸಗೊಂಡ ಕಟ್ಟಡದ ಅವಶೇಷಗಳಲ್ಲಿ ಮುಚ್ಚಿಹೋದ ಹೆಣಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಯಾರೂ ಆ ನಷ್ಟವನ್ನು ತುಂಬಿಕೊಡಲಾರರು.

ದೇವರು ಮನುಷ್ಯನನ್ನು ಸೃಷ್ಟಿಸಿದ್ದು ಶಾಂತಿಗಾಗಿ ಅಲ್ಲ. ಶಾಂತಿಯೆಂಬುದು ಎರಡು ಯುದ್ಧಗಳ ನಡುವಿನ ವಿರಾಮವಷ್ಟೆ. ಶಾಂತಿಯ ಬಗ್ಗೆ ಪುಸ್ತಕ ಬರೆದರೆ ಮಾರಾಟವಾಗುವುದಿಲ್ಲ. ಆದರೆ, ಯುದ್ಧದ ಬಗ್ಗೆ ಬರೆದ ಪುಸ್ತಕಗಳು ಬಿಸಿ ರೊಟ್ಟಿಯಂತೆ ಖರ್ಚಾಗುತ್ತವೆ. ಯುದ್ಧದ ಬಗ್ಗೆ ಬಂದ ಸಿನಿಮಾಗಳನ್ನು ಜನರು ಮುಗಿಬಿದ್ದು ನೋಡುತ್ತಾರೆ. ಎರಡು ಯುದ್ಧಗಳ ನಡುವಿನ ವಿರಾಮದ ಸಮಯವನ್ನು ನೋಡಲು ಬದುಕುಳಿದ ಅದೃಷ್ಟವಂತರು ಹಾಗೂ ಗುಂಡೇಟು ತಿನ್ನದೆ ಸಹಜವಾಗಿ ಸಾವನ್ನಪ್ಪಿ ಮಣ್ಣಾಗುವ ಅದೃಷ್ಟವನ್ನು ಪಡೆದವರು ಮುಂದಿನ ತಲೆಮಾರಿನಿಂದ ಒಂದಷ್ಟು ಸಮಯವನ್ನು ಸಾಲ ತೆಗೆದುಕೊಂಡಿರಬಹುದು. ಸಮಯ ಅಥವಾ ಕಾಲದಲ್ಲೇ ಸಮಾನತೆ ಇರಲು ಸಾಧ್ಯವಿಲ್ಲ ಅಂತಾದರೆ ನಾವೇಕೆ ಈ ಬದುಕಿನ ಬೇರೆ ಬೇರೆ ರಂಗಗಳಲ್ಲಿ ಸಮಾನತೆಯನ್ನು ನಿರೀಕ್ಷಿಸಬೇಕು? ನಮ್ಮ ಮನಸ್ಸಿಗೊಂದು ಹುಚ್ಚು, ಇದು ತರ್ಕಬದ್ಧವಾಗಿ ಯೋಚಿಸಲು ಹೋಗುತ್ತದೆ. ಹೀಗಾಗಿ ಯಾವುದನ್ನು ಯೋಚನೆ ಕೂಡ ಮಾಡಲು ಸಾಧ್ಯವಿಲ್ಲವೋ ಅದಕ್ಕೂ ಆಧಾರ ಹುಡುಕುತ್ತದೆ. ಆ ಕಾರಣಕ್ಕಾಗಿಯೇ ನಮ್ಮ ಮನಸ್ಸು ಮನುಷ್ಯರನ್ನೂ ಮಾನವತೆಯನ್ನೂ ಪರ್ಯಾಯ ಪದಗಳು ಎಂದು ಭಾವಿಸಿದೆ. ಮನುಷ್ಯರಿಗೆಲ್ಲ ಮಾನವೀಯತೆಯಿರುತ್ತದೆ ಎಂದು ನಾವೆಲ್ಲರೂ ಯೋಚಿಸುತ್ತೇವೆ. ಇದೊಂದು ಭ್ರಮೆ. ಆದರೆ ಈ ಭ್ರಮೆಯಿಂದಲೂ ಪ್ರಯೋಜನವಿದೆ. ಇಲ್ಲದಿದ್ದರೆ, ಅಂದರೆ ಈ ಭ್ರಮೆ ಇಲ್ಲದಿದ್ದರೆ ನಾವು ಬದುಕಿನ ಜಂಜಡದಲ್ಲಿ ಇನ್ನಷ್ಟು ಕಳೆದುಹೋಗಬೇಕಾಗುತ್ತದೆ.

ಈ ಕಾರಣಕ್ಕಾಗಿಯೇ ನಮಗೆ ದೇವರು ಬೇಕು. ದೇವರು ಅಥವಾ ಧರ್ಮದ ಹೆಸರಿನಲ್ಲೇ ಇತಿಹಾಸದಲ್ಲಿ ಸಾಮೂಹಿಕ ಹತ್ಯಾಕಾಂಡಗಳನ್ನು ನಡೆಸಿರುವುದು ನಮಗೆ ಗೊತ್ತಿದ್ದರೂ ನಮಗೆ ದೇವರು ಬೇಕು. ದೇವರಿದ್ದಾನೆ ಎಂಬ ನಂಬಿಕೆಯಲ್ಲೇ ನಮ್ಮ ಪ್ರಜ್ಞೆ ಜಾಗೃತವಾಗುತ್ತದೆ. ದೇವರಿದ್ದಾನೆ ಎಂಬ ನಂಬಿಕೆಯಲ್ಲೇ ಕೆಲವೊಮ್ಮೆ ನಾವು ಒಳ್ಳೆಯವರಾಗುತ್ತೇವೆ. ದೇವರಿದ್ದಾನೆ ಎಂಬ ನಂಬಿಕೆಯಲ್ಲೇ ಕೆಲವೊಮ್ಮೆ ನಮ್ಮ ಬದುಕು ಸಹನೀಯವಾಗುತ್ತದೆ. ಆದರೆ ದೇವರಿದ್ದಾನೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ನಮಗೆ ನಿಜವಾಗಿಯೂ ಗೊತ್ತಿರುವುದು ಏನೆಂದರೆ, ಕೆಲವೊಮ್ಮೆ ನಮ್ಮೊಳಗಿನ ಸುಪ್ತಪ್ರಜ್ಞೆ ರಾತ್ರಿಯ ವೇಳೆ ಎದ್ದು ಕುಳಿತುಕೊಳ್ಳುತ್ತದೆ ಮತ್ತು ಪುನಃ ನಿದ್ದೆ ಬಾರದಂತೆ ಮನಸ್ಸನ್ನು ಕಲಕಿಬಿಡುತ್ತದೆ. ಮನುಷ್ಯನಿಗೆ ಸಾಮಾನ್ಯವಾಗಿ ದೇವರು ತಾತ್ವಿಕ ಕಾರಣಗಳಿಗಾಗಿ ಹಾಗೂ ಬದುಕುವ ಕಾರಣಗಳಿಗಾಗಿ ಬೇಕು. ಸಾವಿನಿಂದ ಹಿಡಿದು ಸರಕಾರಿ ನೀತಿಗಳವರೆಗೆ, ಹಬ್ಬಕ್ಕೆ ಹೊಸ ಬಟ್ಟೆ ಕೊಳ್ಳುವುದರಿಂದ ಹಿಡಿದು ಆಣೆ ಮಾಡುವುದರವರೆಗೆ ಪ್ರತಿಯೊಂದಕ್ಕೂ ದೇವರು ಬೇಕು. ಬದುಕಿನ ಅನಿಶ್ಚಿತ ಸಂದರ್ಭಗಳಲ್ಲಿ ನಮಗೆ ದೇವರು ಬೇಕು. ದೇವರನ್ನು ನಾವು ನಂಬಿಕೆಯೆಂದೋ ಅಥವಾ ಶೋಧನೆಯೆಂದೋ ಸ್ವೀಕರಿಸುತ್ತೇವೆ. ದೇವರು ಜನಸಾಮಾನ್ಯರಿಗೆ ಪ್ರಾಕ್ಟಿಕಲ್ ಅಗತ್ಯವಾಗಿದ್ದರೆ, ಸಾಧು ಸಂತರು ಅಥವಾ ಶ್ರೀಮಂತರಿಗೆ ದೇವರೆಂಬುದು ಸೈದ್ಧಾಂತಿಕ ಅನುಕೂಲ. ದೇವರು ಮನುಷ್ಯನ ಆದೇಶಗಳನ್ನು ಪಾಲಿಸುತ್ತಾನೆ. ಇದೇ ಹನ್ನೊಂದನೇ ದೈವಿಕ ನಿಯಮ. ಇದನ್ನೇ ಏಕೈಕ ದೇವನಿಯಮವನ್ನಾಗಿ ಮಾಡಿದರೂ ಸರಿ.

ಬೆಟ್ಟದ ತುದಿಯಿಂದ ಮೋಸೆಸ್ ಹೇಳಿದ ಹತ್ತು ಕಮಾಂಡ್‌ಮೆಂಟ್‌ಗಳು (ದೈವಿಕ ನಿಯಮ) ಕೊಂಚ ಬೋರು ಹೊಡೆಸುವಂತಿವೆ. ಮೊದಲ ನಾಲ್ಕು ಕಮಾಂಡ್‌ಮೆಂಟ್‌ಗಳು ನನ್ನನ್ನು ಮಾತ್ರ ಪೂಜಿಸಿ ಎಂಬಿತ್ಯಾದಿ ಸಾಮಾನ್ಯ ನಿಯಮಗಳು. ಇವುಗಳನ್ನು ನೋಡಿದರೆ ದೇವರು ಎಷ್ಟು ನರ್ವಸ್ ಆಗಿದ್ದಾನೆ ಎಂಬುದು ತಿಳಿಯುತ್ತದೆ. ಮನುಷ್ಯ ಪೂಜಿಸುತ್ತಾನೆ ಎಂಬ ಏಕೈಕ ಕಾರಣಕ್ಕೆ ದೇವರು ಅಸ್ತಿತ್ವದಲ್ಲಿದ್ದಾನೆಯೇ? ನಂತರದ ಐದು ಕಮಾಂಡ್‌ಮೆಂಟ್‌ಗಳು ತೀರಾ ಸಾಮಾನ್ಯವಾದ ಅಥವಾ ಮೂಲಭೂತವಾದ ದಂಡ ಸಂಹಿತೆಯಂತಿವೆ. ಅಂದರೆ ಇಂಥ ಪಾಪಕ್ಕೆ ಇಂಥ ಶಿಕ್ಷೆ ಎಂಬುದನ್ನು ಹೇಳುವ ನಿಯಮಗಳವು. ನಿಮ್ಮ ಅಪ್ಪ-ಅಮ್ಮನನ್ನು ಗೌರವಿಸುವುದಕ್ಕೂ ದೇವರು ರೂಪಿಸಿದ ನಿಯಮಗಳು ಬೇಕು ಅಂತಾದರೆ ನೀವು ಬದುಕಿನಲ್ಲಿ ತುಂಬಾ ಅಸೂಕ್ಷ್ಮರಾಗಿದ್ದೀರಿ ಎಂದರ್ಥ. ನಿಮಗೆ ಒಳ್ಳೆಯ ಅಪ್ಪ ಇಲ್ಲದಿದ್ದರೆ ಅವನನ್ನು ನೀವೇ ಸೃಷ್ಟಿಸಿ ಎಂದು ಫ್ರೆಡರಿಕ್ ನೀಶೆ ಹೇಳಿದ್ದ. 19ನೇ ಶತಮಾನದ ಜರ್ಮನ್ ತತ್ವಶಾಸ್ತ್ರಜ್ಞ ನೀಶೆಯನ್ನು ನಾವು ಕೆಲವೊಮ್ಮೆ ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ. ಅವನನ್ನು ವಿವಾದಿತ ವ್ಯಕ್ತಿಯನ್ನಾಗಿ ಮಾಡಿಬಿಟ್ಟಿದ್ದೇವೆ. ಆದರೆ ಒಳ್ಳೆಯ ಅಪ್ಪ ಇಲ್ಲದಿದ್ದರೆ ನೀವೇ ಒಳ್ಳೆಯ ಅಪ್ಪನನ್ನು ಸೃಷ್ಟಿಸಿಕೊಳ್ಳಿ ಎಂಬ ಅವನ ಉಪದೇಶ ಯಾವ ರೀತಿಯಲ್ಲಿ ನೋಡಿದರೂ ಬಹಳ ಒಳ್ಳೆಯ ಉಪದೇಶ. ದೇವರು ಸತ್ತುಹೋಗಿದ್ದಾನೆ ಎಂದೂ ನೀಶೆ ಹೇಳಿದ್ದ. ಅವನು ನಿಜಕ್ಕೂ ತತ್ವಜ್ಞಾನಿಯೇ ಆಗಿದ್ದು, ಪತ್ರಕರ್ತ ಅಲ್ಲದಿದ್ದರೆ, ಈ ವಿಷಯದಲ್ಲಿ ಅವನು ತಪ್ಪು ಉಪದೇಶ ಮಾಡಿದ್ದಾನೆ. ಪತ್ರಕರ್ತರು ಕೆಲವೊಮ್ಮೆ ತಮ್ಮ ಸುದ್ದಿಯಲ್ಲಿ ಏನೂ ಸತ್ವವಿಲ್ಲದಿದ್ದರೂ ಒಳ್ಳೆಯ ಹೆಡ್‌ಲೈನ್ ಸಿಕ್ಕಿತು ಎಂಬ ಕಾರಣಕ್ಕೆ ಅದನ್ನು ಬರೆದುಬಿಡುತ್ತಾರೆ. ನೀಶೆ ಆ ಕಾಲದಲ್ಲೇ ಅದಕ್ಕಿಂತಲೂ ಬಹಳ ಮುಂದೆ ಹೋಗಿಬಿಟ್ಟಿದ್ದ. ಹೀಗಾಗಿ, ದೇವರು ಸರ್ವವ್ಯಾಪಿ ಆಗಿರುವುದರಿಂದ, ನೀಶೆಯ ವಿಷಯದಲ್ಲಿ ದೇವರೇ ಗೆಲುವಿನ ನಗೆ ಬೀರಿದ.

ನೀಶೆಗೆ 44 ವರ್ಷವಾದಾಗ ಪಾರ್ಶ್ವವಾಯು ಹೊಡೆಯಿತು. ಅದರ ಜತೆಗೆ ವ್ಯಾಸ್ಕುಲರ್ ಡೆಮೆನ್ಷಿಯಾ ಕೂಡ ಸೇರಿಕೊಂಡಿತು. ನಂತರ ಇನ್ನಷ್ಟು ಪಾರ್ಶ್ವವಾಯು ಪೀಡಿತನಾಗಿ ಅವನು ಬೇಗ ಸತ್ತುಹೋದ. ದೇವರ ಬಗ್ಗೆ ನಗೆಯಾಡಿದರೆ ಇನ್ನೇನಾಗುತ್ತದೆ! ಜಗತ್ತಿನಲ್ಲಿ ವಸ್ತುನಿಷ್ಠ ಸತ್ಯ ಎಂಬುದಿಲ್ಲ, ಎಲ್ಲವೂ ಅವರವರ ದೃಷ್ಟಿಕೋನಕ್ಕೆ ಸಂಬಂಧಿಸಿದ ಸತ್ಯವೇ ಆಗಿದೆ ಎಂದು ನೀಶೆ ಹೇಳಿದ್ದ. ಕೊನೆಗೆ, ಸಾವಿಗೆ ಒಂದೇ ದೃಷ್ಟಿಕೋನವಿದೆ ಎಂಬುದು ಅವನಿಗೆ ತಿಳಿಯಿತು. ಆದರೆ ಅಷ್ಟೊತ್ತಿಗೆ ಅವನು ಸಾಕಷ್ಟು ಪುಸ್ತಕಗಳನ್ನು ಬರೆದಾಗಿತ್ತು. ಅವುಗಳನ್ನೆಲ್ಲ ತಿದ್ದಿ ಬರೆಯಲು ಸಾಧ್ಯವಿರಲಿಲ್ಲ.

ಬದುಕಿನ ಅರ್ಥ ಶೋಧಿಸಲು ಇನ್ನೂ ಸಾಕಷ್ಟು ಸಮಕಾಲೀನ ಸಿದ್ಧಾಂತಗಳಿವೆ. ಅವುಗಳನ್ನೆಲ್ಲ ಅರ್ಥ ಮಾಡಿಕೊಳ್ಳುವುದರ ಬದಲು ಬದುಕಿನ ನೆರಳು ಕೂಡ ಕಾಣಿಸದ ಎತ್ತರದ ಶಿಖರಕ್ಕೆ ಹೋಗಿ ಕೆಳಗೆ ಹಾರಿಬಿಡಿ. ಆಗ ಇನ್ನೊಂದು ಶಿಖರದ ಬುಡಕ್ಕೆ ಬಂದು ಬೀಳುತ್ತೀರಿ. ಅಲ್ಲೇ ಮತ್ತೊಂದು ಶಿಖರದ ತುದಿಯೂ ಇರುತ್ತದೆ. ಅಲ್ಲಿ ನಿಮಗೆ ಸಾವಿನ ನೆರಳಿನ ಬೆಚ್ಚನೆಯ ಅಪ್ಪುಗೆ ಸಿಗುತ್ತದೆ. ಅಮೆನ್.

ನಾನು ಈ ಅಮೆನ್ ಪದದ ಅರ್ಥ ತಿಳಿದುಕೊಳ್ಳಲು ಸಾಕಷ್ಟು ಪ್ರಯತ್ನಿಸಿದ್ದೇನೆ. ಏಕೆಂದರೆ ಡಿಕ್ಷನರಿ ಜತೆಗೆ ಯಾವತ್ತೂ ನಮಗೆ ದ್ವೇಷ ಇರಬಾರದು. ಗೊತ್ತಿಲ್ಲದ್ದನ್ನು ಶಬ್ದಕೋಶ ನೋಡಿ ತಿಳಿದುಕೊಳ್ಳಲು ಬಿಗುಮಾನ ಅಡ್ಡ ಬರಬಾರದು. ಅದು ಹಾಗಿರಲಿ. ಕೊನೆಗೂ ಅರ್ಥವಾಗಿದ್ದೇನೆಂದರೆ, ಪ್ರಾರ್ಥನೆಯ ಕೊನೆಗೆ ಹೇಳುವ ಪದ ಅಮೆನ್.

ಪ್ರವಾದಿ ಅಬ್ರಹಾಂ ಅವರು ದೇವರ ಸ್ವಯಂಘೋಷಿತ ಸ್ನೇಹಿತ. ಒಮ್ಮೆ ದೇವರು ತನ್ನೆಲ್ಲಾ ಶಕ್ತಿಯನ್ನೂ ಬಳಸಿ ಸೋಡೋಮ್ ನಗರವನ್ನು ನಿರ್ನಾಮ ಮಾಡಲು ಹೊರಟಾಗ ದೇವರ ಬಳಿ ಅಬ್ರಹಾಂ ಒಂದು ಪ್ರಶ್ನೆ ಕೇಳಿದರಂತೆ. ಸೋಡೋಮ್ ನಗರ ಎಲ್ಲಾ ರೀತಿಯ ಪಾಪಗಳಿಗೆ ಕುಖ್ಯಾತಿ ಪಡೆದಿತ್ತು. ಬೈಬಲ್‌ನ ಮೊದಲ ಅಧ್ಯಾಯ 'ಜೆನೆಸಿಸ್'ನಲ್ಲಿ ಇದರ ಬಗ್ಗೆ ಹೆಚ್ಚಿನ ವಿವರಗಳು ಸಿಗುತ್ತವೆ. ಆಸ್ತಿಕರು ಅಬ್ರಹಾಂ ಅವರ ಸಂದೇಶವನ್ನು ಪ್ರಾರ್ಥನೆಯೆಂದು ಕರೆಯುತ್ತಾರೆ. ಆದರೆ ನಿಜವಾಗಿ ನೋಡಿದರೆ ಅದು ಪ್ರಾರ್ಥನೆಗಿಂತ ಹೆಚ್ಚಾಗಿ ದೂಷಣೆಯಂತೆ ಇದೆ. ದೇವರಿಗೆ ಅಬ್ರಹಾಂ ಹೇಳಿದ್ದು ಇದು- 'ಇಂಥ ಕೆಲಸ ಮಾಡಲು ಹೋಗಬೇಡಿ. ದುಷ್ಟರ ಜತೆಗೆ ಒಳ್ಳೆಯವರನ್ನೂ ನಾಶ ಮಾಡಬೇಡಿ. ದುಷ್ಟರೇನೋ ಅವರ ಪಾಪಕ್ಕೆ ಬೆಲೆ ತೆರುತ್ತಾರೆ, ಆದರೆ ಒಳ್ಳೆಯವರು ಏಕೆ ಬೆಲೆ ತೆರಬೇಕು! ಇಂಥ ಕೆಲಸ ಮಾಡಲು ಹೋಗಬೇಡಿ. ಸಮಸ್ತ ಭೂಮಂಡಲದ ನ್ಯಾಯ ನಿರ್ಣಾಯಕ ವ್ಯಕ್ತಿ ಯಾವತ್ತೂ ನ್ಯಾಯವನ್ನೇ ಮಾಡಬೇಕಲ್ಲವೇ?'.

ಹಾಗಿದ್ದರೆ ಮಾರಣಾಂತಿಕ ಬಾಂಬ್‌ಗಳನ್ನು ಹಾಕಿ ಏಕೆ ದುಷ್ಟರ ಜತೆಗೆ ಮುಗ್ಧರನ್ನೂ ಸಾಯಿಸುತ್ತೀರಿ? ಬಾಂಬ್‌ಗೆ ಒಳ್ಳೆಯವರು ಮತ್ತು ಕೆಟ್ಟವರ ನಡುವಿನ ವ್ಯತ್ಯಾಸ ಗುರುತಿಸುವ ಶಕ್ತಿಯಿಲ್ಲ. ಅದಕ್ಕೆ ನೈತಿಕ ಯಾವುದು ಅನೈತಿಕ ಯಾವುದು ತಿಳಿಯುವುದಿಲ್ಲ. ಆದ್ದರಿಂದಲೇ ಅಬ್ರಹಾಂ ಅವರು, 'ಸೋಡೋಮ್ ನಗರದಲ್ಲಿ ಕೇವಲ ಹತ್ತೇ ಹತ್ತು ಒಳ್ಳೆಯ ವ್ಯಕ್ತಿಗಳಿದ್ದರೂ ಅವರಿಗೆ ಮರಣ ದಂಡನೆಯಾಗದಂತೆ ನೋಡಿಕೊಳ್ಳಬೇಕು' ಎಂದು ಹೇಳಿದ್ದರು. ಒಳ್ಳೆಯ ವಾದ. ಆದರೆ, ಸ್ವರ್ಗದ ನ್ಯಾಯಾಲಯದಲ್ಲಿ ಅವರಿಗೆ ಅದೃಷ್ಟ ಕೈಹಿಡಿಯಲಿಲ್ಲ. ದೇವರು ಸಲ್ಫರ್ ಮತ್ತು ಬೆಂಕಿಯನ್ನು ಬಳಸಿದ. ಏಸುಕ್ರಿಸ್ತ ಜನಿಸುವುದಕ್ಕೂ ಮೊದಲೇ ಶತಮಾನದ ಭೀಕರ ಬಾಂಬ್ ಪ್ರಯೋಗಿಸಿದ! ಹೀಗಾಗಿ ಸೋಡೋಮ್ ನಗರದ ಜತೆಗೆ ಗೊಮೊರಾಹ್ ಕೂಡ ಶಾಶ್ವತವಾಗಿ ಇತಿಹಾಸಕ್ಕೆ ಸೇರಿತು. ದೇವರಿಗೆ ತರ್ಕ ಮುಖ್ಯವಲ್ಲ, ಉದಾಹರಣೆ ಮುಖ್ಯ. ಉದಾಹರಣೆಗಳು ವಿಶಿಷ್ಟವಾಗಿರಬೇಕು ಅಂದರೆ ಭಯಾನಕವಾಗಿರಬೇಕು. ಹೀಗಾಗಿ ದೇವರ ನ್ಯಾಯದಿಂದ ಮನುಷ್ಯಕುಲ ಏನನ್ನೆಲ್ಲ ಕಲಿಯಬೇಕಿತ್ತೋ ಅದೆಲ್ಲವನ್ನೂ ಕಲಿಯಿತು. ಹಾಗಿದ್ದರೆ ಸಾವೇ ನ್ಯಾಯವೇ? ಗಲ್ಲಿನ ಕುಣಿಕೆ, ಎಲೆಕ್ಟ್ರಿಕ್ ಚೇರ್ ಅಥವಾ ಕೊಡಲಿ ಬಳಸಿ ವಿಧಿಸುವ ಮರಣ ದಂಡನೆಯ ಬದಲು ಹೆಚ್ಚಾಗಿ ಜೀವಾವಧಿ ಶಿಕ್ಷೆಯನ್ನು ನೀಡುವ ಕಾಲದಲ್ಲಿ ನಾವಿಂದು ಇದ್ದೇವೆ. ಸಾವೇ ನ್ಯಾಯವಾಗಿದ್ದರೆ, ನಾವೆಲ್ಲರೂ ಒಂದು ದಿನ ಸಾಯುವುದರಿಂದ, ಎಲ್ಲರೂ ಮರಣ ದಂಡನೆ ಅನುಭವಿಸುವಂಥ ಒಂದಿಲ್ಲೊಂದು ತಪ್ಪು ಮಾಡಿದ್ದೇವೆಂದೇ ಅಂದುಕೊಳ್ಳಬೇಕಾಗುತ್ತದೆ. ಪಾಪಿಗೂ ಸಾವು ಬರುತ್ತದೆ, ಸಂತನಿಗೂ ಸಾವು ಬರುತ್ತದೆ. ಹುತಾತ್ಮನೂ ಸಾಯುತ್ತಾನೆ, ಕೊಲೆಗಡುಕನೂ ಸಾಯುತ್ತಾನೆ. ಅವರೆಲ್ಲ ಏನು ತಪ್ಪು ಮಾಡಿದ್ದಾರೆ?

ಆದರೆ ನಾವೆಲ್ಲರೂ ಒಂದು ತಪ್ಪು ಖಂಡಿತ ಮಾಡಿದ್ದೇವೆ. ಬದುಕಿರುವುದೇ ನಮ್ಮ ತಪ್ಪು. ನಾವು ಹುಟ್ಟಿದಾಗಲೇ ನಮ್ಮ ಜೀನ್‌ನಲ್ಲಿ ಸಾವು ಕೂಡ ಬರೆದಿರುತ್ತದೆ. ಏಕೆ ಎಂಬುದಕ್ಕೆ ನಮ್ಮಲ್ಲಿರುವ ಏಕೈಕ ಉತ್ತರ ಧರ್ಮ. ನಾವೇಕೆ ಹುಟ್ಟಿದ್ದೇವೆ ಮತ್ತು ನಾವೇಕೆ ಸಾಯುತ್ತೇವೆ ಎಂಬುದು ನಮಗೆ ಗೊತ್ತಿಲ್ಲ. ನಾವು ಕೇವಲ ಸಂಭ್ರಮಾಚರಣೆ ಮಾಡುತ್ತೇವೆ ಅಥವಾ ಶೋಕಾಚರಣೆ ಮಾಡುತ್ತೇವೆ. ಏಕೆ ಎಂಬುದು ನಮಗೆ ಗೊತ್ತಿಲ್ಲ. ಅದನ್ನು ಯೋಚಿಸುವುದಕ್ಕೂ ಹೋಗುವುದಿಲ್ಲ. ಅಸ್ತಿತ್ವದ ಅರ್ಥವೇನು ಮತ್ತು ಮೂಲಭೂತ ಉದ್ದೇಶವೇನು ಎಂಬುದು ಗೊತ್ತಿಲ್ಲದೆಯೇ ಅಂಡಲೆಯುತ್ತೇವೆ. ಒಟ್ಟಿಗೇ ಈಜದಿದ್ದರೆ ಒಟ್ಟಿಗೇ ಮುಳುಗುತ್ತೇವೆ ಎಂಬಂಥ ಸಾಮಾನ್ಯ ಜ್ಞಾನವೇ ನಮಗೆ ಸಾಕು.

ದೇವರೇ, ನನ್ನನ್ನು ಕ್ಷಮಿಸು. ಬಹಳ ಒರಟಾಗಿ ಮಾತನಾಡುತ್ತಿದ್ದೇನೆಂದು ಸಿಟ್ಟಾಗಬೇಡ. ಆದರೆ, ಸೋಡೋಮ್ ನಗರದ ಮೇಲೆ ಬಳಸಿದ ನ್ಯಾಯವನ್ನೇ ನೀನು ನಿರಂತರವಾಗಿ ಬಳಸುತ್ತಾ ಹೋದರೆ ನಿನ್ನನ್ನು ಪ್ರಾರ್ಥಿಸುವುದಕ್ಕೂ ಈ ಭೂಮಿಯಲ್ಲಿ ಯಾರೂ ಉಳಿಯುವುದಿಲ್ಲ. ಸೃಷ್ಟಿಯಿಲ್ಲದೆ ಸೃಷ್ಟಿಕರ್ತ ಇಲ್ಲ. ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲ. ಹಳೆಯ ಒಡಂಬಡಿಕೆಯಲ್ಲಿ ಹೇಳಿರುವುದು ಕೇವಲ ರೂಪಕ ಎಂಬುದು ನನ್ನ ಶಂಕೆ. ತಪ್ಪು ಮಾಡಿದರೆ ಶಿಕ್ಷೆ ಕಾದಿದೆ ಎಂದು ಮನುಷ್ಯರನ್ನು ಎಚ್ಚರಿಸುವುದಕ್ಕೆ ಬಳಸಿದ ರೂಪಕವದು. ಆದರೆ ಈಗ ಎಲ್ಲಿ ನೋಡಿದರೂ ಅನ್ಯಾಯ, ಅಸಮಾನತೆ, ಅನಿಶ್ಚಯತೆಗಳೇ ಕಾಣಿಸುತ್ತವೆ. ಅದಕ್ಕೆಲ್ಲ ನಾವು ಕಣ್ಣು ಮುಚ್ಚಿಕೊಂಡಿದ್ದೇವೆ. ಇವುಗಳ ಬಗ್ಗೆ ತುಂಬಾ ಯೋಚಿಸಿದರೆ, ಅಥವಾ ಕೊಂಚ ಯೋಚಿಸಿದರೂ, ನಮ್ಮ ಪ್ರಜ್ಞೆ ಮರುಗುತ್ತದೆ. ಆ ಸಂಕಟವನ್ನು ತಡೆದುಕೊಳ್ಳಲು ಆಗುವುದಿಲ್ಲ.

ದೇವರೇ, ಸ್ವರ್ಗದಲ್ಲಿರುವ ನಮ್ಮ ತಂದೆಗೆ ನಿನ್ನ ಹೆಸರಿನ ಗೌರವ ಸಿಗಲಿ. ನಿನ್ನ ಸಾಮ್ರಾಜ್ಯದಲ್ಲಿ ಸ್ಥಾನ ಸಿಗಲಿ. ನಿನ್ನ ಆಡಳಿತವೇ ಎಲ್ಲೆಡೆ ಜಾರಿಗೆ ಬರಲಿ. ನೀನೇ ಎಲ್ಲವೂ ಆಗಲಿ. ಭೂಮಿಯಲ್ಲೂ ಸ್ವರ್ಗದಲ್ಲೂ ನೀನೇ ವ್ಯಾಪಿಸಿಕೊಳ್ಳಲಿ. ಆದರೆ ನಿನ್ನ ಅಸ್ತಿತ್ವ ಎಲ್ಲರಿಗೂ ತಿಳಿಯುವ ಸಮಯ ಬರುವವರೆಗೆ ದಯವಿಟ್ಟು ನೀನೇ ಸೃಷ್ಟಿಸಿದ ಈ ಜಗತ್ತಿನ ವಿದ್ಯಮಾನಗಳಿಗೆ ನನ್ನನ್ನು ಕುರುಡನನ್ನಾಗಿ ಮಾಡುವೆಯಾ?

ಭಾವನೆಗಳು ಸಹಾಯಕ್ಕೆ ಬರುವುದಿಲ್ಲ. ನಮಗೆ ಕೆಟ್ಟದ್ದು ಬೇಕಿಲ್ಲ. ಆದರೆ, ಮನುಷ್ಯನ ಜೀವಿತದಿಂದ ದುಷ್ಟತನವನ್ನು ಹೊರಹಾಕದೆ ನಮಗೆ ಕೆಟ್ಟದ್ದು ಬೇಡ ಅಂದರೆ ಹೇಗೆ ಸಾಧ್ಯ? ಬದುಕು ಒಳ್ಳೆಯದು ಮತ್ತು ಕೆಟ್ಟದ್ದರ ಮಿಶ್ರಣ. ಇಲ್ಲಿ ಒಂದೇ ಒಂದು ಸಮಾಧಾನಕರ ಬಹುಮಾನವಿದೆ. ಅದೇನು ಗೊತ್ತಾ? ಯಾವಾಗ ಬೇಕಿದ್ದರೂ ನಾವು ದೇವರನ್ನು ದೂಷಿಸಬಹುದು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:67, Issue: 173

ಸಮಾಚಾರ ಸಣ್ಣದಲ್ಲ

ಜಾಮೀನು ಅಂತ್ಯ ತಿಹಾರ್‌ಗೆ ರಶೀದ್

ಶ್ರೀನಗರ: ತಿಹಾರ್ ಜೈಲಿನಲ್ಲಿದ್ದುಕೊಂಡೇ ಈ ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಗೆದ್ದ ಅವಾಮಿ ಇತ್ತೆಹಾದ್ ಪಕ್ಷದ ಮುಖ್ಯಸ್ಥ, ಬಾರಾಮುಲ್ಲಾ ಕ್ಷೇತ್ರದ ಸಂಸದ ಶೇಖ್ ಅಬ್ದುಲ್ ರಶೀದ್ ಅಲಿಯಾಸ್ ಇಂಜಿನಿಯರ್ ರಶೀದ್ ಮಧ್ಯಂತರ ಜಾಮೀನು ಅವಧಿ ಸೋಮವಾರ ಕೊನೆಗೊಂಡಿದ್ದರಿಂದ ದೆಹಲಿಯಲ್ಲಿನ ತಿಹಾರ್ ಜೈಲಿಗೆ ಮರಳಿದರು. ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆ ಪ್ರಚಾರಕ್ಕಾಗಿ ಸೆ.10ರಂದು ನ್ಯಾಯಾಲಯ ರಶೀದ್‌ಗೆ ಮಧ್ಯಂತರ ಜಾಮೀನು ನೀಡಿತ್ತು. ತಂದೆಗೆ ಅನಾರೋಗ್ಯ ಎಂಬ ಕಾರಣಕ್ಕೆ ಅ.28 ರವರೆಗೂ ಜಾಮೀನು ಅವಧಿ ವಿಸ್ತರಿಸಲಾಗಿತ್ತು. ದಾಖಲೆ ಪರಿಶೀಲಿಸಿದ ಎನ್‌ಐಎ ಕೂಡ ಜಾಮೀನು ವಿಸ್ತರಣೆಗೆ ವಿರೋಧ ವ್ಯಕ್ತಪಡಿಸಿರಲಿಲ್ಲ. 2017ರಲ್ಲಿ ಉಗ್ರರಿಗೆ ಹಣದ ನೆರವು ನೀಡಿದ ಪ್ರಕರಣದಲ್ಲಿ 'ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ'(ಯುಎಪಿಎ) ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಯಿಂದ ಬಂಧಿತರಾದ ನಂತರ ರಶೀದ್ 2019ರಿಂದ ತಿಹಾರ್ ಜೈಲಿನಲ್ಲಿದ್ದಾರೆ.

ಇಂಗ್ಲಿಷ್ ಕಾಲುವೆ: ಭಾರತೀಯ ಸಾವು

ಲಂಡನ್: ಇಂಗ್ಲಿಷ್ ಕಡಲ್ಗಾಲುವೆ ಮೂಲಕ ಫ್ರಾನ್ ದೇಶದಿಂದ ಬ್ರಿಟನ್‌ಗೆ ಪ್ರಯಾಣಿಸುತ್ತಿದ್ದ ಹಡಗು ಮುಳುಗಿದ್ದು, ಭಾರತೀಯ ಪ್ರಜೆಯೊಬ್ಬರು ಭಾನುವಾರ ಮುಂಜಾನೆ 5.30ರ ವೇಳೆ ಮೃತಪಟ್ಟರು. ಹಡಗಿನಲ್ಲಿದ್ದ ಎಲ್ಲ ಪ್ರಯಾಣಿಕರೂ ಲೈಫ್ ಜಾಕೆಟ್ ಧರಿಸಿರಲಿಲ್ಲ. ಹಡಗು ಮುಳುಗಲು ಆರಂಭಿಸುತ್ತಿದ್ದಂತೆಯೇ ಕೆಲವರು ಈಜಿ ದಡ ಸೇರಿದ್ದಾರೆ. ಆದರೆ, 40 ವರ್ಷದ ಭಾರತೀಯ ವ್ಯಕ್ತಿಗೆ ಹೃದಯಾಘಾತಕ್ಕೆ ಒಳಗಾಗಿ ಅಸುನೀಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಂಗ್ಲಿಷ್ ಕಾಲುವೆ ಮಾರ್ಗ ಅಪಾಯಕಾರಿ ಎನಿಸಿಕೊಂಡಿದೆ. 2024ರಲ್ಲಿ ಈ ಮಾರ್ಗದಲ್ಲಿ 56 ಜನರು ಮೃತಪಟ್ಟಿದ್ದಾರೆ. ಕಳೆದ 10 ದಿನಗಳಲ್ಲಿ ಈ ಭಾಗದಲ್ಲಿ ನಡೆದ 3ನೇ ಹಡಗು ಮುಳುಗಿದ ಘಟನೆ ಇದಾಗಿದೆ ಎಂದು ಫ್ರೆಂಚ್ ಅಧಿಕಾರಿಗಳು ತಿಳಿಸಿದ್ದಾರೆ.

ಇರಾನ್‌ನ ಖಮೇನಿ 'ಎಕ್ಸ್' ಅಮಾನತು

ಬೈರೂತ್: ಇರಾನ್‌ನ ನಾಯಕ ಅಯತೊಲ್ಲಾ ಅಲಿ ಖಮೇನಿ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತೆರೆದಿದ್ದ ಹಿಬ್ರೂ ಭಾಷೆಯ ಖಾತೆಯನ್ನು ನಿಯಮ



ಉಲ್ಲಂಘಿಸಿದ ಕಾರಣಕ್ಕಾಗಿ ಅಮಾನತು ಮಾಡಲಾಗಿದೆ ಎಂದು ಜೆರುಸಲೇಂ ಮಾಧ್ಯಮ ವರದಿ ಮಾಡಿವೆ. ಇತ್ತೀಚೆಗೆ ಇರಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಬರೆದಿದ್ದರು. ಅಲ್ಲದೇ, 'ಇಸ್ರೇಲ್ ತಪ್ಪು ಮಾಡಿದೆ. ಇರಾನ್ ಮೇಲಿನ ಅದರ ಲೆಕ್ಕಾಚಾರ ತಪ್ಪಾಗಿದೆ. ಇರಾನ್ ಯಾವ ರೀತಿ ಶಕ್ತಿ, ಸಾಮರ್ಥ್ಯ ಹೊಂದಿದೆ ಎಂಬುದನ್ನು ಇಸ್ರೇಲ್‌ಗೆ ಅರ್ಥ ಮಾಡಿಸುತ್ತೇವೆ' ಎಂದು 'ಎಕ್ಸ್' ಖಾತೆಯಲ್ಲಿ ಖಮೇನಿ ಬರೆದುಕೊಂಡಿದ್ದರು. ಅದಾದ ಕೆಲವೇ ಗಂಟೆಗಳಲ್ಲಿ ಅವರ 'ಎಕ್ಸ್' ಖಾತೆಯನ್ನು ಎಲಾನ್ ಮಸ್ಕ್ ಕಂಪನಿ ಅಮಾನತುಗೊಳಿಸಿದೆ.

{ **ದೇವೇಂದ್ರ ಫಡ್ನವೀಸ್** } ಮಹಾರಾಷ್ಟ್ರ ಡಿಸಿಎಂ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯನ್ನು ಬಿಜೆಪಿ ಏಕಾಂಗಿಯಾಗಿ ಗೆಲ್ಲಲಾರದು. ವಾಸ್ತವವನ್ನು ಅರಿತಿದ್ದೇವೆ. ಶಿವಸೇನೆ(ಶಿಂದೆ ಬಣ) ಮತ್ತು ಎನ್‌ಸಿಪಿ(ಅಜಿತ್ ಬಣ) ಒಟ್ಟಾದ ಮಹಾಯುತಿ ಮೈತ್ರಿಕೂಟವಾಗಿ ಯಶಸ್ಸು ಕಾಣಲಿದೆ. ಆದರೆ, ಹೆಚ್ಚು ಸ್ಥಾನ ಗಳಿಸಿದ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಅಧಿಕ ಮತ ಪ್ರಮಾಣವೂ ಬಿಜೆಪಿಗೆ ದೊರೆಯಲಿದೆ.

ವಡೋದರಾದಲ್ಲಿ ಟಾಟಾ ವಿಮಾನ ತಯಾರಿಕೆ ಘಟಕ | ಮೋದಿ, ಸ್ಪೇನ್ ಪ್ರಧಾನಿ ಪೆಡ್ರೊ ಚಾಲನೆ | ದೇಶದ ಮೊದಲ ಖಾಸಗಿ ಯುದ್ಧವಿಮಾನ ಘಟಕ

ಭಾರತದಲ್ಲಿ ಏರ್‌ಬಸ್ ತಯಾರಿ-ರಫ್ತು: ಮೋದಿ

ವಡೋದರಾ: ಏರ್‌ಬಸ್ ಮೊದಲಾದ ಯುದ್ಧ ವಿಮಾನಗಳನ್ನು ಈವರೆಗೂ ಬೇರೆ ದೇಶಗಳಿಂದ ತರಿಸಿಕೊಳ್ಳುತ್ತಿದ್ದ ಭಾರತ, ಇನ್ನು ಮುಂದೆ ಏರ್‌ಬಸ್ ಸಿ-295 ಯುದ್ಧ ವಿಮಾನಗಳನ್ನು ಸ್ವತಃ ತಯಾರಿಸಲಿದೆ. ಅಷ್ಟೇ ಅಲ್ಲ, ವಿವಿಧ ದೇಶಗಳಿಗೂ ರಫ್ತು ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೆಮ್ಮೆಯಿಂದ ಹೇಳಿದರು.

ಗುಜರಾತ್ ರಾಜ್ಯದ ವಡೋದರಾ ನಗರದಲ್ಲಿ ಸ್ಪೇನ್ ದೇಶದ ಸಹಯೋಗದಲ್ಲಿ ಹೊಸದಾಗಿ ಸ್ಥಾಪನೆಗೊಂಡಿರುವ 'ಟಾಟಾ ಏರ್ ಬಸ್ ತಯಾರಿಕಾ ಘಟಕ'ವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಜತೆಗೂಡಿ ಸೋಮವಾರ ಬೆಳಗ್ಗೆ ಉದ್ಘಾಟಿಸಿದರು.

ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಸಿ-295 ಸೌಲಭ್ಯ ನವ ಭಾರತದ ಕೆಲಸದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂದರು. ವಡೋದರಾದ ಹೊರವಲಯದಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿ. ಕ್ಯಾಂಪಸ್‌ನಲ್ಲಿ ಸಿ-295 ವಿಮಾನ ತಯಾರಿಕಾ ಸಂಕೀರ್ಣ ಸ್ಥಾಪನೆಯಾಗಿದೆ.

ನಾನು ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ವಡೋದರಾದಲ್ಲಿ ರೈಲು ಬೋಗಿಗಳ ತಯಾರಿಕೆ ಕಾರ್ಖಾನೆ ಸ್ಥಾಪಿಸಲು ನಿರ್ಧರಿಸಲಾಗಿತ್ತು. ಇಂದು ಆ ಕಾರ್ಖಾನೆಯಲ್ಲಿ ತಯಾರಾದ ಮೆಟ್ರೋ ಕೋಚ್‌ಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಭವಿಷ್ಯದಲ್ಲಿ ವಡೋದರಾದಲ್ಲಿನ ಸಿ-295

ಕಾರ್ಖಾನೆಯಲ್ಲಿ ತಯಾರಾದ ವಿಮಾನಗಳನ್ನು ಬೇರೆ ದೇಶಗಳಿಗೂ ರಫ್ತು ಮಾಡುವ ಭರವಸೆಯಿದೆ ಎಂದರು.

ಸ್ಪೇನ್ ಪ್ರಧಾನಿ ಸ್ಯಾಂಚೆಜ್ ಮಾತನಾಡಿ, ಅತ್ಯಾಧುನಿಕ ಕೈಗಾರಿಕಾ ಸೌಕರ್ಯವನ್ನಷ್ಟೇ ಉದ್ಘಾಟಿಸುತ್ತಿಲ್ಲ, ಸ್ಪೇನ್‌ನ ಏರ್‌ಬಸ್ ಕಂಪನಿ ಮತ್ತು ಭಾರತದ ಟಾಟಾ ಸಮೂಹದ ನಡುವಿನ ಈ ಪಾಲುದಾರಿಕೆ ಭಾರತೀಯ ಏರೋಸ್ಪೇಸ್ ಉದ್ಯಮದ ಪ್ರಗತಿಗೆ ಮಹತ್ವದ ಕೊಡುಗೆ ನೀಡಲಿದೆ. ಅಲ್ಲದೇ ಇತರ ಯುರೋಪಿಯನ್ ಕಂಪನಿಗಳ ಆಗಮನಕ್ಕೆ ಹೊಸ ಬಾಗಿಲು ತೆರೆಯುತ್ತದೆ ಎಂದರು.

ವಡೋದರಾದಲ್ಲಿನ ಹೊಸ ಕೈಗಾರಿಕಾ ತಾಣದ ಪ್ರಾಮುಖ್ಯತೆಯನ್ನು ಮೆಚ್ಚಿಕೊಂಡ ಪ್ರಧಾನಿ ಪೆಡ್ರೊ, ಟಾಟಾ ಸಮೂಹ ದಿಗ್ಗಜರಲ್ಲೇ ದಿಗ್ಗಜ ಕೈಗಾರಿಕಾ ಸಂಸ್ಥೆಯಾಗಿದೆ ಎಂದು ಬಣ್ಣಿಸಿದರು.

ಟಾಟಾ ಬಹುಶಃ ಭಾರತೀಯ ಕೈಗಾರಿಕಾ ಕ್ಷೇತ್ರದ ಬಲವಾಗಿದೆ. ಇದರ ಉತ್ಪನ್ನಗಳು ಮತ್ತು ಸೇವೆಗಳು ಗ್ರಹದ ಮೇಲಿನ ಪ್ರತಿಯೊಂದು ದೇಶದಲ್ಲಿಯೂ ಇವೆ. ಸ್ಪೇನ್‌ಗಾಗಿ ಏರ್‌ಬಸ್ ಒಕ್ಕೂಟದ ಅವಿಭಾಜ್ಯ ಅಂಗವಾಗಿರುವುದರಿಂದ, ಅದು ಪ್ರತಿನಿಧಿಸುವ ಮೌಲ್ಯಗಳನ್ನು ರಕ್ಷಿಸುತ್ತದೆ. ಇದು ಯುರೋಪಿನ ಸಹಕಾರ, ಆಧುನಿಕತೆ ಹಾಗೂ ಪ್ರಗತಿಯನ್ನು ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು. ಇದಕ್ಕೂ ಮುನ್ನಾ ಉಭಯ ದೇಶಗಳ ಪ್ರಧಾನಿಗಳು ವಡೋದರಾದಲ್ಲಿ ಬೃಹತ್ ರೋಡ್ ಶೋ ನಡೆಸಿದರು. ವಿಮಾನ ನಿಲ್ದಾಣದಿಂದ ಟಾಟಾ ವಿಮಾನ ತಯಾರಿಕಾ ಸಂಕೀರ್ಣದವರೆಗೂ 2.5 ಕಿ.ಮೀ ದೂರ ತೆರೆದ ವಾಹನದಲ್ಲಿ ಇಬ್ಬರೂ ಪ್ರಧಾನಿಗಳು ಮೆರವಣಿಗೆಯಲ್ಲಿ ಸಾಗಿದರು. ಮಾರ್ಗದ ಎರಡೂ ಬದಿ ನಿಂತಿದ್ದ ಸಾವಿರಾರು ಜನರು ಹರ್ಷೋದ್ಗಾರ ಮತ್ತು ಘೋಷಣೆಗಳೊಂದಿಗೆ ಇಬ್ಬರೂ ಗಣ್ಯರನ್ನು ಸ್ವಾಗತಿಸಿದರು. ಭಾರತದ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸುವ ವಿವಿಧ ಕಲಾವಿದರ ಪ್ರದರ್ಶನ ಆಕರ್ಷಣೀಯವಾಗಿತ್ತು. ವಿಮಾನ ತಯಾರಿಕೆ ಸಂಕೀರ್ಣ ಉದ್ಘಾಟನೆಯ ನಂತರ ಉಭಯ ನಾಯಕರು ದ್ವಿಪಕ್ಷೀಯ ಸಭೆ ನಡೆಸಲು ಐತಿಹಾಸಿಕ ಲಕ್ಷ್ಮಿ ವಿಲಾಸ್ ಅರಮನೆಗೆ ತೆರಳಿದರು.

ಆತ್ಮನಿರ್ಭರ ಭಾರತದಲ್ಲಿ 40 ವಿಮಾನಗಳ ತಯಾರಿಕೆ!

2021ರ ಸೆಪ್ಟೆಂಬರ್‌ನಲ್ಲಿ ಭಾರತ ಸಿ-295 ಶ್ರೇಣಿಯ 56 ಯುದ್ಧ ವಿಮಾನಗಳನ್ನು ಸೇರ್ಪಡೆಗೊಳಿಸಲು ಏರ್‌ಬಸ್ ಡಿಫೆನ್ಸ್ ಮತ್ತು ಸ್ಪೇನ್ ಸಂಸ್ಥೆ ಜತೆ 21 ಸಾವಿರ ಕೋಟಿ ರು.ಗಳ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದದ ಪ್ರಕಾರ ಸ್ಪೇನ್ ಮುಂದಿನ 4 ವರ್ಷಗಳಲ್ಲಿ 16 ಯುದ್ಧ ವಿಮಾನಗಳನ್ನು ರವಾನಿಸಲಿದೆ. ಉಳಿದ 40 ವಿಮಾನಗಳನ್ನು ಎರಡು ಕಂಪನಿಗಳ ನಡುವಿನ ಒಪ್ಪಂದದ ಭಾಗವಾಗಿ ಈಗ ಉದ್ಘಾಟಿಸಲಾದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ ಘಟಕದಲ್ಲೇ ತಯಾರಿಸಲಾಗುತ್ತದೆ.

2026ಕ್ಕೆ ಮೊದಲ ವಿಮಾನ: ಚಂದ್ರಶೇಖರನ್

ಭಾರತ ಮತ್ತು ಸ್ಪೇನ್ ಜತೆಗೂಡಿ ಗುಜರಾತ್‌ನ ವಡೋದರಾದಲ್ಲಿ ಸ್ಥಾಪಿಸಿರುವ ಏರ್‌ಬಸ್ ಸಿ-295 ವಿಮಾನಗಳ ತಯಾರಿಕಾ ಘಟಕವಾದ 'ಟಾಟಾ ಏರ್‌ಕ್ರಾಫ್ಟ್ ಕಾಂಪ್ಲೆಕ್ಸ್' ದೇಶದ ಮೊದಲ ಖಾಸಗಿ ಮಿಲಿಟರಿ ವಿಮಾನ ತಯಾರಿಕೆ ಘಟಕವಾಗಿದೆ. ಈಗಿನಿಂದಲೇ ಸಿ-295 ಯುದ್ಧ ವಿಮಾನಗಳ ತಯಾರಿಕೆ ಆರಂಭಗೊಳ್ಳಲಿದೆ. ಮೊದಲ ವಿಮಾನವನ್ನು ಎರಡು ವರ್ಷಗಳ ನಂತರ ಹೊರಬಿಡಲಾಗುವುದು. ದೇಶಿಯವಾಗಿ ತಯಾರಿಸಿದ ಮೊದಲ ಇ-295 ವಿಮಾನವನ್ನು ಬಿಡುಗಡೆ ಮಾಡಲಾಗುವುದು ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್.ಚಂದ್ರಶೇಖರನ್ ಹೇಳಿದರು.

ಸೇನಾ ವಾಹನ ಮೇಲೆ ದಾಳಿ ಮಾಡಿದ 3 ಉಗ್ರರು | ಮೃತ ಉಗ್ರರ ದೇಹದ ಬಳಿ ಭಾರೀ ಶಸ್ತ್ರಾಸ್ತ್ರ ವಶ | ಅಡಗಿದವರಿಗಾಗಿ ಶೋಧ ಮುಂದುವರಿಕೆ

ಅಖ್ನೂರ್‌ನಲ್ಲಿ 3 ಉಗ್ರರ ಕೊಂದ ಸೇನೆ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಉಗ್ರರು ಭಯೋತ್ಪಾದನಾ ಚಟುವಟಿಕೆ ಹೆಚ್ಚಿಸುವ ಯತ್ನವಾಗಿ ಅಖ್ನೂರ್ ವಲಯದಲ್ಲಿ ಸೇನಾ ವಾಹನದ ಮೇಲೆ ಮತ್ತೊಮ್ಮೆ ದಾಳಿ ಮಾಡಿದ್ದಾರೆ. ಆದರೆ, ಭದ್ರತಾ ಪಡೆಗಳು ಪ್ರಬಲ ಪ್ರತಿದಾಳಿ ನಡೆಸಿ ಮೂವರೂ ಉಗ್ರರನ್ನು ಹೊಡೆದುರುಳಿಸಿವೆ. ಮೃತ ಉಗ್ರರ ದೇಹದ ಬಳಿಯಿಂದ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಇನ್ನೂ ಕೆಲ ಉಗ್ರರು ಅರಣ್ಯದಲ್ಲಿ ಅಡಗಿರಬಹುದಾದ ಶಂಕೆಯ ಮೇರೆಗೆ ಪ್ರದೇಶದಲ್ಲಿ ಶೋಧ ಕಾರ್ಯ ಮುಂದುವರಿಸಲಾಗಿದೆ.

ಪಾಕಿಸ್ತಾನದ ಕಡೆಯಿಂದ ಬಂದು ದೇಶದೊಳಕ್ಕೆ ನುಸುಳಿದ್ದ ಉಗ್ರರು, ಭಾರೀ ಪ್ರಮಾಣದಲ್ಲಿ ಶಸ್ತ್ರಸಜ್ಜಿತರಾಗಿದ್ದರು. ಅಖ್ನೂರ್‌ನ ಬತ್ತಾಲ್ ಪ್ರದೇಶದಲ್ಲಿ ಸೋಮವಾರ ಬೆಳಗ್ಗೆ ಸಂಚರಿಸುತ್ತಿದ್ದ ಸೇನಾ ವಾಹನದ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದರು. ಬೆಳಗ್ಗೆ 6.50ರ ವೇಳೆ ಮೂವರು ಉಗ್ರರು ಸೇನಾ ವಾಹನ ಮೇಲೆ ಹಲವು ಸುತ್ತು ಗುಂಡು ಹಾರಿಸಿದರು. ಸೈನಿಕರು ಪ್ರತಿದಾಳಿ ನಡೆಸಿದಾಗ ಉಗ್ರರು ಸಮೀಪದ ಅರಣ್ಯದಲ್ಲಿ ಅಡಗಿಕೊಂಡರು. ಬಳಿಕ ಹೆಚ್ಚಿನ ಪಡೆಗಳನ್ನು ಸ್ಥಳಕ್ಕೆ ಕರೆಸಿಕೊಂಡು ತೀವ್ರ ಶೋಧ ಕಾರ್ಯ ಆರಂಭಿಸಲಾಯಿತು. ಆ ಬಳಿಕ ನಡೆದ ಚಕಮಕಿಯಲ್ಲಿ ಸೈನಿಕರ ಗುಂಡಿಗೆ ಮೂವರೂ ಉಗ್ರರು ಹತರಾದರು. ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಸೇನಾ ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರರ ಕಂಡ ಗ್ರಾಮಸ್ಥರು!

ಇದಕ್ಕೂ ಮುನ್ನ, ಸಮೀಪದ ಗ್ರಾಮಗಳ ಜನರು, ಕೆಲವು ಭಯೋತ್ಪಾದಕರನ್ನು ಖೌನರ್ ಭಟ್ಟಾಲ್ ಪ್ರದೇಶದ ಅಸ್ಸಾನ್ ದೇವಾಲಯದ ಬಳಿ ನೋಡಿದ್ದಾಗಿ ಮಾಹಿತಿ ನೀಡಿದ್ದರು. ಸೇನೆಯ ಆಂಬ್ಯುಲೆನ್ಸ್ ವಾಹನ ಹಾದು ಹೋಗುತ್ತಿದ್ದಾಗ ಗ್ರಾಮದಲ್ಲಿ ಗುಂಡಿನ ಶಬ್ದ ಕೇಳಿಬಂದಿತು. ಅಖ್ನೂರ್ ಪ್ರದೇಶದಲ್ಲಿ ಮೂವರು ಉಗ್ರರು ಅವಿತಿರುವ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ತಕ್ಷಣವೇ ಸ್ಥಳಕ್ಕೆ ತೆರಳಿ ಶೋಧ ಕಾರ್ಯಾಚರಣೆಯಲ್ಲಿ ತೊಡಗಿದವು.

ಮಹಾ ಚುನಾವಣೆ; ಸಿಎಂ, ಡಿಸಿಎಂ ನಾಮಪತ್ರ

ಮುಂಬೈ: ನ.20ರಂದು ಒಂದೇ ಹಂತದಲ್ಲಿ ನಡೆಯಲಿರುವ 288 ಕ್ಷೇತ್ರಗಳ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ನಡೆದಿದ್ದು, ಮುಖ್ಯಮಂತ್ರಿ ಹಾಗೂ ಶಿವಸೇನೆ(ಶಿಂದೆ ಬಣ) ಮುಖ್ಯಸ್ಥ ಏಕನಾಥ ಶಿಂದೆ ಅವರು ಕೊಪ್ರಿ ಪಂಚ್‌ಪಖ್ಡಿ ವಿಧಾನಸಭಾ ಕ್ಷೇತ್ರದಿಂದ ಸೋಮವಾರ ಉಮೇದುವಾರಿಕೆ ಸಲ್ಲಿಸಿದ್ದಾರೆ. ಅದಕ್ಕೂ ಮುನ್ನ ಬೃಹತ್ ರೋಡ್ ಶೋ ನಡೆಸಿದರು. ಈ ಕ್ಷೇತ್ರದಲ್ಲಿ ಶಿಂದೆ ಅವರಿಗೆ ಒಂದು ಕಾಲದ ಮಿತ್ರ, ಶಿವಸೇನೆ (ಉದ್ಧವ್ ಬಣ) ನಾಯಕ ಕೇಡಾ ದಿಘೆ ಪ್ರತಿಸ್ಪರ್ಧಿಯಾಗಿದ್ದಾರೆ. ಈ ಕ್ಷೇತ್ರ ದಿಂದಲೇ ಶಿಂದೆ 2019ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಇದೇ ವೇಳೆ, ಉಪ ಮುಖ್ಯಮಂತ್ರಿ, ಎನ್‌ಸಿಪಿ(ಅಜಿತ್ ಬಣ) ನಾಯಕ ಅಜಿತ್ ಪವಾರ್ ಅವರೂ ಬಾರಾಮತಿ ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು.

ವರ್ಲಿಯಲ್ಲಿ ಭಾರೀ ಪೈಪೋಟಿ: ಈ ಮಧ್ಯೆ, ವರ್ಲಿ ಕ್ಷೇತ್ರದಲ್ಲಿ ಯುವ ನಾಯಕರ ಪೈಪೋಟಿ ನಡೆದಿದೆ. ಶಿವಸೇನೆ(ಉದ್ಧವ್ ಬಣ) ನಾಯಕ ಆದಿತ್ಯ ಠಾಕ್ರೆ ವಿರುದ್ಧ ಶಿವಸೇನೆ(ಶಿಂದೆ ಬಣ) ಮುಖಂಡ ಮಿಲಿಂದ್ ದಿಯೋರಾ ಕಣಕ್ಕೆ ಇಳಿದಿದ್ದಾರೆ. ರಾಜ್ಯಸಭಾ ಸಂಸದರಾಗಿರುವ ದಿಯೋರಾ ಈ ವರ್ಷದ ಆರಂಭದಲ್ಲಿ ಕಾಂಗ್ರೆಸ್ ತೊರೆದು ಏಕನಾಥ್ ಶಿಂದೆ ನೇತೃತ್ವದ ಶಿವಸೇನೆ ಸೇರಿದರು. ರಾಜ್ ಠಾಕ್ರೆ ನೇತೃತ್ವದ 'ಮಹಾರಾಷ್ಟ್ರ ನವನಿರ್ಮಾಣ ಸೇನೆ'(ಎಂಎನ್‌ಎಸ್) ಕೂಡಾ ವರ್ಲಿ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿದ್ದು, ಸಂದೀಪ್ ದೇಶ ಪಾಂಡೆಯನ್ನು ಕಣಕ್ಕಿಳಿಸಿದೆ. ಬಿಜೆಪಿ ಸಂಸದ ನಾರಾಯಣ್ ರಾಣೆ ಅವರ ಪುತ್ರ ನಿಲೇಶ್ ರಾಣೆ ಅವರನ್ನು ಕೂಡಲ್ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಮುಂಬೈನ ಅಂಧೇರಿ ಪೂರ್ವ ಕ್ಷೇತ್ರಕ್ಕೆ ಬಿಜೆಪಿಯ ಮಾಜಿ ನಾಯಕ ಮುರ್ಜಿ ಪಟೇಲ್‌ರನ್ನು ಶಿವಸೇನೆ ಅಭ್ಯರ್ಥಿಯಾಗಿಸಿದೆ.

ಅಕ್ಟೋಬರ್ 'ಹಿಂದೂ ಪರಂಪರೆ ಮಾಸ'

ಸಿಡ್ನಿ/ವಾಷಿಂಗ್ಟನ್: ಮಹತ್ವದ ಬೆಳವಣಿಗೆಯಲ್ಲಿ ಆಸ್ಟ್ರೇಲಿಯ ಸರಕಾರ ಅಕ್ಟೋಬರ್ ತಿಂಗಳನ್ನು 'ಹಿಂದೂ ಪರಂಪರೆ ಮಾಸ' ಎಂದು ಘೋಷಣೆ ಮಾಡಿದೆ. ಆಸ್ಟ್ರೇಲಿಯ ಸಂಸದ ಆಂಡ್ರ್ಯೂ ಚಾರ್ಲ್ಟನ್ ಅಕ್ಟೋಬರ್ ತಿಂಗಳನ್ನು ಹಿಂದೂ ಪರಂಪರೆ ಮಾಸ ಎಂದು ಘೋಷಿಸಿದ್ದು ಇದರ ವಿಡಿಯೋ ಜಾಲತಾಣದಲ್ಲಿ ವೈರಲ್ ಆಗಿದೆ. ಆಸ್ಟ್ರೇಲಿಯದಲ್ಲಿ ನೆಲೆಸಿರುವ ಹಿಂದೂಗಳು ಪ್ರತಿವರ್ಷ ದೀಪಾವಳಿಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಆಸ್ಟ್ರೇಲಿಯ ದೇಶ ಹಿಂದೂ ತತ್ವಶಾಸ್ತ್ರ, ಮೌಲ್ಯಗಳು ಮತ್ತು ಆಚರಣೆಗಳ ಶ್ರೀಮಂತಿಕೆಯನ್ನು ಆಚರಿಸುತ್ತದೆ. ಪ್ರಪಂಚದ ಅತ್ಯಂತ ಹಳೆಯ ಧರ್ಮಗಳಲ್ಲಿ ಒಂದನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಪ್ರೋತ್ಸಾಹಿಸುತ್ತದೆ ಎಂದು ಆಂಡ್ರ್ಯೂ ಹೇಳಿದ್ದಾರೆ.

ಶ್ವೇತಭವನದಲ್ಲೂ ದೀಪಾವಳಿ: ಅಮೆರಿಕ ಅಧ್ಯಕ್ಷ ಜೋ ಬೈಡನ್ ಅನಿವಾಸಿ ಭಾರತೀಯರ ಜತೆಗೂಡಿ ಶ್ವೇತಭವನದಲ್ಲಿ ಸೋಮವಾರ ಸಂಜೆ ದೀಪಾವಳಿ ಆಚರಿಸಿದರು. ಅಧ್ಯಕ್ಷರು ಭಾಷಣಕ್ಕೂ ಮುನ್ನಾ ಬ್ಲೂ ರೂಮ್‌ನಲ್ಲಿ ಸಂಪ್ರದಾಯದಂತೆ ದೀಪ ಬೆಳಗಿಸಿದರು. ಇದು ಅಧ್ಯಕ್ಷ ಬೈಡನ್ ಅವರ ಶ್ವೇತಭವನದಲ್ಲಿನ ಕೊನೆ ದೀಪಾವಳಿ ಆಚರಣೆಯಾಗಿದೆ. ಇದೇ ವೇಳೆ ನಾಸಾ ಗಗನಯಾತ್ರಿ, ಭಾರತ ಮೂಲದ ಸುನಿತಾ ವಿಲಿಯಮ್ಸ್ ಅವರ ವೀಡಿಯೊ ಸಂದೇಶವೂ ಪ್ರಸಾರವಾಗಿದೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದಲೇ ವಿಡಿಯೊ ಶುಭಾಶಯ ರವಾನಿಸಿದ್ದಾರೆ ಎಂದು ಶ್ವೇತಭವನ ತಿಳಿಸಿದೆ.

ಪ್ರಿಯಾಂಕಾ ವಾದ್ರಾ ಬಿರುಸಿನ ಪ್ರಚಾರ

ವಯನಾಡು: ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ವಾದ್ರಾ ಅವರು ಸೋಮವಾರ ಚುನಾವಣಾ ಪ್ರಚಾರ ಆರಂಭಿಸಿದರು. ಮಂಗಳವಾರವೂ

ಅವರ ಪ್ರಚಾರ ಕಾರ್ಯ ಮುಂದುವರಿಯಲಿದೆ.ನಾಮಪತ್ರ ಪರಿಶೀಲನೆ ನಡೆದು, ಪ್ರಿಯಾಂಕಾ ನಾಮಪತ್ರ ಸ್ವೀಕೃತವಾಗಿದೆ. ಈ ವಿಚಾರವಾಗಿ ಬಿಜೆಪಿ ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನೆ ಮಾಡಲಾರಂಭಿಸಿದೆ.ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರವನ್ನು ಚುನಾವಣಾ ಆಯೋಗ ಹೇಗೆ ಸ್ವೀಕೃತಗೊಳಿಸಿದೆ. ಅವರು, ಸಲ್ಲಿಸಿರುವ ಪ್ರಮಾಣಪತ್ರ ಅಪೂರ್ಣವಾಗಿದೆ. ಅದರಲ್ಲಿ ಅವರ ಆಸ್ತಿ ವಿವರಗಳನ್ನು ಪೂರ್ಣವಾಗಿ ನೀಡಲಾಗಿಲ್ಲ. ಅಲ್ಲದೇ, ಪತಿ ರಾಬರ್ಟ್ ವಾದ್ರಾ, ಅವರ ಒಡೆತನದ ಆಸ್ತಿಗಳ ವಿವರವನ್ನೂ ನೀಡಲಾಗಿಲ್ಲ. ಜತೆಗೆ, ನೆಹರು ಕುಟುಂಬದ ಒಡೆತನಕ್ಕೆ ಸೇರಿದ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ಪ್ರಕರಣದಲ್ಲಿ ಪ್ರಿಯಾಂಕಾ ವಾದ್ರಾ ಅವರ ಹೆಸರೂ ಸೇರಿದೆ. ಆ ವಿಚಾರವನ್ನೂ ಅವರು ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ. ಇಂಥ ಅಪೂರ್ಣ ಪ್ರಮಾಣ ಪತ್ರವನ್ನು ಒಳಗೊಂಡಿರುವ ನಾಮಪತ್ರವನ್ನು ಚುನಾವಣಾ ಆಯೋಗ ಸ್ವೀಕರಿಸಿದ್ದಾದರೂ ಹೇಗೆ? ಎಂದು ಬಿಜೆಪಿ ನಾಯಕ ಅಮಿತ್ ಮಾಳವೀಯ ಪ್ರಶ್ನೆ ಮಾಡಿದ್ದಾರೆ.

ಹೇಮಂತ್ ವಿರುದ್ಧ ಆರೆಸ್ಸೆಸ್ ಕಾರ್ಯಕರ್ತ

ರಾಂಚಿ: ಜಾರ್ಖಂಡ್ ವಿಧಾನಸಭೆ ಚುನಾವಣೆಯಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) ಪಕ್ಷದ ಮುಖಂಡ, ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು

ಬರ್ಹೈತ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದು, ಅವರ ವಿರುದ್ಧ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ಗಮಾಲಿಯಲ್ ಹೆಮ್‌ಬ್ರಮ್ ಅವರನ್ನು ಬಿಜೆಪಿ ಈ ಬಾರಿ ಕಣಕ್ಕಿಳಿಸಿದೆ.

ಗಮಾಲಿಯಲ್ 2019ರಲ್ಲಿ ಇದೇ ಕ್ಷೇತ್ರದಲ್ಲಿ ಆಲ್ ಜಾರ್ಖಂಡ್ ಸ್ಟುಡೆಂಟ್ ಯುನಿಯನ್(ಎಜೆಎಸ್‌ಯು) ಟಿಕೆಟ್‌ನಿಂದ ಸ್ಪರ್ಧಿಸಿ ಕೇವಲ 2,573 ಮತಗಳನ್ನಷ್ಟೇ ಗಳಿಸಿದ್ದರು. ಬರ್ಹೈತ್ ಕ್ಷೇತ್ರ ಹೇಮಂತ್ ಸೊರೇನ್ ಅವರ ಬಿಗಿ ಹಿಡಿತದಲ್ಲಿರುವ ರಾಜಕೀಯ ಕ್ಷೇತ್ರವಾಗಿದೆ. ಇಂಥ ಕ್ಷೇತ್ರದಲ್ಲಿ ಜನರಿಗೆ ಹೆಚ್ಚು ಪರಿಚಿತರೇ ಅಲ್ಲದ ಹೊಸ ಮುಖವನ್ನು ಬಿಜೆಪಿ ಕಣಕ್ಕಿಳಿಸಿರುವುದು ಏಕೆ? ಎಂಬುದೇ ಸದ್ಯ ಜಾರ್ಖಂಡ್‌ನಲ್ಲಿ ಚರ್ಚೆಯ ವಿಷಯವಾಗಿದೆ.

ಹೈದರಾಬಾದ್: ಸಭೆ, ಪ್ರತಿಭಟನೆಗೆ ನಿಷೇಧ

ಹೈದರಾಬಾದ್: ತೆಲಂಗಾಣದ ರಾಜಧಾನಿ ನಗರ ಹೈದರಾಬಾದ್‌ನಲ್ಲಿ ಒಂದು ತಿಂಗಳ ಕಾಲ ಸಾರ್ವಜನಿಕ ಸಭೆಗಳು, ಮೆರವಣಿಗೆ, ಪ್ರತಿಭಟನೆ ಮೊದಲಾದ ಚಟುವಟಿಕೆಗಳನ್ನು ನಿಷೇಧಿಸಿ ಹೈದರಾ



ಬಾದ್ ಪೊಲೀಸರು ಸೋಮವಾರ ಆದೇಶ ಹೊರಡಿಸಿದ್ದಾರೆ.

ಮುತ್ತು-ಹವಳ ವ್ಯಾಪಾರಕ್ಕೆ ಹೆಸರುವಾಸಿಯಾಗಿರುವ ನಗರ ಅ.28ರಿಂದ ನ.28ರವರೆಗೆ ಪೊಲೀಸ್ ಇಲಾಖೆಯಿಂದ ಹಲವು ನಿರ್ಬಂಧಗಳಿಗೆ ಒಳಪಡಲಿದೆ. ಈ ಕುರಿತು ಆದೇಶ ಹೊರಡಿಸಿರುವ ಹೈದರಾಬಾದ್ ಪೊಲೀಸ್ ಆಯುಕ್ತ ಸಿ.ವಿ.ಆನಂದ್, ನಗರದಲ್ಲಿ ಹಲವಾರು ಸಂಘಟನೆಗಳು /ಪಕ್ಷಗಳು ಧರಣಿ ಮತ್ತು ಪ್ರತಿಭಟನೆಗಳನ್ನು ನಡೆಸುವ ಮೂಲಕ ಗಲಭೆ ಸೃಷ್ಟಿಸಲು ಯತ್ನಿಸುತ್ತಿವೆ ಎಂಬ ಮಾಹಿತಿ ವಿಶ್ವಾಸಾರ್ಹ ಮೂಲಗಳಿಂದ ಬಂದಿದೆ. ಹಾಗಾಗಿಯೇ ಮುನ್ನೆಚ್ಚರಿಕೆ ಕ್ರಮ ವಾಗಿ ನಿಷೇಧ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ. ನಗರದಲ್ಲಿ ಕಾನೂನು-ಸುವ್ಯವಸ್ಥೆ ಕಾಯ್ದುಕೊಳ್ಳಲು, ಸಾರ್ವಜನಿಕ ವಲಯದಲ್ಲಿ ಶಾಂತಿ ಕಾಪಾಡಲು 5 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಜನರು ಒಂದೆಡೆ ಸೇರುವಂತಿಲ್ಲ. ಯಾವುದೇ ಭಾಷಣ, ಭಿತ್ತಿಚಿತ್ರಗಳು, ಫಲಕ, ಧ್ವಜ ಮತ್ತು ಎಲೆಕ್ಟ್ರಾನಿಕ್ ಸಂದೇಶ ಫಲಕ ಯಾವುದನ್ನು ಪ್ರದರ್ಶಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ತಿರುಪತಿಯ ಇಸ್ಕಾನ್‌ಗೆ ಬಾಂಬ್ ಬೆದರಿಕೆ ಮೇಲ್

ಅಮರಾವತಿ: ಆಂಧ್ರಪ್ರದೇಶದ ತಿರುಪತಿಯಲ್ಲಿರುವ ಇಸ್ಕಾನ್ ದೇಗುಲಕ್ಕೆ ಸೋಮವಾರ ಮತ್ತೆ ಬಾಂಬ್ ಬೆದರಿಕೆ ಸಂದೇಶ ಬಂದಿದೆ. 3 ದಿನಗಳ ಅಂತರದಲ್ಲಿ 4ನೇ ಬಾರಿಗೆ ಬೆದರಿಕೆ ಇ-ಮೇಲ್ ಬಂದಿದೆ. ಈ ಹಿನ್ನೆಲೆಯಲ್ಲಿ ದೇವಸ್ಥಾನದ ಭದ್ರತೆ ಹೆಚ್ಚಿಸಲಾಗಿದೆ. 'ಪಾಕಿಸ್ತಾನದ ಐಎಸ್‌ಐ ಉಗ್ರರು ಇಸ್ಕಾನ್ ದೇಗುಲವನ್ನು ಸ್ಫೋಟಿಸಲಿದ್ದಾರೆ' ಎಂದು ಇ-ಮೇಲ್‌ನಲ್ಲಿ ಬೆದರಿಕೆ ಹಾಕಲಾಗಿದೆ. ದೇವಸ್ಥಾನದ ಸಿಬ್ಬಂದಿಯ ಇಮೇಲ್ ಖಾತೆಗೆ ಈ ಸಂದೇಶ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳ ದೇವಸ್ಥಾನಕ್ಕೆ ಧಾವಿಸಿ ಶೋಧ ನಡೆಸಿವೆ. ಆದರೆ, ದೇವಸ್ಥಾನದ ಆವರಣದಲ್ಲಿ ಯಾವುದೇ ಸ್ಫೋಟಕ ಸೇರಿದಂತೆ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಇದು ಮತ್ತೊಂದು ಹುಸಿ ಬಾಂಬ್ ಬೆದರಿಕೆಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

28 ಲಕ್ಷ ದೀಪಗಳ ಬೆಳಕಲ್ಲಿ ಕಂಗೊಳಿಸಲಿದೆ ಅಯೋಧ್ಯೆ

ಅಯೋಧ್ಯೆ: ಉತ್ತರ ಪ್ರದೇಶದಲ್ಲಿನ ಶ್ರೀರಾಮಚಂದ್ರನ ಜನ್ಮಸ್ಥಳ ಅಯೋಧ್ಯೆಯಲ್ಲಿ ಈ ವರ್ಷ ದೀಪಾವಳಿ ಹಬ್ಬ ಆಚರಣೆಗೆ ಭಾರೀ ತಯಾರಿ ನಡೆದಿದೆ. ದೀಪೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ಧತೆ ನಡೆಸಲಾಗುತ್ತಿದೆ. ಈ ಬಾರಿಯ ದೀಪೋತ್ಸವ ಸರಯೂ ನದಿ ದಂಡೆ ಮೇಲೆ ಜರುಗಲಿದೆ. 28 ಲಕ್ಷ ದೀಪಗಳನ್ನು ಬೆಳಗಿಸುವ ಮೂಲಕ ವಿಶ್ವದಾಖಲೆ ಗುರಿ ಇಟ್ಟುಕೊಳ್ಳಲಾಗಿದೆ.

ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆಯ ಬಳಿಕ ಈ ಬಾರಿಯದು ಮೊದಲ ದೀಪಾವಳಿ. ದೇವಾಲಯವು ಪರಿಸರ ಸ್ನೇಹಿ ದೀಪಗಳಿಂದ ಈ ಬಾರಿ ಕಂಗೊಳಿಸಲಿದೆ. ದೀಪದಿಂದಾಗುವ ಕಲೆಗಳು ಹಾಗೂ ಮಸಿಗಳನ್ನು ತಪ್ಪಿಸಲು ವಿಶೇಷವಾಗಿ ಸಿದ್ಧಪಡಿಸಿದ ದೀಪಗಳನ್ನೇ ಬಳಸಲಾಗುತ್ತಿದೆ ಹಾಗೂ ದೀರ್ಘಕಾಲ ಬೆಳಗುವಂತಹ ದೀಪಗಳನ್ನೇ ತಯಾರಿಸಲಾಗಿದೆ. ಈ ಬಾರಿ ಪರಿಸರ ಸಂರಕ್ಷಣೆ ಪ್ರಮುಖವಾಗಿದೆ. ಇಂಗಾಲ ಹೊರಸೂಸುವಿಕೆ ತಗ್ಗಿಸಲು ಮತ್ತು ಮಸಿ ಹಾನಿಯಿಂದ ದೇವಾಲಯವನ್ನು ರಕ್ಷಿಸಲು ವಿಶೇಷ ಮೇಣದ ದೀಪಗಳನ್ನು ಬಳಸಲಾಗುತ್ತದೆ. ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಅ.29ರಿಂದ ನ.1ರ ಮಧ್ಯರಾತ್ರಿವರೆಗೂ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಿದೆ. ಈ ದೀಪಾವಳಿಯಂದು ಅಯೋಧ್ಯೆಯನ್ನು ಕೇವಲ ಧರ್ಮ ಮತ್ತು ನಂಬಿಕೆಯ ಕೇಂದ್ರವನ್ನಾಗಿ ಮಾಡದೆ, ಸ್ವಚ್ಛತೆ ಮತ್ತು ಪರಿಸರ ಪ್ರಜ್ಞೆಯ ಸಂಕೇತವನ್ನಾಗಿ ಮಾಡುವ ಗುರಿಯನ್ನು ದೇವಾಲಯದ ಟ್ರಸ್ಟ್ ಹೊಂದಿದೆ. ಹೂವಿನಿಂದ ರಾಮಮಂದಿರವನ್ನು ವಿಶೇಷವಾಗಿ ಅಲಂಕರಿಸಲಾಗುತ್ತದೆ. ಅದಕ್ಕಾಗಿ ಹಲವಾರು ತಂಡಗಳನ್ನು ನಿಯೋಜಿಸಲಾಗಿದೆ.

ಅಮೆರಿಕದ ರಾಜಕಾರಣಿಗಳತ್ತಲೇ ಕಿವಿಗೊಟ್ಟಿರುವ ಟೆಲಿಕಾಂ ಕಂಪನಿಗಳ ಸಂಚಿನ ಹಿಂದೆ 'ಸಾಲ್ಟ್ ಟೈಫೂನ್' ಹೆಸರಿನ ಗುಂಪಿನ ಕೈವಾಡ?

ಅಮೆರಿಕ ಅಧ್ಯಕ್ಷೀಯ ಚುನಾವಣೆ ಕಣದಲ್ಲಿ ಹ್ಯಾಕಿಂಗ್ ಕಾಟ

ಸೈಬರ್ ದಾಳಿ

ವೆರಿಝೋನ್ ಸೇರಿದಂತೆ ಅಮೆರಿಕದ ದೂರಸಂಪರ್ಕ ಕ್ಷೇತ್ರದ ಪ್ರಮುಖ ಕಂಪನಿಗಳ ಜಾಲದೊಳಗೆ ಚೀನಾ ಹ್ಯಾಕರ್ಸ್ ನುಸುಳಿದ್ದು, ಎಲ್ಲಾ ರಾಜಕೀಯ ಪಕ್ಷಗಳ ಉನ್ನತ ಶ್ರೇಣಿ ರಾಜಕಾರಣಿಗಳನ್ನೇ ಗುರಿಯಾಗಿಸಿಕೊಂಡಿದ್ದಾರೆ. ಅತ್ಯಾಧುನಿಕ ರೀತಿಯ ಈ ಸೈಬರ್ ಕಾರ್ಯಾಚರಣೆ ಅಧ್ಯಕ್ಷೀಯ ಚುನಾವಣೆ ಅಭ್ಯರ್ಥಿಗಳು ಮತ್ತು ಸರಕಾರದ ಹಿರಿಯ ಅಧಿಕಾರಿಗಳ ದೂರವಾಣಿ ದತ್ತಾಂಶಗಳನ್ನು ಕಳವು ಮಾಡುವುದನ್ನೇ ಮುಖ್ಯ ಕಸುಬಾಗಿಸಿಕೊಂಡಿದೆ.

ಯಾವುದೀ 'ಸಾಲ್ಟ್ ಟೈಫೂನ್'?

- ಮೈಕ್ರೋಸಾಫ್ಟ್ ಗುರುತಿಸಿದ ಚೀನಾದ ಹ್ಯಾಕಿಂಗ್ ಗುಂಪು
- ಬೇಹುಗಾರಿಕೆಗೇ ಠಕ್ಕರ್ ಕೊಟ್ಟು ಪ್ರತಿ ಬೇಹುಗಾರಿಕೆ ನಡೆಸುವುದರಲ್ಲಿ ನಿಷ್ಣಾತ ಹವಾಮಾನ ರೀತಿ ನಾಮಕರಣ ಪದ್ಧತಿ ಅನುಸರಿಸಿದ ಮೈಕ್ರೋಸಾಫ್ಟ್:
- ಟೈಫೂನ್
  - ಚೀನಾ ಮೂಲದ ಹ್ಯಾಕರ್
- ಸಾಲ್ಟ್
  - ನಿರ್ದಿಷ್ಟ ಹ್ಯಾಕಿಂಗ್ ಮಾದರಿ

ಇದೇ ಮೊದಲಲ್ಲ...!

- ರಷ್ಯಾದ ಹ್ಯಾಕಿಂಗ್ ಗುಂಪುಗಳಾದ 'ಫ್ಯಾನ್ಸಿ ಬೇರ್' ಮತ್ತು 'ಕೋಝಿ ಬೇರ್' ಈ ಹಿಂದೆ ಡಿಎನ್‌ಸಿ ವ್ಯವಸ್ಥೆಯನ್ನೇ ಭೇದಿಸಿದ್ದವು.
- ಚೀನಾದ ಹ್ಯಾಕಿಂಗ್ ಗುಂಪುಗಳು ಚುನಾವಣಾ ಪ್ರಚಾರದ ಸಿಬ್ಬಂದಿಗಳನ್ನೇ ಗುರಿಯಾಗಿಸಿವೆ.
- ಇರಾನ್‌ನ ಹ್ಯಾಕಿಂಗ್ ಗುಂಪುಗಳಿಂದ ನಿರ್ದಿಷ್ಟ ವ್ಯಕ್ತಿ, ಸಂಸ್ಥೆಯನ್ನು ಗುರಿಯಾಗಿಸಿ ಅಪಪ್ರಚಾರ-ಇ ಮೇಲ್ ಬೆದರಿಕೆ
- ಇರಾನ್‌ನ ಮೂವರು ಕಲಾವಿದರನ್ನು ಬಳಸಿ ಹ್ಯಾಕ್ ಮಾಡಿ ಮಾಹಿತಿ ಸೋರಿಕೆ ಕಾರ್ಯಾಚರಣೆ

ಭದ್ರತೆ ವೈಫಲ್ಯಕ್ಕೆ ಹೊಣೆ?

- ಅಮೆರಿಕದಲ್ಲಿನ ಸೆಲ್‌ಫೋನ್ ಸಂಪರ್ಕ ಜಾಲದಲ್ಲಿನ ಕೆಲ ಸಡಿಲ ನೀತಿ
- ಪ್ರತಿ ಬೇಹುಗಾರಿಕೆ ಚಟುವಟಿಕೆಗಳಿಗೆ ಸರಾಗ ತೆರೆದುಕೊಳ್ಳುವ ಅಪಾಯ
- ಅಮೆರಿಕದ ಸಂಪರ್ಕಜಾಲ ಭೇದಿಸುವ ಮಾರ್ಗಗಳ ರಹಸ್ಯ ಬಯಲು
- ದತ್ತಾಂಶದೊಳಗಿನ ದತ್ತಾಂಶವನ್ನೂ ಭೇದಿಸಬಲ್ಲ ತಂತ್ರಾಂಶದಿಂದ ದೂರವಾಣಿ ಕರೆಗಳ ಮಧ್ಯೆ ಪ್ರವೇಶಿಸಲು ಸಾಧ್ಯ.
- ದತ್ತಾಂಶ ಭೇದಿಸಿದವರ ಬಗ್ಗೆ ಅರಿಯಲಾಗದೇ ಇರುವುದು

"ತಜ್ಞರು ಹೇಳುವ ಪ್ರಕಾರ, ಬೇಹುಗಾರಿಕೆ ವಿರುದ್ಧ ಪ್ರತಿ ಬೇಹುಗಾರಿಕೆ ನಡೆಸುವುದೇ 'ಸಾಲ್ಟ್ ಟೈಫೂನ್' ಕೆಲಸವಾಗಿದೆ ಎಂಬಂತೆ ಕಾಣುತ್ತದೆ. ಇತರೆ ಹ್ಯಾಕಿಂಗ್ ಗುಂಪುಗಳಿಗಾದರೆ ಹಣ, ಕಂಪನಿಗಳ ಮಹತ್ವದ ಮಾಹಿತಿ, ಇತರೆ ರಹಸ್ಯ ಸಂಗತಿ ಕದಿಯುವುದಷ್ಟೇ ಮುಖ್ಯ. ಆದರೆ, ಸಾಲ್ಟ್ ಟೈಫೂನ್ ನಡೆ ಬಲು ಭಿನ್ನ.

"ಅಮೆರಿಕದಂತಹ ತಂತ್ರಾಂಶ ಆಧಾರಿತ ದೇಶದಲ್ಲೇ ಸೆಲ್‌ಫೋನ್ ಮತ್ತು ದತ್ತಾಂಶ ಜಾಲವನ್ನು ಹ್ಯಾಕರ್ಸ್‌ಗಳು ಸರಾಗ ಭೇದಿಸಬಲ್ಲರು ಎಂಬುದೇ ರಾಷ್ಟ್ರೀಯ ಭದ್ರತಾ ಏಜೆನ್ಸಿ ಅಧಿಕಾರಿಗಳ ನಿದ್ದೆಗೆಡಿಸಿದೆ. ಇದು ಚೀನಾದಂತಹ ವಿರೋಧಿ ದೇಶಗಳಿಗೆ ಈ ಅಮೂಲ್ಯ ದತ್ತಾಂಶಗಳು ಗುಪ್ತಚರ ಚಟುವಟಿಕೆ ನಡೆಸಲು ಶಕ್ತಿ ತುಂಬುತ್ತವೆ.

ಸಮಾಚಾರ ಸಣ್ಣದಲ್ಲ

ವರ್ಗಾವಣೆಯಾದ ಶಿಕ್ಷಕರಿಗೆ ಬೀಳ್ಕೊಡುಗೆ

ಮುದಗಲ್: ವರ್ಗಾವಣೆಯಾದ ಶಿಕ್ಷಕರಿಗೆ ಪಟ್ಟಣ ಸಮೀಪದ ಹೂನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ರಾಮತ್ನಾಳ ಗ್ರಾಮದಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ರಾಮತ್ನಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 18 ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿ ಬೇರೆ ಶಾಲೆಗೆ ವರ್ಗಾವಣೆಯಾದ ಶಿಕ್ಷಕ ರಾಜು ನಾಯ್ಕ್ ರವರಿಗೆ ಗ್ರಾಮಸ್ಥರು ಹಾಗೂ ಕರುನಾಡ ವಿಜಯ ಸೇನೆ ಸಂಘಟನೆ ವತಿಯಿಂದ ಆತ್ಮೀಯವಾಗಿ ಸನ್ಮಾನ ಮಾಡಿ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಬನ್ನಿಗೋಳ ವಲಯ ಶಿಕ್ಷಣ ಸಂಯೋಜಕ ರುದ್ರಮನಿ ಗೊರೇಬಾಳ, ಮುಖ್ಯ ಶಿಕ್ಷಕರಾದ ಆಮರಪ್ಪ, ಆಮರಪ್ಪ ತುರಡಗಿ, ಸದಾ ನಂದಗೌಡ ಆರ್ಯಭೋಗಾಪೂರು, ಜಗದೀಶ ಬ್ಯಾಲಿಹಾಳ,ಅಮರಪ್ಪ ಹೂನೂರು ಹಾಗೂ ಕರುನಾಡ ವಿಜಯ ಸೇನೆ ಅಧ್ಯಕ್ಷ ಸಂಗನಗೌಡ ಪಾಟೀಲ್, ಶೇಖರ ನಾಯಕ, ವಿರೇಶ ಹರಳಳ್ಳಿ, ರಮೇಶ ಇಟಗಿ,ಮಂಜುನಾಥ ಮಾದರ, ಅಂದಪ್ಪ ನಾಯಕ, ಶರಣಗೌಡ ಪಾಟೀಲ್, ನಾಗರಾಜ ಮಡಿವಾಳರ, ಸೇರಿದಂತೆ ರಾಮತ್ನಾಳ ಗ್ರಾಮಸ್ಥರು ಉಪಸ್ಥಿತರಿದ್ದರು.

ಸುರೇಶ ರಾಜ್ಯ ಮಟ್ಟಕ್ಕೆ ಆಯ್ಕೆ

ಮುದಗಲ್: ಇಂದಿರಾಗಾಂಧಿ ವಸತಿ ಶಾಲೆಯ ವಿದ್ಯಾರ್ಥಿಯಾದ ಸುರೇಶ ಕಾಶಿನಾಥ ರಾಯಚೂರಿನಲ್ಲಿ ನಡೆದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ, 17 ವಯೋಮಿತಿ ವಿಭಾಗದ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಈ ಸಾಧನೆ ಶಾಲೆಯ ಕೀರ್ತಿಯನ್ನು ಇನ್ನಷ್ಟು ಎತ್ತರಕ್ಕೆ ಏರಿದೆ. ಈ ವಿದ್ಯಾರ್ಥಿಗೆ ಪ್ರಾಂಶುಪಾಲರಾದ ದುರುಗಪ್ಪ ಕುಣೆಕೆಲ್ಲೂರ್, ಗಣಿತ ಶಿಕ್ಷಕರಾದ ಸೋಮನಾಥ ಪಾಮನಕೆಲ್ಲೂರ್, ದೈಹಿಕ ಶಿಕ್ಷಣ ಶಿಕ್ಷಕ ಅಂಬರೀಶ್, ನಿಲಯಪಾಲಕ ಅಮರೇಶ್ ನಾಯಕ್ ಹಾಗೂ ಸಿಬ್ಬಂದಿವರ್ಗದವರಿಂದ ಹೃದಯಪೂರ್ವಕ ಅಭಿನಂದನೆಗಳು ತಿಳಿಸಿದರು.

ತಹಸೀಲ್ದಾರ್ ಅಶೋಕ ಅಧಿಕಾರ ಸ್ವೀಕಾರ

ಮಸ್ಕಿ: ಪಟ್ಟಣದ ತಹಶೀಲ್ದಾರ್ ಕಚೇರಿಗೆ ನೂತನ ಗ್ರೇಡ್-2 ತಹಸೀಲ್ದಾರ್ ಆಗಿ ಅಧಿಕಾರ ವಹಿಸಿಕೊಂಡ ಅಶೋಕ ಪವಾರ ಅವರಿಗೆ ಉಪ ತಹಶೀಲ್ದಾರ್ ಪ್ರಕಾಶ ಬುಳ್ಳಾ ಅವರು ಸೋಮವಾರ ಸನ್ಮಾನಿಸಿ ಗೌರವಿಸಿ ಬರ ಮಾಡಿಕೊಂಡರು. ಬಳಿಕ ನೂತನ ಗ್ರೇಡ್-2 ತಹಸೀಲ್ದಾರ್ ಅಶೋಕ ಪವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಬ್ಯಾಚಿನ ಕೆಎಎಸ್ ಪರೀಕ್ಷೆಯಲ್ಲಿ ಪಾಸಾಗಿ ಬೆಂಗಳೂರು ಮತ್ತು ರಾಯಚೂರಿನಲ್ಲಿ ಪ್ರೊಫೆಸರ್‌ರಿ ಕೆಲಸವನ್ನು ಮಾಡಿದ್ದೇನೆ, ನೂತನವಾಗಿ ಮಸ್ಕಿ ತಹಶೀಲ್ದಾರ್ ಕಚೇರಿಯಲ್ಲಿ ಗ್ರೇಡ್-2 ತಹಸೀಲ್ದಾರನಾಗಿ ಕೆಲಸಕ್ಕೆ ಅಧಿಕಾರ ವಹಿಸಿದ್ದೇನೆ, ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ, ಸಾರ್ವಜನಿಕರು ಸಹಕಾರ ನೀಡಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಕಂದಾಯ ನಿರೀಕ್ಷಕರು ಶರಣೇಗೌಡ, ಗ್ರಾಮಾಡಳಿತ ಅಧಿಕಾರಿ ಗಂಗಪ್ಪ, ಎಫ್‌ಡಿಎ ಮಮತ್ತಾಜ್ ಬೇಗಂ, ಗುರು, ರವಿ, ಬಸಪ್ಪ ಸೇರಿದಂತೆ ಕಂದಾಯ ಇಲಾಖೆ ಸಿಬ್ಬಂದಿ ವರ್ಗದವರು ಇದ್ದರು.

ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ನ.9 ಕ್ಕೆ

ಮಾನ್ವಿ: ಪಟ್ಟಣದ ಶ್ರೀ ಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ದಶಮಾನೋತ್ಸವ ಅಂಗವಾಗಿ ನ.9 ರಂದು ಬೆ.10ಕ್ಕೆ ಸರಕಾರಿ ಸಾರ್ವಜನಿಕ ಆಸ್ಪತ್ರೆ ಮಾನ್ವಿಯಲ್ಲಿ ಶ್ರೀಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ ಹಾಗೂ ತಾ. ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ಜನಹಿತ ಐ.ಕೇರ್ ಸೆಂಟರ್ ಬೆಂಗಳೂರಿನ ಡಾ.ಕೃಷ್ಣ ಮೋಹನ್ ಜಿಂಕಾ ನೇತೃತ್ವದ ತಜ್ಞ ವೈದ್ಯರ ತಂಡದವರಿಂದ ಬೃಹತ್ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದ್ದು ಸಾರ್ವಜನಿಕರು ತಮ್ಮ ಕಣ್ಣುಗಳನ್ನು ತಜ್ಞ ವೈದ್ಯರಿಂದ ಪರೀಕ್ಷಿಸಿಕೊಂಡು ಅಗತ್ಯವಾದ ಚಿಕಿತ್ಸೆಯನ್ನು ಪಡೆದುಕೊಳ್ಳುವುದಕ್ಕೆ ನೊಂದಾಯಿಸಿಕೊಳ್ಳುವಂತೆ ಸಹಕಾರಿಯ ಸಿಇಒ ವೆಂಕಟೇಶ ಇಲ್ಲೂರು ರವರು ಪ್ರಕಟಣೆಯಲ್ಲಿ ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ ಸಂಖ್ಯೆ 9980034300, 9945228008 ಸಂಪರ್ಕಿಸಿ.

ವಿ+ ಸೋಮವಾರ

{ರಮೇಶ್ ಜಾರಕಿಹೊಳಿ} ಮಾಜಿ ಸಚಿವ

ಯಡಿಯೂರಪ್ಪ ಸರಕಾರ ಬರಲು ಸಿ.ಪಿ ಯೋಗೇಶ್ವರ್ ಕಾರಣ ಎಂಬ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಹೌದು ಈ ಮಾತು ನೂರಕ್ಕೆ ನೂರು ಸತ್ಯ. ಸಮ್ಮಿಶ್ರ ಸರಕಾರ ಕೆಡವಲು ನಾನು ಯೋಗೇಶ್ವರ್ ಹಾಗೂ ಎನ್.ಆರ್ ಸಂತೋಷ್ ಮಹತ್ವದ ಪಾತ್ರ ವಹಿಸಿದ್ದೆವು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಹೋರಾಟ | ಬಸ್ ನಿಲ್ದಾಣದಿಂದ ಬೃಹತ್ ಮೆರವಣಿಗೆ

ಎಸ್ಸಿ ಒಳ ಮೀಸಲಿಗೆ ಪ್ರತಿಭಟನೆ

ಕಾರಟಗಿ: ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ವಿರೋಧಿಸಿ, ಪಟ್ಟಣದಲ್ಲಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಕರ್ತರು ಸೋಮವಾರ ಪ್ರತಿಭಟಿಸಿದರು.

ಇಲ್ಲಿನ ಬಸ್ ನಿಲ್ದಾಣದ ಮುಂದೆ ನವಲಿ ವೃತ್ತ ಜಮಾಯಿಸಿದ ನೂರಾರು ಕಾರ್ಯಕರ್ತರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು. ತಮಟೆ ಬಾರಿಸುವ ಮೂಲಕ ಹೋರಾಟ ಆರಂಭಿಸಿದ ಪ್ರತಿಭಟನಾಕಾರರು, ಮೆರವಣಿಗೆ ಮೂಲಕ ಹಳೇ ಬಸ್ ನಿಲ್ದಾಣದ ಮಾರ್ಗವಾಗಿ ತಹಸೀಲ್ದಾರ್ ಕಚೇರಿಗೆ ತಲುಪಿದರು. ನಂತರ ತಹಸೀಲ್ದಾರ್ ಕಚೇರಿ ಮುಂದೆ ಸಮಾವೇಶಗೊಂಡು, ವರದಿ ಅವೈಜ್ಞಾನಿಕ ಇದ್ದು, ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು ಎಂದು ಆಗ್ರಹಿಸಿದರು. ನ್ಯಾ.ಸದಾಶಿವ ಆಯೋಗವು ವಾಸ್ತವಿಕ ಸಮೀಕ್ಷೆ ನಡೆಸದೆ ಅವೈಜ್ಞಾನಿಕ ಮತ್ತು ಅವಾಸ್ತವಿಕ ವರದಿ ನೀಡಿದೆ. ಇಂಥ ವರದಿತನ್ನು ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು. ನಂತರ ತಹಸೀಲ್ದಾರ್ ಎಂ.ಕುಮಾರಸ್ವಾಮಿ ಮೂಲಕ ಮನವಿ ಸಲ್ಲಿಸಿದರು.

ಮುಖಂಡ ಹನುಮಂತಪ್ಪ ಹಂಚಿನಾಳಕ್ಯಾಂಪ್ ಮಾತನಾಡಿ, ಸದಾಶಿವ ಆಯೋಗದ ವರದಿ ಇಲ್ಲಿ ವರೆಗೆ ಎಲ್ಲೂ ಬಹಿರಂಗವಾಗಿಲ್ಲ. ಮೊದಲು ವರದಿ ಬಹಿರಂಗವಾಗಿ ಚರ್ಚೆಯಾಗಲಿ. ನಂತರ ಒಳ ಮೀಸಲಾತಿ ಜಾರಿಗೆ ತರುವ ಬಗ್ಗೆ ಚರ್ಚೆ ಆಗಬೇಕಿದೆ. ಕೇವಲ ಎರಡು ಜಾತಿಗೆ ನ್ಯಾಯ ಕೊಡಲು ಹೋಗಿ ಇನ್ನುಳಿದ 101 ಜಾತಿಗಳಿಗೆ ಘೋರ ಅನ್ಯಾಯ ಮಾಡುವುದು ಎಷ್ಟು ಸರಿ ಎಂದು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಯ 101 ಸಮುದಾಯಗಳ ಪೈಕಿ 51 ಜಾತಿಗಳು ಗುರುತಿಸಿದ ಅಲೆಮಾರಿ ಮತ್ತು ವಿಮುಕ್ತ ಸಮುದಾಯಗಳಾಗಿವೆ. ವೈಜ್ಞಾನಿಕವಾಗಿ ವಿಶ್ಲೇಷಿಸಲು ಸಾಮಾಜಿಕ, ಶೈಕ್ಷಣಿಕ ಮತ್ತು ಕಾನೂನು ತಜ್ಞರ ಸಮಿತಿ ರಚಿಸಿ, ಆ ಮೂಲಕ ವರದಿ ಪಡೆದು 101 ಜಾತಿಗಳ ಅಹವಾಲು ಮುಕ್ತವಾಗಿ ಆಲಿಸಬೇಕು. ಈ ಸಮುದಾಯಗಳ ಸಂಘ ಸಂಸ್ಥೆಗಳು, ಮುಖಂಡರು ಹಾಗೂ ಚಿಂತಕರೊಂದಿಗೆ ಸಮಾಲೋಚಿಸಿ, ನಂತರ ಪರಿಶಿಷ್ಟ ಜಾತಿ ಒಳ ಮೀಸಲಾತಿ ತೀರ್ಮಾನ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣೆ ಹೋರಾಟ ಸಮಿತಿ ನೇತೃತ್ವದಲ್ಲಿ ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಜಾರಿ ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಬಂಜಾರ ಸಮಾಜದ ಜಿಲ್ಲಾಧ್ಯಕ್ಷ ಪಿ.ಲಕ್ಷ್ಮಣ ನಾಯ್ಕ ಮಾತನಾಡಿ, ಎಸ್ಸಿ ಒಳ ಮೀಸಲಾತಿಗೆ ಸಂಬಂಧಿಸಿ ಕೋರ್ಟ್ ತೀರ್ಪು ನೀಡಿದ್ದು ಸರಿ. ಆದರೆ, ರಾಜ್ಯ ಸರಕಾರ ಒಳ ಮೀಸಲಾತಿ ಕುರಿತಾಗಿ ತನ್ನಲ್ಲಿನ ಅವೈಜ್ಞಾನಿಕ ಹಾಗೂ ಅಸಮರ್ಥನೀಯ ದತ್ತಾಂಶ ಆಧರಿಸಿ ಒಳ ಮೀಸಲಾತಿ ವರ್ಗೀಕರಣಕ್ಕೆ ಮುಂದಾಗಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆ. ಕೇವಲ ಎರಡು ಜಾತಿ ಲೆಕ್ಕದಲ್ಲಿಟ್ಟುಕೊಂಡು 101 ಅತ್ಯಂತ ಹಿಂದುಳಿದ ಜಾತಿಗಳಿಗೆ ಅನ್ಯಾಯ ಮಾಡಲು ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯೆ ದೀಪಾ ರಾಥೋಡ್, ಕರ್ನಾಟಕ ಮೀಸಲಾತಿ ಸಂರಕ್ಷಣ ಒಕ್ಕೂಟದ ತಾಲೂಕಾಧ್ಯಕ್ಷ ರಮೇಶ ಮುಕ್ಕುಂದ, ಕುಮಾರ್ ರಾಥೋಡ, ಶಾಂತ ಪವಾರ, ಶಂಕರ ದೇವಿಕ್ಯಾಂಪ್, ರಮೇಶ ಭೋವಿ ನಾಗನಕಲ್, ಪಂಪಾಪತಿ ಭೋವಿ, ಲಕ್ಷ್ಮಣ ಭೋವಿ, ವೀರೇಶ ನಾಗನಕಲ್, ಹನುಮಂತಪ್ಪ ಬರಗೋರು, ಭೀಮಣ್ಣ ಭೋವಿ ಇದ್ದರು.

> **ಸಚಿವ ಸಂಪುಟ ಸಭೆಯಲ್ಲಿ ಸರಕಾರ ಏಕಾಏಕಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ಚರ್ಚೆ ಮಾಡಬಾರದು. ಅಸಮರ್ಥನೀಯ ಹಾಗೂ ಅತಾರ್ಕಿಕ ದತ್ತಾಂಶ ಆಧರಿಸಿ ಯಾವುದೇ ಏಕಪಕ್ಷೀಯ ನಿರ್ಧಾರವನ್ನು ಸಿಎಂ ಸಿದ್ದರಾಮಯ್ಯ ಕೈಗೊಳ್ಳಬಾರದು. ಇತ್ತೀಚಿನ ವರ್ಷದಲ್ಲಿ ಮಾಡಿಸಿರುವ ಕಾಂತರಾಜು ಆಯೋಗದ ಜಾತಿ ಗಣತಿ ವರದಿ ಕೂಡಲೇ ಬಹಿರಂಗೊಳಿಸಬೇಕು.**
> **-ಹನುಮಂತಪ್ಪ ಹಂಚಿನಾಳಕ್ಯಾಂಪ್**, ಮುಖಂಡ

ಬೆಳೆ ಹಾನಿ ಪರಿಹಾರಕ್ಕೆ ರೈತ ಸಂಘದಿಂದ ಆಗ್ರಹ

ಕಾರಟಗಿ: ಕಳೆದ ಒಂದು ವಾರದ ಹಿಂದೆ ಸುರಿದ ಮಳೆಯಿಂದ ಭತ್ತದ ಬೆಳೆ ಸಂಪೂರ್ಣ ನಾಶವಾಗಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ತಕ್ಷಣ ಬೆಳೆ ಹಾನಿ ಪರಿಹಾರ ನೀಡಬೇಕು ಮತ್ತು ಕಾರಟಗಿಯಲ್ಲಿ ಭತ್ತ ಖರೀದಿ ಕೇಂದ್ರ ತೆರೆಯಬೇಕು ಎಂದು ಆಗ್ರಹಿಸಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಸೋಮವಾರ ಪ್ರತಿಭಟಿಸಿದರು.

ರಾಜ್ಯಾಧ್ಯಕ್ಷ ಶರಣಪ್ಪ ದೊಡ್ಡಮನಿ ಮಾತನಾಡಿ, ಕಳೆದ ವರ್ಷ ಅಕಾಲಿಕ ಮಳೆಯಿಂದ ರೈತರ ಬೆಳೆ ಹಾನಿಯಾಗಿತು. ಆದರೆ ಅಧಿಕಾರಿಗಳು ಪರಿಹಾರ ನೀಡುವ ಕೆಲಸ ಮಾಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಕಂದಾಯ ಇಲಾಖೆಗೆ ಸರ್ವೆ ಮಾಡಿ, ವರದಿ ನೀಡುವಂತೆ ಸೂಚನೆ ನೀಡಬೇಕು. ರೈತರು ಬೆಳೆದ ಭತ್ತದ ಬೆಳೆಗೆ ಹೆಚ್ಚಿನ ಬೆಲೆ ಕಂಡುಕೊಳ್ಳುವ ನಿಟ್ಟಿನಲ್ಲಿ ತಕ್ಷಣ ಖರೀದಿ ಕೇಂದ್ರ ತೆರೆಯಬೇಕು. ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

> **ಸಚಿವ ಶಿವರಾಜ ತಂಗಡಗಿ ಅವರು ಪರಿಶೀಲಿಸಿ ಪರಿಹಾರ ನೀಡುವ ಭರವಸೆ ನೀಡಿದ್ದರೂ ರೈತರಿಗೆ ಪರಿಹಾರ ದೊರೆಯಲಿಲ್ಲ. ಈಗ ಮತ್ತೊಮ್ಮೆ ಸಚಿವರು ಭೇಟಿ ನೀಡಿ ಪರಿಶೀಲಿಸಿ ಪರಿಹಾರ ನೀಡುವ ಭರವಸೆ ನೀಡಿದ್ದಾರೆ. ಸಚಿವರ ಭರವಸೆ ಈಡೇರಿದರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ.**
> **-ಶರಣಪ್ಪ ದೊಡ್ಡಮನಿ**, ರಾಜ್ಯಾಧ್ಯಕ್ಷ

ಈ ಮೊದಲು ಪಟ್ಟಣದ ತಹಸೀಲ್ದಾರ ಕಚೇರಿ ಮುಂದೆ ಧರಣಿ ನಡೆಸಿ ತಹಸೀಲ್ದಾರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ರೈತ ಮುಖಂಡರಾದ ನಾರಾಯಣ ಈಡಿಗರ, ಹನುಮಂತಪ್ಪ, ದೊಡ್ಡನಗೌಡ, ರಾಮನಗೌಡ, ಅಯ್ಯಪ್ಪ, ಮರಿಸ್ವಾಮಿ, ನಾಗರಾಜ ವೆಂಕಟಗಿರಿ, ಮಲ್ಲಪ್ಪ, ರಮೇಶ್ ಭಂಗಿ, ಭೀಮನಗೌಡ ಸೇರಿದಂತೆ ರೈತರು ಇದ್ದರು.



ಕಾರಟಗಿಯಲ್ಲಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟಿಸಿದರು.

ಭ್ರಷ್ಟಾಚಾರದ ನಿಗ್ರಹ ಜಾಗೃತಿ ಅರಿವು ಸಪ್ತಾಹ

ಕೊಪ್ಪಳ: ವಿದ್ಯಾರ್ಥಿಗಳು ಭ್ರಷ್ಟಾಚಾರದ ಕುರಿತು ಲೋಕಾಯುಕ್ತಕ್ಕೆ ಮಾಹಿತಿ ನೀಡುವ ಮೂಲಕ ಭ್ರಷ್ಟಚಾರ ನಿರ್ಮೂಲನೆಗೆ ಬಹು ಮುಖ್ಯ ಪಾತ್ರ ವಹಿಸಬೇಕು ಎಂದು ಕೊಪ್ಪಳ ಲೋಕಾಯುಕ್ತ ಪ್ರಭಾರ ಡಿವೈಎಸ್ಪಿ ಇ.ಟಿ. ಚಂದ್ರಪ್ಪ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಭ್ರಷ್ಟಚಾರ ನಿಗ್ರಹ ಜಾಗೃತಿ ಅರಿವು ಸಪ್ತಾಹ -2024ರ ಕಾರ್ಯಕ್ರಮ ಉದ್ಘಾಟಿಸಿ ಸೋಮವಾರ ಮಾತನಾಡಿದರು.

ಕಳೆದ 1984ರಲ್ಲಿ ಕರ್ನಾಟಕ ಲೋಕಾಯುಕ್ತ ಪ್ರಾರಂಭ ಆಗಿದ್ದು, ಇದರ ಮುಖ್ಯ ಕೆಲಸ ಭ್ರಷ್ಟಚಾರ ತಡೆಗಟ್ಟುವುದು.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಶೈಲಜಾ ಪ್ಯಾಟಿ ಶೆಟ್ಟರ್ ಮಾತನಾಡಿ, ಎಲ್ಲ ಸರಕಾರಿ ನೌಕರರು ಸಾರ್ವಜನಿಕರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಸಾರ್ವಜನಿಕರ ಹತ್ತಿರ, ರೈತರ ಹತ್ತಿರ ಲಂಚ ತೆಗೆದುಕೊಳ್ಳಬಾರದು. ಇದರಿಂದ ದೇಶದ ಅಭಿವೃದ್ಧಿಗೆ ತೊಡಕು ಉಂಟಾಗುತ್ತದೆ. ಎಲ್ಲ ಸಾರ್ವಜನಿಕರ ಸಹಕಾರದಿಂದ ಭ್ರಷ್ಟಚಾರವನ್ನು ತಡೆಗಟ್ಟಬಹುದು ಎಂದು ಹೇಳಿದರು.

ವಿದ್ಯಾರ್ಥಿಗಳ ಜತೆ ಭ್ರಷ್ಟಚಾರದ ಕುರಿತು ಸಂವಾದ ನಡೆಸಿದರು. ವಿದ್ಯಾರ್ಥಿಗಳಿಗೆ ಭ್ರಷ್ಟಚಾರ ನಿರ್ಮೂಲನೆ ಕುರಿತು ಪ್ರತಿಜ್ಞಾ ವಿಧಿ ಭೋದಿಸಲಾಯಿತು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಹುಲಿಗೆಮ್ಮ ಬಿ, ಉಪನ್ಯಾಸಕರಾದ ಡಾ. ಪ್ರದೀಪ್ ಕುಮಾರ್, ಡಾ. ನರಸಿಂಹ, ಅತಿಥಿ ಉಪನ್ಯಾಸಕರಾದ ಶಿವ ಪ್ರಸಾದ್ ಹಾದಿಮನಿ, ಡಾ. ಮಂಜಪ್ಪ, ಡಾ ಸೂರಪ್ಪ ಹಾಗೂ ವಿದ್ಯಾರ್ಥಿನಿಯರು ಇದ್ದರು. ಭವ್ಯ, ಡಾ. ಹುಲಿಗೆಮ್ಮ, ನರಸಿಂಹ ನಿರ್ವಹಿಸಿದರು.

ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಭ್ರಷ್ಟಚಾರ ನಿಗ್ರಹ ಜಾಗೃತಿ ಅರಿವು ಸಪ್ತಾಹ -2024ರ ಕಾರ್ಯಕ್ರಮ ಡಿವೈಎಸ್ಪಿ ಉದ್ಘಾಟಿಸಿದರು.

> **ಎಲ್ಲರು ಸೇರಿ ಭ್ರಷ್ಟಚಾರ ತಡೆಗಟ್ಟಬೇಕು. ಯಾರಾದರೂ ಸರಕಾರಿ ನೌಕರರು ಕೆಲಸ ನಿರ್ವಹಿಸಲು ಲಂಚದ ಬೇಡಿಕೆ ಇಟ್ಟರೆ ನಮಗೆ ಮಾಹಿತಿ ನೀಡಿದರು.**
> **-ಇ.ಟಿ. ಚಂದ್ರಪ್ಪ, ಡಿವೈಎಸ್ಪಿ**

ಬಿಜೆಪಿ ಗೂಂಡಾಗಳ ಬಂಧನಕ್ಕೆ ಎಎಪಿ ಒತ್ತಾಯ

ರಾಯಚೂರು: ಮಾಜಿ ಮುಖ್ಯಮಂತ್ರಿ ಆಮ್ ಆದಿ ಪಾರ್ಟಿ ಸಂಸ್ಥಾಪಕರು ಆರವಿಂದ ಕೇಜ್ರಿವಾಲ್ ಅವರ ಮೇಲೆ ಹಲ್ಲೆ ನಡೆಸಿದ ಗೂಂಡಾಗಳನ್ನು ಬಂಧನ ಮಾಡಬೇಕು ಎಂದು ಆಗ್ರಹಿಸಿ ಆಮ್ ಆದಿ ಪಾರ್ಟಿ ಮುಖಂಡರು ಅಪರ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಅರವಿಂದ ಕ್ರೇಜಿವಾಲ್ ಅವರು ದೆಹಲಿಯ ವಿಕಾಸಪುರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರ ಮಾಡುವ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಗುಂಡಾಗಳು ನಡೆಸಿದ ಹಲ್ಲೆಯನ್ನು ಯಾವದೇ ನಾಗರೀಕ ಸಮಾಜ ಸಹಿಸಲು ಸಾಧ್ಯವಿಲ್ಲ ಎಂದು ಆರೋಪಿಸಿದರು.

ಬಿಜೆಪಿ ಗುಂಡಾ ನಾಯಕರು ಹತಾಶೆಯಿಂದ ಈ ರೀತಿಯ ದಾಳಿಗಳಿಗೆ ಕೈ ಹಾಕಿ ದ್ದಾರೆ ಈ ಕೂಡಲೇ ಬಿಜೆಪಿ

ರಾಷ್ಟ್ರೀಯ ಅಧ್ಯಕ್ಷರು ದೇಶದ ಜನತೆಯ ಮುಂದೆ ಕ್ಷಮೆಯಾಚಿಸಬೇಕು. ಹಾಗೂ ತಮ್ಮ ರೌಡಿ ಪಡೆಯ ನಾಯಕರನ್ನು ಹತೋಟಿಯಲ್ಲಿ ಇಡಬೇಕು ಒತ್ತಾಯಿಸಿದ್ದಾರೆ. ಕೇಜ್ರಿವಾಲ್ ಅವರ ಮೇಲೆ ಅನೇಕ ಭಾರಿ ದಾಳಿ ನಡೆಸಲಾಗಿದೆ.

ಜನಪರ ಆಡಳಿತ ನಡೆಸುವರರು ಮತ್ತು ಪ್ರಮಾಣಿಕರು ಎಂದಿಗೂ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡದಂತೆ ತಡೆಯುವುದೇ ಬಿಜೆಪಿ ಮುಖ್ಯ ಅಜೆಂಡವಾಗಿದೆ ಎಂದು ಗಂಭೀರವಾಗಿ ಆರೋಪಿಸಿದರು.

ಪ್ರಚಾರದ ಈ ವೇಳೆ ಮಾಜಿ ಮುಖ್ಯಮಂತ್ರಿ ಅವರ ಮೇಲೆ ಬಿಜೆಪಿ ಗುಂಡಾಗಳು ನಡೆಸಿದ ಹಲ್ಲೆ ಈಗ ಸಾಬೀತಾಗಿದೆ. ಇಷ್ಟೆಲ್ಲಾ ಹ ಹಲ್ಲೆಗಳು ನಡೆದರೂ ಸಹ ದೆಹಲಿಯ ಪೊಲೀಸರು ಯಾವದೇ ಕ್ರಮ ಕೈಗೊಳ್ಳದೇ ಇರುವುದು ಖಂಡನೀಯ. ಹಾಗೂ ಅರವಿಂದ ಕೇಜ್ರಿವಾಲ್ ಇವರ ಮೇಲೆ ಹಲ್ಲೆ ಮಾಡಿರುವಂತಹ ಗುಂಡಾಗಳನ್ನು ಜೈಲಿಗೆ ಬಂಧಿಸಿ ಜೈಲಿಗೆ ಕಳುಹಿಸಬೇಕು. ಮುಂದಿನ ಸೂಕ್ತ ಕ್ರಮ ಕೈಕೊಳ್ಳಬೇಕು ಇದೇ ರೀತಿ ಪಕ್ಷದ ಮುಖಂಡರ ಮೇಲೆ ಹಲ್ಲೆ ಮುಂದುವರೆದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಡಿ. ವಿರೇಶಕುಮಾರ, ನುಸುರತ್ ಅಲಿ,ಬಸವರಾಜ ಗುತ್ತೇದಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಆಮ್ ಆದಿ ಪಾರ್ಟಿ ಮುಖಂಡರು ಅಪರ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ದರ್ಗಾ ಭೂಮಿ ಒತ್ತುವರಿ ಕ್ರಮಕ್ಕೆ ಆಗ್ರಹ

ರಾಯಚೂರು: ಕರಿಮುಲ್ಲಾ ಶಾಖಾದ್ರಿ, ದರ್ಗಾ 12 ಎಕರೆ ಭೂಮಿ ವಕ್ಫ್ ಆಸ್ತಿಯಾಗಿದ್ದು ಇದನ್ನು ಒತ್ತುವರಿ ಮಾಡಿಕೊಂಡಿದ್ದು ಕೂಡಲೇ ಕ್ರಮ ವಹಿಸಬೇಕು ಎಂದು ವಕ್ಫ್ ರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದರು.

ನಗರದ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರರಿಗೆ ರಾಜ್ಯ ವಕ್ಫ್ ಮಂಡಳಿಗೆ ಆಸ್ತಿ ಕುರಿತು ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದೆ. ದರ್ಗಾ ಹಜರತ್ ಕರಿಮುಲ್ಲಾ ಶಾಖಾದ್ರಿ ಅಸ್ತಿಯು ವಕ್ಫ್ ಸಂಸ್ಥೆಗೆ ಸೇರಿದೆ. 1965ರಲ್ಲಿ ಕಮಿಷನರಿಂದ ಸರ್ವೆ ವರದಿ ಪಡೆದ ನಂತರ ವಿಚಾರಣೆ ನಡೆಸಿ, ಮಧ್ಯಂತರ ಆದೇಶ ಹೊರಡಿಸಿ ಅಸ್ತಿಗಳನ್ನು ಯಥಾಸ್ಥಿತಿ ಕಾಪಾಡುವಂತೆ ಆದೇಶ ನೀಡಿದೆ.

ಸೈಯದ್ ಮೋದಿನ್ ಖಾದ್ರಿ ಅವರ ಹೆಸರು ನಮೂದಿಸಿದ್ದು, ವಕ್ಫ್ ಕಾಯಿದೆ 1995ರ ಪ್ರಕಾರ ಆಸ್ತಿ ಮಾರಾಟ ವಿನಿಮಯ ಅಡಮಾನ್ ಹಸ್ತಾಂತರ ಮತ್ತು ವರ್ಗಾವಣೆಗೆ ನಿರ್ಬಂಧಿಸಲಾಗಿದೆ.

ಈ ಜಮೀನು ಲೇಔಟ್ ಎನ್. ಎ ರದ್ದುಗೊಳಿಸಬೇಕು, ಪ್ಲಾಟ್ ಮಾರಾಟಗಳು ನಿಷೇಧಿಸಬೇಕು, ಆಸ್ತಿಗೆ ಚೆಕ್ ಬಂದಿ ಮಾಡಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಬೇಕು, ವಿದ್ಯುತ್ ಪೂರೈಕೆಗೆ ಜೆಸ್ಕಾಂ ಇಲಾಖೆಯಿಂದ ಪರವಾನಿಗೆ ರದ್ದುಗೊಳಿಸಬೇಕು, ನಗರಸಭೆಯಿಂದ ಯಾವುದೇ ಪರವಾನಿಗೆಗಳು ನೀಡಬಾರದು, 7 ದಿನಗಳ ಒಳಗಡೆ ಕ್ರಮಕೈಗೊಳ್ಳದಿದ್ದಲ್ಲಿ ಅನಿರ್ಧಿಷ್ಟ ಮುಷ್ಕರ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ವೇದಿಕೆ ಅಧ್ಯಕ್ಷ ಅಕ್ಟರ್ ಹುಸೇನ್ ನಾಗುಂ ಡಿ, ಸೈಯದ್ ಮುರ್ಷಿದ್ ಜಾನಿ ಸಾಹೇಬ್, ಸೈಯದ್ ಶಂಶುದ್ದಿನ್, ಸೈಯದ್ ಮಹಮದ್ ಪೀರ್, ಶೇಕ್ ಮಾಸೂಮ್, ಸೈಯದ್ ಜಾ ಫರ್, ತೌಶಿಫ್ ಅಹ್ಮದ್ ಅನೇಕರು ಭಾಗವಹಿಸಿದ್ದರು.

ಕರಿಮುಲ್ಲಾ ಶಾಖಾದ್ರಿ ದರ್ಗಾ ವಕ್ಫ್ ಆಸ್ತಿ ಒತ್ತುವರಿ ಕ್ರಮಕ್ಕೆ ವಕ್ಫ ರಕ್ಷಣಾ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದರು.

ವಕ್ಫ್ ಒತ್ತುವರಿ ಮಾಡಿದವರ ವಿರುದ್ಧ ಕ್ರಮ

ವಕ್ಫ ಅಸ್ತಿಗಳು ಮಾರಾಟ ಮತ್ತು 1955ರ ಬರಹ ಪಹಣಿಯಲ್ಲಿ ಖರೀದಿಸಲು ಯಾವುದೇ ಕಾನೂನು ಇರುವುದಿಲ್ಲ. ಕೆಲವು ಭೂಮಾಫಿಯ ಖರೀದಿ ಮಾಡಿದ್ದೇವೆಂದು ಹೇಳಿ ಇದೀಗ ಲೇಔಟ್ ನಿರ್ಮಾಣ ಮಾಡುತ್ತಿದ್ದಾರೆ. ಒತ್ತುವರಿ ಮಾಡಿದವರ ವಿರುದ್ಧ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ನಗರ ಸಭೆ ನಿವೇಶನ ಬಡವರಿಗೆ ಸಿಗಲಿ: ಶಾಸಕ

ಕೊಪ್ಪಳ: ಇಲ್ಲಿನ ನಗರಸಭೆ ವ್ಯಾಪ್ತಿಯ ಗುನ್ನಳ್ಳಿ -ಹೊರತಟ್ನಾಳ ಭಾಗದಲ್ಲಿನ 596 ನಿವೇಶನಗಳು ಬಡವರಿಗೆ ತಲುಪಬೇಕೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಿ, ಶೀಘ್ರದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಸೂಕ್ತ ಕ್ರಮ ವಹಿಸಿ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಸೂಚನೆ ನೀಡಿದರು.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ನಗರ ಆಶ್ರಯ ಸಮಿತಿಯ ಸಭೆ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು.

ನಗರದ ಚಿಕ್ಕಸಿಂದೋಗಿ ರಸ್ತೆಯಲ್ಲಿನ 2000 ಗುಂಪು ಮನೆಗಳಿಗೆ ಕುಡಿಯುವ ನೀರು, ವಿದ್ಯುತ್, ರಸ್ತೆ ಹಾಗೂ ಚರಂಡಿ ನಿರ್ಮಾಣದ ಅಭಿವೃದ್ಧಿಗೆ 100 ಕೋಟಿ ಅನುಧಾನ ನೀಡುವಂತೆ ಸಚಿವರಿಗೆ, ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇವೆ, ಮುಂದಿನ ಬಜೆಟ್‌ನಲ್ಲಿ ನೀಡುವ ಭರವಸೆ ವ್ಯಕ್ತಪಡಿಸಿದ್ದಾರೆ ಎಂದು ಶಾಸಕರು ತಿಳಿಸಿದರು.

ಈ ಸಭೆಯಲ್ಲಿ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್, ನಗರಸಭೆಯ ಸದಸ್ಯ ವಿರೂಪಾಕ್ಷಪ್ಪ ಮೋರನಾಳ, ಉಪ ವಿಭಾಗಧಿಕಾರಿ ಮಹೇಶ್ ಮಾಲಗಿತ್ತಿ, ನಗರಸಭೆಯ ಪೌರಯುಕ್ತ ಗಣಪತಿ ಪಾಟೀಲ್, ಆಶ್ರಯ ಸಮಿತಿಯ ಸದಸ್ಯರುಗಳಾದ ಹುಸ್ಸೆನ್ ಪೀರ್, ಪರಶುರಾಮ್ ಕೆರೆಹಳ್ಳಿ,ಪದ್ಮಾವತಿ ಕಂಬಳಿ ಉಪಸ್ಥಿತರಿದ್ದರು.

ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ನಡೆದ ನಗರ ಆಶ್ರಯ ಸಮಿತಿಯ ಸಭೆಯಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿದರು.

ಸಿಂಧನೂರು ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿರುವ ತಾಲೂಕಿನ ಗೋನವರ ಗ್ರಾಮದ ಶ್ರೀಅಬ್ಬಾಸಲಿ ತಾತನವರ ಗದ್ದಿಗೆಯ ಆರಾಧಕರು ಮತ್ತು ದೇವರ ಸ್ವರೂಪಿ ಎಂದು ಕರೆಸಿಕೊಳ್ಳುವ ಶ್ರೀಜಗದ್ಗುರು ಡಾ. ಗಫೂರ ತಾತನವರ 124 ನೇ ತುಲಾಭಾರ ಕಾರ್ಯಕ್ರಮವನ್ನು ಬಹು ಅದ್ದೂರಿಯಾಗಿ ನಡೆಸಲಾಯಿತು. ಆಂಧ್ರ ರಾಜ್ಯದ ಕರ್ನೂಲ್ ಜಿಲ್ಲೆಯ ಕೌತಾಳಂ ಮಂಡಲದ ಬಾಪುರಂ ಗ್ರಾಮದಲ್ಲಿ ಈ ಒಂದು 124ನೇ ತುಲಬಾರಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಶಾಲೆ ಗೇಟ್ ಕುಸಿದು ವಿದ್ಯಾರ್ಥಿ ಗಾಯ

ರಾಯಚೂರು: ತಾಲೂಕಿನ ಜೇಗರಕಲ್ ಗ್ರಾಮದ ಸರಕಾರಿ ಶಾಲೆ ಗೇಟ್ ಕುಸಿದು ವಿದ್ಯಾರ್ಥಿ ವಸಂತ ಗಾಯ ಗೊಂಡ ಪ್ರಕರಣಕ್ಕೆ ಸಂಬಂಧಿಸಿದ ತಾಲೂಕ ಕ್ಷೇತ್ರ ಶೈಕ್ಷಣಾಧಿಕಾರಿ ಚಂದ್ರಶೇಖರ ಭಂಡಾರಿ ಅವರು ಕಾರಣ ಕೇಳಿ ಮುಖ್ಯ ಶಿಕ್ಷಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಅ.25 ರಂದು ಜೇಗರಕಲ್ ಗ್ರಾಮದ ಸರಕಾರಿ ಶಾಲೆಯಲ್ಲಿ ಮಧ್ಯಾಹ್ನ ಊಟದ ಬಳಿಕ ಶಾಲೆಯ ಗೇಟ್ ಬಳಿ ಆಟವಾಡುತ್ತಿದ್ದ ವಿದ್ಯಾ ರ್ಥಿ ವಸಂತ ಮೇಲೆ ಕಂಪೌಂಡ್ ಗೇಟ್ ಕುಸಿದು ಬಿದ್ದು ವಿದ್ಯಾರ್ಥಿ ತಲೆಗೆ ಸಣ್ಣ ಪುಟ್ಟ ಗಾಯಗೊಂಡಿರುವ ವಿಷಯ ತಿಳಿಯುತ್ತಿದಂತೆ ಬಿಇಒ ಚಂದ್ರಶೇಖರ ಭಂಡಾರಿ ಅವರು ಭಾನುವಾರ ರಜೆ ಸಮಯದಲ್ಲಿ ಗ್ರಾಮಕ್ಕೆ ಭೇಟಿ ನೀಡಿ ವಿದ್ಯಾ ರ್ಥಿಯ ಯೋಗಕ್ಷೇಮ ವಿಚಾರಿಸಿ ಮಗುವಿಗೆ ಧೈರ್ಯ ತುಂಬಿದರು. ಈ ಘಟನೆ ಗಂಭೀರವಾಗಿ ಪರಿಗಣಿಸಿ ಮತ್ತು ದೂರಿನ ಅನ್ವಯ ಅವರು ಕಾರಣ ಕೇಳಿ ಶಿಕ್ಷಕರಿಗೆ ನೋಟೀಸ್ ಜಾರಿ ಮಾಡಲಾಗಿದೆ. ವಿದ್ಯಾರ್ಥಿಗೆ ಯಾವುದೇ ಬಲವಾದ ಪೆಟ್ಟು ಆಗಿಲ್ಲ ಮುಂಜಾಗ್ರತ ಕ್ರಮ ಹೆಚ್ಚಿನ ಚಿಕಿತ್ಸೆಗಾಗಿ ರಿಮ್ಸ್ ಆಸ್ಪತ್ರೆ ಕರೆ ತರುವಂತೆ ಭಾನುವಾರ ಭೇಟಿ ವೇಳೆ ವಿದ್ಯಾರ್ಥಿ ಪಾಲಕರಿಗೆ ಸೂಚಿಸಿದರು. ಮಗುವಿನ ವೈದ್ಯಕೀಯ ವೆಚ್ಚ ಇಲಾಖೆ ಭರಿಸುವುದಾಗಿ ತಿಳಿಸಿದರು. ಈ ರೀತಿ ಘಟನೆ ಸಂಭವಿಸದಂತೆ ಮಕ್ಕಳ ಕಡೆ ಗಮನ ಹರಿಸಬೇಕು. ಶಾಲೆಯ ಮುಖ್ಯ ಶಿಕ್ಷಕರ ಮುಖ್ಯ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಜಾತಿ ಗಣತಿ ವರದಿ ತಿರಸ್ಕಾರಕ್ಕೆ ಮನವಿ

ರಾಯಚೂರು: ಕಾಂತ ರಾಜ ಆಯೋಗದ ಜಾತಿ ಗಣತಿ ವರದಿ ತಿರಸ್ಕಾರಕ್ಕೆ ಆಗ್ರಹಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ವತಿಯಿಂದ ಅಪರ ಜಿಲ್ಲಾಧಿಕಾರಿ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿದರು.

ಕಳೆದ 10 ವರ್ಷಗಳ ಹಿಂದೆ ನಡೆಸಿದ ಸಾಮಾಜಿಕ, ಆರ್ಥಿಕ, ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಯು ಹಲವು ಲೋಪದೋ ಷಗಳನ್ನು ಹೊಂದಿದೆ, ಸರಿಪಡಿಸುವ ಅಗತ್ಯವಿದೆ, ಹೊಸದಾಗಿ ಸಮೀಕ್ಷೆ ನಡೆಸಲು ಒತ್ತಾಯಿಸಿದರು.

ರಾಜ್ಯದಲ್ಲಿ ಶಾಶ್ವತವಾಗಿ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳು, ಕಾಂತರಾಜ ಆಯೋಗದ ಸಮೀಕ್ಷಾ ವರದಿಯಾಗಿದೆ. ಇದು ಆ ವೈಜ್ಞಾನಿಕ ಮತ್ತು ಅಸಂವಿಧಾನಿಕವಾಗಿದೆ, ಸ್ವೀಕಾರಕ್ಕೆ ಅರ್ಹವಲ್ಲ, ಇದನ್ನು ಕೈಬಿಡಲು ಮನವಿ ಮಾಡಿದರು.

ವೀರಶೈವ ಲಿಂಗಾಯತ ಎಲ್ಲಾ ಉಪ ಪಂಗಡಗಳನ್ನು ಕೇಂದ್ರ, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕು, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಒತ್ತಾಯಿ ಸಿದರು.

ಈ ಸಂದರ್ಭದಲ್ಲಿ ನೀಲಗಲ್ ಬೃಹನ್ಮಠದ ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳು, ಕಿಲ್ಲೆ ಬೃಹನ್ಮಠದ ಶ್ರೀಶಾಂತಮಲ್ಲ ಶಿವಾ ಚಾರ್ಯ ಮಹಾಸ್ವಾಮಿಗಳು, ಸೋಮವಾರ ಪೇಟೆ ಹಿರೇಮಠದ ಶ್ರೀಅಭಿನವ ರಾಚೋಟಿವೀರ ಶಿವಾಚಾರ್ಯ ಮಹಾಸ್ವಾಮಿಗಳು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ ಮಿರ್ಜಾಪುರ, ಶರಣಭೂಪಾಲ ನಾಡಗೌಡ, ಶಿವಶರಣ ರೆಡ್ಡಿ, ಸಿ.ಎಸ್ ಪಾಟೀಲ್, ಶರಣಪ್ಪಗೌಡ ಜಾಡಲದಿನ್ನಿ, ಚುಕ್ಕಿ ಶಿವಾನಂದ, ದರೂರ್ ಬಸವರಾಜ ಪಾಟೀಲ್, ರಾಮನಗೌಡ ಏಗನೂರು ಅನೇಕರು ಇದ್ದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದಲ್ಲಿ ಅಪರ ಜಿಲ್ಲಾಧಿಕಾರಿ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿದರು.

ಸರಕಾರ ತಿದ್ದುಪಡಿ

ವಿವಿಧ ವರ್ಗಗಳ ಅಡಿಯಲ್ಲಿ ಹಲವಾರು ಲಿಂಗಾಯತ ಉಪ ಪಂಗಡಗಳ ಹೆಸರಿನ ಜತೆಯಲ್ಲಿ ಲಿಂಗಾಯತ ಪದವಿಲ್ಲದೇ ಕೇವಲ ಉಪ ಪಂಗಡಗಳ ಹೆಸರನ್ನು ಮಾತ್ರ ನಮೂದಿಸಲಾಗಿದೆ, ಎಲ್ಲಾ ಲಿಂಗಾಯತ ಉಪ ಪಂಗಡಗಳ ಜತೆಯಲ್ಲಿ ಲಿಂಗಾಯತ ಎಂದು ನಮೂದಿಸಿದ ಈಗಿರುವ ಪಟ್ಟಿಯಲ್ಲಿ ಉಪ ಪಂಗಡವಿರುವ ವರ್ಗಗಳನ್ನು ಬದಲಾಯಿಸದೇ ಸರಕಾರ ತಿದ್ದುಪಡಿ ತರಲು ತಿಳಿಸಿದರು.

ಕೆಆರ್‌ಐಡಿಎಲ್ ಎಇಇ ವಿರುದ್ಧ ಕ್ರಮ ಜರುಗಿಸಿ

ಸಿರವಾರ: ತಾಲೂಕಿನ ಜಾಲಾಪುರ ಕ್ಯಾಂಪಿನಲ್ಲಿ ಕೆಕೆಆರ್‌ಡಿಬಿ 2023-24ನೇ ಸಾಲಿನ ಬುಡಕಟ್ಟು ಉಪ ಯೋಜನೆಯ ಅಂದಾಜು 15 ಲಕ್ಷ ರೂ. (ಟಿಎಸ್‌ಪಿ) ಅನುದಾನದಲ್ಲಿ, ಎಸ್ಟಿ ಕಾಲೋನಿಯಲ್ಲಿ ನಿರ್ಮಾಣ ಮಾಡಬೇಕಾದ ಸಿಸಿ ರಸ್ತೆಯನ್ನು ಸಾಮಾನ್ಯ ವರ್ಗಗಳ ಜನರು ವಾಸಿಸುತ್ತಿರುವ ಏರಿಯಾದಲ್ಲಿ ನಿರ್ಮಿಸಿ, ಎಸ್ಸಿಪಿ-ಟಿಎಸ್ಪಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿ ಸಿದ ಕೆಆರ್'ಐಡಿಎಲ್' ಲಿಂಗಸೂಗೂರು ಉಪ ವಿಭಾಗದ ಎಇಇ ಹನುಮಂತ ಇವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ, ಕರ್ನಾಟಕ ಸಮತಾ ಸೈನಿಕ ದಳದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ. ಎಸ್ಸಿಪಿ-ಟಿಎಸ್ಪಿ ತಾಲೂಕು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. (ಟಿಎಸ್‌ಪಿ) ಅನುದಾನದಲ್ಲಿ ಸಾಮಾನ್ಯ ವರ್ಗದ ಜನರಿಗೆ ಅನುಕೂಲವಾಗುವಂತೆ ಸಿಸಿ ರಸ್ತೆ ನಿರ್ಮಾಣ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ಕೆಆರ್'ಐಡಿಎಲ್ ಲಿಂಗಸೂಗೂರು ಉಪ ವಿಭಾಗದ ಎಇಇ ಹನುಮಂತರ ಮೇಲೆ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ಅಧಿನಿಯಮ 2013 ನಿಯಮಗಳು 2017ರ ಸೆಕ್ಷನ್' 24 ಹಾಗೂ 25ರ ಅಡಿಯಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಸಮತಾ ಸೈನಿಕ ದಳದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ಸಮತಾ ಸೈನಿಕ ದಳದ ಜಿಲ್ಲಾ ಉಪಾಧ್ಯಕ್ಷ ಡಿ.ಎಚ್.ಭೀಮಣ್ಣ, ಸೇರಿದಂತೆ ಇತರರು ಇದ್ದರು.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
29.10.2024 ಮಂಗಳವಾರ
vishwavani.news

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ದ್ವಾದಶಿ ತಿಥಿ, ಉತ್ತರ ಫಲ್ಗುಣಿ ನಕ್ಷತ್ರ, ಇಂದ್ರ ಯೋಗ, ತೈತಿಲ ಕರಣ, ಹೇಮಂತ್ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ.

ಮನೆಮದ್ದು

ಆಹಾರ ಸೇವಿಸಿದ ನಂತರ ಗ್ಯಾಸ್ ಮತ್ತು ಹುಳಿ ತೇಗು ಇದ್ದರೆ, ಇದಕ್ಕಾಗಿ ಪುದೀನಾ ಎಲೆಗಳನ್ನು ಬಳಸಿ. ಪುದೀನ ಎಲೆಗಳು ತಂಪಾಗಿಸುವ ಪರಿಣಾಮವನ್ನು ಹೊಂದಿವೆ. ಇದು ಎದೆಯುರಿಯನ್ನು ಶಮನಗೊಳಿಸುತ್ತದೆ ಮತ್ತು ಆಮ್ಲೀಯತೆಯನ್ನು ಕಡಿಮೆ ಮಾಡುತ್ತದೆ. ಇದು ಹುಳಿ ತೇಗು ಮತ್ತು ಗ್ಯಾಸ್‌ನಿಂದ ಪರಿಹಾರವನ್ನು ನೀಡುತ್ತದೆ.

ಸೌಂದರ್ಯ ಸೂತ್ರ

ಒಂದು ಬೌಲ್‌ನಲ್ಲಿ ಹೆನ್ನಾ ಪೌಡರ್, ಬಾಳೆಹಣ್ಣಿನ ಪೇಸ್ಟ್, ಬೀಟ್ರೋಟ್ ರಸ ಹಾಗೂ ಮೊಸರು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಇದನ್ನು 12 ಗಂಟೆಗಳ ಕಾಲ ಕಬ್ಬಿಣದ ಬೌಲ್‌ನಲ್ಲಿ ಹಾಗೇ ಇಡಿ. ನಂತರ ಇದನ್ನು ಮಿಕ್ಸ್ ಮಾಡಿ ಕೂದಲಿಗೆ ಹಚ್ಚಿ 2 ಗಂಟೆ ಬಿಟ್ಟು ಶಾಂಪೂ ಮಾಡಿ. ಇದರಿಂದ ಕೂದಲು ಕಪ್ಪಾಗುತ್ತದೆ ಮತ್ತು ಹೊಳೆಯುತ್ತದೆ. ಇದು ಕೂದಲು ಆರೋಗ್ಯಕರವಾಗಿ ಬೆಳೆಯಲು ಸಹಾಯ ಮಾಡುತ್ತದೆ. ನೆತ್ತಿಯ ಆರೋಗ್ಯವನ್ನು ಕಾಪಾಡುತ್ತದೆ. ಒಣ ಕೂದಲಿನ ಸಮಸ್ಯೆಯನ್ನು ನಿವಾರಿಸುತ್ತದೆ.

ದಿನ ಭವಿಷ್ಯ

ಮೇಷ: ಆರೋಗ್ಯ ಇಂದು ಪರಿಪೂರ್ಣವಾಗಿಲ್ಲದಿದ್ದರಿಂದ ಕೆಲಸದ ಮೇಲೆ ಗಮನ ಕೊಡುವುದು ಕಷ್ಟವಾಗಬಹುದು.

ವೃಷಭ: ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ಪತ್ನಿಗೆ ಕೋಪ ಬರಿಸುತ್ತದೆ. ಆರ್ಥಿಕವಾಗಿ ಸಬಲರಾಗಿರುತ್ತೀರಿ.

ಮಿಥುನ: ಅತ್ಯಂತ ಪ್ರಭಾವಿ ಜನರ ಬೆಂಬಲ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇಂದು ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

ಕಟಕ: ಎಲ್ಲ ಸಮಯದಲ್ಲೂ ಬೆಂಬಲ ನೀಡುವ ಸ್ನೇಹಿತರು ಸಂತೋಷವಾಗಿರಿಸುತ್ತಾರೆ. ಅತಿಥಿಗಳ ಜೊತೆ ಒರಟಾಗಿ ನಡೆದುಕೊಳ್ಳಬೇಡಿ.

ಸಿಂಹ: ತಂದೆಯ ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ.

ಕನ್ಯಾ: ಚೈತನ್ಯವನ್ನು ಹೆಚ್ಚಿಸಲು ಮನಸ್ಸಿನಲ್ಲಿ ಒಂದು ಪ್ರಕಾಶಮಾನವಾದ ಸುಂದರವಾದ ಮತ್ತು ಅದ್ಭುತವಾದ ಚಿತ್ರವನ್ನು ಕಲ್ಪಿಸಿಕೊಳ್ಳಿ.

ತುಲಾ: ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಆರ್ಥಿಕವಾಗಿ ಸದೃಢರಾಗಿರುತ್ತೀರಿ.

ವೃಶ್ಚಿಕ: ದೈಹಿಕ ರಚನೆ ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ಇಂದು ಆನಂದಿಸ ಬಹುದು.

ಧನು: ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ.

ಮಕರ: ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ. ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಿಕೊಳ್ಳಬೇಡಿ.

ಕುಂಭ: ವಿಶ್ವಾಸ ಬೆಳೆಯುತ್ತದೆ. ಪ್ರಗತಿ ನಿಶ್ಚಿತ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ.

ಮೀನ: ಅತ್ಯಂತ ಪ್ರಭಾವಿ ಜನರ ಬೆಂಬಲ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಖ್ಯಾತ ನಟಿ ಕೃತಿ ಕರಬಂದ ಹುಟ್ಟು ಹಬ್ಬ
- 9ನೇ ಆಯುರ್ವೇದ ದಿನ
- 1851: ಕೋಲ್ಕತಾದಲ್ಲಿ ಬ್ರಿಟಿಷ್ ಇಂಡಿಯಾ ಸಂಸ್ಥೆ ಹುಟ್ಟಿಕೊಂಡಿತು.

ಚಿತ್ರಸ್ಫೂರ್ತಿ



ಈ ಚಿತ್ರದಲ್ಲಿರುವುದು ಡಬ್ಬಿಯಲ್ಲಿಟ್ಟಿದ್ದ ಹಿಟ್ಟನ್ನೋ, ಬಣ್ಣವನ್ನೋ ಮೈಮೇಲಿ ಬೀಳಿಸಿಕೊಂಡು ನಗುತ್ತಿರುವವರಲ್ಲ. ಸ್ಕಾಟ್ ಲೆಂಡ್‌ನಲ್ಲಿ ಒಂದು ಸಂಪ್ರದಾಯ ಇದೆ. ಅದು ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಈ ರೀತಿ ಬುರುಗನ್ನು ಹಚ್ಚಿಕೊಂಡು ಸಂಭ್ರಮಿಸಿ, ಕಾಲೇಜಿಗೆ ಹೊಸತಾಗಿ ಸೇರುವ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳುವುದು ಹಾಗೇ, ಅವರನ್ನು 'ಮಕ್ಕಳಾಗಿ' ಅಳವಡಿಸಿಕೊಂಡು. ಅವರಿಗೆ ಮಾರ್ಗದರ್ಶನ ನೀಡುತ್ತಾರೆ.

ಸಮುದ್ರರಾಜನನ್ನು ತಡೆದು ನಿಲ್ಲಿಸಿದ ಆಂಜನೇಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಪೂರ್ವ ಕರಾವಳಿಯ ಒಡಿಶಾ ರಾಜ್ಯದ ಪುರಿ ಮಂದಿರವು ಭಗವಾನ್ ವಿಷ್ಣುವಿನ ರೂಪವಾದ 'ಜಗನ್ನಾಥ'ನಿಗೆ ಸಮರ್ಪಿತವಾದ ದೇವಾಲಯ. ಸಪ್ತ ಕ್ಷೇತ್ರಗಳಲ್ಲೇ 'ಪುರಿ ಕ್ಷೇತ್ರ' ಮೊದಲನೆಯದಾಗಿದೆ. ಜನರ ಕಲ್ಯಾಣಕ್ಕಾಗಿ ಜಗತ್ತಿನ ಒಡೆಯನಾದ 'ವಿಶ್ವನಾಥ' ನು ಕಾಶಿಯನ್ನು ತನ್ನ ವಾಸಸ್ಥಾನವಾಗಿ ಮಾಡಿಕೊಂಡಂತೆ, ದ್ವಾಪರ ಯುಗದಲ್ಲಿ, ದ್ವಾರಕೆ ಮುಳುಗಿದ ನಂತರ, ಶ್ರೀಕೃಷ್ಣನು ಪುರಿಯನ್ನೇ ತನ್ನ ಧಾಮವನ್ನಾಗಿ ಮಾಡಿಕೊಂಡನು. ಜಗತ್ತಿನ ಅಧಿಪತಿಯಾದ ಜಗನ್ನಾಥನ ಮಂದಿರ ಜಗನ್ನಾಥ ಪುರಿ ಎಂದು ಜಗತ್ಪ್ರಸಿದ್ಧಿಯಾಗಿದೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ಇರುವ ಬೇಡಿ ಆಂಜನೇಯ ಕೂಡ ಬಹಳ ಪ್ರಸಿದ್ಧ ದೇವಾಲಯ. ಅದಕ್ಕೊಂದು ಸುಂದರ ಕಥೆ ಇದೆ.

ಹಿಂದೆ ರಾಜ 'ಇಂದ್ರದ್ಯುಮ್ನ'ನು 'ನೀಲ ಮಾಧವ'ನಿಗೆ ವಿಶ್ವದ ಅತಿ ಎತ್ತರದ ದೇವಾಲಯವನ್ನು ನಿರ್ಮಿಸಿದನು. ಸೃಷ್ಟಿಕರ್ತ ಬ್ರಹ್ಮನಿಂದಲೇ ದೇವಾಲಯ ಮತ್ತು ಮೂರ್ತಿಗಳನ್ನು ಪವಿತ್ರಗೊಳಿಸಿ ಪ್ರತಿಷ್ಠಾಪಿಸಲು ಪ್ರಾರ್ಥಿಸಿದನು. ರಾಜನ ಪ್ರಾರ್ಥನೆ ಕೇಳಿ ಬ್ರಹ್ಮನು ಸ್ವರ್ಗದಿಂದ ಬಂದನು. ಜಗನ್ನಾಥನ ಪ್ರತಿಷ್ಠಾಪನೆಯನ್ನು ನೋಡಲು, ಸ್ವರ್ಗದಿಂದ ದೇವತೆಗಳು, ಕೈಲಾಸದಿಂದ ಶಿವ -ಪಾರ್ವತಿಯರು, ದಕ್ಷಿಣದಿಂದ ಕಾರ್ತಿಕೇಯನು, ಉತ್ತರದಿಂದ ಗಣಪತಿ ತನ್ನ ಲೋಕಪಾಲಕರೊಂದಿಗೆ ಬಂದನು. ಹೀಗೆ ಎಲ್ಲ ದೇವಾನುದೇವತೆಗಳು ಗಗನದಿಂದ ಇಳಿದು ಬಂದರೆ, ಇನ್ನು ಆಂಜನೇಯ ಸುಮ್ಮನಿರಲು ಸಾಧ್ಯವೇ ತನ್ನ ಪ್ರಭು ಜಗನ್ನಾಥನನ್ನು ನೋಡಲು ಅವನೂ ಹೊರಟೇ ಬಿಟ್ಟ. ಆಂಜನೇಯ ಒಂದೇ ನೆಗತಕ್ಕೆ ಹಾರುತ್ತಾ ಬರುವುದನ್ನು ನೋಡಿದ ಸಮುದ್ರ ರಾಜನಿಗೆ ತಾನೂ ಜಗನ್ನಾಥನ ದರ್ಶನಕ್ಕೆ ಹೋಗಬೇಕು ಎಂದು ಆಸೆಯಾಗಿ ರಭಸದಿಂದ ಉಕ್ಕಿಬಂದನು. ಸಮುದ್ರರಾಜ ಬಂದಿದ್ದೇ ತಡ ಜಗನ್ನಾಥ ಮಂದಿರ ನೀರಿನಿಂದ ತುಂಬಿತು. ನೆರೆದಿದ್ದ ಭಕ್ತರಿಗೆ ನಿಲ್ಲಲು ತೊಂದರೆ ಆಯಿತು. ಆಗ ಜಗನ್ನಾಥ ಆಂಜನೇಯನಿಗೆ ಹೇಳಿದ, ಸಮುದ್ರರಾಜನನ್ನು ಮುಂದೆ ಬರದಂತೆ ತಡೆಹಿಡಿದು ನಿಲ್ಲಿಸು ಎಂದು.

ಆಂಜನೇಯ ಸಮುದ್ರರಾಜನನ್ನು ತಡೆಹಿಡಿದು ನಿಲ್ಲಿಸಿದ. ಆದರೆ ಆಂಜನೇಯ ಬಂದಿದ್ದು ತನ್ನ ಪ್ರಭು ಜಗನ್ನಾಥನ ದರ್ಶನಕ್ಕೆ. ಈಗ ಒಂದು ಹೆಜ್ಜೆ ಮುಂದಿಟ್ಟರೆ ಸಮುದ್ರರಾಜ ಹಿಂದೆಯೇ ನುಗ್ಗುತ್ತಾನೆ. ಆಂಜನೇಯ ಎರಡು ಮೂರು ಸಲ ಹೆಜ್ಜೆ ಮುಂದಿಟ್ಟು, ಜಗನ್ನಾಥನ ದರ್ಶನ ಮಾಡಲು ಪ್ರಯತ್ನಿಸಿದ. ಆದರೆ ಸಮುದ್ರರಾಜ ಬಿಡಲಿಲ್ಲ ಹಿಂದೆಯೇ ಬರುತ್ತಿದ್ದ, ಆಂಜನೇಯ ಭಗವಂತನಲ್ಲಿ ಪ್ರಾರ್ಥಿಸಿದ. 'ಪ್ರಭು ನನ್ನನ್ನು ಈ ಸಮುದ್ರ ದಡದಲ್ಲೇ ಬಂಧಿಸಿ ಬಿಡಿ ಆಗ ಸಮುದ್ರವನ್ನು ತಡೆಯಲು ಸಾಧ್ಯವಾಗುತ್ತದೆ' ಎಂದು. ಆಗ ಜಗನ್ನಾಥ, ಚಿನ್ನದ ಸರಪಳಿಗಳಿಂದ ಆಂಜನೇಯನನ್ನು ಬಂಧಿಸಿ, ಹೇಳಿದ 'ನೀನು ಯಾವಾಗಲೂ ನನ್ನ ಹೃದಯದಲ್ಲಿ ನೆಲೆಸಿರುವೆ, ಜಗನ್ನಾಥ ಮಂದಿರದ ಮೂಲೆ ಮೂಲೆಯಲ್ಲೂ ನೀನಿರುವೆ. ಮುಂದಿನ ದಿನಗಳಲ್ಲಿ ನೀನು ಬೇಡಿ ಆಂಜನೇಯನೆಂದು ಪ್ರಸಿದ್ಧನಾಗುವೆ. ನಿನ್ನ ದರ್ಶನ ಮಾಡಿದರೆ ಮಾತ್ರ, ನನ್ನ ದರ್ಶನದ ಪೂರ್ಣ ಫಲ ದೊರೆಯುತ್ತದೆ. ಭಕ್ತರು ನಿನ್ನನ್ನು ಪೂಜಿಸಿ ಭಕ್ತಿಯಿಂದ ಬೇಡಿಕೊಂಡರೆ ಅವರ ಎಲ್ಲ ಸಂಕಷ್ಟಗಳು ಪರಿಹಾರವಾಗುತ್ತದೆ' ಎಂದು ಹರಸಿ ದ್ದನ್ನು ಕೇಳಿದ ಆಂಜನೇಯ ಭಕ್ತಿಯಿಂದ ಪ್ರಭುವಿಗೆ ವಂದಿಸಿದನು.

ಮತ್ತೆ ಆಂಜನೇಯ ಹೇಳಿದ ಪ್ರಭು, ಸಮುದ್ರ ರಾಜರು ನಿಮ್ಮನ್ನು ನೋಡಲು ಕಾತರದಿಂದ ಕಾಯುತ್ತಿದ್ದಾರೆ, ಅವರಿಗೂ ಆಶೀರ್ವದಿಸಿ ಎಂದನು. ಜಗನ್ನಾಥ ಸಮುದ್ರ ರಾಜನಿಗೆ ಆಶೀರ್ವದಿಸಲು ಮುಂದೆ ಬಂದು ನಿಂತನು. ಪ್ರಭುವನ್ನು ನೋಡಿದ ಸಮುದ್ರ ರಾಜ ಉಕ್ಕಿ ಬಂದು ಜಗನ್ನಾಥನ ಪಾದ ಕಮಲಗಳನ್ನು ತೊಳೆದು ಭಕ್ತಿಯಿಂದ ನಮಸ್ಕರಿಸಿದನು. ಭಗವಂತನು ಸಮುದ್ರರಾಜನನ್ನು ಆಶೀರ್ವದಿಸಿದನು. ಅಂದಿನಿಂದ ಇಂದಿನಗೂ, ಆಂಜನೇಯ ಸಮುದ್ರರಾಜ ಮುಂದೆ ಬರದಂತೆ ತಡೆ ಹಿಡಿದು, ಜಗನ್ನಾಥನಿಂದ ಬಂಧಿತನಾಗಿ ಸಮುದ್ರ ತಟದಲ್ಲಿ ಬೇಡಿ ಆಂಜನೇಯನಾಗಿ ನೆಲೆಸಿದ್ದಾನೆ. ಬೇಡಿ ಬಂದ ಭಕ್ತರನ್ನು ಹರಸುತ್ತಾ ಅವರ ಕಷ್ಟಗಳನ್ನು ಪರಿಹರಿಸುತ್ತಿದ್ದಾನೆ.

ನಮ್ಮ ಭಾರತದ ಅನೇಕ ದೇವಸ್ಥಾನಗಳಿಗೆ ಇಂತಹ ಸುಂದರ ಐತಿಹ್ಯಗಳಿವೆ. ಇವುಗಳನ್ನು ನಮ್ಮ ಮಕ್ಕಳಿಗೆ ತಿಳಿಸಿ ನಾವು ತಿಳಿದುಕೊಂಡು ಈ ದೇವಸ್ಥಾನಗಳಿಗೆ ಭೇಟಿ ಕೊಟ್ಟಾಗ ಆ ಸ್ಥಳ ಪುರಾಣದ ಬಗ್ಗೆ ನಾವು ಹೆಚ್ಚು ತಿಳಿದುಕೊಂಡಂತೆ ಆಗುತ್ತದೆ.

ಪದಬಂಧ



ಎಡದಿಂದ ಬಲಕ್ಕೆ

5. ನಯವಾದ ಮಾತುಗಳಿಂದ ಮನವೊಲಿಸುವುದನ್ನು ಹೀಗೆ ಹೇಳಬಹುದು (4)
6. ಭಾರವಿದ್ದರೂ ಇದು ಸಂಧಾನ (4)
7. ದಿಕ್ಕುತಪ್ಪಿಸಿ ಬಂದಿರುವ ಸ್ಮಶಾನ (3)
9. ಮಗ ತಿರುಗಿಬಿದ್ದರೆ ಸಿಕ್ಕುವ ಹುಟ್ಟು (3)
11. ಅಷ್ಟ ಸರ್ಪಗಳಲ್ಲಿ ಒಂದು (3)
12. ಚಿನ್ನದಂತಹ ದಾಸ ಶ್ರೇಷ್ಠ (5)
13. ಒಂದೆಡೆಯಿಂದ ಮತ್ತೊಂದೆಡೆಗೆ ಹರಡುವಿಕೆ (3)
15. ಬೆಳಕಿಗೆ ಅಡ್ಡವಾಗಿ ಬಂದಾಗ ಉಂಟಾಗುವ ಛಾಯೆ (3)
17. ಅಸ್ತವ್ಯಸ್ತವಾಗಿರುವ ಮರುಕ (3)
19. ಮತ್ತೊಂದು ಅಮೃತದೊಂದಿಗೆ ಬಂದಿರುವ ಚಂದ್ರ (4)
20. ಲೋಕಾಭಿರಾಮವಾಗಿ ನಡೆಸುವ ಸಂಭಾಷಣೆ (4)

ಮೇಲಿನಿಂದಕೆಳಕ್ಕೆ

1. ಅವನು ತೋರಿದ ಪ್ರೀತಿ (4)
2. ಪಣಕ್ಕಿಟ್ಟು ಮಾಡಿದ ಸಂಚಾರ (3)
3. ರಾಮನು ತೆಗೆದುಕೊಂಡ ಬಿಡುವು (3)
4. ಪರಿಸ್ಥಿತಿಯನ್ನು ನಿರ್ವಹಿಸು (4)
8. ಸಾಮಗ್ರಿ ಅಥವಾ ಉಪಕರಣ (5)
10. ಮತ್ತೊಂದು ಕೈಯೊಂದಿಗೆ ಬಂದಿರುವ ಮೊಸಳೆ (3)
11. ಒಳ್ಳೆಯ/ಕೆಟ್ಟ ಕಂಪು (3)
14. ತಾಳ್ಮೆ, ಎಚ್ಚರಿಕೆ (4)
16. ನೆತ್ತರಿನ ಸೂಕ್ಷ್ಮವಾದ ಅಂಶ (4)
17. ಕೈಯಲ್ಲಿರುವ ತೆಂಗಿನ ಚಿಪ್ಪು (3)
18. ತಲೆಗೆ ಸುತ್ತಿಕೊಳ್ಳುವ ಮುಂಡಾಸು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
2. ಅಂಬಿಗ 5. ಏರಿಳಿತ 6. ಹಣಾಹಣಿ 7. ಕವನ 9. ಕಾರಣ 10. ಕಾರ್ತಿಕ 12. ದಂಪತಿ 13. ದಶಕ 15. ಮಹಲು 17. ಅರಸ 19. ವೃಕೋದರ 20. ರಜತಾದ್ರಿ 21. ಗುರಾಣಿ

ಮೇಲಿನಿಂದ ಕೆಳಕ್ಕೆ
1. ಪರಿವಾರ 2. ಅಂತಕ 3. ಗಹನ 4. ಸಹವರ್ತಿ 8. ವರೋಪಚಾರ 9. ಕಾಗದ 11. ಕವಲು 14. ಶಬ್ದಕೋಶ 16. ಹರತಾಳ 17. ಅರಗು 18. ಸರಣಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಚಂದ್ರಕಂಪನ!

ಎಲ್ಲರಿಗೂ ಭೂಕಂಪನದ ಬಗ್ಗೆ ಗೊತ್ತಿದೆ. ಇದೇನಿದು ಚಂದ್ರಕಂಪನ ಎಂದು ಕೇಳ್ತೀರಾ? ಭೂಮಿಯ ಮ್ಯಾಂಟಲ್‌ನಲ್ಲಿರುವ ಶಿಲಾವರ್ಥದ ಚಲನೆಯಿಂದಾಗುವ ಭೂಕಂಪನ, ಆದರೆ, ಚಂದ್ರನಲ್ಲೂ ಇದೇ ರೀತಿ ಯಾಗುತ್ತದೆ ಎಂದು ಕೇಳಬೇಕಿಲ್ಲ, ಏಕೆಂದರೆ, ಭೂಮಿ ಹಾಗೂ ಚಂದ್ರ ನಡುವೆ ಹಲವಾರು ವ್ಯತ್ಯಾಸಗಳಿ ದ್ದಾವೆ. ಚಂದ್ರನ ಮೇಲ್ಮೈ ಸಹ ಭೂಕಂಪದ ರೀತಿಯಲ್ಲಿ ನಡುಗುವಿಕೆ ಒಳಗಾಗುತ್ತದೆ. ಚಂದ್ರನ ಮೇಲೂ ಹಠಾತ್ ಆಗಿ ಬಿಡುಗಡೆಯಾಗುವ ಸೆಸ್ಮಿಕ್ ಕಿರಣಗಳಿಂದಾಗಿ, ಚಂದ್ರಕಂಪನ ಉಂಟಾಗುತ್ತದೆ. ಚಂದ್ರನ ಮೇಲೆ ನಡೆಯುವ ಈ ಕಂಪನಗಳು ಸಾಮಾನ್ಯವಾಗಿ ದುರ್ಬಲವಾಗಿರುತ್ತದೆ. ಅದಕ್ಕೆ ಭೂಮಿ ಮೇಲೆ ಇರುವ ಹಲವಾರು ರಚನೆಗಳಿಂದಲೂ ಆಗಬಹುದು. ಆದರೆ, ಚಂದ್ರಕಂಪನ ಹೆಚ್ಚುಕಾಲ ನಡೆಯುತ್ತದೆ. ಚಂದ್ರ ಕಂಪನಕ್ಕೆ ಮತ್ತೊಂದು ಕಾರಣ, ಚಂದ್ರನ ಮೇಲ್ಮೈಗೆ ಉಲ್ಕೆಗಳು ಬಡಿಯುವುದೂ ಇರಬಹುದು.



ಪುಸ್ತಕ ಲೋಕ

ಗಿಳಿಯು ಬಾರದೇ ಇರದು



ಮೇರಿ ಜೋಸೆಫ್ ಅವರ ಅನುವಾದಿತ ಕೃತಿಯಾಗಿದ್ದು, ಪಿ.ಎಸ್.ಶ್ರೀಧರ್ ಪಿಳ್ಳ ಅವರು ಕೃತಿಯ ಮೂಲ ಲೇಖಕ. ಅರಣ್ಯವಾಸ ನಗರವಾಸುಗಳಿಗೆ ನೀಡುವ ಹಿತಾನುಭ, ಪ್ರವಾಸದ ನಂತರದಲ್ಲಿ ಕಾಡುವ ಕಾಡು, ಕಾಡಿನಲ್ಲಿ ಬದುಕು ಕಟ್ಟುವ ಪ್ರಸಂಗ, ಜನರ ಮಧ್ಯೆ ಹೆಣ್ಣು ಹೆಣ್ತನವನ್ನು ಹುಡುಕುವ ಕಟ್ಟುಪಾಡಿನಲ್ಲಿ ತನ್ನ ಜೀವನವನ್ನೇ ಪಣಕ್ಕಿಡುವ ವಿಚಾರ ಹೀಗೆ ಹಲವಾರು ವಿಷಯಗಳು ಈ ಕೃತಿಯಲ್ಲಿ ಅಡಕವಾಗಿದೆ. ಹಸು ವಿನಲ್ಲಿ ಸರ್ವಸ್ವವನ್ನು ಕಾಣುವ ಒಂಟಿ ಅಜ್ಜಿಗೆ ವಿದೇಶದಲ್ಲಿ ಶ್ರೀಮಂತ ಮಕ್ಕಳು. ಸಂಧ್ಯಾಕಾಲದಲ್ಲಿ ನೆನೆಸಿಕೊಳ್ಳದವರು ತಾರೀಖಿಗೆ ಕಾಯುತ್ತಿ ದ್ದಾರೆ. ಕಾರ್ಯ ಮುಗಿಸಿದ ಕಾಯಕ್ಕೆ ಕಾಲವೂ ಸುಮ್ಮನಾಯಿತು. ಅಲ್ಲೊಬ್ಬ ಅಜ್ಜ ಜತನದಿಂದ ಕಾದ ಮಾವಿನಹಣ್ಣು ಪುಟ್ಟ ಹುಡುಗ ತಿಂದ. ಹುಡುಗನ ಆಸೆ ಅಜ್ಜನ ಆಶಯವಾಯ್ತು. ದೊಡ್ಡ ಅರಮನೆಯಲ್ಲಿ ಒಬ್ಬನೇ ಕೂತಿರುವಾಗ ಮುಗಿಲಿನಿಂದ ಹಾರಿ ಬಂದ ಪಂಚವರ್ಣದ ಗಿಳಿ ಅಜ್ಜನಿಗೆ ಸಾಂತ್ವನವ ಹೇಳಿತು. ಆಲೋಚನೆಯ ಮಡುವಿನಲ್ಲಿ ಕೊಚ್ಚಿ ಹೋಗುವಾಗ ಗಿಳಿ ಕಿವಿಮಾತೊಂದು ಹೇಳಿತು. ಹೋಗಿ ಬರುವೆನೆಂದು ಹೇಳಿ ಹೋದರೂ ಅದು ಹೋಗಿತ್ತು. ಆದರೆ ಅಜ್ಜನಿಗೆ ಗೊತ್ತು ಗಿಳಿ ಮತ್ತೆ ಬಾರದೇ ಇರದು.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● 'ಮೈತ್ರೀ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್' ಯಾವ ದೇಶದಲ್ಲಿದೆ?

- ಎ. ಭಾರತ
- ಬಿ. ನ್ಯೂಜಿಲೆಂಡ್
- ಸಿ. ಪಾಕಿಸ್ತಾನ
- ಡಿ. ಬಾಂಗ್ಲಾದೇಶ

ಉತ್ತರ: ಡಿ. ಬಾಂಗ್ಲಾದೇಶ

ಮಾಹಿತಿ

ಮೈತ್ರೀ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್, 1.6 ಶತಕೋಟಿ ಡಾಲರ್ ಮೊತ್ತದ ಭಾರತೀಯ ಕನ್ಸೆಷನಲ್ ಫೈನಾನ್ಸಿಂಗ್ ಸ್ಕೀಮ್ ಸಾಲದ ಮೂಲಕ ಧನಸಹಾಯ ಮಾಡಲ್ಪಟ್ಟಿದೆ. ಇದು ಬಾಂಗ್ಲಾದೇಶದಲ್ಲಿ ನೆಲೆಗೊಂಡಿರುವ 1320 ಮೆಗಾ ವ್ಯಾಟ್(ಋಗ) ಸಾಮರ್ಥ್ಯದ ಸೂಪರ್ ಥರ್ಮಲ್ ಪವರ್ ಪ್ಲಾಂಟ್ ಆಗಿದೆ. ಇತ್ತೀಚೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಮೈತ್ರೀ ಸೂಪರ್ ಥರ್ಮಲ್ ಪವರ್ ಪ್ಲಾಂಟ್‌ನ ಯುನಿಟ್ - II ಸೇರಿದಂತೆ ಭಾರತದ ಬೆಂಬಲಿತ ಮೂರು ಅಭಿವೃದ್ಧಿ ಯೋಜನೆಗಳನ್ನು ಜಂಟಿಯಾಗಿ ಉದ್ಘಾಟಿಸಿದರು.

ಗೋಪೂಜೆಯ ಹಬ್ಬ ಗೋವತ್ಸದ್ವಾದಶೀ

ಮನೋಹರ ಜೋಶಿ

ಕಾರ್ತಿಕ ಮಾಸ ದೀಪಗಳ ಮಾಸ.ಎಲ್ಲೋಲ್ಲೋ ಸಾಲು ಸಾಲು ಹಣತೆಗಳಿಂದ ಪ್ರಜ್ವಲಿಸುವ ಬೆಳಕಿನ ಮಾಸ.ಅನೇಕ ದೇವತೆಗಳನ್ನು ಪೂಜಿಸಿ ಆರಾಧಿಸುವ ಮಂಗಳಕರ ಮಾಸ.ದೀಪಾವಳಿ ಹಬ್ಬವು ತನ್ನದೇ ಆದ ವಿಶೇಷತೆಗಳನ್ನು ಹೊಂದಿದೆ. ಹಬ್ಬಗಳಿಗೆ ಮುಕುಟ ಪ್ರಾಯವಾದ ದೀಪಾವಳಿಯು ಪ್ರತಿಯೊಬ್ಬರಿಗೂ ಸಂತಸ ಸಂಭ್ರಮ ನೀಡುವ ಹಬ್ಬವಾಗಿದೆ.ದೇಶದ ಎಲ್ಲ ಭಾಗಗಳಲ್ಲೂ ಆಚರಿಸಲ್ಪಡುವ ಸಂಪ್ರದಾಯ ಸಂಸ್ಕೃತಿ ಹೊತ್ತುಗೊಂಡು ಬರುವ ವರುಷದ ಬಲು ದೊಡ್ಡ ಹಬ್ಬ.

ದೀಪಾವಳಿ ಹಬ್ಬವು ಐದು ದಿನಗಳವರೆಗೂ ಹಾಗು ಕೆಲವು ಪ್ರದೇಶಗಳಲ್ಲಿ ಏಳು ದಿನಗಳ ವರೆಗೂ ಆಚರಿಸಲ್ಪಡುವ ಸಂಭ್ರಮವೇ ಮೈದಳೆಯುವ ಹಬ್ಬವಾಗಿದೆ. ಮಾರ್ಗಶಿರ ಮಾಸದ ದ್ವಾದಶೀ ದಿನದಿಂದಲೇ ದೀಪಾವಳಿಗೆ ಚಾಲನೆ ದೊರೆಯುತ್ತದೆ. ಗೋವುಗಳನ್ನು ಪೂಜಿಸುವ ಗೋವತ್ಸ ದ್ವಾದಶಿಯು ಬೆಳಕಿನ ತೋರಣದ ಹಬ್ಬ ದೀಪಾವಳಿಯ ಸಂಭ್ರಮಕ್ಕೆ ಮುನ್ನುಡಿ ಬರೆಯುತ್ತದೆ. ದೀಪಾವಳಿ ಹಬ್ಬದ ಸಂಭ್ರಮ ಗೋವತ್ಸ ದ್ವಾದಶಿಯಿಂದಲೇ ಪ್ರಾಂಭವಾಗುತ್ತದೆ.

ಭಾರತ ದೇಶದಲ್ಲಿ ಆಶ್ವಿಜ ಕೃಷ್ಣ ಪಕ್ಷದ ದ್ವಾದಶಿಯ ದಿನದಿಂದಲೇ ದೀಪಾವಳಿ ಹಬ್ಬದ ಸಂಭ್ರಮ ಪ್ರಾರಂಭವಾಗುತ್ತದೆ. ಮೊದಲ ದಿನವೇ ಗೋವತ್ಸ ದ್ವಾದಶಿ ಹಬ್ಬ. ಗೋವುಗಳಿಗೆ ಗೌರವ ಸಲ್ಲಿಸುವ ವ್ರತ. ಮನೆಯ ಹೆಣ್ಣು ಮಕ್ಕಳು, ಮುತ್ತೈದೆಯರು ಬೆಳಗ್ಗೆ ಅಥವಾ ಸಾಯಂಕಾಲ ಕರು ಸಮೇತವಿರುವ ಆಕಳು ಪೂಜೆಯನ್ನು ಮಾಡುತ್ತಾರೆ. ಸಂಜೆ ಉಪವಾಸವಿದ್ದು ಗೋಧೂಳಿ ಮುಹೂರ್ತದಲ್ಲಿ ಕರುವಿನ ಸಹಿತ ಗೋಪೂಜೆ ಮಾಡುವರು.

ಗೋವತ್ಸ ದ್ವಾದಶೀ: ಭಾರತೀಯ ಸಂಸ್ಕೃತಿಯಲ್ಲಿ ದ್ವಾದಶೀ ಎಂದು ಹೆಸರಿಸಲಾಗಿದೆ. ಈ ದಿನದಂದು ಕರು ಸಹಿತ ಆಕಳಿನ ಪೂಜೆ ಮಾಡುವದು ಪುಣ್ಯಕರವೆಂದು ಶಾಸ್ತ್ರಕಾರರು ತಿಳಿಸಿಕೊಟ್ಟಿರುವರು. ಇಂದಿನದಿಂದ 5 ದಿನಗಳತನಕ ದೇವತೆಗಳಿಗೆ, ವಿಪ್ರರಿಗೆ, ಗುರು-ಹಿರಿಯರಿಗೆ, ಗೋವುಗಳಿಗೆ ಆನೆ ಕುದುರೆಗಳಿಗೆ ನೀರಾಂಜನ ಮಾಡುವರು. ಇಂದು ಆಕಳ ಕರುವಿನ ಸುವರ್ಣ, ರಜತ ಇಲ್ಲವೇ ತಾಮ್ರದಿಂದ ತಯಾರಿಸಿದ ಪ್ರತಿಮೆ ಅಥವಾ ಆಕಳ ಚಿತ್ರದ ಜೊತೆಗೆ ಕರುವಿನ ಚಿತ್ರ ಬರೆದು ಗಂಧ-ಹೂವು-ತುಳಸಿ ಪುಷ್ಪಗಳಿಂದ ಅರ್ಚಿಸುವರು. ನಂತರ ಹಸುವಿನ ಪಾದಗಳಿಗೆ ಹಾಲಿನಿಂದ ಈ ಮಂತ್ರಗಳಿಂದ ಅರ್ಘ್ಯವನ್ನು ಕೊಡಬೇಕು. 'ಕ್ಷೀರೋದಾರ್ಣವ ಸಂಭೂತೇಸುರಾಸುರ ನಮಸ್ಕೃತೇ, ಸರ್ವದೇವಮಯೇ ಮಾತಃ ಗ್ರಹಣಾರ್ಘ್ಯಂ ನಮೋಸ್ತುತೇ..'

ಆಕಳಿನ ಮೈಮೇಲೆ ರೇಷ್ಮೆವಸ್ತ್ರ, ಸೀರೆ ಕುಪ್ಪಸಗಳು ಹೊದ್ದಿಸಿ ಪ್ರದಕ್ಷಿಣೆ-ನಮಸ್ಕಾರಗಳೊಂದಿಗೆ ಗೋವುಗಳ ಉಪಕಾರ ಭಕ್ತಿಯಿಂದ ಸ್ಮರಿಸುವರು.ಬೆಲ್ಲ, ಗೋಧಿ, ಹೆಸರು ಕಾಳಿನಿಂದ ಮಾಡಿದ ಭಕ್ಷ್ಯಗಳು, ಉದ್ದಿನ ದೋಸೆ ನೈವಿದ್ಯ ಮಾಡಿ ತಿನ್ನಲು ಕೊಡುವರು. ಹಸುವನ್ನು ಗೌರವಿಸುವ ಸಂಪ್ರದಾಯ ನಮ್ಮ ಪರಂಪರೆಯಲ್ಲಿ ಅನಾದಿ ಕಾಲದಿಂದ ಬಂದಿರುವ ಸಂಪ್ರದಾಯ. ಆದ್ದರಿಂದ ಹಸುವಿನ ಗೌರವದ ಸಂಕೇತವಾಗಿ ಗೋವತ್ಸ ದ್ವಾದಶಿಯ ದಿನ ಹಸುವಿನ ಹಾಲು ತುಪ್ಪ ಮಜ್ಜಿಗೆ ಮೊಸರು ಸೇವಿಸಬಾರದೆಂದು ನಿಮಯಮವಿದೆ.

ಪೌರಾಣಿಕ ಹಿನ್ನಲೆ: ಸಮುದ್ರ ಮಂಥನದಿಂದ ಐದು ಕಾಮಧೇನುಗಳು ಉತ್ಪನ್ನವಾದವು. ಅವುಗಳಲ್ಲಿನ ಒಂದು ಅಂಶವನ್ನು ನಾವು ಗೋವುಗಳಲ್ಲಿ ಕಾಣುತ್ತೇವೆ. ಹಸುವನ್ನು ಶ್ರೀಲಕ್ಷ್ಮೀದೇವಿಗೆ ಹೋಲಿಸುತ್ತೇವೆ. ಯಾವುದೆಲ್ಲ ಮಾತೃಸ್ವರೂಪವೋ ಅವೆಲ್ಲವೂ ನಮಗೆ ಲಕ್ಷ್ಮೀ. ಹಸುವಿಲ್ಲದೆ ಮನುಷ್ಯ ಜೀವನ ನಡೆಸುವದು ದುರ್ಬಲ. ಹಸುವಿನಿಂದ ಸಿಗುವ ಹಾಲು, ಮೊಸರು, ಬೆಣ್ಣೆ ತುಪ್ಪ, ಗಂಜಳ, ಸಗಣಿ ಎಲ್ಲವೂ ದಿನಂಪ್ರತಿ ನಮಗೆ ಉಪಯುಕ್ತವಾದುದ್ದೆ ಆಗಿದೆ. ಪ್ರತಿಯೊಂದು ಕೂಡ ಸ್ವಾತಿಕ ಗುಣಗಳಿಂದ ಕೂಡಿದ್ದು ಅನಂತ ಪವಿತ್ರವೂ ಆಗಿವೆ. ಪುರಾಣಗಳ ಪ್ರಕಾರ ಸ್ವಾಯಂಭೂ ಮನುವಿನ ಮಗನಾದ ರಾಜ ಉತ್ತಾನಪಾದ ಹಾಗು ಅವನ ಪತ್ನಿ ಸುನೀತಿಯಿಂದ ಮೊದಲ ಗೋವತ್ಸ ದ್ವಾದಶೀ ವ್ರತಾಚರಣೆ ಪ್ರಾರಂಭವಾಗುತ್ತದೆ. ಇವರ ಭಕ್ತಿ-ಪ್ರಾರ್ಥನೆಯಿಂದ ದಂಪತಿಗಳಿಗೆ ಧ್ರುವ ಎಂಬ ಮಗನು ಜನಿಸಿದನು. ಈ ವ್ರತಾಚರಣೆ ಮಾಡುವದರಿಂದ ಎಲ್ಲ ಮನೋ ಕಾಮನೆಗಳು ನೆರವೇರುವದರ ಜೊತೆಗೆ ಮನೆಯಲ್ಲಿ ಮಕ್ಕಳು ಆರೋಗ್ಯದಿಂದಿದ್ದು ಉತ್ತರೋತ್ತರ ಅಭಿವೃದ್ಧಿ ಹೊಂದುತ್ತಾರೆಂದು ಬಲವಾದ ನಂಬಿಕೆ.

ಗೋಮಾತೆಗೆ ತುಂಬಾ ಮಹತ್ವವಿದೆ. ಗೋವನ್ನು ನಮ್ಮ ಸಂಸ್ಕೃತಿಯಲ್ಲಿ ಮಾತೃಸ್ಥಾನ ನೀಡಿ ಗೌರವಿಸಲ್ಪಟ್ಟಿದೆ. ಕಾಮಧೇನು ಕಲ್ಪವೃಕ್ಷವೆಂದೇ ಪೂಜೆಗೊಳ್ಳುವ ಗೋಮಾತೆಯು ಸಕಲ ಮನೋಕಾಮನೆಗಳಿಗೆ ಕಾರಣೀಭೂತವಾಗಿದ್ದಾಳೆ. ಗೋವಿನಲ್ಲಿ ಮುಕ್ಕೋಟಿ ದೇವರ ಸನ್ನಿಧಾನವಿದೆ ಎಂದು ನಮ್ಮ ಪುರಾಣಗಳು ಪ್ರಸ್ತುತ ಪಡಿಸಿವೆ. ಶ್ರೀಕೃಷ್ಣನಿಗೆ ಪ್ರಿಯವಾಗಿರುವ ಹಾಗೂ ಎಲ್ಲ ದೇವತೆಗಳು ತನ್ನಲ್ಲಿ ವಾಸಿಸುವಂತಹ ಯೋಗ್ಯತೆಯಿರುವ ಗೋಮಾತೆಯನ್ನು ಈ ದಿನದಂದು ಪೂಜೆ ಮಾಡುವರು. ಇಂತಹ ಗೋಮಾತೆಯನ್ನು ಅವಳ ಕರುಗಳ ಸಹಿತ ಪೂಜಿಸಿ ದೀಪಾವಳಿಯ ದೀಪೋತ್ಸವ ಆಚರಿಸಬೇಕು.

ಅಶ್ವಿನ ಕೃಷ್ಣ ಪಕ್ಷದ (ಕಾರ್ತಿಕ ಮಾಸದ ದೀಪಾವಳಿ) ದ್ವಾದಶೀಯ ದಿನಂದಂದು ದೀಪಾವಳಿಯ ಗೋವತ್ಸ

ಗೋವತ್ಸದ್ವಾದಶೀಯ ವೈವಿಧ್ಯತೆ: ಬೇರೆ ಬೇರೆ ಭಾಗಗಳಲ್ಲಿ ಅನೇಕಾನೇಕ ಹೆಸುರುಗಳಿಂದ ಗುರುತಿಸಿಕೊಳ್ಳುವ ಗೋವತ್ಸ ದ್ವಾದಶೀಯು ದೇಶದ ತುಂಬೆಲ್ಲ ಆಚರಿಸುತ್ತಾರೆ. ಗುಜರಾತಿನಲ್ಲಿ ಗೋ ಪೂಜೆ ಹಬ್ಬಕ್ಕೆ ವಾಘ್ ಬರಸ್ ಎಂದು ಕರೆದರೆ ಮಹಾರಾಷ್ಟ್ರದಲ್ಲಿ ವಸು ಬರಸ್ ಎನ್ನುವ ಹೆಸರಿನಿಂದ ಕರೆಯುತ್ತಾರೆ. ವಸು ಎಂದರೆ ಆಕಳು ಬರಸ್ ಎಂದರೆ ಮಾಸದ 12 ನೇ ದಿನದ ದ್ವಾದಶೀ ತಿಥಿ. ದಕ್ಷಿಣ ಭಾರತದಲ್ಲಿ ಇದನ್ನು 'ಗೋವತ್ಸ ದ್ವಾದಶೀ', 'ನಂದಿನಿ ದ್ವಾದಶೀ' ಎಂತಲೂ ಕರೆಯುವರು. ಗುಜರಾತಿ ವ್ಯಾಪಾರಸ್ಥರು ಈ ದಿನ ತಮ್ಮ ವ್ಯಾಪಾರದ ಖಾತೆ ಪೂರ್ಣಗೊಳಿಸಿ ಹೊಸ ಖಾತೆ ಕೀರ್ದಿಗಳು ಪ್ರಾರಂಭಿಸುತ್ತಾರೆ.

ಹುಲಿ ಕುಣಿತ: ಶೌರ್ಯದ ಸಂಕೇತ

ಹೊಸ್ಮನೆ ಮುತ್ತು

ತಟ್ಟನೆ ನೈಜ ಹುಲಿಯ ವದನದಂತೆ ಕಾಣುವ ಇದು ಹುಲಿ ವೇಷದ ಮುಖವಾಡ. ಭಾರತೀಯ ಸಂಸ್ಕೃತಿಯಲ್ಲಿ ಸಾಂಪ್ರದಾಯಿಕವಾಗಿ ಬಳಸಲಾಗುವ ಒಂದು ರೀತಿಯ ಮುಖವಾಡವಾಗಿದೆ. ಹುಲಿ ವೇಷದ ಕುಣಿತದಲ್ಲಿ ಬಳಕೆಯಾಗುವ ಈ ಮುಖವಾಡಗಳನ್ನು ಸಾಮಾನ್ಯವಾಗಿ ಭಾರತೀಯ ಹಬ್ಬ, ಉತ್ಸವಗಳು ಹಾಗೂ ಕಲಾ ಪ್ರದರ್ಶನಗಳಲ್ಲಿನಡೆಯುವ ನೃತ್ಯಗಳಲ್ಲಿ ಬಳಸಲಾಗುತ್ತದೆ. ಹುಲಿ ವೇಷದ ಮುಖವಾಡಗಳು ನಮ್ಮ ಸಂಸ್ಕೃತಿಯಲ್ಲಿ ಶಕ್ತಿ, ಶೌರ್ಯ ಮತ್ತು ಭಯವನ್ನು ಸೂಚಿಸುವ ಸಾಂಕೇತಿಕ ಪ್ರತಿನಿಧಿಯಾಗಿ ಬಳಸಲಾಗುತ್ತದೆ.

ಹುಲಿವೇಷದ ಕುಣಿತವು ಒಂದು ಜಾನಪದ ಕಲೆಯಾಗಿದ್ದು, ಇದನ್ನು ಭಾರತದ ಹಲವಾರು ಭಾಗಗಳಲ್ಲಿ ನಡೆಸಲಾಗುತ್ತದೆ. ಹುಲಿವೇಷ ಧರಿಸಿದ ಕಲಾವಿದರು ಹುಲಿಗಳಂತೆ ನೃತ್ಯ ಮಾಡುತ್ತಾ, ಪ್ರೇಕ್ಷಕರಲ್ಲಿ ಭಯ ಮತ್ತು ಆಕರ್ಷಣೆಯನ್ನುಂಟುಮಾಡುತ್ತಾರೆ. ಹುಲಿ ವೇಷದ ಮುಖವಾಡವನ್ನು ಧರಿಸುವುದು ಒಂದು ರೋಮಾಂಚಕಾರಿ ಅನುಭವವಾಗಿದೆ. ಇದು ನಿಮ್ಮನ್ನು ಕೆಲ ಕ್ಷಣ ಹುಲಿಯಂತೆ ಭಾವಿಸುವ ಹಾಗೆ ಮಾಡುತ್ತದೆ. ಕರಾವಳಿಯ ದಸರಾ ಮತ್ತು ಹುಲಿವೇಷದ ಕುಣಿತಕ್ಕೆ ಒಂದು ವಿಶೇಷವಾದ ನಂಟಿದೆ. ವೇಷಧಾರಿಗಳಿಗೆ ಹುಲಿಯ ದೇಹ ಭಾಷೆ, ಆಂಗಿಕ ಅಭಿನಯ ಕರಗತ. ಈ ಭಾಗದಲ್ಲಿ ದಸರಾ ಸಡಗರಕ್ಕೆ ಕಳೆಕಟ್ಟುವುದೇ ಈ ಹುಲಿ ಕುಣಿತದಿಂದ. ಹುಲಿ ವೇಷದಾರಿಗಳು ಹಲವಾರು ರೀತಿಯಲ್ಲಿ ತಮ್ಮ ಪ್ರದರ್ಶನವನ್ನು ನೀಡುತ್ತಾರೆ.ಹುಲಿ ವೇಷವು ತನ್ನ ವಿಭಿನ್ನ ವೇಷ ಮತ್ತು ಕುಣಿತದಿಂದ ಜನ ಮಾನ್ಯತೆ ಹೊಂದಿದೆ.

ಚುನಾವಣೆಗೆ ಸಾರ್ವಜನಿಕರ ಸಹಭಾಗಿತ್ವ ಅಮೂಲ್ಯ

ಚುನಾವಣಾ ಅಕ್ರಮ ತಡೆಯಲು ಸಾರ್ವಜನಿಕರು ಸಿ-ವಿಜಿಲ್ ಆ್ಯಪ್‌ನಲ್ಲಿ ದೂರು ಸಲ್ಲಿಸಿಸಲು ಸೂಚನೆ

ಬಳ್ಳಾರಿ: ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆಗಳನ್ನು ನಡೆಸಲು ಸಾರ್ವಜನಿಕರ ಸಹಭಾಗಿತ್ವವೂ ಅತ್ಯಮೂಲ್ಯವಾಗಿದೆ. ಅದೇ ರೀತಿಯಾಗಿ ಮುಕ್ತ, ಪಾರದರ್ಶಕ ಚುನಾವಣೆ ನಡೆಸಲು ಮತ್ತು ಚುನಾವಣಾ ಅಕ್ರಮ ತಡೆಯಲು ಭಾರತದ ಚುನಾವಣಾ ಆಯೋಗವು ಸಿ-ವಿಜಿಲ್ (ಅ-ಗಿರಿಟ) ಮೊಬೈಲ್ ಅಪ್ಲಿಕೇಶನ್‌ಅನ್ನು ಅಭಿವೃದ್ಧಿಪಡಿಸಿದೆ.

ಇತ್ತೀಚಿನ ದಿನಗಳಲ್ಲಿ ಎಲ್ಲರ ಬಳಿಯು ಸ್ಮಾರ್ಟ್‌ಫೋನ್ ಇರುವುದು ಸಹಜ. ಅಂಗೈ ತುದಿಯಲ್ಲಿ ಎಲ್ಲ ವೀಕ್ಷಿಸಬಹುದು ಮತ್ತು ಸೆರೆಹಿಡಿಯಬಹುದು. ಸಿ-ವಿಜಿಲ್‌ನೊಂದಿಗೆ, ನಿಮ್ಮ ಸ್ಮಾರ್ಟ್‌ಫೋನ್‌ನಿಂದ ನೇರವಾಗಿ ಮಾದರಿ ನೀತಿ ಸಂಹಿತೆಯ ಯಾವುದೇ ಉಲ್ಲಂಘನೆಗಳನ್ನು ನೀವು ವರದಿ ಮಾಡಬಹುದಾಗಿದೆ.

ಇದು ಮತದಾರರ ಯಾವುದೇ ಆಮಿಷಗಳ ಅಥವಾ ಅಕ್ರಮ ಪ್ರಚಾರ ಹಾಗೂ ಸರಕಾರಿ ಸಂಪನ್ಮೂಲಗಳ ದುರುಪಯೋಗ ಅಥವಾ ಯಾವುದೇ ರೀತಿಯ ಉಲ್ಲಂಘನೆಯಾಗಿರಬಹುದು. ನಿಮ್ಮ ವರದಿಯು ನಮ್ಮ ಚುನಾವಣೆಗಳ ಸಮಗ್ರತೆಯನ್ನು ಎತ್ತಿಹಿಡಿಯಲು ಸಹಾಯ ಮಾಡುತ್ತದೆ.

ಮತಕ್ಕಾಗಿ ಮತದಾರರನ್ನು ಸೆಳೆಯಲು ಹಣ, ಮದ್ಯ, ಉಡುಗೋರೆಗಳನ್ನು ಹಂಚುವವರನ್ನು ಪೊಲೀಸರಿಗೆ ತಿಳಿಸುವುದು ಹೇಗೆ? ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗುವುದನ್ನು ಹೇಗೆ ತಡೆಗಟ್ಟಬೇಕು ಎಂಬ ಹಲವು ಪ್ರಶ್ನೆಗಳು ಇದ್ದಲ್ಲಿ ಸಾರ್ವಜನಿಕರು ಸಿ-ವಿಜಿಲ್ ಆಪ್ (ಸಿಟಿಜನ್ -ವಿಜಿಲ್) ಮೂಲಕ ದೂರು ನೀಡಬಹುದು.

ಸಿ-ವಿಜಿಲ್ ಆಪ್ ಡೌನ್‌ಲೋಡ್ ಮಾಡಿಕೊಳ್ಳುವುದು ಹೇಗೆ?

ಮೊದಲು ಗೂಗಲ್ ಪ್ಲೇಸ್ಟೋರ್ ಅಥವಾ ಆಪಲ್ ಆಪ್ ಸ್ಟೋರ್‌ನಿಂದ ಸಿ-ವಿಜಿಲ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿ. ನೀವು ಸಾಕ್ಷಿಯಾಗಿರುವ ಯಾವುದೇ ಚುನಾವಣಾ ಸಂಬಂಧಿತ ಉಲ್ಲಂಘನೆಗಳ ಫೋಟೋಗಳು ಅಥವಾ ವೀಡಿಯೊಗಳನ್ನು ಸೆರೆಹಿಡಿಯಿರಿ. ನಿಮ್ಮ ವರದಿಯನ್ನು ಅಪ್ಲಿಕೇಶನ್ ಮೂಲಕ ಅಪ್‌ಲೋಡ್ ಮಾಡಿ, ಘಟನೆ ಮತ್ತು ಸ್ಥಳದ ವಿವರಗಳನ್ನು ಒದಗಿಸಿ. ನಿಮ್ಮ ವರದಿಯನ್ನು ಕ್ರಮಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತ್ವರಿತವಾಗಿ ರವಾನಿಸಲಾಗುತ್ತದೆ.

ಸಿ-ವಿಜಿಲ್ ಆಪ್ ಕಾರ್ಯ ಹೇಗೆ

ಆ್ಯಪ್ ಓಪನ್ ಮಾಡಿದಾಗ ನಿಮ್ಮ ಹೆಸರು ಹಾಗೂ ಮೊಬೈಲ್ ಸಂಖ್ಯೆಯ ಹಾಕಿ ರಿಜಿಸ್ಟರ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಹಣ, ಮದ್ಯ, ಉಡುಗೊರೆಗಳನ್ನು ಹಂಚುವ ಸಂದರ್ಭದಲ್ಲಿ ಸಾರ್ವಜನಿಕರು ಫೋಟೋ ಮತ್ತು ವಿಡಿಯೋವನ್ನು (2 ನಿಮಿಷ) ಸೆರೆಹಿಡಿದು ಈ ಆಪ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಅಲ್ಲಿನ ವಿಳಾಸವನ್ನು ನಮೂದಿಸಬೇಕು. ಜತೆಗೆ ಇದು ಸಂಪೂರ್ಣ ಉಚಿತವಾಗಿರಲಿದೆ.

ಏನೆಲ್ಲಾ ದೂರು ನೀಡಬಹುದು

ವ್ಯಕ್ತಿಯೊಬ್ಬರು ನಿರ್ದಿಷ್ಟ ವ್ಯಕ್ತಿ ಅಥವಾ ಪಕ್ಷಕ್ಕೆ ಹಣ ವಿತರಣೆ ಮಾಡಿದರೆ, ಉಡುಗೋರೆ, ಮದ್ಯ ಹಂಚಿಕೆ, ಅನುಮತಿ ಪಡೆಯದೇ ಬ್ಯಾನರ್ ಅಥವಾ ಪೋಸ್ಟರ್, ಬೆದರಿಕೆ ಹಾಕುವುದು, ಬಂದೂಕು ಪ್ರದರ್ಶನ, ಧಾರ್ಮಿಕ ಅಥವಾ ಕೋಮು ಕುರಿತು ಪ್ರಚೋದನಾಕಾರಿ ಭಾಷಣ, ಮತಗಟ್ಟೆಯ 200 ಮೀಟರ್ ಪ್ರದೇಶದಲ್ಲಿ ನಿಷೇಧದ ಅವಧಿಯಲ್ಲೂ ಪ್ರಚಾರ, ಮತದಾನದ ದಿನದಂದು ಮತದಾರರನ್ನು ಸಾಗಿಸುವುದು.. ಹೀಗೆ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಈ ಆಪ್‌ನಲ್ಲಿ ದೂರು ಕೊಡಬಹುದು. ಒಟ್ಟು 16 ರೀತಿಯ ದೂರುಗಳನ್ನು ಇದರಡಿ ನೀಡಬಹುದು.

ದೂರಿನೊಂದಿಗೆ ಸೆರೆಹಿಡಿಯಲಾದ ಜಿಪಿಎಸ್ ಮಾಹಿತಿಯು ಅದನ್ನು ಸಂಬಂಧಪಟ್ಟ ಜಿಲ್ಲಾ ನಿಯಂತ್ರಣ ಕೊಠಡಿಗೆ ಸ್ವಯಂಚಾಲಿತವಾಗಿ ಫ್ಲಾಗ್ ಮಾಡುತ್ತದೆ. ಫ್ಲ್ಯೆಯಿಂಗ್ ಸ್ಕಾ??ಡ್ ತಂಡಗಳನ್ನು ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ರವಾನಿಸಲು ಅನುವು ಮಾಡಿಕೊಡುತ್ತದೆ.

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಚುನಾವಣೆಯನ್ನು ಮುಕ್ತ ಮತ್ತು ನ್ಯಾಯಯುತವಾಗಿ ನಡೆಸಲು ಯಾವುದೇ ಚುನಾವಣೆ ಅಕ್ರಮ, ಆಮಿಷ ತಡೆಲು ಸಿವಿಜಿಲ್ ಬಳಸುವ ಮೂಲಕ ಎಲ್ಲರೂ ಒಟ್ಟಾಗಿ ಪ್ರಜಾಪ್ರಭುತ್ವದ ರಕ್ಷಕರಾಗೋಣ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

100 ನಿಮಿಷಗಳಲ್ಲಿ ಸಿಗಲಿದೆ ಉತ್ತರ

ಆ್ಯಪ್‌ನಲ್ಲಿ ದಾಖಲಿಸುವ ದೂರುಗಳ ಬಗ್ಗೆ ಜಿಲ್ಲಾ ಮಟ್ಟದ ಸಿ-ವಿಜಿಲ್ ನೋಡೆಲ್ ಅಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ. ಸಾರ್ವಜನಿಕರ ದೂರುಗಳಿಗೆ 100 ನಿಮಿಷಗಳ ಒಳಗೆ ಅಧಿಕಾರಿಗಳ ಉತ್ತರ ಸಿಗಲಿದೆ. ಇದರಿಂದ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಆಮಿಷಗಳು ಸಾಕ್ಷಿ ಸಮೇತ ದಾಖಲಾಗಲಿವೆ.

ಸಿ-ವಿಜಿಲ್ ತಂಡ ಸಕ್ರಿಯ

ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಈಗಾಗಲೇ ಸಿ-ವಿಜಿಲ್ ತಂಡ ಕಾರ್ಯಗತವಾಗಿದೆ. ಸಂಡೂರು ವಿಧಾನಸಭೆ ಉಪಚುನಾವಣೆಗೆ ಮಾದರಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಒಟ್ಟು 16 ದೂರುಗಳು ಸಿ-ವಿಜಿಲ್ ಮುಖಾಂತರ ದಾಖಲಾಗಿದ್ದು, 13 ಪ್ರಕರಣಗಳು ವಿಲೇ ಮಾಡಲಾಗಿದೆ.

ಕಂಟ್ರೋಲ್ ರೂಂ

ಮತದಾರರಿಗೆ ಅಗತ್ಯ ಮಾಹಿತಿ, ಮತದಾರರ ಗುರುತಿನ ಚೀಟಿ ಸಂಬಂಧಿತ ಇತರೆ ಮಾಹಿತಿ ಇದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಿರುವ ಕಂಟ್ರೋಲ್ ರೂಂ ಅಥವಾ ಮತದಾರರ ಸಹಾಯವಾಣಿ ಸಂಖ್ಯೆ **1950** ಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ. ಸಂಡೂರು ವಿಧಾನಸಭೆ ಉಪಚುನಾವಣೆಗೆ ಸಂಬಂಧಿಸಿದಂತೆ, ಇಲ್ಲಿಯವರೆಗೆ 13 ಕರೆಗಳು ಸ್ವೀಕರಿಸಿದ್ದು, ಸಂಬಂಧಿಸಿದ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಒದಗಿಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ದನಗಳನ್ನು ರಸ್ತೆಯಲ್ಲಿ ಬಿಡದಿರಲು ಸೂಚನೆ

ಹೊಸಪೇಟೆ: ಹೊಸಪೇಟೆ ನಗರದಲ್ಲಿ ಬಿಡಾಡಿ ದನಗಳ ಆವಳಿ ಹೆಚ್ಚಾಗಿದ್ದು, ಬಿಡಾಡಿ ದನಗಳ ಮಾಲೀಕರಿದ್ದಲ್ಲಿ ದನಗಳನ್ನು ತಮ್ಮ ನಿವಾಸದ ಕೊಟ್ಟಿಗೆಯಲ್ಲೆ ಕಟ್ಟಿಕೊಳ್ಳಲು ನಗರಸಭೆ ಪೌರಾಯುಕ್ತ ಚಂದ್ರಪ್ಪ ತಿಳಿಸಿದ್ದಾರೆ. ಬಿಡಾಡಿ ದನಗಳು ನಗರಸಭೆ ವ್ಯಾಪ್ತಿಗೆ ಬರುವ ಸಂಡೂರ್ ರಸ್ತೆ, ವಾಲ್ಮೀಕಿ ಸರ್ಕಲ್, ಎಪಿಎಂಸಿ ಸರ್ಕಲ್, ಬಳ್ಳಾರಿ ರೋಡ್ ಸರ್ಕಲ್, ಚಿತ್ತವಾಡಗಿ, ದೀಪಾಯನ ಶಾಲೆ ಮುಂಭಾಗ, ಆಕಾಶವಾಣಿ ಹತ್ತಿರ, ಆಶೋಕ್ ಬುಕ್‌ಸ್ಟಾಲ್ ಹತ್ತಿರ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ದನಗಳು ಅಡ್ಡಲಾಗಿ, ಗುಂಪು ಗುಂಪುಗಳಾಗಿ ಮಲಗುತ್ತಿರುವುದರಿಂದ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ, ವಯೋವೃದ್ಧರಿಗೆ, ಚಿಕ್ಕಮಕ್ಕಳಿಗೆ ತೊಂದರೆ ಉಂಟುಮಾಡುತ್ತಿವೆ. ಹಾಗೂ ಇವುಗಳಿಂದ ಅಪಘಾತವಾಗಿ ಪ್ರಾಣಹಾನಿಯ ಸಂಭವ ಇರುವುದರಿಂದ ಬಿಡಾಡಿ ದನಗಳ ಮಾಲೀಕರು ನವೆಂಬರ್ 3 ರೊಳಗಾಗಿ ದನಗಳನ್ನು ರಸ್ತೆಯಲ್ಲಿ ಬಿಡದೆ ತಮ್ಮ ನಿವಾಸಲದಲ್ಲಿಯೇ ದನಗಳನ್ನು ಕಟ್ಟಿಕೊಳ್ಳಬೇಕು. ಇಲ್ಲವಾದಲ್ಲಿ ಕರ್ನಾಟಕ ಪುರಸಭೆ ಅಧಿನಿಯಮ 1964 ರನ್ವಯ ಕ್ರಮ ಗೈಗೊಂಡು ದನಗಳನ್ನು ಗೋಶಾಲೆಗೆ ರವಾನಿಸಲಾಗುವುದು, ನಂತರ ಯಾವುದೇ ಕಾರಣಕ್ಕೂ ದನಗಳನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಅಧ್ಯಾತ್ಮ ದೀಪಾವಳಿ ಹಬ್ಬ ಆಚರಿಸಿ

ಸಂಡೂರು: ಅಧ್ಯಾತ್ಮ ದೀಪಾವಳಿ ಹಬ್ಬವನ್ನು ಆಚರಿಸುತ್ತೇವೆ, ನಾವೆಲ್ಲರೂ ಜಗಜ್ಯೋತಿಗಳಾಗಬೇಕು, ದೀಪ ಬೆಳಕಿನ ಸಂಕೇತ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದ ಅಕ್ಕ ನಾಗವೇಣಿ ತಿಳಿಸಿದರು. ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದಲ್ಲಿ ದೀಪೋತ್ಸವ ಕಾರ್ಯಕ್ರಮದಲ್ಲಿ ದೀಪಾವಳಿ ಹಬ್ಬದ ವಿಶೇಷ ಕುರಿತು ಮಾತನಾಡಿದರು. ದೀಪ ಅಜ್ಞಾನದ ಕತ್ತಲೆಯನ್ನು ನಿವಾರಿಸುತ್ತದೆ. ನಾನು ಶರೀರವಲ್ಲ ನಾನು ಜ್ಯೋತಿ ಎಂದಾಗ ಶಿವಬಾಬಾ ಬರುತ್ತಾರೆ. ಆತ್ಮರೂಪಿ ಲಿಂಗವು ಹಾರಿಹೋಗಿದ್ದು ಜ್ಞಾನದ ಬಲದಿಂದ ಪ್ರಕಾಶಮಾನವಾಗಿ ಹೊಳೆಯಲು ಸಾಧ್ಯ, ಪರಮಾತ್ಮ ಜ್ಞಾನದ ದೀಪ ಬೆಳಗಿದ್ದಾನೆ ಎಂದರು. ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕು ಬೆಳಗಲು ಬಂದಿದ್ದೇವೆ. ಎಂಬ ಸಂಕಲ್ಪ ಮನಸ್ಸಿನಿಂದ ವಿಚಾರದಿಂದ ದೀಪ ಬೆಳಗಿಸಬೇಕಾಗಿದೆ ಎಂದು ಹೇಳಿದರು. ಸಂಪತ್ತಿನಿಂದ ಆಯುಷ್ಯ ಹೆಚ್ಚಾಗಲು ಸಾಧ್ಯವಿಲ್ಲ, ಶರೀರವೇ ಶಾಶ್ವತವಲ್ಲ. ಲಕ್ಷ್ಮೀ ರಾಧೇ ಎನ್ನುವುದನ್ನು ಮರೆಯಬಾರದು ಧನ ಸಂಪತ್ತು ಬೇರೆ, ಸಂಗಮವೇ ಬೇರೆ, ದಾನ ಎಂದರೆ ಭಗವಂತನ ಪರಿಚಯ ಮಾಡಿಕೊಡುವುದು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಹೊಸಪೇಟೆ: ಜೆಸ್ಕಾಂ ಕಮಲಾಪುರದ 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಅಕ್ಟೋಬರ್ 29 ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಅಂದು ಕಮಲಾಪುರ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ, ಸೀತರಾಮ ತಾಂಡ, ಮಲಪನಗುಡಿ, ಹಂಪಿ, ಪಾಪಿನಾಯಕನಹಳ್ಳಿ, ಗಾದಿಗನೂರು ಮತ್ತು ಬೈಲುವದ್ದೀಗೆರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್‌ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಹಾಗೂ ರೈತರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯೋತ್ಸವ ದೀಪಾಲಂಕಾರಕ್ಕೆ ಸೂಚನೆ

ಹೊಸಪೇಟೆ: ಬಳ್ಳಾರಿ, ವಿಜಯನಗರ ಜಿಲ್ಲೆಯಲ್ಲಿನ ಎಲ್ಲಾ ಧಾರ್ಮಿಕ ಸಂಸ್ಥೆಗಳ ಹಾಗೂ ದೇವಸ್ಥಾನಗಳ ಆಡಳಿತಾಧಿಕಾರಿಗಳು, ಕಾರ್ಯನಿರ್ವಹಣಾಧಿಕಾರಿಗಳ, ಆಡಳಿತ ಮುಖ್ಯಸ್ಥರು ನವೆಂಬರ್ 1 ರಂದು ಆಚರಿಸುವ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಅಕ್ಟೋಬರ್ 31 ಮತ್ತು ನವೆಂಬರ್ 1 ರಂದು ತಮ್ಮ ವ್ಯಾಪ್ತಿಯಲ್ಲಿನ ಸಂಸ್ಥೆಗಳಿಗೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಬೇಕೆಂದು ಮತ್ತು ನವೆಂಬರ್ 1 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಮಾಡಿಸುವಂತೆ ಬಳ್ಳಾರಿ ವಿಜಯನಗರ ಜಿಲ್ಲೆಯ ಧರ್ಮಾದಾಯ ದತ್ತಿಗಳ ಇಲಾಖೆಯ ಹಿಂದೂ ಧಾರ್ಮಿಕ ಸಂಸ್ಥೆಗಳು ಸಹಾಯಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿ+ ಸೋಮವಾರ

ಕಾಮಗಾರಿಗಳಿಗೆ ಶಾಸಕರಿಂದ ಭೂಮಿ ಪೂಜೆ

ಕಾಲಮಿತಿಯಲ್ಲಿ ಕಾಮಗಾರಿಗಳ ಪೂರ್ಣಗೊಳಿಸಲು ಸೂಚನೆ

ಹೊಸಪೇಟೆ: ವಿಜಯನಗರ ಕ್ಷೇತ್ರದಲ್ಲಿ ವಿಳಂಬವಾಗುತ್ತಿರುವ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣ ಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ವಿಜಯನಗರ ಕ್ಷೇತ್ರದ ಶಾಸಕ ಎಚ್.ಆರ್. ಗವಿಯಪ್ಪ ಭರವಸೆ ನೀಡಿದರು.

ಹೊಸಪೇಟೆಯಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ತಾಲೂಕಿನಲ್ಲಿ ಕೆಲವು ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿವೆ, ಅವುಗಳ ಪೈಕಿ ಅನಂತಶಯನಗುಡಿಯ ಸೇತುವೆ ಕಾಮಗಾರಿಯು ಒಂದು. ಈಗಾಗಲೇ ಸೇತುವೆ ಒಂದು ಭಾಗದಲ್ಲಿ ಕಾಮಗಾರಿ ಮುಂದುವರೆದಿದ್ದು, ಪುರಾತತ್ವ ಇಲಾಖೆಯವರು ಆಕ್ಷೇಪಣೆ ವ್ಯಕ್ತ ಪಡಿಸಿದ ಕಾರಣ ಹಂಪಿ ಕಡೆಯ ಭಾಗದಲ್ಲಿ ಕೆಲಸ ಆರಂಭವಾಗಿಲ್ಲ. ರೈಲ್ವೆ ಇಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರೊಂದಿಗೆ ದೆಹಲಿಗೆ ತೆರಳಿ ಪುರಾತತ್ವ ಇಲಾಖೆಯಿಂದ ಅನುಮೋದನೆ ಪಡೆದುಕೊಂಡು ಬರುದಾಗಿ ತಿಳಿಸಿದರು.

> ಸೇತುವೆ ಕಾಮಗಾರಿ ಪೂರ್ಣಗೊಂಡರೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗುತ್ತದೆ. ಪ್ರವಾಸೋದ್ಯಮದಿಂದ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾಗುತ್ತದೆ.
> -ಎಚ್.ಆರ್.ಗವಿಯಪ್ಪ
> ಶಾಸಕ

ವಿವಿಧ ಕಾಮಗಾರಿಗಳಿಗೆ ಶಾಸಕ ಎಚ್.ಆರ್.ಗವಿಯಪ್ಪ ಭೂಮಿ ಪೂಜೆ ನೆರವೇರಿಸಿದರು.

ಭೂಮಿ ಪೂಜೆ ನಡೆದ ಕಾಮಗಾರಿಗಳು: ಅನಂತಶಯನಗುಡಿಯ ಸೇತುವೆ ಕೆಳಗೆ ವಂತಿಕೆ ಅನುದಾನದ ಅಡಿ 1.45 ಕೋಟಿ ವೆಚ್ಚದಲ್ಲಿ ಒಳಚರಂಡಿ ಹಾಗೂ ನೀರಿನ ಪೈಪ್‌ಲೈನ್ ಕಾಮಗಾರಿ ಮತ್ತು ಎನ್.ಹೆಚ್ ರಸ್ತೆ ಹತ್ತಿರವಿರುವ ನೀರು ಶುದ್ದೀಕರಣ ಘಟಕದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (ಡಿ.ಎಂ.ಎಫ್) ಅನುದಾನದ ಅಡಿ 6.30 ಕೋಟಿ ವೆಚ್ಚದಲ್ಲಿ ಶುದ್ದೀಕರಣ ಘಟಕಕ್ಕೆ ಕಚ್ಚಾ ನೀರು ಪೂರೈಸಲು ಪೈಪ್‌ಲೈನ್ ಅಳವಡಿಕೆ ಹಾಗೂ ವಿವಿಧ ಕಾಮಗಾರಿಗಳು ಮತ್ತು 2.60 ಕೋಟಿ ವೆಚ್ಚದಲ್ಲಿ ಶುದ್ದೀಕರಿಸಿದ ನೀರು ಶೇಖರಿಸಲು 20 ಲಕ್ಷ ಲೀಟರ್ ಸಾರ್ಮಥ್ಯದ ನೆಲಹಾಸು ಟ್ಯಾಂಕ್ ನಿರ್ಮಾಣ ಹಾಗೂ ವಿವಿಧ ಕಾಮಗಾರಿಗಳಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಕಳಪೆ ಕಾಮಗಾರಿ ವಿರೋಧಿಸಿ ಪ್ರತಿಭಟನೆ

ಹರಪನಹಳ್ಳಿ: ತಾಲೂಕಿನ ಸತ್ತೂರು ಕೆರೆ ಏರಿಯ ಪಕ್ಕದ ರಸ್ತೆ ಕಳಪೆ ಕಾಮಗಾರಿ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಮಿತ್ರ ಸಂಘಟನೆ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ರಾಜ್ಯ ಹೆದ್ದಾರಿ 150 ಹೋಳಲು ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಸತ್ತೂರು ಕೆರೆಯ ಬಳಿ ನಿರ್ಮಿಸಿದ ಸಿ ಸಿ ರಸ್ತೆಯು ಅವೈಜ್ಞಾನಿಕವಾಗಿ ಕೂಡಿದ್ದು ಮುಂಜಾಗ್ರತೆಯ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ ಹಿನ್ನಲೆ ಸಾರ್ವಜನಿಕರ ಹಾಗೂ ಬಡ ರೈತ ಮಹಿಳೆಯ ಜೀವಪಡೆಯಲು ಕಾರಣವಾದ ಲೋಕಉಪಯೋಗಿ ಇಲಾಖೆಯ ಎಇಇ ಪ್ರಕಾಶ ಪಾಟೀಲ ಅವರನ್ನು ಕೂಡಲೇ ವಜಗೊಳಿಸುವಂತೆ ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಮಿತ್ರ ಸಘದ ರಾಜ್ಯ ಅಧ್ಯಕ್ಷ ಹೆಚ್.ವೆಂಕಟೇಶ ಲೋಕೋಪಯೋಗಿ ಇಲಾಖೆಯಿಂದ ಕಳಪೆ ಹಾಗೂ ಗುಣಮಟ್ಟದ ರಸ್ತೆಯನ್ನು ಮಾಡದೆ ಬೋಗಸ್ ಬಿಲ್ಲು ಪಡೆಯಲು ಹೊರಟಿರುವವರ ವಿರುದ್ಧ ಕ್ರಮಜರಗಿಸಬೇಕು ಮೊನ್ನೆ 46 ಜನ ಪ್ರಯಾಣಿಕರನ್ನು ಹೊತ್ತು ಕೆ ಎಸ್ ಆರ್ ಟಿ ಸಿ ಬಸ್ಸು ದಾವಣಗೆರೆ ಯಿಂದ ಹರಪನಹಳ್ಳಿ ಕಡೆಗೆ ಬರುವ ಸಂದರ್ಭದಲ್ಲಿ ಇಂತಹ ಅವಘಡ ನಡೆದು ಅಮಾಯಕ ಜನರ ಜೀವಪಡೆಯಿತು ಹಾಗಾಗಿ ಮೃತಪಟ್ಟ ಹನುಮಕ್ಕ ಅವರ ಪ್ರಕರಣವು ಅರಸಿಕೇರಿ ಠಾಣೆಯಲ್ಲಿ ದಾಖಲಾಗಿದೆ ಇದಕ್ಕೆಲ್ಲ ಕಾರಣವಾದ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಪ್ರಕಾಶ ಪಾಟೀಲ ಹಾಗು ಕಳಪೆ ರಸ್ತೆಯನ್ನು ನಿರ್ಮಿಸಿದ ಗುತ್ತಿಗೆದಾರರೇ ಕಾರಣ ಅವರ ಪರವಾನಿಗೆಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿದರು.



ತಾಲೂಕಿನ ಸತ್ತೂರು ಕೆರೆ ಏರಿಯ ಪಕ್ಕದ ರಸ್ತೆ ಕಳಪೆ ಕಾಮಗಾರಿ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಮಿತ್ರ ಸಂಘಟನೆ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಜಿ ಕೊಟ್ರೇಶ ತಾಲೂಕು ಅಧ್ಯಕ್ಷ ಬಿ ಲಕ್ಷ್ಮಣ ರಾಜ್ಯ ಸಮಿತಿ ಸದಸ್ಯರುಗಳಾದ ಬಸವರಾಜ, ಮಾದಿಹಳ್ಳಿ ಮಾರುತಿ, ಬಿ ಪರಶುರಾಮ ಕಾರ್ಯದರ್ಶಿ ಕೋಡಿಹಳ್ಳಿ ಶೇಖರಪ್ಪ ರೇಣುಕಾ ಮಂಜುಳಾ ಸಂತೋಷ ಹಾಲಪ್ಪ ಚಂದ್ರಶೇಖರ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಕಾಂಗ್ರೆಸ್‌ಗೆ ಯಾರೂ ಹೋಗುವುದಿಲ್ಲ

ಬಳ್ಳಾರಿ: ಬಿಜೆಪಿಯಿಂದ ಕಾಂಗ್ರೆಸ್‌ಗೆ ಯಾವ ಶಾಸಕರೂ ಹೋಗುವುದಿಲ್ಲ. ಶಾಸಕ ಎಸ್.ಟಿ ಸೋಮಶೇಖರ್ ಹುಚ್ಚುಚ್ಚಾಗಿ ಮಾತನಾಡಬಾರದು. ಬೇರೆಯವರ ತೇಜೋವಧೆ ಮಾಡಬಾರದು ಎಂದು ಕೆ.ಆರ್ ಪುರದ ಬಿಜೆಪಿ ಶಾಸಕ ಬೈರತಿ ಬಸವರಾಜ ಹೇಳಿದ್ದಾರೆ.

ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವೇಣಿವೀರಾಪುರ. ಏಳುಬೆಂಚಿ, ಕುಡಿತಿನಿ, ದರೋಜಿಯಲ್ಲಿ ಸೋಮವಾರ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರ ಪ್ರಚಾರ ಕೈಗೊಂಡು ಶಾಸಕ ಎಸ್.ಟಿ ಸೋಮಶೇಖರ್ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

'ತಮ್ಮ ವೈಯಕ್ತಿ ಲಾಭಕ್ಕಾಗಿ ಸೋಮಶೇಖರ್ ಹೀಗೆಲ್ಲ ಮಾತನಾಡುತ್ತಿದ್ದಾರೆ. ಬಿಜೆಪಿಯ ಯಾವ ಶಾಸಕರೂ ಕಾಂಗ್ರೆಸ್‌ಗೆ ಹೋಗುತ್ತಿಲ್ಲ. ಯಾರಾದರೂ ಕಾಂಗ್ರೆಸ್‌ಗೆ ಹೋಗುತ್ತಿರುವ ಬಗ್ಗೆ ಅವರಿಗೆ ಗೊತ್ತಿದ್ದರೆ ಹೆಸರು ಹೇಳಲಿ. ಹೆಸರೇ ಹೇಳದೇ ಸುಮ್ಮನೆ ಮಾತನಾಡಿದರೆ ಹೇಗೆ?' ಎಂದು ಪ್ರಶ್ನಿಸಿದರು.

ನಾವೆಲ್ಲರೂ ಹಿಂದೆ ಕಾಂಗ್ರೆಸ್ ತೊರೆದು ಬಿಜೆಪಿಗೆ ಬಂದವರು. ಈಗ ಬಿಜೆಪಿಯ ಕಟ್ಟಾಳುಗಳಾಗಿ ದುಡಿಯುತ್ತಿದ್ದೇವೆ. ಹಾಗೇನಾದರೂ ಕಾಂಗ್ರೆಸ್‌ಗೆ ಹೋಗುವುದಿದ್ದರೆ ಇಲ್ಲಿ ಬಂದು ಪ್ರಚಾರ ಮಾಡುವ ಅಗತ್ಯವೇನಿತ್ತು' ಎಂದೂ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಸರಕಾರ ಸಂಪೂರ್ಣ ವಿಫಲವಾಗಿದೆ. ಗ್ಯಾರಂಟಿ ಯೋಜನೆಗಳು ಚುನಾವಣೆಯಲ್ಲಿ ಯಾವುದೇ ಕೆಲಸ ಮಾಡುವುದಿಲ್ಲ. ರಾಜ್ಯದಲ್ಲಿ ಮಳೆಯಿಂದಾಗಿ ಅಪಾರ ಹಾನಿಯಾಗಿದೆ. ಬೆಳೆ ನಾಶವಾಗಿದೆ. ರೈತರಿಗೆ ಇದುವರೆಗೂ ಪರಿಹಾರ ಕೊಟ್ಟಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರ ಪ್ರಚಾರ ಕೈಗೊಂಡು ಶಾಸಕ ಎಸ್.ಟಿ ಸೋಮಶೇಖರ್ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಸಂಡೂರು ಕ್ಷೇತ್ರದಲ್ಲಿ ಸಂಸದ ಇ. ತುಕಾರಾಂ ವಿರುದ್ಧ ಜನ ತೀವ್ರ ಅಸಮಾಧಾನ ಹೊಂದಿದ್ದಾರೆ. ಬಿಜೆಪಿಯ ಪರ ವಾತಾವರಣ ನಿರ್ಮಾಣವಾಗಿದೆ ಎಂದರು.

ಬಂಗಾರು ಹನುಮಂತ ಕ್ರಿಯಾಶೀಲ ಅಭ್ಯರ್ಥಿ, ಸಂಡೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸಲಿದ್ದಾರೆ. ಬಿಜೆಪಿಯ ಎಲ್ಲಾ ಮುಖಂಡರು, ಕಾರ್ಯಕರ್ತರು ಅವರನ್ನು ಹೆಚ್ಚಿನ ಅಂತರದಿಂದ ಗೆಲ್ಲಿಸಲು ಪ್ರಯತ್ನ ಮಾಡಲಿದ್ದಾರೆ ಎಂದರು. ಮಾಜಿ ಶಾಸಕ ಸೋಮಶೇಖರ ರೆಡ್ಡಿ ಇತರರಿದ್ದರು.

ಲಂಚದ ಕೇಳಿದರೆ ದೂರು ಸಲ್ಲಿಸಲು ಮನವಿ

ಬಳ್ಳಾರಿ: ಯಾವುದೇ ಸರಕಾರಿ ಕಚೇರಿಯಲ್ಲಿ ಅಧಿಕಾರಿ, ನೌಕರರು ನಿಮ್ಮ ನ್ಯಾಯಯುತವಾದ ಕೆಲಸವನ್ನು ಮಾಡಿಕೊಡಲು ಲಂಚದ ಹಣಕ್ಕಾಗಿ ಒತ್ತಾಯಿಸಿದರೆ ಲೋಕಾಯುಕ್ತ ಕಚೇರಿಗೆ ದೂರು ನೀಡಬಹುದು ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಸಿದ್ದರಾಜು.ಸಿ ಹೇಳಿದರು.

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗ ಕಚೇರಿ, ಬಳ್ಳಾರಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ ಮತ್ತು ಕಿಷ್ಕಿಂದ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಬಿಐಟಿಎಂ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಭ್ರಷ್ಟಾಚಾರ ವಿರುದ್ಧ ಜಾಗೃತಿ ಅರಿವು ಸಪ್ತಾಹ-2024 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾರ್ವಜನಿಕರು ಸರಕಾರಿ ಕಚೇರಿಗಳಿಗೆ ಸಾರ್ವಜನಿಕ ಕೆಲಸಗಳಿಗಾಗಿ ಸಲ್ಲಿಸಿದ ಅರ್ಜಿಗಳಿಗೆ ಅಧಿಕಾರಿಗಳು ಅನಗತ್ಯ ವಿಳಂಬ ಮಾಡಿದರೆ, ಕಿರುಕುಳ ನೀಡಿದರೂ ದೂರು ಹೇಳಬಹುದು ಎಂದು ತಿಳಿಸಿದರು.

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಕುರಿತ ಭಿತ್ತಿಪತ್ರ ಬಿಡುಗಡೆ ಮಾಡಿದರು.

ಸರಕಾರಿ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕ ಹುದ್ದೆಯನ್ನು ಬಳಸಿಕೊಂಡು ಅಕ್ರಮ ಆಸ್ತಿ ಸಂಪಾದಿಸಿದ್ದಲ್ಲಿ ಅಥವಾ ಹುದ್ದೆಯ ದುರ್ಬಳಕೆ ಮಾಡಿಕೊಂಡು ಅವ್ಯವಹಾರ ಮಾಡುತ್ತಿರುವುದು ಕಂಡು ಬಂದಲ್ಲಿ, ನಿಯಮ ಬಾಹಿರ ಆದೇಶ ಅಥವಾ ಕಾರ್ಯ ನಡೆಯುತ್ತಿದ್ದಲ್ಲಿ ಕರ್ನಾಟಕ ಲೋಕಾಯುಕ್ತ ಬಳ್ಳಾರಿ ಕಚೇರಿ ಅಥವಾ ಮೊ.9364062511, 9364062630 ಗೆ ಸಂಪರ್ಕಿಸಬಹುದು ಎಂದು ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆರ್.ವಸಂತ್‌ಕುಮಾರ್ ಪ್ರತಿಜ್ಞಾ ವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಮೊಹಮ್ಮದ್ ರಫಿ, ಸಂಗಮೇಶ್, ಬಿಐಟಿಎಂ ಕಾಲೇಜಿನ ಪ್ರಾಚಾರ್ಯ ಡಾ.ಯಡವಳ್ಳಿ ಬಸವರಾಜ್, ಡೀನ್ ಡಾ.ವಿ.ಸಿ.ಪಾಟೀಲ್, ಚೈತನ್ಯರೆಡ್ಡಿ, ಬಿಐಟಿಎಂ ರಾಷ್ಟ್ರೀಯ ಸೇವಾ ಯೋಜನೆಯ ಇನ್‌ಚಾರ್ಜ್ ಡಾ.ಶೇಕ್‌ಮೀರ.ಡಿ, ಸಹಪ್ರಾಧ್ಯಾಪಕರಾದ ಗುರುರಾಜ್, ಯೋಗನಂದ ಪತ್ತಾರ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಹಲವೆಡೆ ವಿದ್ಯುತ್ ವ್ಯತ್ಯಯ

ಬಳ್ಳಾರಿ: ಜೆಸ್ಕಾಂ ಬಳ್ಳಾರಿ ನಗರ ಉಪವಿಭಾಗ-1 ರ ವ್ಯಾಪ್ತಿಗೆ ಬರುವ 110/11 ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ನಿಮಿತ್ತ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಅ.29 ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಎಫ್-24 ಫೀಡರ್ ವ್ಯಾಪ್ತಿಯ ನಗರದ ಬೆಂಗಳೂರು ರಸ್ತೆಯಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ಕಾಣೆ: ಪತ್ತೆಗೆ ಸಹಕರಿಸಲು ಮನವಿ

ಬಳ್ಳಾರಿ: ತೋರಣಗಲ್ಲು ಪೊಲೀಸ್ ಠಾಣೆ ವ್ಯಾಪ್ತಿಯ ತೋರಣಗಲ್ಲು ರೈಲ್ವೇ ಸ್ಟೇಷನ್ ನಿವಾಸಿಯಾದ ರಾಮಕೃಷ್ಣ ಕನ್ನೆಟಿ ಎನ್ನುವ 28 ವರ್ಷದ ಯುವಕ ಅ.14 ರಂದು ಕಾಣೆಯಾಗಿರುವ ಕುರಿತು ಪ್ರಕರಣ ದಾಖಲೆಯಾಗಿದ್ದು, ಪತ್ತೆಗೆ ಸಹಕರಿಸಬೇಕೆಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಯುವಕನ ಚಹರೆ ವಿವರ: ಎತ್ತರ 5.8 ಅಡಿ, ಕೋಲು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಕಪ್ಪು ಮತ್ತು ಬಿಳಿ ಬಣ್ಣದ ತುಂಬು ತೋಳಿನ ಅಂಗಿ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ತೆಲುಗು, ಹಿಂದಿ ಭಾಷೆ ಮಾತನಾಡುತ್ತಾನೆ. ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ಯುವಕನ ಬಗ್ಗೆ ಮಾಹಿತಿ ಸಿಕ್ಕಲ್ಲಿ ತೋರಣಗಲ್ಲು ಪೊಲೀಸ್ ಠಾಣೆಯ ದೂ.083935-250100, ಮೊ.9480803062 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಯದುವೀರ್ ಒಡೆಯರ್ } ಸಂಸದ

ಮುಡಾ ಹಗರಣದ ವಿರುದ್ಧ ಬೆಂಗಳೂರಿನಿಂದ ಮೈಸೂರುವರೆಗೂ ನಡೆದ ಪಾದಯಾತ್ರೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು. ಅವರಿಗೆ ಮುಂದೆ ಒಳ್ಳೆಯ ನಾಯಕನಾಗಿ ಬೆಳೆಯುವ ಎಲ್ಲಾ ಅವಕಾಶಗಳು ಇವೆ. ಅಂತಹ ಅವಕಾಶಕ್ಕೆ ಚನ್ನಪಟ್ಟಣದ ಜನರೇ ನಾಂದಿ ಹಾಡಬೇಕು.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಇಂದು

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ಇಂದು 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮವನ್ನು ನಗರದ ಕೋಟೆ ಪ್ರದೇಶದ ಹಳೆ ನಜೀರ್ ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ. ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಆಯುಷ್ ಇಲಾಖೆಯ ಆಯುಕ್ತ ಶ್ರೀನಿವಾಸುಲು, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ರಾಹುಲ್ ಶರಣಪ್ಪ ಸಂಕನೂರ, ಡಾ. ಶೋಭರಾಣಿ.ವಿ.ಜೆ.,ಝುಬೇರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಬಿ.ಎಸ್.ಸರಳಾದೇವಿ ಉಪಸ್ಥಿತರಿರುವರು ಎಂದು ತಿಳಿಸಿದೆ.

ದೆಹಲಿಯಲ್ಲಿ ಎಕನಾಮಿಕ್ಸ್ ಟೈಮ್ಸ್ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ, ಎಂ ಎಸ್ ಪಿ ಎಲ್ ಸಂಸ್ಥೆಯ ಒಟ್ಟಾರೆ ಸಾಮಾಜಿಕ ಸೇವೆಯನ್ನು ಪರಿಗಣಿಸಿ, 2022-23 ನೇ ಸಾಲಿನ ಪ್ರತಿಷ್ಠಿತ ಇಟಿ 2 ಗುಡ್ 4 ಗುಡ್ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಈ ಸಂಧರ್ಭದಲ್ಲಿ ಎಂ ಎಸ್ ಪಿ ಎಲ್ ಸಂಸ್ಥೆಯ ಸಾಮಾಜಿಕ ಸೇವಾ ವಿಭಾಗದ ಉಪಾಧ್ಯಕ್ಷರಾದ ಎಚ್ ಕೆ ರಮೇಶ್ ಉಪಸ್ಥಿತರಿದ್ದು ಪ್ರಶಸ್ತಿ ಪತ್ರ ಪಡೆದರು.

ರಾಜ್ಯೋತ್ಸವ ಆಚರಣೆಗೆ ಆಡಳಿತ ಸಿದ್ಧತೆ

ಬಳ್ಳಾರಿ: ಜಿಲ್ಲಾಡಳಿತ ವತಿಯಿಂದ ನ.1 ರಂದು ಬೆಳಗ್ಗೆ 9 ಗಂಟೆಗೆ ನಗರದ ಸರಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜು ಮೈದಾನದಲ್ಲಿ 69 ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ ನೆರವೇರಿಸಿ, ಶ್ರೀ ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವರು. ಬಳಿಕ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ ಸಂದೇಶ ನೀಡುವರು. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಘನ ಉಪಸ್ಥಿತರಿರುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಸಾಧಕರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್

ಹೊಸಪೇಟೆ: ನಗರಸಭೆಯಡಿ ವ್ಯಕ್ತಿ ಸಂಬಂಧಿತ ಅನುಕೂಲಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವೈಯಕ್ತಿಕ ಫಲಾನುಭವಿಗಳು ನವೆಂಬರ್ 10 ರೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ನಗರಸಭೆ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಹೊಸಪೇಟೆ ನಗರದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಎಂ.ಬಿ.ಬಿ.ಎಸ್/ಬಿ.ಇ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ರು. 50.000 ಮೀರದಂತೆ ಸಹಾಯಧನ ನೀಡುವುದು, ವಿಶೇಷಚೇತನರಿಗೆ ಸರಕಾರದ ವಿವಿಧ ಇಲಾಖೆಗಳಿಂದ ಆಯೋಜಿಸಲ್ಪಡುವ ರಾಜ್ಯ, ರಾಷ್ಟ್ರಮಟ್ಟದ ಕ್ರೀಡೆ, ಕಲೆ, ಭಾಷಣ ಹಾಗೂ ಇತರೆ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಭಾಗವಹಿಸಿದಲ್ಲಿ, ಜಯಗಳಿಸಿದಲ್ಲಿ ಆಯಾ ವರ್ಷದಲ್ಲಿ ಪ್ರೋತ್ಸಾಹಧನ ನೀಡಲಾಗುವುದು, ಪರಿಶಿಷ್ಟ ಜಾತಿ ಮತ್ತು ಇತರೆ ಬಡ ಜನರಿಗೆ ವೈದ್ಯಕೀಯ ಶಸ್ತ್ರಚಿಕಿತ್ಸೆಗಾಗಿ ಸಹಾಯಧನ ನೀಡುವುದು, ನಗರಸಭೆ ವ್ಯಾಪ್ತಿಯಲ್ಲಿ ಬರುವ ವಿಕಲಚೇತನರಿಗೆ ಎಲೆಕ್ಟ್ರಿಕಲ್ ವ್ಹೀಲ್‌ಚೇರ್ ಖರೀದಿಸಿ ನೀಡಲಾಗುವುದು. ಪ್ರಯುಕ್ತ ಅರ್ಜಿ ಸಲ್ಲಿಸಲು ಫಲಾನುಭವಿಗಳು ಕುಟುಂಬದ ಆದಾಯ ಕುರಿತು ಹಾಗೂ ಇತರೆ ಯಾವುದೇ ದಾಖಲಾತಿಗಳು ತಪ್ಪು ಮಾಹಿತಿ ನೀಡಿ ಸದರಿ ಯೋಜನೆಯಡಿ ಸೌಲಭ್ಯವನ್ನ, ಸಹಾಯಧನವನ್ನು ಪಡೆಯಲು ಮುಂದೆ ಬಂದಲ್ಲಿ ಅಂತವರ ವಿರುದ್ಧ ನಿಯಮಾನುಸಾರ ಅಗತ್ಯ ಕಾನೂನು ಕ್ರಮ ಜರುಗಿಸಲಾಗುವುದು.

ಸಮಾಚಾರ ಸಣ್ಣದಲ್ಲ

ಪಾಕ್‌ನ ಕೋಚ್ ಸ್ಥಾನಕ್ಕೆ ಗ್ಯಾರಿ ರಾಜೀನಾಮೆ

ಕರಾಚಿ: ಪಾಕಿಸ್ತಾನ ಸೀಮಿತ ಓವರುಗಳ ತಂಡದ ಕೋಚ್ ಗ್ಯಾರಿ ಕರ್ಸ್ಟನ್ ಅವರು ಸೋಮವಾರ ತಮ್ಮ ಹುದ್ದೆ ತೊರೆದಿದ್ದಾರೆ. ತಂಡದ ಕ್ರಿಕೆಟ್ ಮಂಡಳಿ ಜೊತೆಗಿನ ಭಿನ್ನಾಭಿಪ್ರಾಯದಿಂದ ನೇಮಕಗೊಂಡ

ಆರೇ ತಿಂಗಳಲ್ಲಿ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ. 56 ವರ್ಷ ವಯಸ್ಸಿನ ಕರ್ಸ್ಟನ್ ಈ ವರ್ಷದ ಏಪ್ರಿಲ್‌ನಲ್ಲಿ ನೇಮಕಗೊಂಡಿದ್ದರು. ಈ ಹಿಂದೆ, 2011ರಲ್ಲಿ ಭಾರತ ತಂಡ ಏಕದಿನ ವಿಶ್ವಕಪ್ ಗೆದ್ದಾಗ ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಭಾರತ ತಂಡಕ್ಕೆ ಹೆಡ್ ಕೋಚ್ ಆಗಿದ್ದರು. ಮುಂದಿನ ತಿಂಗಳು ನಿಯಮಿತ ಓವರುಗಳ ಕ್ರಿಕೆಟ್ ಪಂದ್ಯಗಳನ್ನು ಆಡಲು ಆಸ್ಟ್ರೇಲಿಯಾಕ್ಕೆ ತೆರಳುವ ತಂಡಕ್ಕೆ, ಈಗ ಟೆಸ್ಟ್ ತಂಡದ ಕೋಚ್ ಆಗಿರುವ ಜೇಸನ್ ಗಿಲೆಸ್ಪಿ ಅವರೇ ಕೋಚ್ ಹೊಣೆ ವಹಿಸಲಿದ್ದಾರೆ ಎಂದು ಪಿಸಿಬಿ ಎಕ್ಸ್ ವೇದಿಕೆಯಲ್ಲಿ ತಿಳಿಸಿದೆ. ಕರ್ಸ್ಟನ್ ಅವರ ರಾಜೀನಾಮೆಯನ್ನು ಮಂಡಳಿ ಅಂಗೀಕರಿಸಿದೆ. ತಾವು ತಾತ್ಕಾಲಿಕವಾಗಿ ಈ ಹುದ್ದೆ ವಹಿಸಲಿದ್ದು, ಖಾಯಂ ಆಗಿ ವಹಿಸಲು ಆಸಕ್ತರಾಗಿಲ್ಲ ಎಂದು ಗಿಲೆಸ್ಪಿ ಪಾಕ್ ಕ್ರಿಕೆಟ್ ಮಂಡಳಿಗೆ ತಿಳಿಸಿದ್ದಾರೆ ಎಂದು ಈ ಬೆಳವಣಿಗೆಯ ಮಾಹಿತಿಯಿರುವ ವಿಶ್ವಸನೀಯ ಮೂಲಗಳು ತಿಳಿಸಿವೆ.

ಕರ್ನಾಟಕ ತಂಡಕ್ಕೆ ಬೆನ್ನತ್ತಿದ ಮಳೆ

ಪಟಣಾ: ಕರ್ನಾಟಕ ರಾಜ್ಯ ಕ್ರಿಕೆಟ್ ತಂಡಕ್ಕೆ ಈ ಋತುವಿನಲ್ಲಿ ಮಳೆಯು ಬೆನ್ನತ್ತಿ ಕಾಡುತ್ತಿದೆ. ಕರ್ನಾಟಕ ತಂಡವು ಆಡಿದ ಎಲೀಟ್ ಸಿ ಗುಂಪಿನ ಮೊದಲೆರಡೂ ಪಂದ್ಯಗಳಲ್ಲಿ ಮಳೆಯಿಂದಾಗಿ ಫಲಿತಾಂಶ ಹೊರಹೊಮ್ಮಲಿಲ್ಲ. ಅದರಿಂದಾಗಿ ಕೇವಲ ಎರಡು ಅಂಕಗಳು ಮಾತ್ರ ದೊರೆತಿವೆ. ಇದೀಗ ಬಿಹಾರ ವಿರುದ್ಧ ಪಟ್ನಾದಲ್ಲಿ ನಡೆಯುತ್ತಿರುವ ಪಂದ್ಯಕ್ಕೂ ಮಳೆ ಕಾಡಿದೆ. ಎರಡನೇ ದಿನದಾಟವು ಒಂದೂ ಎಸೆತ ಕಾಣಲಿಲ್ಲ. ಭಾನುವಾರ ಬೆಳಗಿನ ಜಾವ ಸುರಿದ ಮಳೆಯಿಂದಾಗಿ ಮೈದಾನ ತೇವವಾಗಿತ್ತು. ಬೆಳಿಗ್ಗೆ 9.30ಕ್ಕೆ ಸೂರ್ಯ ಬೆಳಗತೊಡಗಿದಾಗ, ಕ್ರೀಡಾಂಗಣ ಸಿಬ್ಬಂದಿಯು ಆಟದಂಕಣ ಸಿದ್ಧಗೊಳಿಸಲು ಬಹಳಷ್ಟು ಶ್ರಮಪಟ್ಟರು. ಆದರೂ ಇಡೀ ದಿನ ಆಟ ಆರಂಭ ಮಾಡಲಾಗಲಿಲ್ಲ. ಅಂಪೈರ್‌ಗಳಾದ ನಿತಿನ್ ಪಂಡಿತ್ ಮತ್ತು ಟೋನಿ ಎಮಾಟಿ ಅವರು ಹಲವು ಬಾರಿ ಪಿಚ್ ಮತ್ತು ಮೈದಾನದ ಪರಿಶೀಲನೆ ನಡೆಸಿದರು. ಮೊದಲ ದಿನ ಸಾಂಗವಾಗಿ ಆಟ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬಿಹಾರ ತಂಡವನ್ನು ಕರ್ನಾಟಕವು 143 ರನ್‌ಗಳಿಗೆ ಆಲೌಟ್ ಮಾಡಿತ್ತು. ಮಯಂಕ್ ಅಗರವಾಲ್ ಪಡೆಯು ದಿನದಾಟದ ಕೊನೆಗೆ 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 16 ರನ್ ಗಳಿಸಿತ್ತು.

ಭಾರತ ನ್ಯೂಜಿಲೆಂಡ್ ಏಕದಿನ ಸರಣಿ | 1-1ನಲ್ಲಿ ಉಭಯ ತಂಡಗಳು

ವನಿತೆಯರೂ ನ್ಯೂಜಿಲೆಂಡ್‌ಗೆ ಶರಣು

ಅಹಮದಾಬಾದ್: ನ್ಯೂಜಿಲೆಂಡ್ ತಂಡದ ನಾಯಕಿ ಸೋಫಿ ಡಿವೈನ್ ಅವರ ಆಲ್‌ರೌಂಡ್ ಆಟದ ಮುಂದೆ ಭಾರತ ಮಹಿಳಾ ತಂಡವು ಇಲ್ಲಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶರಣಾಯಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ 76 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-1ರ ಸಮಬಲ ಸಾಧಿಸಿತು. ಇದರಿಂದಾಗಿ ಮಂಗಳವಾರ ನಡೆಯಲಿರುವ ಸರಣಿಯ ಕೊನೆಯ ಪಂದ್ಯವು ಕುತೂಹಲ ಮೂಡಿಸಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 86 ಎಸೆತಗಳಲ್ಲಿ 79 ರನ್ ಗಳಿಸಿದ ಸೋಫಿ ಡಿವೈನ್ ಅವರ ಬ್ಯಾಟಿಂಗ್‌ನಿಂದ ಕಿವೀಸ್ ಪಡೆಯು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 259 ರನ್ ಗಳಿಸಿತು. ಬೌಲಿಂಗ್‌ನಲ್ಲಿಯೂ ಮಿಂಚಿದ ಸೋಫಿ (27ಕ್ಕೆ3) ದಾಳಿಯಿಂದಾಗಿ ಭಾರತ ತಂಡವು 47.1 ಓವರ್‌ಗಳಲ್ಲಿ 183 ರನ್ ಗಳಿಸಿ ಆಲೌಟ್ ಆಯಿತು.

ಬ್ಯಾಟಿಂಗ್‌ನಲ್ಲಿ ಸೋಫಿ ಅವರು ಮ್ಯಾಡಿ ಗ್ರೀನ್ (42; 41ಎಸೆತ) ಅವರೊಂದಿಗೆ 5ನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು. ತಂಡದ ಆರಂಭಿಕ ಜೋಡಿ ಸೂಝಿ ಬೇಟ್ಸ್ (58; 70ಎ) ಮತ್ತು ಜಾರ್ಜಿಯಾ ಪ್ರಿಮರ್ (41; 50ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 87 ರನ್ ಸೇರಿಸಿದರು. 16ನೇ ಓವರ್‌ನಲ್ಲಿ ಜಾರ್ಜಿಯಾ ವಿಕೆಟ್ ಗಳಿಸಿದ ದೀಪ್ತಿ ಶರ್ಮಾ ಈ ಜೊತೆಯಾಟವನ್ನು ಮುರಿದರು. ಐದು ಓವರ್‌ಗಳ ನಂತರ ರಾಧಾ ಯಾದವ್ ಅವರು ತಮ್ಮದೇ ಓವರ್‌ನಲ್ಲಿ ಸೂಝಿ ಅವರ ಕ್ಯಾಚ್ ಪಡೆದರು. ಲಾರೆನ್ ಡೌನ್ ಅವರನ್ನು ರನ್‌ಔಟ್ ಮಾಡುವಲ್ಲಿ ಭಾರತದ ಫೀಲ್ಡರ್

ಪ್ರಿಯಾ ಮಿಶ್ರಾ ಪ್ರಮುಖ ಪಾತ್ರವಹಿಸಿದರು. ನಂತರ ಪ್ರಿಯಾ ಅವರು ತಮ್ಮ ಬೌಲಿಂಗ್‌ನಲ್ಲಿ ಬ್ರೂಕ್ ಹ್ಯಾಲಿಡೇ ವಿಕೆಟ್ ಕೂಡ ಕಬಳಿಸಿದರು. ಇದರಿಂದಾಗಿ ತಂಡವು ಕುಸಿತದೆಡೆಗೆ ಸಾಗಿತ್ತು.

ಆದರೆ ಇನ್ನೊಂದೆಡೆ ದಿಟ್ಟವಾಗಿ ಆಡುತ್ತಿದ್ದ ಸೋಫಿ ಅವರನ್ನು ಸೇರಿಕೊಂಡ ಮ್ಯಾಡಿ ಇನಿಂಗ್ಸ್‌ಗೆ ಬಲ ತುಂಬಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಸೋಫಿ ಮತ್ತು ಲಿಯಾ ತಹುಹು ಅವರ ಬೌಲಿಂಗ್ ಮುಂದೆ ತಂಡವು 102 ರನ್ನಗಳಿಗೆ 7 ವಿಕೆಟ್ ಕಳೆದುಕೊಂಡಿತು. ನಾಯಕಿ ಹರ್ಮನ್ 35 ಎಸೆತಗಳಲ್ಲಿ 24 ರನ್ ಗಳಿಸಿದರು.

ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆದು ಮಿಂಚಿದ್ದ ರಾಧಾ ಯಾದವ್ (48; 64ಎ, 4ಗ5) ಅವರು ಸೈಮಾ (29; 54ಎ, 4ಗ3) ಅವರೊಂದಿಗೆ 9ನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಆದರೆ ಇದರಿಂದ ಆತಿಥೇಯ ತಂಡವು ಸೋಲಿನ ಅಂತರ ಕಡಿಮೆ ಮಾಡಿಕೊಳ್ಳಲು ಮಾತ್ರ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು

ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 9ಕ್ಕೆ259 (ಸೂಝಿ ಬೇಟ್ಸ್ 58, ಜಾರ್ಜಿಯಾ ಪ್ರಿಮರ್ 41, ಸೋಫಿ ಡಿವೈನ್ 79, ಮ್ಯಾಡಿ ಗ್ರೀನ್ 42, ದೀಪ್ತಿ ಶರ್ಮಾ 30ಕ್ಕೆ2, ರಾಧಾ ಯಾದವ್ 69ಕ್ಕೆ4)

ಭಾರತ: 47.1 ಓವರ್‌ಗಳಲ್ಲಿ 183 (ಹರ್ಮನ್‌ಪ್ರೀತ್ ಕೌರ್ 24, ರಾಧಾ ಯಾದವ್ 48, ಸೈಮಾ ಠಾಕೋರ್ 29, ಲಿಯಾ ತಹುಹು 42ಕ್ಕೆ3, ಸೋಫಿ ಡಿವೈನ್ 27ಕ್ಕೆ3, ಎಡೆನ್ ಕಾರ್ಸನ್ 32ಕ್ಕೆ2)

ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 76 ರನ್‌ಗಳ ಜಯ. ಸರಣಿಯಲ್ಲಿ 1-1. ಮುಂದಿನ ಪಂದ್ಯ: ಅ.29.

ಚೀನಾದಿಂದ ಕಜಕಿಸ್ತಾನ, ಜಾರ್ಜಿಯಾ, ಇರಾನ್, ಕತಾರ್ ಸೇರಿದಂತೆ 6ದೇಶಗಳನ್ನು ದಾಟಿ ಭೇಟಿಯಾದ ಚೀನಾದ ಗಾಂಗ್

13000 ಕಿಮೀ ಸೈಕಲ್ ತುಳಿದ ಅಭಿಮಾನಿ, ರೊನಾಲ್ಡೊ ಭೇಟಿ

ಬೆಂಗಳೂರು: ಸೌದಿ ಅರೇಬಿಯಾದಲ್ಲಿ ಇರುವ ಫುಟ್ಬಾಲ್ ದಿಗ್ಗಜ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ಭೇಟಿಯಾಗುವ ಮಹದಾಸೆಯಿಂದ ಚೀನಾದ ವ್ಯಕ್ತಿಯೊಬ್ಬ ಬರೋಬ್ಬರಿ 13000 ಕಿ.ಮೀ. ಸೈಕಲ್ ಸವಾರಿ ಮಾಡಿದ್ದಾರೆ.

ಸದ್ಯ 'ಸೌದಿ ಪ್ರೋ ಲೀಗ್' ಟೂರ್ನಿಯಲ್ಲಿ 'ಅಲ್-ನರ್ಸ' ಕ್ಲಬ್ ಪರ ಆಡುವ ರೊನಾಲ್ಡೊ ಅವರು ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿ ನೆಲೆಸಿದ್ದಾರೆ. ಅವರನ್ನು ಭೇಟಿಯಾಗಲು, ಪಶ್ಚಿಮ ಚೀನಾದ ಅನ್ಹುಯಿ ಪ್ರಾಂತ್ಯದ 24 ವರ್ಷ ಗಾಂಗ್ ಎಂಬವರು ತಮ್ಮ ಸೈಕಲ್‌ನಲ್ಲಿ ಬರೋಬ್ಬರಿ 7 ತಿಂಗಳು ಪ್ರಯಾಣಿಸಿದ್ದಾರೆ ಎಂದು 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' (ಎಸ್ಸಿಎಂಪಿ) ವರದಿ ಮಾಡಿದೆ.

ಮಾರ್ಚ್ 18ರಿಂದ ಸವಾರಿ ಶುರು ಮಾಡಿದ ಗಾಂಗ್, ಮೊದಲು ಬೀಜಿಂಗ್ ತಲುಪಿ, ಅಲ್ಲಿಂದ ಪಶ್ಚಿಮದ ಕಡೆಗೆ ಸಾಗಿದರು. ಷಿನ್ಜಿಯಾಂಗ್ ಪ್ರಾಂತ್ಯದ ಮೂಲಕ ಗಡಿ ದಾಟಿ ಕಜಕಿಸ್ತಾನಕ್ಕೆ ಹೋದ ಅವರು, ಸೌದಿ ತಲುಪುವ ಮುನ್ನ ಜಾರ್ಜಿಯಾ, ಇರಾನ್, ಕತಾರ್ ಸೇರಿದಂತೆ ಆರು ದೇಶಗಳನ್ನು ದಾಟಿದರು ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಅಕ್ಟೋಬರ್ 20ರಂದು 'ಅಲ್-ನರ್ಸ' ಕ್ಲಬ್ ಮುಂಭಾಗವೇ ರೊನಾಲ್ಡೊ ಅವರನ್ನು ಭೇಟಿಯಾದ ಗಾಂಗ್, ತಾವು ಬಾಲ್ಯದಿಂದಲೂ ಕಂಡಿದ್ದ ಕನಸನ್ನು ಸಾಕಾರಗೊಳಿಸಿಕೊಂಡಿದ್ದಾರೆ. ರೊನಾಲ್ಡೊ ಅವರು ಫೆಬ್ರುವರಿಯಲ್ಲಿ ಚೀನಾಗೆ ಭೇಟಿ ನೀಡಬೇಕಿತ್ತು. ಆದರೆ, ಗಾಯದ ಸಮಸ್ಯೆಯಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಹಾಗಾಗಿ, ಹೇಗಾದರೂ ಮಾಡಿ ನೆಚ್ಚಿನ ಆಟಗಾರನನ್ನು ಭೇಟಿಯಾಗಲು ಗಾಂಗ್ ನಿರ್ಧರಿಸಿದ್ದರು. ಅದಕ್ಕಾಗಿ, 60,000mAh ಸಾಮರ್ಥ್ಯದ ಎರಡು ಪವರ್ ಬ್ಯಾಂಕ್‌ಗಳು, ಒಂದು ಟೆಂಟ್, ಅಡುಗೆ ಮಾಡಿಕೊಳ್ಳಲು ಒಂದಿಷ್ಟು ಸಾಮಗ್ರಿ, ಬಟ್ಟೆ ಹಾಗೂ ಅತ್ಯವಶ್ಯಕ ವಸ್ತುಗಳನ್ನು ಕಟ್ಟಿಕೊಂಡು ಒಟ್ಟು 13,000 ಕಿ.ಮೀ ಪ್ರಯಾಣಿಸಿದ್ದಾರೆ.

ಶ್ರೀಲಂಕಾ ವಿರುದ್ಧ ಗೆಲುವು ಬೌಲಿಂಗ್ ಪ್ರಾಬಲ್ಯ ತೋರಿಸಿದ ಅಫ್ಘನ್ನರು

ಅಫ್ಘಾನಿಸ್ತಾನ ಏಷ್ಯಾ ಎಮರ್ಜಿಂಗ್ ಚಾಂಪಿಯನ್ಸ್

ಬೆಂಗಳೂರು: ಅಕ್ಟೋಬರ್ 27ರಂದು ಅಲ್ ಅಮೆರಾತ್‌ನಲ್ಲಿ ನಡೆದ ಎಮರ್ಜಿಂಗ್ ಏಷ್ಯಾ ಕಪ್ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಗೆದ್ದ ಅಫ್ಘಾನಿಸ್ತಾನ ಎ ತಂಡವು ಚಾಂಪಿಯನ್ ಆಗಿದೆ.

ಫೈನಲ್‌ನಲ್ಲಿ ತಮ್ಮ ಬೌಲಿಂಗ್ ಪ್ರಾಬಲ್ಯ ಪ್ರದರ್ಶಿಸಿದ ಆಫ್ಘನ್ ತಂಡ ಪ್ರಶಸ್ತಿ ಗೆದ್ದುಕೊಂಡಿತು. ಭಾರತ ಎ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಪ್ರಭಾವ ಬೀರಿದ್ದ ಅಫ್ಘಾನಿಸ್ತಾನದ ಬೌಲರ್‌ಗಳು ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪಂದ್ಯಾವಳಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ಬಿಲಾಲ್ ಸಮಿ ಮತ್ತು ಅಲ್ಲಾ ಘನ್ಜಾನಿಫರ್ ಫೈನಲ್‌ನಲ್ಲಿ ಚೆಂಡಿನೊಂದಿಗೆ ಮಿಂಚಿದರು.

ಅಫ್ಘಾನಿಸ್ತಾನ 'ಎ' ತಂಡದ ಬೌಲಿಂಗ್ ದಾಳಿ ಆರಂಭದಿಂದಲೂ ಹಿಡಿತ ಸಾಧಿಸಿತು. ಅಫ್ಘಾನಿಸ್ತಾನದ ಬೌಲರ್‌ಗಳು ಒತ್ತಡ ಹೆಚ್ಚಿಸಿದ್ದರಿಂದ ಶ್ರೀಲಂಕಾ ಎ ತಂಡ ಜತೆಯಾಟ ನಿರ್ಮಿಸಲು ಹೆಣಗಾಡಿತು. ಸಹಮ್ ಆರ್ಚಿಗೆ 47 ಎಸೆತಗಳಲ್ಲಿ ಅಜೇಯ 64 ರನ್ ಗಳಿಸಿ ಶ್ರೀಲಂಕಾದ ಪರ ಮಿಂಚಿದರು. ಆದಾಗ್ಯೂ ಸಾಧಾರಣ 133 ರನ್ ಗಳಿಸಲು ಲಂಕಾ ಶಕ್ತಗೊಂಡಿತು. ಸಮಿ ಅವರ 3/22 ಮತ್ತು ಘನ್ಜಾನಿಫರ್ ಅವರ 2/14 ಎಕಾನಮಿಕಲ್ ಬೌಲಿಂಗ್ ಕಾರಣ ಲಂಕಾ ತಂಡಕ್ಕೆ ಚೇತರಿಸಿಕೊಂಡಿತು.

ಕಠಿಣ ಪಿಚ್: ಅಲ್ ಅಮೆರಾತ್‌ನಲ್ಲಿ ಪಿಚ್ ಕ್ಲಿಷ್ಟಕರವೆಂದು ಸಾಬೀತಾಯಿತು. ಇದು ಎರಡೂ ತಂಡಗಳಿಗೆ ಸವಾಲುಗಳನ್ನು ಒಡ್ಡಿತು. ಅಫ್ಘಾನಿಸ್ತಾನ ಎ ತಂಡದ ಆರಂಭಿಕ ಬ್ಯಾಟರ್ ಜುಬೈದ್ ಅಕ್ಬರಿ ಮೊದಲ ಎಸೆತದಲ್ಲೇ ಗೋಲ್ಡನ್ ಡಕ್ ಔಟ್ ಆದರು. ಆದಾಗ್ಯೂ, ಸೆದಿಕುಲ್ಲಾ ಅಟಲ್ ಕ್ರೀಸ್‌ನಲ್ಲಿ ಸಂಯಮ ತೋರಿಸಿದರು. ಆಕ್ರಮಣಕಾರಿ ಸ್ಟ್ರೋಕ್‌ಗಳನ್ನು ತೋರಿದರು. 55 ಎಸೆತಗಳಲ್ಲಿ 55 ರನ್ ಗಳಿಸಿ ಅಫ್ಘಾನಿಸ್ತಾನ ಎ ತಂಡಕ್ಕೆ ಆರಂಭಿಕ ಹಿನ್ನಡೆಯಿಂದ ತಪ್ಪಿಸಿಕೊಳ್ಳುವುದಕ್ಕೆ ನೆರವಾದರು.

ರಾಜ್ಯ ಮಟ್ಟದ ವೀಲ್ ಚೇರ್‌ಟೆನಿಸ್ ಪಂದ್ಯಾವಳಿ

ಸಿಂಗಲ್ಸ್ ವಿಭಾಗದಲ್ಲಿ ಶೇಖರ್ ವೀರಸ್ವಾಮಿ, ಪ್ರತಿಮಾ ಎನ್. ರಾವ್‌ಗೆ ವಿಜಯ

ಬೆಂಗಳೂರು: ಕರ್ನಾಟಕ ವೀಲ್‌ಚೇರ್ ಟೆನಿಸ್ ಅಸೋಸಿಯೇಷನ್ ಅ.26 ಮತ್ತು 27ರಂದು ಕಬ್ಬನ್ ಪಾರ್ಕ್‌ನ ಕೆಎಸ್‌ಎಲ್‌ಟಿಎ ಟೆನಿಸ್ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ವೀಲ್ ಚೇರ್ ಟೆನಿಸ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಕೆಡಬ್ಲ್ಯುಟಿಎ ಅಧ್ಯಕ್ಷ ಬಿ.ಆರ್. ಚಂದ್ರಕಾಂತ್ ಮಾತನಾಡಿ, 15 ವರ್ಷಗಳ ಹಿಂದೆ ಕೆಡಬ್ಲ್ಯುಟಿಎನ್ನು ರಚಿಸಲಾಗಿದ್ದು, ವಿಕಲಚೇತನರಿಗೆ ಈ ಟೆನಿಸ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಅವಕಾಶ ನೀಡುವ ಮೂಲಕ ಸಾಧನೆಯ ಖುಷಿ ಪಡೆಯುವಂತೆ ಪ್ರೋತ್ಸಾಹಿಸುವ ಕಾರ್ಯವನ್ನು ಸಂಸ್ಥೆ ಮಾಡುತ್ತಿದೆ. 59 ಸ್ಪರ್ಧಿಗಳಲ್ಲಿ ಬೆಂಗಳೂರಿನಿಂದ ಹೊರಗಿನ 39 ಸ್ಪರ್ಧಿಗಳು ಹುಬ್ಬಳ್ಳಿ, ಹಾಸನ ಸೇರಿದಂತೆ ವಿವಿಧ ನಗರಗಳಿಂದ ಬಂದಿದ್ದಾರೆ. 24 ಮಹಿಳಾ ಮತ್ತು 35 ಪುರುಷ ಆಟಗಾರರು 50,000 ರು. ಗಳ ಬಹುಮಾನದ ಮೊತ್ತಕ್ಕಾಗಿ ಸ್ಪರ್ಧಿಸಿದ್ದಾರೆ.

ವಿಜೇತರು

- **ಡಬ್ಬಲ್ಸ್ ಮಹಿಳೆಯರ ವಿಭಾಗದಲ್ಲಿ-ಪ್ರತಿಮಾ ಎನ್. ರಾವ್ ಹಾಗೂ ಮುಬಿನಾ**
- **ಡಬ್ಬಲ್ಸ್ ಪುರುಷರ ವಿಭಾಗದಲ್ಲಿ-ಶೇಖರ್ ವೀರಸ್ವಾಮಿ ಹಾಗೂ ಅನಿಲ್ ಡಿ.**
- **ಸಿಂಗಲ್ ಪುರುಷರ ವಿಭಾಗದಲ್ಲಿ-ಶೇಖರ್ ವೀರಸ್ವಾಮಿ**
- **ಸಿಂಗಲ್ ಮಹಿಳೆಯರ ವಿಭಾಗದಲ್ಲಿ-ಪ್ರತಿಮಾ ಎನ್ ರಾವ್**

ಹಲವು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಿದ ಭಾರತದ ರ್‍ಯಾಂಕಿಂಗ್‌ನಲ್ಲಿ ನಂ.1 ಮತ್ತು ಅಂತಾರಾಷ್ಟ್ರೀಯ ರ್‍ಯಾಂಕಿಂಗ್‌ನಲ್ಲಿ 117ನೇ ಸ್ಥಾನದಲ್ಲಿರುವ ಶಿಲ್ಪಾ ಕೆ.ಪಿ., ಸಿಂಗಲ್ಸ್ ಮತ್ತು ಡಬಲ್ಸ್ ನಲ್ಲಿ ಭಾರತ ರ್‍ಯಾಂಕಿಂಗ್ ನಲ್ಲಿ ನಂ.2 ಸ್ಥಾನದಲ್ಲಿರುವ ಪ್ರತಿಮಾ ರಾವ್, ಮಧು, ಅನಿಲ್ ಡಿ.ಅಲ್ಮೇಡಾ ಮತ್ತು ದೇವೇಗೌಡ ಅಂಜಿನಪ್ಪ ಮೊದಲಾದವರು ಸೆಲೆಬ್ರಿಟಿ ಸ್ಪರ್ಧಿಗಳಾಗಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು.

ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ನಮ್ಮ ಮೆಟ್ರೋದ ವ್ಯವಸ್ಥಾಪಕ ನಿರ್ದೇಶಕ ಐಎಎಸ್ ಮಹೇಶ್ವರ ರಾವ್, ಕಾರ್ಲೆ ಇನ್ಫ್ರಾ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ಕಾರ್ಲೆ, ಕೆಎಸ್‌ಎಲ್‌ಟಿಎ ಗೌರವ ಜಂಟಿ ಕಾರ್ಯದರ್ಶಿ ಸುನಿಲ್ ಯಜಮಾನ್ ಇದ್ದರು.

ರಾಜ್ಯದಲ್ಲಿ ಏಕರೂಪ ಟಿಕೆಟ್ ದರಕ್ಕೆ ಒತ್ತಾಯ

ರಾಜ್ಯದ ಚಿತ್ರಮಂದಿರಗಳಲ್ಲಿ ಏಕರೂಪ ಟಿಕೆಟ್ ದರ ನಿಗಧಿ ಮಾಡಬೇಕು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಪ್ರಮುಖರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು, ಕೇರಳ, ಆಂಧ್ರಪ್ರದೇಶದಲ್ಲಿರುವಂತೆ ಇಲ್ಲಿಯೂ ಏಕರೂಪ ಟಿಕೆಟ್ ದರ ನಿಗಧಿ ಮಾಡುವಂತೆ ಒತ್ತಾಯಿಸಿದ್ದರು. ಈ ಕುರಿತಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ಎನ್.ಸುರೇಶ್ ಮಾಹಿತಿ ನೀಡಿದರು. ನಮ್ಮ ಮನವಿಗೆ ಮುಖ್ಯಮಂತ್ರಿಗಳು ಪೂರಕವಾಗಿ ಸ್ಪಂದಿಸಿದ್ದು ಶೀಘ್ರದಲ್ಲಿಯೇ ರಾಜ್ಯದಲ್ಲಿ ಏಕ ರೂಪ ಟಿಕೆಟ್ ದರ ನಿಗಧಿಪಡಿಸುವುದಾಗಿ ಭರವಸೆ ನೀಡಿದ್ದಾರೆ. ಇದರಿಂದ ಪ್ರೇಕ್ಷಕರಿಗೆ ಹೊರೆಯಾಗುವುದು ತಪ್ಪುತ್ತದೆ ಎಂದರು.

ಫಿಲಂ ಚೇಂಬರ್ ಮಾಜಿ ಅಧ್ಯಕ್ಷ ಸಾ.ರಾ.ಗೋವಿಂದ್ ಮಾತನಾಡಿ, ಮಲ್ಟಿಪ್ಲೆಕ್ಸ್‌ಗಳಲ್ಲಿ ಪರಭಾಷಾ ಚಿತ್ರಕ್ಕೆ ಹೆಚ್ಚಿನ ಸ್ಕ್ರೀನ್ ನೀಡಿದ್ದರು. ಹೀಗಾಗಿ ಕನ್ನಡ ಸಿನಿಮಾಗಳ ಪ್ರದರ್ಶನಕ್ಕೆ ಅವಕಾಶ ಸಿಗದೆ, ನಿರ್ಮಾಪಕರು ಸಂಕಷ್ಟಕ್ಕೆ ಸಿಲುಕಿದ್ದರು. ಅಲ್ಲದೆ ತಮಿಳು ಚಿತ್ರಕ್ಕೆ ಸಾವಿರ ಐದು ನೂರು ರು. ಟಿಕೆಟ್ ಬೆಲೆ ನಿಗಧಿ ಮಾಡಲಾಗಿತ್ತು. ಇದರಿಂದ ಪ್ರೇಕ್ಷಕರಿಗೆ ಅನ್ಯಾಯವಾಗಿದೆ. ಈ ಹಿಂದೆ ರಾಜ್ಯದಲ್ಲಿ ಟಿಕೆಟ್ ದರ ಇನ್ನೂರು ರು. ಮೀರುವಂತಿಲ್ಲ ಎಂಬ ಆದೇಶವಿತ್ತು. ಆದರೆ ಮಲ್ಟಿಪ್ಲೆಕ್ಸ್‌ನವರು ಈ ಆದಶಕ್ಕೆ ತಡೆ ತಂದಿದ್ದರು. ಇನ್ನು ಮುಂದೆ ವಿತರಕರು ಬೇರೆ ಭಾಷೆಯ ಸಿನಿಮಾಗಳಿಗೆ ಹೆಚ್ಚು ಹಣ ನೀಡಿ ತರಬೇಡಿ. ಪುಷ್ಪ 2 ಚಿತ್ರಕ್ಕೆ ಇನ್ನೂರು ರೂಪಾಯಿಗಿಂತ ಜಾಸ್ತಿ ದರ ನಿಗಧಿ ಮಾಡಿದರೆ ಥಿಯೇಟರ್‌ಗೆ ಮುತ್ತಿಗೆ ಹಾಕಲಾಗುವುದು ಎಂದು ಸಾ.ರಾ. ಗೋವಿಂದ್ ಹೇಳಿದರು.

ವಿ ಟಾಕೀಸ್

ದಮನಿತರ ದನಿಯಾದ ಧೀರ ಭಗತ್‌ರಾಯ್

ಕನ್ನಡ ಚಿತ್ರರಂಗದಲ್ಲಿ ರೆಟ್ರೋ ಸ್ಟೈಲ್‌ನಲ್ಲಿ ಹಲವು ಸಿನಿಮಾಗಳು ಮೂಡಿಬರುತ್ತಿವೆ. ಪ್ರೇಕ್ಷಕರ ಮನಗೆಲ್ಲುತ್ತಿವೆ. ಅಂತೆಯೇ ಈಗ ಧೀರ ಭಗತ್‌ರಾಯ್ ಚಿತ್ರ ಕೂಡ ರೆಟ್ರೋ ಶೈಲಿಯಲ್ಲಿಯೇ ಮೂಡಿಬಂದಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಟ್ರೇಲರ್‌ನಲ್ಲಿಯೇ ಮನಗೆದ್ದಿರುವ ಧೀರ ಭಗತ್ ರಾಯ್ ಕುರಿತಂತೆ ನಟ ರಾಕೇಶ್ ದಳವಾಯಿ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ: ಧೀರ ಭಗತ್‌ರಾಯ್ ಸ್ವಾತಂತ್ರ್ಯ ಹೋರಾಟಗಾರನ ಕಥೆಯೇ?

ರಾಕೇಶ್ : ಧೀರ ಭಗತ್‌ರಾಯ್ ಸ್ವಾತಂತ್ರ್ಯದ ಜತೆಗೆ ಸಮಾನತೆಯ ಪರ ಹೋರಾಡುವ ನಾಯಕ ಕಥೆ. ಧೀರ ಭಗತ್ ಅಂದಾಕ್ಷಣ ನಮಗೆ ನೆನಪಾಗುವುದೇ ಭಗತ್ ಸಿಂಗ್, ಅವರೊಬ್ಬ ಕ್ರಾಂತಿಕಾರಿ ನಾಯಕ, ನಮಗೆಲ್ಲಾ ಸ್ಫೂರ್ತಿಯ ದಾರಿ ದೀಪ. ಹಾಗಾಗಿ ಈ ಚಿತ್ರಕ್ಕೆ ಇದೇ ಶೀರ್ಷಿಕೆಯನ್ನೇ ಆಯ್ದುಕೊಂಡಿದ್ದೇವೆ. ತುಳಿತಕ್ಕೆ ಸಿಲುಕಿ, ಬದುಕಿನಲ್ಲಿ ನೋವುಂಡ ವ್ಯಕ್ತಿ ಹೇಗೆ ಕ್ರಾಂತಿಕಾರಿಯಾಗಿ ಬದಲಾಗುತ್ತಾನೆ, ಸಮಾನತೆಗಾಗಿ ಹೇಗೆ ಹೋರಾಡುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ.

ವಿ.ಸಿ: ಇದು ನೈಜ ಘಟನೆಯಾಧಾರಿತ ಸಿನಿಮಾವೆ ?

ರಾಕೇಶ್ : ಹೌದು, ಹಿಂದಿನಿಂದ, ಇಂದಿನವರೆಗೂ ನಡೆಯುತ್ತಿರುವ ದಮನಿತರ ನೋವಿನ ಕಥೆ ಚಿತ್ರದಲ್ಲಿದೆ. ನಿರ್ದೇಶನ ಕರ್ಣ, ತಾವು ಕಂಡುಂಡ ಅನುಭವಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆದು ತೆರೆಗೆ ತರುತ್ತಿದ್ದಾರೆ. ಭೂಸುಧಾರಣಾ ಕಾಯ್ದೆ ಜಾರಿಯಾದ ಮೇಲೆ, ಭೂಮಿ ಪಡೆಯಲು ಬಡವರು ಹೇಗೆಲ್ಲ ಕಷ್ಟಪಟ್ಟರು, ಹೋರಾಡಿದರು ಎಂಬ ನೈಜ ಕಥನಾ ಈ ಚಿತ್ರದಲ್ಲಿದೆ. ಒಳ್ಳೆಯ ಕಂಟೆಂಟ್ ಅನ್ನು ಕಮರ್ಷಿಯಲ್ ಅಂಶಗಳನ್ನು ಬೆರೆಸಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ವಿ.ಸಿ: ಈ ಹಿಂದೆಯೂ ಇಂತಹದ್ದೇ ಕಥೆಯ ಸಿನಿಮಾಗಳು ತೆರೆಗೆ ಬಂದಿವೆಯಲ್ಲ ?

ರಾಕೇಶ್ : ಈ ಹಿಂದೆ ಕಾಟೇರ ಚಿತ್ರದಲ್ಲಿ ಭೂಸುಧಾರಣಾ ಕಾಯ್ದೆಯ ಕುರಿತ ಕಥೆ ಇತ್ತು, ಜತೆಗೆ ಸಮಾಜದಲ್ಲಿರುವ ಜಾತಿ ತಾರತಮ್ಯದ ಸ್ಟೋರಿಯನ್ನು ಒಳಗೊಂಡಿತ್ತು. ಆದರೆ ಇಲ್ಲಿ ಅದಕ್ಕೂ ಭಿನ್ನವಾದ ಕಥೆ ಚಿತ್ರದಲ್ಲಿದೆ. ಧೀರಭಗತ್ ರಾಯ್ ಭೂಸುಧಾರಣಾ ಕಾಯ್ದೆಯಡಿ ಬಡವರಿಗೆ ಸಿಗಬೇಕಾದ ಜಮೀನನ್ನು ಒದಗಿಸಲು ಕಾನೂನು ಬದ್ಧವಾಗಿ ಹೋರಾಡುತ್ತಾನೆ. ತನ್ನ ವಿರುದ್ಧ ಸಂಚು ಮಸೆಯುವವರಿಗೆ ದಂಡಂ ದಶಗುಣಂ ಪ್ರಯೋಗ ಮಾಡುತ್ತಾನೆ ಅದು ಹೇಗೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಥ್ರಿಲ್ಲರ್ ಮಂಜು ಹಾಗೂ ವಿಕ್ರಮ್ ಮೋರ್ ಸಾಹಸ ನಿರ್ದೇಶನದಲ್ಲಿ ಅದ್ಭುತ ಸಾಹಸ ದೃಶ್ಯಗಳು ಮೂಡಿಬಂದಿವೆ.

> ಇದು ಎಪ್ಪತ್ತರ ದಶಕದಲ್ಲಿ ನಡೆಯುವ ಕಥೆ, ಆದರೂ ಈ ಸಿನಿಮಾ ಸಾರ್ವಕಾಲಿಕವಾಗಿ ಹೊಂದುತ್ತದೆ. ಎಲ್ಲಿರಿವರೆಗೆ ಅನ್ಯಾಯದ ವಿರುದ್ಧ ಹೋರಾಟ ನಡೆಯುತ್ತಿರುತ್ತದೆಯೋ ಅಲ್ಲಿಯವರೆಗೂ ಈ ಕಥೆ ಜೀವಂತವಾಗಿರುತ್ತದೆ.

ವಿ.ಸಿ: ತಾರಾಗಣದ ಬಗ್ಗೆ ಹೇಳುವುದಾದರೆ?

ರಾಕೇಶ್ : ಈ ಚಿತ್ರದಲ್ಲಿ ನವ ಪ್ರತಿಭೆಗಳ ದಂಡೇ ಇದೆ. ನಾನು ಈ ಸಿನಿಮಾದ ಮೂಲಕ ನಾಯಕನಾಗಿ ಪರಿಚಯವಾಗುತ್ತಿದ್ದೇನೆ ನನಗೆ ಜೋಡಿಯಾಗಿ ಸುಚರಿತಾ ಬಣ್ಣಹಚ್ಚಿದ್ದಾರೆ, ಹಿರಿಯ ನಟ ಶರತ್ ಲೋಹಿತಾಶ್ವ, ನೀನಾಸಂ ಅಶ್ವತ್, ಮಠ ಕೊಪ್ಪಳ ಉಳಿದಂತೆ ರಂಗಭೂಮಿ ಕಲಾವಿದರು ತಾರಾಗಣದಲ್ಲಿದ್ದಾರೆ. ಚಳ್ಳಕೆರೆ, ತುಮಕೂರು, ಕೊರಟಗೆರೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಸೂರ್ಯನಿಗೆ ನಾಯಕಿಯಾದ ಮೃಣಾಲ್



ನಟಿ ಮೃಣಾಲ್ ಠಾಕೂರ್ ಬಹುಭಾಷಾ ನಟಿಯಾಗಿ ಹೊರಹೊಮ್ಮಿದ್ದಾರೆ. ಸೀತಾರಾಮಂ ಚಿತ್ರದಿಂದ ಪ್ರಸಿದ್ಧ ಪಡೆದ ಮೃಣಾಲ್ ಬಲು ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದು, ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಈಗ ತಮಿಳಿನ ಖ್ಯಾತ ನಟ ಸೂರ್ಯ ಅಭಿನಯದ ಹೊಸ ಚಿತ್ರದಲ್ಲಿ ಮೃಣಾಲ್ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಇದು ಫ್ಯಾಂಟಸಿ ಥ್ರಿಲ್ಲರ್ ಜಾನರ್‌ನ ಸಿನಿಮಾವಾಗಿದ್ದು, ಆರ್.ಜೆ.ಬಾಲಾಜಿ ನಿರ್ದೇಶನ ಮಾಡುತ್ತಿದ್ದಾರೆ. ಹೈ ಬಜೆಟ್‌ನಲ್ಲಿ ಮೂಡಿಬರುತ್ತಿರುವ ಈ ಸಿನಿಮಾ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದೆ. ಈ ಚಿತ್ರದಲ್ಲಿ ನಾಯಕಿಯ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆ. ಹಾಗಾಗಿಯೇ ಮೃಣಾಲ್ ಈ ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದ್ದಾರೆ. ಈ ಹಿಂದೆಯೇ ಮೃಣಾಲ್, ಕಂಗುವಾ ಚಿತ್ರದಲ್ಲಿ ಸೂರ್ಯಗೆ ನಾಯಕಿಯಾಗಿ ನಟಿಸಬೇಕಿತ್ತು. ಆದರೆ ಬೇರೆ ಸಿನಿಮಾದಲ್ಲಿ ಬ್ಯುಸಿಯಾಗಿದ್ದರಿಂದ ಕಂಗುವಾದಲ್ಲಿ ಅಭಿನಯಿಸಲು ಸಾಧ್ಯವಾಗಲಿಲ್ಲ, ಹಾಗಾಗಿ ಈಗ ಈ ಸಿನಿಮಾದ ಮೂಲಕ ಸೂರ್ಯನಿಗೆ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಸದ್ಯ ಸೂರ್ಯ, ಕಂಗುವ ಚಿತ್ರದ ಚಿತ್ರೀಕರಣ ಮುಗಿಸಿದ್ದು ಸಿನಿಮಾದ ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಇದರ ಜತೆಗೆ ಬಾಲಿವುಡ್‌ನಲ್ಲಿ ಸೆಟ್ಟೇರಲು ಸಿದ್ಧವಾಗಿರುವ ಘಜಿನಿ 2 ಸಿನಿಮಾದಲ್ಲಿ ಅಮೀರ್ ಖಾನ್ ಜತೆಗೂ ಸೂರ್ಯ ತೆರೆ ಹಂಚಿಕೊಳ್ಳಲಿದ್ದಾರೆ.

ಜೀ ತೆಕ್ಕೆಗೆ ಹೈನ

ಅಮೃತ ಫಿಲಂ ಸೆಂಟರ್ ಮತ್ತು ಕೆ.ಕೆ. ಕಂಬೈನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಹೈನ ಚಿತ್ರ ಶೂಟಿಂಗ್ ಮುಗಿಸಿದ್ದು ತೆರೆಗೆ ಸಿದ್ಧವಾಗಿದೆ. ಚಿತ್ರದಲ್ಲಿ ಮಧುರವಾದ ನಾಲ್ಕು ಹಾಡುಗಳಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಈ ಚಿತ್ರದ ಆಡಿಯೋ ರೈಟ್ಸ್ ಜೀ ಮ್ಯೂಸಿಕ್ ತೆಕ್ಕೆಗೆ ಸೇರಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಎಲ್ಲ ವಯಸ್ಸಿನ ಜನರಿಗೆ ಇಷ್ಟವಾಗುವಂಥ ಸಾಹಿತ್ಯ ಸಂಗೀತವಿದೆ. ಇದರ ಜತೆಗೆ ಅದ್ಭುತವಾದ ದೃಶ್ಯಗಳನ್ನು ಸಂಯೋಜಿಸಲಾಗಿದೆ. ಈ ಚಿತ್ರದಲ್ಲಿನ ಶೀರ್ಷಿಕೆ ಗೀತೆ ರ್‍ಯಾಪ್ ಶೈಲಿಯಲ್ಲಿ ಮೂಡಿಬಂದಿದ್ದು, ಇದೇ ಚಿತ್ರದ ಹೈಲೈಟ್ ಆಗಿದೆ. ಈ ಹಾಡಿಗೆ ಕಾರ್ತಿಕ್ ಗುಬ್ಬಿ ದನಿಯಾಗಿದ್ದಾರೆ.

ಇದು ನೈಜ ಘಟನೆಯಾಧಾರಿತ ಚಿತ್ರವಾಗಿದ್ದು, ಸಾಹಸ ಪ್ರಧಾನ ಕಥೆಯನ್ನು ಒಳಗೊಂಡಿದೆ. ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಇದಕ್ಕಾಗಿ ಚಿತ್ರತಂಡ ಸಾಕಷ್ಟು ಶ್ರಮಹಾಕಿದೆ. ರಾಜ್ ಕಮಲ್, ಹರ್ಷ್ ಅರ್ಜುನ್ ಕಲಾಲ್, ದಿಗಂತ್, ಲಕ್ಷ್ಮಣ್ ಶಿವಶಂಕರ್, ನಿರಂಜನ್, ವೆಂಕಟ್ ಭಾರದ್ವಾಜ್, ಶಿಶಿರ್ ಕುಮಾರ್, ನಂದಕುಮಾರ್, ಮನೋಹರ್, ಅಭಿಷೇಕ್ ಐಯಂಗಾರ್, ಲಾರೆನ್ಸ್, ಪ್ರೀತಮ್ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ. ವೆಂಕಟ್ ಭಾರದ್ವಜ್ ನಿರ್ದೇಶನದಲ್ಲಿ ಚಿತ್ರ ಸಿದ್ಧವಾಗಿದ್ದು ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಲವ್ ಪ್ರಾನ್ ಮೆಹ್ತಾ ಸಂಗೀತ ನಿರ್ದೇಶನ, ನಿಶಾಂತ್ ನಾಣಿ ಛಾಯಾಗ್ರಹಣ, ಲಕ್ಷ್ಮಣ್ ಶಿವಶಂಕರ್ ಸಂಭಾಷಣೆ ಮತ್ತು ಶಮೀಕ್ ಭಾರದ್ವಾಜ್ ಸಂಕಲನ ಈ ಚಿತ್ರಕ್ಕಿದೆ.

ಆನ್‌ಲೈನ್‌ಗೆ ಎಂಟ್ರಿ ಕೊಟ್ಟ ಕಲಬುರಗಿ ಜೋಳದ ರೊಟ್ಟಿ..!

ರೊಟ್ಟಿಗೆ ಬಾರ್ ಕೋಡ್ ರಚನೆ | ದೇಶ-ವಿದೇಶದಲ್ಲೂ ಮಾರುಕಟ್ಟೆ ವಿಸ್ತರಣೆ

ವಿಶ್ವವಾಣಿ ವಿಶೇಷ ಕಲಬುರಗಿ

ದೂರದ ಬೆಂಗಳೂರು, ಮೈಸೂರು, ಮಂಗಳೂರು, ಹೈದ್ರಾಬಾದ್, ಮುಂಬೈ, ದೆಹಲಿಯಲ್ಲಿ ವಾಸ ಮಾಡುತ್ತಿರುವ ಉತ್ತರ ಕರ್ನಾಟಕದ ಮಂದಿ ಇಲ್ಲಿನ ಬಹುಮುಖ್ಯ ಆಹಾರ ಪದಾರ್ಥ ಜೋಳದ ರೊಟ್ಟಿಯನ್ನು ಅತಿಹೆಚ್ಚು ಮಿಸ್ ಮಾಡಿಕೊಳ್ಳುತ್ತಾರೆ. ತಮ್ಮ ಮನೆಯವರಿಂದ ರೊಟ್ಟಿಯನ್ನು ಪಾರ್ಸಲ್ ತರಿಸಿಕೊಂಡು ಅದರ ಸ್ವಾದ ಅನುಭವಿಸಿದ್ದನ್ನು ನಾವೆಲ್ಲರೂ ನೋಡಿರ್ತೀವಿ, ಇದೀಗ ಅಂತಹ ದೂರದ ಊರಲ್ಲಿ ಇರುವವರಿಗಾಗಿ ಕಲಬುರಗಿ ಜಿಲ್ಲಾಡಳಿತ ಮಹತ್ತರ ಹೆಜ್ಜೆಯೊಂದನ್ನು ಇಟ್ಟಿದೆ.

ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರಗಿ ಜಿಲ್ಲೆ ಎಂದರೆ ಥಟ್ಟನೆ ನೆನಪಾಗುವುದೇ ಒಂದು ತೊಗರಿ ಬೇಳೆ, ಇನ್ನೊಂದು ಬಿಳಿಜೋಳ. ತೊಗರಿ ಬೇಳೆಗೆ ಈಗಾಗಲೇ ಜಿಐ ಟ್ಯಾಗ್ ದೊರಕಿದ್ದು, 'ಭೀಮಾ ಪಲ್ಸ್' ಎಂಬ ಬ್ರ್ಯಾಂಡ್ ನೊಂದಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಕಷ್ಟು ಹೆಸರು ಮಾಡುತ್ತಿದೆ. ಇದೀಗ ಅದರಂತೆಯೇ ಜೋಳದ ಖಡಕ್ ರೊಟ್ಟಿಗೆ ಮಾನ್ಯತೆ ಹೆಚ್ಚಿಸಲು ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ.

ಜೋಳದ ರೊಟ್ಟಿ ಉತ್ತರ ಕರ್ನಾಟಕದ ಪ್ರಮುಖ ಆಹಾರವಾಗಿದೆ. ಅದರಲ್ಲೂ ಇಲ್ಲಿನ ಚಿತ್ತಾಪುರದ ಮಾಲ್ದಂಡಿ ಜೋಳದ ರೊಟ್ಟಿ ಬಹು ಉತ್ಕೃಷ್ಟವಾಗಿದೆ. ಇದನ್ನೇ ಇದೀಗ 'ಕಲಬುರಗಿ ರೊಟ್ಟಿ' ಎಂಬ ಬ್ರ್ಯಾಂಡ್ ಮೂಲಕ ರಾಜ್ಯದ ಮೂಲೆ ಮೂಲೆಗಳಿಗೆ, ದೇಶ- ವಿದೇಶಗಳಿಗೂ ಈ ಖಡಕ್ ರೊಟ್ಟಿಯನ್ನು ಆನ್‌ಲೈನ್‌ನಲ್ಲಿ ಸಿಗುವಂತೆ ಮಾಡಲಾಗುತ್ತಿದೆ. ಜಿಲ್ಲಾಡಳಿತದಿಂದಲೇ ರೊಟ್ಟಿ ಬಾಕ್ಸಿಂಗ್, ಪ್ಯಾಕಿಂಗ್ ಸೇರಿದಂತೆ 'ಕಲಬುರಗಿ ರೊಟ್ಟಿ' ಎಂಬ ಜಾಲತಾಣದ ಸೃಜನೆ, ಸಾಮಾಜಿಕ ಜಾಲತಾಣಗಳ ಮೂಲಕ ಮಾರ್ಕೆಟಿಂಗ್ ಮಾಡಲಾಗುತ್ತಿದೆ. ಈ ಮೂಲಕ ರೊಟ್ಟಿ ಮಾರಾಟಕ್ಕೆ ಈಗಾಗಲೇ ಮಾರುಕಟ್ಟೆ ಪ್ರಾರಂಭವಾಗಿದೆ.ಆನ್ ಲೈನ್ ನಲ್ಲಿ ರೊಟ್ಟಿ ಮಾರಾಟಕ್ಕೆ ಇದೀಗ ಫ್ಲಿಪ್ ಕಾರ್ಟ್, ಅಮೇಜಾನ್, ಬಿಗ್ ಬಾಸ್ಕೆಟ್ ಸೇರಿದಂತೆ ಇತರ ಕೊರಿಯರ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಕಲಬುರಗಿಯಲ್ಲಿ ರೊಟ್ಟಿಯನ್ನು ಖರೀದಿಸುವ ಬಗ್ಗೆ 2 ಹೋಟೆಲ್ ಗಳೊಂದಿಗೂ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎನ್ನುತ್ತಾರೆ ಇಲ್ಲಿನ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್.

ಜಿಲ್ಲಾಡಳಿತದಿಂದ ರೊಟ್ಟಿ ಉತ್ಪಾದಕರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ರೊಟ್ಟಿಯನ್ನು ಬ್ರ್ಯಾಂಡ್ ಮಾಡಿಕೊಂಡು ಆನ್ ಲೈನ್ ನಲ್ಲಿ ಮಾರಾಟ ಮಾಡುತ್ತಿರುವ ಕಾರ್ಯ ರಾಜ್ಯದಲ್ಲೇ ವಿನೂತನ ಪ್ರಯತ್ನವಾಗಿದೆ. ಇದರಿಂದ ಜೋಳ ಬೆಳೆಗಾರರಿಗೆ, ರೊಟ್ಟಿ ಉತ್ಪಾದಕರಿಗೆ ಹೆಚ್ಚಿನ ಲಾಭ ಬರುವುದರ ಜೊತೆಗೆ ಉದ್ಯೋಗ ಸೃಷ್ಟಿಯೂ ಆಗಲಿದೆ.

- ಸಮದ್ ಪಟೇಲ್, ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ

ರೊಟಿಗೆ ಬಾರ್ ಕೋಡ್, ವಿದೇಶಗಳಿಂದಲೂ ಬೇಡಿಕೆ

ಕಲಬುರಗಿ ರೊಟ್ಟಿ ಬ್ರ್ಯಾಂಡ್ ಮಾರಾಟಕ್ಕೆ ಬಾರ್ ಕೋಡ್ ರಚಿಸಲಾಗಿದ್ದು, 'ಕ್ಯೂಆರ್' ಕೋಡ್ ಮೂಲಕ ಗ್ರಾಹಕರು ಆರ್ಡರ್ ಮಾಡಬಹುದು. ಆನ್ ಲೈನ್ ನಲ್ಲಿ ರೊಟ್ಟಿ ಮಾರಾಟ ಪ್ರಾರಂಭಿಸುತ್ತಿದ್ದಂತೆ ಈಗಾಗಲೇ ದೇಶ ವಿದೇಶ ಗಳಿಂದಲೂ ಬೇಡಿಕೆ ಹೆಚ್ಚಾಗಿದೆ. ಅವರಿಗೂ ಈ ರೊಟ್ಟಿ ಸಿಗಲಿದೆ.ಈಗಾಗಲೇ 20 ಜನ ಸದಸ್ಯರನ್ನು ಒಳಗೊಂಡ ರೊಟ್ಟಿ ಉತ್ಪಾದಕರ ಸಂಘ ರಚಿಸಲಾಗಿದ್ದು, 2 ಪ್ರಮುಖ ಕೇಂದ್ರಗಳಲ್ಲಿ ರೊಟ್ಟಿ ಉತ್ಪಾದನೆ ನಡೆಯುತ್ತಿದೆ. ಕೃಷಿ ಇಲಾ ಖೆಯಿಂದ ಸಹಾಯಧನ ಮೂಲಕ 100 ಫಲಾನುಭವಿಗಳಿಗೆ ರೊಟ್ಟಿ ತಯಾರಿಸುವ ಯಂತ್ರ ನೀಡಲಾಗಿದೆ. ಅವರ ರೊಟ್ಟಿಗಳು ಸಹ ಮಾರುಕಟ್ಟೆಗೆ ಇಳಿಯಲಿವೆ.

ಸದ್ಯ ಏನೇನು, ಎಲ್ಲೆಲ್ಲಿ ಸಿಗಲಿವೆ ಕಲಬುರಗಿ ರೊಟ್ಟಿ?

ಸದ್ಯ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆ ಕಲಬುರಗಿ ರೊಟ್ಟಿಗಳನ್ನು ನಗರದ 3 ಪ್ರಮುಖ ಸ್ಥಳಗಳಲ್ಲಿ ಇರಿಸಲು ಕೆಲಸ ನಡೆಯುತ್ತಿದೆ. ಜಿಲ್ಲೆ ಬಿಟ್ಟರೆ ಮೊದಲ ಹಂತವಾಗಿ ಟೈರ್ 1 ನಗರಗಳಾದ ಬೆಂಗಳೂರು, ಹೈದ್ರಾಬಾದ್, ಪುಣೆ ಮತ್ತು ಮುಂಬೈಯಲ್ಲಿ ದೊರೆಯಲಿವೆ. ಖಡಕ್ ರೊಟ್ಟಿ ಜೊತೆಗೆ ಧಪಾಠಿ, ಹಪ್ಪಳ, ಶೇಂಗಾದ ಹಿಂಡಿ, ಸಜ್ಜೆ ರೊಟ್ಟಿ, ಕಾರ್ಯಳ ಹಿಂಡಿ ಮತ್ತಿತರ ಉತ್ಪನ್ನಗಳೂ ಸಿಗಲಿವೆ.

ಸ್ವದೇಶದಲ್ಲೇ ಗಾಂಧಿಯ ಚಾರಿತ್ರ್ಯ ಹರಣವಾಗುತ್ತಿದೆ: ಬಿಆರ್ ಪಾಟೀಲ್

ಕಲಬುರಗಿ: ಮಹಾತ್ಮ ಗಾಂಧೀಜಿ ಅವರನ್ನೂ ಜಗತ್ತಿನ ಇತರೆ ದೇಶಗಳು ಗೌರವಿಸಿ ಪೂಜಿಸುತ್ತಾರೆ. ಆದರೆ, ಸ್ವಂತ ದೇಶದ ಭಾರತದಲ್ಲಿ ಗಾಂಧೀಜಿಯ ಚಾರಿತ್ರ್ಯ ಹರಣ ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಶಾಸಕ, ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್ ಪಾಟೀಲ್ ವಿಷಾದ ವ್ಯಕ್ತಪಡಿಸಿದರು.

ಇಲ್ಲಿನ ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಯಣದ ವತಿಯಿಂದ ಆಯೋಜಿಸಿದ ಗಾಂಧಿ ಜಯಂತಿ ಪ್ರಯುಕ್ತ ಬಾಪೂಜಿ'' ತೊಗಲು ಬೊಂಬೆ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಬಸವಣ್ಣನವರ ಬಗ್ಗೆ ಗಾಂಧೀಜಿಗೆ ಸಾಕಷ್ಟು ಒಲವಿತ್ತು. ಬಸವಣ್ಣ ಹೇಳಿದ್ದನ್ನೇ ಗಾಂಧೀಜಿ ಅವರು ತಮ್ಮ ಅಹಿಂಸಾ ತತ್ವದ ಮೂಲಕ ಗಾಂಧೀಜಿ ಜಗತ್ತಿನ 186ಕ್ಕೂ ಹೆಚ್ಚಿನ ದೇಶಗಳಿಗೆ ಮಾದರಿಯಾಗಿದ್ದಾರೆ. ಗಾಂಧಿ ಕುರಿತು ಅನೇಕ ಲೇಖನ,ಕಾದಂಬರಿ, ಆತ್ಮಚರಿತೆ ಓದಿದ್ದೇವೆ. ಆದರೆ, ಗಾಂಧೀಜಿಯನ್ನು ಮೀರಿಸುವ ಎರಡನೇ ಶಕ್ತಿ ಇಂದಿಗೂ ಜಗತ್ತಿನಲ್ಲಿ ಹುಟ್ಟಿಲ್ಲ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ, ಕಲಬುರಗಿ ರಂಗಾಯಣದ ಆಡಳಿತಾಧಿಕಾರಿ ಜಗದೀಶ್ವರಿ ನಾಸಿ ಮಾತನಾಡಿದರು. ಸಿದ್ಧಾರ್ಥ ಚಿಮ್ಮ ಇದ್ದಾಯಿ ತಂಡದಿಂದ ಗೀತ ಗಾಯನ. ಬಳ್ಳಾರಿ ಶ್ರೀರಾಮಾಂಜನೇಯ ತೊಗಲು ಬೊಂಬೆ ಮೇಳ ಟ್ರಸ್ಟ್‌ನ ಬೆಳಗಲ್ಲು ಹನುಮಂತ ತೊಗಲು ಬೊಂಬೆ ಆಟ, ಬಳ್ಳಾರಿಯ ನಾಡೋಜ ಶ್ರೀಬೆಳಗಲ್ಲು ವೀರಣ್ಣ ಅವರ ನಿರ್ದೇಶನ ಹಾಗೂ ಕಲಬುರಗಿಯ ಕಪಿಲ ಚಕ್ರವರ್ತಿ ನಿರೂಪಣೆ ಮಾಡಿದರು.

ರಾಮನನ್ನು ಉಗ್ರವಾಗಿ ಬಿಂಬಿಸಲಾಗುತ್ತಿದೆ

ವಾಲ್ಮೀಕಿ ಕಂಡ ರಾಮನೇ ಬೇರೆ, ಸೀತಾ ಕಂಡ ರಾಮನೇ ಬೇರೆ, ಕಬೀರ್ ಕಂಡ ರಾಮನೇ ಬೇರೆ, ಗಾಂಧಿ ಕಂಡ ರಾಮನೇ ಬೇರೆಯಾಗಿದ್ದಾನೆ. ಸದಾ ಶಾಂತ ಪ್ರೀತಿ, ಕರುಣಾಮಯಿಯಾಗಿದ್ದ ರಾಮನ ಚರಿತ್ರೆಯನ್ನು ಇಂದು ಕೆಲವರು ತಿರುಚಿ, ರಾಮನನ್ನು ಉಗ್ರವಾದಿ ರೂಪದಲ್ಲಿ ಬಿಂಬಿಸುವ ಯತ್ನ ನಡೆಸುತ್ತಿದ್ದಾರೆ. ನಮಗೆ ಬಿಲ್ಲು ಬಿಡುವ, ಕೊಲ್ಲುವ, ಜಾತಿ ಭೇದ-ಭಾವ ಮಾಡುವ ರಾಮ ಬೇಡ, ಸದಾ ಪ್ರೀತಿ ವಿಶ್ವಾಸ ನೀಡುತ್ತಿದ್ದ ರಾಮ ನಮಗೆ ಬೇಕು ಎಂದು ಶಾಸಕ ಬಿ. ಆರ್ ಪಾಟೀಲ್ ಅಭಿಮತಪಟ್ಟರು.

ಗಾಂಧಿ ಹೇಳಿದ ಸರಳ ಸ್ವಾವಲಂಬಿ ಬದುಕಿಗೆ ನಾವು ಮರಳಬೇಕಿದೆ. ಗಾಂಧಿಯ ಆದರ್ಶಗಳಿಂದ ನಾಗರೀಕತೆ ಉಳಿಯಲು ಸಾಧ್ಯ. ಗಾಂಧಿ ಕಂಡಂತೆ ಹೆಣ್ಣು ಮಕ್ಕಳನ್ನೂ ಮುನ್ನಲೆಗೆ ತರಬೇಕಾಗಿದೆ. ಗಾಂಧೀಯನ್ನು ಇವ ನಮ್ಮವ ಎಂದು ಒಪ್ಪುವ ಮನೋಭಾವನೆ ಎಲ್ಲರು ಬೆಳೆಸಿಕೊಳ್ಳಬೇಕು.

- ಆಶಾದೇವಿ, ಹಿರಿಯ ಲೇಖಕಿ

ಸಮಾಚಾರ ಸಣ್ಣದಲ್ಲ

ಸರಣಿ ಅಪಘಾತ: ನಾಲ್ವರಿಗೆ ಗಾಯ

ಕಲಬುರಗಿ: ಬೈಕ್ ಹಾಗೂ ಕಾರುಗಳ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ನಾಲ್ವರು ಗಂಭೀರ ಗಾಯಗೊಂಡಿರುವ ಘಟನೆ ಕಲಬುರಗಿ ತಾಲೂಕಿನ ಅವರಾದ್ ಗ್ರಾಮದ ಸಮೀಪ ನಡೆದಿದದೆ. ಅಪಘಾತದಲ್ಲಿ ಮಲ್ಲಿಕಾರ್ಜುನ್, ರವಿ, ಅಂಬರೀಶ್ ಹಾಗೂ ನರೇಶ್ ಎನ್ನುವವರಿಗೆ ಗಂಭೀರ ಗಾಯಗಳಾಗಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದ್ದು, ಬಳಿಕ ಕಾರಿನ ಹಿಂಬದಿಯಿಂದ ಮತ್ತೆರಡು ಕಾರುಗಳು ಡಿಕ್ಕಿಯಾಗಿವೆ. ಅಪಘಾತದಲ್ಲಿ ಬೈಕ್ ಸವಾರ ಸೇರಿ ಕಾರಿನಲ್ಲಿದ್ದ ಮೂವರು ಗಂಭೀರ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಕಲಬುರಗಿ ಸಂಚಾರಿ ಠಾಣೆ-2ರಲ್ಲಿ ಪ್ರಕರಣ ದಾಖಲಾಗಿದೆ.

ರೈತ ಹಿತರಕ್ಷಣೆಯಿಂದ ಪ್ರತಿಭಟನೆ ಮುಂದೂಡಿಕೆ

ಚಿಂಚೋಳಿ: ಸಿದ್ದಸಿರಿ ಎಥಿನಾಲ್ ಕಾರ್ಖಾನೆ ಪುನರ್ ಆರಂಭಿಸುವಂತೆ ಆಗ್ರಹಿಸಿ ಇದೆ ಅ. 29ರಂದು ತಾಲೂಕ ರೈತ ಹಿತರಕ್ಷಣೆ ಸಮಿತಿ ವತಿಯಿಂದ ನಡೆಸಲು ಚಿಂತಿಸಲಗಿದ್ದ ಬೃಹತ್ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ತಾಲೂಕ ರೈತ ಹಿತರಕ್ಷಣೆ ಸಮಿತಿ ಅಧ್ಯಕ್ಷ ಅಬ್ದುಲ್ ಬಾಶೀದ್ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಚಿಂಚೋಳಿ, ಕಾಳಗಿ, ಸೇಡಂ ಭಾಗದ ಜನರು ಬೆಳೆದ ಕಬ್ಬು ಬೆಳಗಾರರು ಸಂಕಷ್ಟಕ್ಕೆ ಒಳಗಾದ ಹಿನ್ನಲೆಯಲ್ಲಿ ಸರಕಾರ ಕಬ್ಬು ಕಟ್ಟಾವು ಮಾಡಿಸಿ, ಖರೀದಿಸಿ ಸೂಕ್ತ ಬೆಂಬಲ ನೀಡಬೇಕು ಎಂದು ಪಕ್ಷಾತೀತವಾಗಿ ಅ. 29 ರಂದು ಪ್ರತಿಭಟನೆಗೆ ಕರೆ ನೀಡಲಾಗಿತ್ತು. ಮುಖಂಡರ ಮಾರ್ಗದರ್ಶನದಂತೆ ಇದೇ ಅ. 28ರಂದು ಮುಖಂಡರೊಂದಿಗೆ ಸಮಿತಿ ಜಿಲ್ಲಾಧಿಕಾರಿಗಳಿಗೆ ಭೇಟಿ ನಮ್ಮ ಮನವಿ ಸಲ್ಲಿಸಲಾಗುತ್ತದೆ. ಹೀಗಾಗಿ ತಾತ್ಕಾಲಿಕವಾಗಿ ಅ. 29ರ ಪ್ರತಿಭಟನೆಯನ್ನು ಮುಂದೂಡಲಾಗುತ್ತದೆ ಎಂದಿದ್ದಾರೆ. ನಮ್ಮ ಬೇಡಿಕೆಗೆ ಸ್ಪಂದನೆ ದೊರಕದೆ ಹೋದರೆ ಮತ್ತೊಮ್ಮೆ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮಾಹಿತಿ ಹಕ್ಕು ಕಾರ್ಯಾಗಾರ ಇಂದು

ಕಲಬುರಗಿ: ಮಾಹಿತಿ ಹಕ್ಕು ದಿನಾಚರಣೆ ಅಂಗವಾಗಿ ಅಕ್ಟೋಬರ್ 29 ರಂದು ಬೆಳಗ್ಗೆ 10.30 ಗಂಟೆಗೆ ಕಲಬುರಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಮೂರನೇ ಮಹಡಿಯಲ್ಲಿರುವ ಕೆಸ್ವಾನ್ ಸಭಾಂಗಣದಲ್ಲಿ ಅಧಿಕಾರಿ-ಸಿಬ್ಬಂದಿಗಳಿಗೆ ಕಲಬುರಗಿ ವಿಭಾಗ ಮಟ್ಟದ ಮಾಹಿತಿ ಹಕ್ಕು ಕಾರ್ಯಾಗಾರ ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ಆಯುಕ್ತ ರವೀಂದ್ರ ಧಾಕಪ್ಪ ಅವರು ಕಾರ್ಯಾಗಾರ ಉದ್ಘಾಟಿಸಿ ಮಾತನಾಡುದವರು. ಇದಲ್ಲದೆ ಕಾರ್ಯಾಗರದಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಾದ ಅನುಭವಿ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯ ವಿವಿಧ ಸೆಕ್ಷನ್ ವಿವರಗಳು ಮತ್ತು ಸಂದೇಹಗಳನ್ನು ನಿವಾರಿಸುವರು. ಕಲಬುರಗಿ ಜಿಲ್ಲಾ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳು ಕಲಬುರಗಿ ಡಿ.ಸಿ. ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಖುದ್ದಾಗಿ ಹಾಜರಿರಬೇಕು. ವಿಭಾಗದ ಉಳಿದ ಜಿಲ್ಲೆಗಳ ಅಧಿಕಾರಿಗಳು ಆಯಾ ಜಿಲ್ಲೆಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಬೇಕೆಂದು ಪ್ರಾದೇಶಿಕ ಆಯುಕ್ತ ಕೃಷ್ಣ ಭಾಜಪೇಯಿ ಅವರು ಮನವಿ ಮಾಡಿದ್ದಾರೆ.

ಜಾತ್ರೆ: ವಾಹನಗಳ ಕಾರ್ಯಾಚರಣೆ

ಕಲಬುರಗಿ: ಮಹಾರಾಷ್ಟ್ರ ರಾಜ್ಯದ ಸೊಲ್ಲಾಪೂರ ಜಿಲ್ಲೆಯ ಮಂಗಳವಾಡಾ ತಾಲೂಕಿನ ಹುಲಜಂತಿ ಗ್ರಾಮದಲ್ಲಿ ಇದೇ ಅಕ್ಟೋಬರ್ 30 ರಿಂದ ನವೆಂಬರ್ 3 ರವರೆಗೆ ಜರುಗಲಿರುವ ಶ್ರೀ ಮಾಳಿಂಗರಾಯ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕಲ್ಯಾಣ ಕರ್ನಾಟ ರಸ್ತೆ ಸಾರಿಗೆ ನಿಗಮ, ಕಲಬುರಗಿ ವಿಭಾಗ-1ರ ದಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ವಿಶೇಷ ವಾಹನಗಳ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಕಲಬುರಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ-1ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ವಿಭಾಗದ ವ್ಯಾಪ್ತಿಗೆ ಬರುವ ವಿಶೇಷ ವಾಹ ನಗಳ ಸೌಲಭ್ಯಕ್ಕಾಗಿ ಘಟಕ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆಗಳ ವಿವರ ಈ ಕೆಳಗಿನಂತಿ ದೆ. ಕಲಬುರಗಿ ಘಟಕ-1ರ ಘಟಕ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ 776099 2113, ಕಲಬುರಗಿ ಘಟಕ-4ರ ಘಟಕ ಮೊ: 702201 2103, ಚಿಂಚೋಳಿ ಘಟಕದ ಮೊ: 7760992117, ಚಿತ್ತಾಪೂರ ಘಟಕದ ಮೊ:-7760992119, ಕಾಳಗಿ ಘಟಕದ ಮೊ: 7760992120 ಹಾಗೂ ಸೇಡಂ ಘಟಕ ವ್ಯವಸ್ಥಾಪಕರ ಮೊ: 7760992466ಗೆ ಸಂಪರ್ಕಿಸಬೇಕು.

{ಆರ್.ಅಶೋಕ್} ಪ್ರತಿಪಕ್ಷ ನಾಯಕ

ಕಾಂಗ್ರೆಸ್ ಸರಕಾರ ಹಾಗೂ ವಕ್ಫ್ ಬೋರ್ಡ್‌ನಿಂದ ಲ್ಯಾಂಡ್ ಜಿಹಾದ್ ಆರಂಭವಾಗಿದ್ದು, ಬಡ ರೈತರ ಜಮೀನನ್ನು ಕಬಳಿಸಲು ಎಲ್ಲ ಬಗೆಯ ಪ್ರಯತ್ನ ಮಾಡಲಾಗಿದೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಕೂಡಲೇ ಸ್ಪಷ್ಟೀಕರಣ ನೀಡಬೇಕು.

ವಿದ್ಯಾರ್ಥಿಗಳು ಯಶಸ್ಸಿನತ್ತ ಸಾಗಬೇಕು: ಅಲ್ತಾಫ್

ಕಲಬುರಗಿ: ಓದುವದು, ಬರೆಯುವುದು, ಆಲಿಸುವುದು, ಕಲಿಕೆಯ ಆಸಕ್ತಿ, ಪ್ರದರ್ಶಿಸುವಿಕೆಯ ವೈಶಿಷ್ಟತೆ ಈ ಐದು ಕೌಶಲ್ಯಗಳು ಯಶಸ್ಸಿನ ಮಂತ್ರಗಳಾಗಿವೆ. ವಿದ್ಯಾರ್ಥಿಗಳು ಯಶಸ್ಸಿನತ್ತ ಸಾಗಬೇಕು ಎಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರ ಅಧ್ಯಕ್ಷ ಅಲ್ತಾಫ್ ಹುಸೇನ್ ಅಭಿಪ್ರಾಯ ಪಟ್ಟರು.

ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪಾ ಸಭಾ ಮಂಟಪದಲ್ಲಿ ಶರಣಬಸವ ವಿಶ್ವವಿದ್ಯಾಲಯ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರ ಆಯೋಜಿಸಿದ (IIche-hrc) (Indian institute of chemical engineers Hyderabad Regional centre IIche-hrc student chapter inauguration program) ವಿದ್ಯಾರ್ಥಿ ಅಧ್ಯಾಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಿಕೆಯಲ್ಲಿ ಪಠ್ಯ, ಪಠ್ಯೇತರ ಹಾಗೂ ಇತರೆ ಪಠ್ಯೇತರ ಕಲಿಕೆಯತ್ತ ವಿದ್ಯಾರ್ಥಿಗಳು ಗಮನವಹಿಸಬೇಕು. ಇಂತಹ ಕಲಿಕೆಯಿಂದ ಮಾತ್ರ ವ್ಯಕ್ತಿತ್ವ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ನ್ಯೂ ಎಜುಕೇಶನ್ ಪಾಲಿಸಿಯಿಂದ ಇಂತಹ ಕಲಿಕೆ ಅವಕಾಶ ಸಿಕ್ಕಿದೆ ಎಂದರು.

ವಿದ್ಯಾರ್ಥಿಗಳು ಹಲವಾರು ಕ್ಷೇತ್ರದ ಕಲಿಕೆಯ ಮುಖಾಂತರ ಉತ್ತಮ ಪಾಠ ಪಡೆದುಕೊಳ್ಳಬಲ್ಲರು. ಈ ಜಗತ್ತಿನ ಭವಿಷ್ಯ ನಿಮ್ಮ ಕೈಯಲಿದೆ. ಉತ್ತಮ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಿ.

- ಡಾ. ಎಸ್ ಜಿ. ಡೊಳ್ಳೇಗೌಡರ, ಕುಲಸಚಿವ, ಶರಣಬಸವ ವಿವಿ

ಈ ಅಧ್ಯಯನದಿಂದ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಹೆಚ್ಚು ಹೆಚ್ಚು ಕಲಿಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಈ ಮೂಲಕ ಅಪ್ರೆಂಟಿಸ್, ಇಂಟರ್‌ಶಿಪ್ ಹಾಗೂ ಇತರೇ ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ ಮತ್ತು ಸಂಶೋಧನಾತ್ಮಕ ಕ್ರೀಯಾತ್ಮಕ ಮನಸ್ಥಿತಿ ಅಭಿವೃದ್ಧಿಗೊಳಿಸಿಕೊಳ್ಳಬಹುದು ಎಂದರು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರದ ಕಾರ್ಯದರ್ಶಿ ಸಿ.ಎಚ್. ಅಪ್ಪಾರಾವ ಮಾತನಾಡಿ, ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯಬೇಕು ಮತ್ತು ಕಲಿತ ವಿಷಯವನ್ನು ಹೇಗೆ ಅನ್ವಯಿಸಿಕೊಳ್ಳಬೇಕು ಎನ್ನುವ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು. ವಿವಿ ಪ್ರಾಧ್ಯಾಪಕ ಡಾ. ಬಸವರಾಜ ಶ್ರೀಗಿರಿ ಹಾಗೂ ವಿವಿ ಕುಲಸಚಿವ ಡಾ. ಎಸ್ ಜಿ. ಡೊಳ್ಳೇಗೌಡರ ಮಾತನಾಡಿದರು. ವೇದಿಕೆಯಲ್ಲಿ ವಿವಿ ಕುಲಪತಿ ಡಾ. ಅನೀಲ ಕುಮಾರ ಜಿ. ಬಿಡವೆ, ಕುಲಸಚಿವ ಮೌಲ್ಯಮಾಪನ ಡಾ. ಎಸ.ಎಸ್.ಹೊನ್ನಳ್ಳಿ, ಎಂಜನಿಯರಿಂಗ್ ವಿಭಾಗದ ಡೀನ ಡಾ. ಶಿವಕುಮಾರ ಜವಳಗಿ, ಪ್ರೊ. ವಿಕಾಸ ಕೆ. ಅಣಕಲ್ ಇತರರು ಇದ್ದರು.

ಮಾಹಿತಿ ಹಕ್ಕು ಕುರಿತು ಜಾಗೃತಿ ಮೂಡಿಸಿ

ಕಲಬುರಗಿ: ಕರ್ನಾಟಕ ಮಾಹಿತಿ ಆಯೋಗ ಜಾರಿಗೆ ಬಂದಾಗಿನಿಂದ ಭ್ರಷ್ಟಾಚಾರಕ್ಕೆ ಒಂದಿಷ್ಟು ಕಡಿವಾಣ ಬಿದ್ದಿದೆ ಇದರ ಬಗ್ಗೆ ಇನ್ನಷ್ಟು ಜನರಲ್ಲಿ ಅರಿವು ಮೂಡಿಸಬೇಕು ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ರವೀಂದ್ರ ಗುರುನಾಥ ಧಾಕಪ್ಪ ಹೇಳಿದರು.

ಜಿಲ್ಲಾ ಪಂಚಾಯತ್ ಹೊಸ ಸಭಾಂಗಣದಲ್ಲಿ ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ವತಿಯಿಂದ ಹಮ್ಮಿಕೊಂಡಿದ್ದ ಮಾಹಿತಿ ಹಕ್ಕು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾಹಿತಿ ಹಕ್ಕು ದಿನಚಾರಣೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹಮ್ಮಿಕೊಂಡಿರುವುದು ತುಂಬ ಸಂತೋಷ ತಂದಿದ್ದು, ಮಾಹಿತಿ ಆಯೋಗ ಪೀಠ ಸ್ಥಾಪನೆಯಿಂದ ಈ ಏಳು ಜಿಲ್ಲೆಗಳಿಗೆ ಇದರ ಪ್ರಯೋಜನವಾಗಲಿದೆ. ಈ ಪೀಠಕ್ಕೆ ಶಾಶ್ವತ ಕಟ್ಟಡ ಒದಗಿಸುವಂತೆ ಸರಕಾರದ ಮೇಲೆ ಪ್ರಭಾವ ಬಿರುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಹಿರಿಯ ಸಾಮಾಜಿಕ ಕಾರ್ಯಕರ್ತ ಶ್ರೀನಿವಾಸ ಸಿರನೂರಕರ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯಲ್ಲಿ ಪರಿಣಾಮಕಾರಿ ಅನುಷ್ಠಾನದಲ್ಲಿ ಮಾಧ್ಯಮದ ಪಾತ್ರ ಬಹಳ ಮುಖ್ಯವಾಗಿದೆ ಓದುಗರ ವೀಕ್ಷಕರ ಕೇಳುಗರ ಪರವಾಗಿ ಮಾಧ್ಯಮ ಕಾರ್ಯಮಾಡಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನಿಯರ್ ಜಗನಾಥ ಹಂಲಿಗೆ, ಗ್ರಾಹಕರ ವೇದಿಕೆಯ ಸಂಘದ ಅಧ್ಯಕ್ಷೆ ಮಾಲತಿ ರೇಷ್ಮೆ, ಕಲ್ಯಾಣ ಕರ್ನಾಟಕ ಪರಿಸರ ಪ್ರಜ್ಞೆ ಹಾಗೂ ಸಂರಕ್ಷಣೆ ಸಂಘಟನೆಯ ಅಧ್ಯಕ್ಷ ದೀಪಕ ಗಾಲಾ ಮಾತನಾಡಿದರು. ಎ.ಪಿ.ಸಿ.ಆರ್. ಸ್ಟೇಟ್ ಆರ್ ಟಿ ಐ ಕೋರ್ಡಿನೇಟರ್ ಶೇಖ ಶಫಿ ಅಹಮದ್ 4(1)ಎ,4(1)ಬಿ ಕಾಯ್ದೆಗಳ ಅನುಷ್ಠಾನ ಕುರಿತು ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹಾಗೂ ಸಂಘಟನೆಗಳ ಅಧ್ಯಕ್ಷರು ಆರ್.ಟಿ.ಐ. ಕಾರ್ಯಕರ್ತರು ಭಾಗವಹಿಸಿದ್ದರು.

ಕಲಬುರಗಿ ಪೀಠದಲ್ಲಿ ಹುದ್ದೆಗಳ ಕೊರತೆಯಿದೆ. 371 (ಜೆ) ಕಲಂ ಅಡಿಯಲ್ಲಿ ಹುದ್ದೆಗಳನ್ನ ಭರ್ತಿ ಮಾಡಬೇಕಾಗಿದೆ. ಈ ಹುದ್ದೆಗಳನ್ನ ತುಂಬಿದಲ್ಲಿ ಕೆಲಸ ನಿರ್ವಹಿಸುವಲ್ಲಿ ಸಹಕಾರ ಆಗಲಿದೆ.

- ರವೀಂದ್ರ, ಗುರುನಾಥ ಧಾಕಪ್ಪ,ಆಯುಕ್ತ, ರಾಜ್ಯ ಮಾಹಿತಿ ಆಯೋಗ

ಮಿಲ್‌ನಲ್ಲಿ ತೊಗರಿ ಬೇಳೆ ಕಳ್ಳರ ಬಂಧನ

ಕಲಬುರಗಿ: ನಂದಿಕೂರು ಕೈಗಾರಿಕಾ ಪ್ರದೇಶದ ದಾಲ್ ಮಿಲ್ ಶಟರ್ ಮುರಿದು 17 ಕ್ವಿಂಟಾಲ್ ತೊಗರಿ ಬೇಳೆ ಕಳವು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿ ವಿಶ್ವವಿದ್ಯಾಲಯ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಈಶ್ವರ ಕಾಳನೂರ, ಮಹೇಶ್ ವಾಡೇಕರ್ ಬಂಧಿತ ಆರೋಪಿಗಳಾಗಿದ್ದಾರೆ. ನಂದಿಕೂರು ಕೈಗಾರಿಕಾ ಪ್ರದೇಶದಲ್ಲಿರುವ ದಾಲ್ ಮಿಲ್ ಶೆಟರ್ ಮುರಿದು ಸುಮಾರು ರು.1.48 ಲಕ್ಷ ಮೌಲ್ಯದ ತೊಗರಿ ಬೇಳೆ ತುಂಬಿದ್ದ ಚೀಲಗಳನ್ನು ಈ ಆರೋಪಿಗಳು ಹೊತ್ತೊಯ್ದಿದ್ದರು. ಈ ಕುರಿತು ವಿಶ್ವವಿದ್ಯಾಲಯ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಇದೀಗ ಆರೋಪಿಗಳನ್ನು ಬಂಧಿಸುವ ಮೂಲಕ ಪ್ರಕರಣ ಬ ೇ ಧಿ ಸ ್ ಎ ವ ್ ಲ್ಲಿ ಯಶಸ್ವಿಯಾಗಿದ್ದಾರೆ.

ನಾಲ್ವರು ಕಳ್ಳರ ಬಂಧನ, ಜಾನುವಾರುಗಳು ವಶಕ್ಕೆ

ಶಹಾಬಾದ: ಶಹಾಬಾದ್ ಮತ್ತು ಕಾಳಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರೈತರ ಜಾನುವಾರುಗಳನ್ನು ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಜಾನುವಾರು ಕಳ್ಳರನ್ನು ಬಂಧಿಸಿರುವ ಕಾಳಗಿ ಮತ್ತು ಶಹಾಬಾದ ಪೊಲೀಸರು ಜಾನುವಾರು, ವಾಹನ ಸೇರಿ 1 ಲಕ್ಷ ರು.ಮೊತ್ತದ ಸ್ವತ್ತನ್ನು ಜಪ್ತಿ ಮಾಡಿದ್ದಾರೆ.

ಕಾಳಗಿಯಲ್ಲಿ ಜಾನುವಾರು ಕಳ್ಳತನ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಳಗಿ ಗ್ರಾಮದ ಜಿಲಾನಿ ಮುಜಾವರ, ಶ್ರೀಮಂತ ನಾಶೇರ್, ನಯೂಮ್ ಹುಳಗೇರಾ ಮತ್ತು ಶಹಾಬಾದನಲ್ಲಿ ಜಾನುವಾರು ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಹಾಬಾದನ ಬಸವೇಶ್ವರ ನಗರದ ಮಹ್ಮದ್ ಅಖಲಾಕ್ ಖುರೇಷಿ ಎಂಬುವ ವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶಹಾಬಾದ ಮತ್ತು ಕಾಳಗಿಯಲ್ಲಿ ನಡೆ ದ ಜಾನುವಾರು ಕಳ್ಳತನ ಪ್ರಕರಣದ ಪತ್ತೆಗೆ ಹೆಚ್ಚುವರಿ ಎಸ್‌ಪಿ ಶ್ರೀನಿಧಿ, ಶಹಾಬಾದ ಡಿಎಸ್‌ಪಿ ಶಂಕರಗೌಡ ಪಾಟೀಲ ನೇತೃತ್ವದಲ್ಲಿ ಕಾಳಗಿ ಸಿಪಿಐ ಜಗದೇವಪ್ಪ ಪಾಳಾ, ಪಿಐ ನಟರಾಜ ಲಾಡೆ, ಪಿಎಸ್‌ಐ ತಿಮ್ಮಯ್ಯ, ಎಎಸ್‌ಐಗಳಾದ ಶ್ರೀನಿವಾಸ ರೆಡ್ಡಿ, ಅಶೋಕ ಕಟ್ಟಿ, ಸಿಬ್ಬಂದಿಗಳಾದ, ದೊಡ್ಡಪ್ಪ, ಬಸವರಾಜ, ಸಂತೋಷ, ಮಂಜುನಾಥ, ಹುಸೇನ ಪಾಷಾ, ಬಸಪ್ಪ, ಅಂಬರೀಷ, ಮಾರುತಿ ಮತ್ತು ಮಂಜು ನಾಥ ಅವರನ್ನೊಳಗೊಂಡ ಎರಡು ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡಗಳು ತನಿಖೆ ನಡೆಸಿ ನಾಲ್ವರು ಜಾನುವಾರು ಕಳ್ಳರನ್ನು ಬಂಧಿಸಿ ವಾಹನ ಮತ್ತು ಜಾನುವಾರು ಸೇರಿ 1 ಲಕ್ಷ ರು.ಮೊತ್ತದ ಸ್ವತ್ತನ್ನು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿವೆ. ಜಾನುವಾರು ಕಳ್ಳರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

ಕಸಾಪದಿಂದ ವಿಭಿನ್ನ ಕನ್ನಡ ರಾಜ್ಯೋತ್ಸವ

ಕಲಬುರಗಿ: ಈ ಬಾರಿಯ ಕರ್ನಾಟಕ ರಾಜ್ಯೋತ್ಸವವನ್ನು ವಿಭಿನ್ನ- ವಿಶೇಷತೆ ಉಳ್ಳ ಕಾರ್ಯಕ್ರಮಗಳನ್ನು ನವೆಂಬರ್ ತಿಂಗಳಾದ್ಯಂತ ಹಮ್ಮಿಕೊಳ್ಳುವುದರಿಂದ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ತಿಳಿಸಿದರು. ನಗರದ ಕನ್ನಡ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕನ್ನಡ ಭಾಷೆಯನ್ನು ಕೇವಲ ನವೆಂಬರಗೆ ಸೀಮಿತಗೊಳಿಸದೆ ಕವಿ ನಿಸಾರ್ ಅಹ್ಮದ್ ಅವರ ನಿತ್ಯೋತ್ಸವದಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳೂ ಸಹ ನಿತ್ಯವಾಗಿರುವಂತೆ, ಕನ್ನಡ ನಾಡು-ನುಡಿ, ಭಾಷೆ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗುತ್ತಿದೆ. ಇಂಥ ಕಾರ್ಯಕ್ರಮಗಳು ರೂಪಿಸುವ ಮೂಲಕ ಕನ್ನಡ ರಾಜ್ಯೋತ್ಸವದ ದೀಪ ಹಚ್ಚುವ ಮೂಲಕ ಜಿಲ್ಲೆಯಾದ್ಯಂತ ಕನ್ನಡ ಕ್ರಾಂತಿ ಮೊಳಗಿಸುವ ಮಹತ್ತರ ಕಾರ್ಯ ನಿರಂತರವಾಗಿ ಪರಿಷತ್ತು ಮಾಡತ್ತಿದೆ ಎಂದು ವಿವರಿಸಿದರು.

ಅ.30 ರಂದು ಬೆಳಗ್ಗೆ 10.15 ಕ್ಕೆ ಜಗತ್ ವೃತ್ತದಿಂದ ಕನ್ನಡ ಭವನದ ವರೆಗೆ ನಡೆಯುವ ಕನ್ನಡ ಜಾಗೃತಿ ಜಾಥಾ ಕ್ಕೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಚಾಲನೆ ನೀಡಲಿದ್ದು, ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್ ಡಿ. ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಂಗಳ ಪೂರ್ತಿ ಕಾರ್ಯಕ್ರಮಗಳ ಮಾಹಿತಿ ನೀಡಿದ್ದರು.

ಆರೋಗ್ಯಕರ ಕಣ್ಣಿಗೆ ಧೂಮಪಾನ ದೂರವಿಡಿ

ವ್ಯಸನಗಳಿಂದ ದೃಷ್ಟಿ ದೋಷ ಉಂಟಾಗುತ್ತದೆ: ಡಾ.ವಿಶ್ವನಾಥರೆಡ್ಡಿ

ಸೇಡಂ: ಮದ್ಯ, ಧೂಮಪಾನದಂತಹ ವ್ಯಸನಗಳಿಂದ ಹಲವು ಕಾಯಿಲೆಗಳು ಎದುರಾಗುತ್ತವೆ. ಸಾಮಾನ್ಯವಾಗಿ, ತಂಬಾಕು ಮತ್ತದರ ಹೊಗೆ ದೇಹದೊಳಗೆ ಸೇರಿ ಕ್ಯಾನ್ಸರ್ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಹೇಗೆ ಉಂಟಾಗುತ್ತವೆ ಅದೇ ರೀತಿಯಲ್ಲಿ ದೃಷ್ಟಿ ದೋಷವು ಉಂಟಾಗಲಿದೆ ಎಂದು ಶ್ರೀ ಸಿದ್ದರಾಮೇಶ್ವರ ಕಣ್ಣಿನ ಆಸ್ಪತ್ರೆಯ ಹಿರಿಯ ವೈದ್ಯ ಡಾ.ವಿಶ್ವನಾಥರೆಡ್ಡಿ ಹೇಳಿದರು.

ಪಟ್ಟಣದ ಚಿಂಚೋಳಿ ರಸ್ತೆಯ ವಿಜಯ ಸಭಾಂಗಣದಲ್ಲಿ ಸೇಡಂ ತಾಲೂಕು ವೈದ್ಯರ ಸಂಘದ ಸಹಯೋಗದಲ್ಲಿ ಶ್ರೀ ಸಿದ್ದರಾಮೇಶ್ವರ ಕಣ್ಣಿನ ಆಸ್ಪತ್ರೆ ಆಯೋಜಿಸಿದ್ದ ದೃಷ್ಟಿದೋಷದ ಕಾರಣ ಮತ್ತು ಪರಿಹಾರದ ಕುರಿತ ಸಮಾಲೋಚನೆ ಸಭೆಯನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ದೃಷ್ಟಿ ಮಾಂದ್ಯತೆ, ಮ್ಯಾಕ್ಯುಲಾರ್ ಡಿಜೆನರೇಶನ್ ಅಥವಾ ಕಣ್ಣಿನ ಕೇಂದ್ರ ಭಾಗದ ಮ್ಯಾಕ್ಯುಲಾ ಎಂಬ ಅತೀ ಸೂಕ್ಷ?? ಭಾಗ ಶೀಘ್ರವಾಗಿ ಸವೆಯುವುದು ಮತ್ತು ಕ್ಯಾಟ್‌ರಾಕ್ಟ್ ಅಥವಾ ಕಣ್ಣಿನ ಪೊರೆ ಈ ಎರಡು ಪ್ರಮುಖ ಕಣ್ಣಿನ ಕಾಯಿಲೆಗಳಿಗೂ ಧೂಮಪಾನಕ್ಕೂ ನೇರವಾದ ಸಂಬಂಧ ಇದೆ. ವಿಶೇಷವಾಗಿ ಧೂಮಪಾನವು ಆರೋಗ್ಯಕ್ಕೆ ಮಾರಕ, ಕ್ಯಾನ್ಸರ್ ಸೇರಿ ಹಲವು ಕಾಯಿಲೆಗಳನ್ನು ತಂದೊಡ್ಡಬಹುದು. ವಯಸ್ಕರು ಮತ್ತು ಮಕ್ಕಳೂ ಸೇರಿದಂತೆ ಪ್ರತ್ಯಕ್ಷ ಧೂಮಪಾನಿಗಳಿಗೂ ಮತ್ತು ಪರೋಕ್ಷ ಧೂಮಪಾನಿಗಳಿಗೂ ಧೂಮಪಾನದ ಹೊಗೆ ಕಣ್ಣಿಗೆ ಮತ್ತು ದೃಷ್ಟಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು.

ಡಾ.ರಾಜಶ್ರೀರೆಡ್ಡಿ ಮಾತನಾಡಿ, ಕಣ್ಣಿನ ಕೆಂಪಾಗುವಿಕೆ ಇದು ಹಲವಾರು ವಿಭಿನ್ನ ಆರೋಗ್ಯ ಸಮಸ್ಯೆಗಳನ್ನು ಸೂಚಿಸುತ್ತದೆ. ಈ ರೀತಿಯ ಸಮಸ್ಯೆ ಹೊಂದಿದವರಲ್ಲಿ ಕೆಲವರಿಗೆ ಯಾವುದೇ ಹಾನಿ ಇಲ್ಲದಿದ್ದರೆ ಕೆಲವರಿಗೆ ಗಂಭೀರವಾಗಿ ಪರಿಣಮಿಸುತ್ತದೆ ಮತ್ತು ತುರ್ತು ವೈದ್ಯಕೀಯ ಆರೈಕೆಯ ಅಗತ್ಯವಿರುತ್ತದೆ ಎಂದರು.

ಡಾ.ನೀತಾ ಕುಮಾರಿ, ಡಾ. ಶರಣಕುಮಾರ ಮಾತನಾಡಿದರು. ಈ ವೇಳೆ ವೈದ್ಯರ ಸಂಘದ ತಾಲೂಕು ಅಧ್ಯಕ್ಷ ಡಾ.ರಾಜಕುಮಾರ ಬಿರಾದಾರ, ಶ್ರೀ ಸಿದ್ದರಾಮೇಶ್ವರ ಆಸ್ಪತ್ರೆಯ ನೇತ್ರ ತಜ್ಞ ಡಾ. ಸಿದ್ದಲಿಂಗರೆಡ್ಡಿ, ಹಿರಿಯ ವೈದ್ಯರಾದ ಡಾ.ಸದಾನಂದ ಬೂದಿ, ಡಾ.ಮುರಳಿಧರ ದೇಶಪಾಂಡೆ, ಡಾ.ಉದಯಕುಮಾರ ಶಹ, ಡಾ.ನಿರ್ಮಲಾ ಪಾಟೀಲ್, ಡಾ.ರಾಧಿಕಾ ಶಹ, ಡಾ.ಪ್ರವೀಣ ಜೋಶಿ ಸೇರಿ ತಾಲೂಕಿನ ವೈದ್ಯರು ಉಪಸ್ಥಿತರಿದ್ದರು.

ವಾರದ ಸಂತೆ ಕಾಮಗಾರಿ ಆರಂಭ

ಆಳಂದ: ಮಾದನಹಿಪ್ಪರಗಿ ಗ್ರಾಮದಲ್ಲಿ ಚರಂಡಿ ನೀರಿನಿಂದ ಆವರಿಸಿಕೊಂಡಿದ್ದ ವಾರದ ಸಂತೆಯ ಜಾಗಕ್ಕೆ ಈಗ ಮುಕ್ತಿ ದೊರಕಿದ್ದರಿಂದ ವರ್ತಕರಲ್ಲಿ ಹರ್ಷ ತುಂಬಿದೆ. ಸಂತೆ ನೆರೆಯುವ ಜಾಗದಲ್ಲಿ ನೀರಿ ಸಂಗ್ರಹವಾಗಿ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗಿತ್ತು . ಇದನ್ನು ಬಹಳ ಗಭೀರವಾಗಿ ಪರಿಗಣಿಸಿದ ಮುಖಂಡುರಗಳು ಹಾಗೂ ಗ್ರಾಮ ಪಂಚಾಯತ ಸದಸ್ಯರುಗಳು ಪಂಚಾಯತಿ ಅನುದಾನದಲ್ಲಿ ಚರಂಡಿ ಕಾಮಗಾರಿ ಅಸಾಧ್ಯವೆಂದು ಮನಗಂಡು ಮಾನ್ಯ ಶಾಸಕ ಹಾಗೂ ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್.ಪಾಟೀಲ ಅನುದಾನದಲ್ಲಿ ಕಾಮಗಾರಿ ಮಡಿಕೊಂಡಲು ಕೇಳಿಕೊಂಡಾಗ ಶಾಸಕರು ಮನವಿಯನ್ನು ಪುರಸ್ಕರಿಸಿ ಕಾಮಗಾರಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಸಿದ್ದಲಿಂಗ ಕೈವಲ್ಯಾಶ್ರಮದಿಂದ ಭಾರತೀಯ ಸ್ಟೇಟ್ ಬ್ಯಾಂಕನವರೆಗೆ ಸುಮಾರು 15 ಮೀಟರ ಉದ್ದದ ಎರಡು ಬದಿಯಲ್ಲಿ ಚರಂಡಿ ನಿರ್ಮಾಣ ಆರಂಭಗೊಂಡಿದೆ. ಈ ಕಾಮಗಾರಿಯಿಂದ ವರ್ತಕರು ಹರ್ಷ ವ್ಯಕ್ತಪಡಿಸಿದ್ದಾರೆ. ಈ ಕಾಮಗಾರಿ ನೆರವೇರಲು ಕಾರಣರಾದ ಕೆಎಮ್‌ಎಫ್ ಅಧ್ಯಕ್ಷ ಆರ್.ಕೆ.ಪಾಟೀಲ, ಮುಖಂಡರಾದ ಮಲ್ಲಯ್ಯ ಸ್ವಾಮಿ, ಶಿವಲಿಂಗಪ್ಪ ಜಮಾದಾರ, ಮಹಾದೇವಯ್ಯ ಸ್ವಾಮಿ, ಈರಣ್ಣ ಮೈಂದರಗಿ, ಶಿವಲಿಂಗಪ್ಪ ಮಾತಂಗಿ, ಹರಿದಾಸ್ ಹಜಾರೆ, ಧರ್ಮಣ್ಣ ಕೌಲಗಿ, ಸೋಮನಾಥ ಕೌಲಗಿ ವ್ಯಾಪಾಸ್ಥರು ಧನ್ಯವಾದಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸರಣಿ ಅಪಘಾತ: ನಾಲ್ವರಿಗೆ ಗಾಯ

ಕಲಬುರಗಿ: ಬೈಕ್ ಹಾಗೂ ಕಾರುಗಳ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ನಾಲ್ವರು ಗಂಭೀರ ಗಾಯಗೊಂಡಿರುವ ಘಟನೆ ಕಲಬುರಗಿ ತಾಲೂಕಿನ ಅವರಾದ್ ಗ್ರಾಮದ ಸಮೀಪ ನಡೆದಿದದೆ. ಅಪಘಾತದಲ್ಲಿ ಮಲ್ಲಿಕಾರ್ಜುನ್, ರವಿ, ಅಂಬರೀಶ್ ಹಾಗೂ ನರೇಶ್ ಎನ್ನುವವರಿಗೆ ಗಂಭೀರ ಗಾಯಗಳಾಗಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದ್ದು, ಬಳಿಕ ಕಾರಿನ ಹಿಂಬದಿಯಿಂದ ಮತ್ತೆರಡು ಕಾರುಗಳು ಡಿಕ್ಕಿಯಾಗಿವೆ. ಅಪಘಾತದಲ್ಲಿ ಬೈಕ್ ಸವಾರ ಸೇರಿ ಕಾರಿನಲ್ಲಿದ್ದ ಮೂವರು ಗಂಭೀರ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಕಲಬುರಗಿ ಸಂಚಾರಿ ಠಾಣೆ-2ರಲ್ಲಿ ಪ್ರಕರಣ ದಾಖಲಾಗಿದೆ.

ರೈತ ಹಿತರಕ್ಷಣೆಯಿಂದ ಪ್ರತಿಭಟನೆ ಮುಂದೂಡಿಕೆ

ಚಿಂಚೋಳಿ: ಸಿದ್ದಸಿರಿ ಎಥಿನಾಲ್ ಕಾರ್ಖಾನೆ ಪುನರ್ ಆರಂಭಿಸುವಂತೆ ಆಗ್ರಹಿಸಿ ಇದೆ ಅ. 29ರಂದು ತಾಲೂಕ ರೈತ ಹಿತರಕ್ಷಣೆ ಸಮಿತಿ ವತಿಯಿಂದ ನಡೆಸಲು ಚಿಂತಿಸಲಗಿದ್ದ ಬೃಹತ್ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ತಾಲೂಕ ರೈತ ಹಿತರಕ್ಷಣೆ ಸಮಿತಿ ಅಧ್ಯಕ್ಷ ಅಬ್ದುಲ್ ಬಾಶೀದ್ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಚಿಂಚೋಳಿ, ಕಾಳಗಿ, ಸೇಡಂ ಭಾಗದ ಜನರು ಬೆಳೆದ ಕಬ್ಬು ಬೆಳಗಾರರು ಸಂಕಷ್ಟಕ್ಕೆ ಒಳಗಾದ ಹಿನ್ನಲೆಯಲ್ಲಿ ಸರಕಾರ ಕಬ್ಬು ಕಟ್ಟಾವು ಮಾಡಿಸಿ, ಖರೀದಿಸಿ ಸೂಕ್ತ ಬೆಂಬಲ ನೀಡಬೇಕು ಎಂದು ಪಕ್ಷಾತೀತವಾಗಿ ಅ. 29 ರಂದು ಪ್ರತಿಭಟನೆಗೆ ಕರೆ ನೀಡಲಾಗಿತ್ತು. ಮುಖಂಡರ ಮಾರ್ಗದರ್ಶನದಂತೆ ಇದೇ ಅ. 28ರಂದು ಮುಖಂಡರೊಂದಿಗೆ ಸಮಿತಿ ಜಿಲ್ಲಾಧಿಕಾರಿಗಳಿಗೆ ಭೇಟಿ ನಮ್ಮ ಮನವಿ ಸಲ್ಲಿಸಲಾಗುತ್ತದೆ. ಹೀಗಾಗಿ ತಾತ್ಕಾಲಿಕವಾಗಿ ಅ. 29ರ ಪ್ರತಿಭಟನೆಯನ್ನು ಮುಂದೂಡಲಾಗುತ್ತದೆ ಎಂದಿದ್ದಾರೆ. ನಮ್ಮ ಬೇಡಿಕೆಗೆ ಸ್ಪಂದನೆ ದೊರಕದೆ ಹೋದರೆ ಮತ್ತೊಮ್ಮೆ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮಾಹಿತಿ ಹಕ್ಕು ಕಾರ್ಯಾಗಾರ ಇಂದು

ಕಲಬುರಗಿ: ಮಾಹಿತಿ ಹಕ್ಕು ದಿನಾಚರಣೆ ಅಂಗವಾಗಿ ಅಕ್ಟೋಬರ್ 29 ರಂದು ಬೆಳಗ್ಗೆ 10.30 ಗಂಟೆಗೆ ಕಲಬುರಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಮೂರನೇ ಮಹಡಿಯಲ್ಲಿರುವ ಕೆಸ್ವಾನ್ ಸಭಾಂಗಣದಲ್ಲಿ ಅಧಿಕಾರಿ-ಸಿಬ್ಬಂದಿಗಳಿಗೆ ಕಲಬುರಗಿ ವಿಭಾಗ ಮಟ್ಟದ ಮಾಹಿತಿ ಹಕ್ಕು ಕಾರ್ಯಾಗಾರ ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ಆಯುಕ್ತ ರವೀಂದ್ರ ಢಾಕಪ್ಪ ಅವರು ಕಾರ್ಯಾಗಾರ ಉದ್ಘಾಟಿಸಿ ಮಾತನಾಡುದವರು. ಇದಲ್ಲದೆ ಕಾರ್ಯಾಗರದಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಾದ ಅನುಭವಿ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯ ವಿವಿಧ ಸೆಕ್ಷನ್ ವಿವರಗಳು ಮತ್ತು ಸಂದೇಹಗಳನ್ನು ನಿವಾರಿಸುವರು. ಕಲಬುರಗಿ ಜಿಲ್ಲಾ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳು ಕಲಬುರಗಿ ಡಿ.ಸಿ. ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಖುದ್ದಾಗಿ ಹಾಜರಿರಬೇಕು. ವಿಭಾಗದ ಉಳಿದ ಜಿಲ್ಲೆಗಳ ಅಧಿಕಾರಿಗಳು ಅಯಾ ಜಿಲ್ಲೆಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಬೇಕೆಂದು ಪ್ರಾದೇಶಿಕ ಆಯುಕ್ತ ಕೃಷ್ಣ ಭಾಜಪೇಯಿ ಅವರು ಮನವಿ ಮಾಡಿದ್ದಾರೆ.

ಜಾತ್ರೆ: ವಾಹನಗಳ ಕಾರ್ಯಾಚರಣೆ

ಕಲಬುರಗಿ: ಮಹಾರಾಷ್ಟ್ರ ರಾಜ್ಯದ ಸೊಲ್ಲಾಪೂರ ಜಿಲ್ಲೆಯ ಮಂಗಳವಾಡಾ ತಾಲೂಕಿನ ಹುಲಜಂತಿ ಗ್ರಾಮದಲ್ಲಿ ಇದೇ ಅಕ್ಟೋಬರ್ 30 ರಿಂದ ನವೆಂಬರ್ 3 ರವರೆಗೆ ಜರುಗಲಿರುವ ಶ್ರೀ ಮಾಳಿಂಗರಾಯ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕಲ್ಯಾಣ ಕರ್ನಾಟ ರಸ್ತೆ ಸಾರಿಗೆ ನಿಗಮ, ಕಲಬುರಗಿ ವಿಭಾಗ-1ರ ದಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ವಿಶೇಷ ವಾಹನಗಳ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಕಲಬುರಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ-1ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ವಿಭಾಗದ ವ್ಯಾಪ್ತಿಗೆ ಬರುವ ವಿಶೇಷ ವಾಹ ನಗಳ ಸೌಲಭ್ಯಕ್ಕಾಗಿ ಘಟಕ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆಗಳ ವಿವರ ಈ ಕೆಳಗಿನಂತಿ ದೆ. ಕಲಬುರಗಿ ಘಟಕ-1ರ ಘಟಕ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ 776099 2113, ಕಲಬುರಗಿ ಘಟಕ-4ರ ಘಟಕ ಮೊ: 702201 2103, ಚಿಂಚೋಳಿ ಘಟಕದ ಮೊ: 7760992117, ಚಿತ್ತಾಪೂರ ಘಟಕದ ಮೊ:-7760992119, ಕಾಳಗಿ ಘಟಕದ ಮೊ: 7760992120 ಹಾಗೂ ಸೇಡಂ ಘಟಕ ವ್ಯವಸ್ಥಾಪಕರ ಮೊ: 7760992466ಗೆ ಸಂಪರ್ಕಿಸಬೇಕು.

{ಆರ್.ಅಶೋಕ್} ಪ್ರತಿಪಕ್ಷ ನಾಯಕ

ಕಾಂಗ್ರೆಸ್ ಸರಕಾರ ಹಾಗೂ ವಕ್ಫ್ ಬೋರ್ಡ್‌ನಿಂದ ಲ್ಯಾಂಡ್ ಜಿಹಾದ್ ಆರಂಭವಾಗಿದ್ದು, ಬಡ ರೈತರ ಜಮೀನನ್ನು ಕಬಳಿಸಲು ಎಲ್ಲ ಬಗೆಯ ಪ್ರಯತ್ನ ಮಾಡಲಾಗಿದೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಕೂಡಲೇ ಸ್ಪಷ್ಟೀಕರಣ ನೀಡಬೇಕು.

ಆನ್‌ಲೈನ್‌ಗೆ ಎಂಟ್ರಿ ಕೊಟ್ಟ ಕಲಬುರಗಿ ಜೋಳದ ರೊಟ್ಟಿ..!

ರೊಟ್ಟಿಗೆ ಬಾರ್ ಕೋಡ್ ರಚನೆ | ದೇಶ-ವಿದೇಶದಲ್ಲೂ ಮಾರುಕಟ್ಟೆ ವಿಸ್ತರಣೆ

ವಿಶ್ವವಾಣಿ ವಿಶೇಷ ಕಲಬುರಗಿ

ದೂರದ ಬೆಂಗಳೂರು, ಮೈಸೂರು, ಮಂಗಳೂರು, ಹೈದ್ರಾಬಾದ್, ಮುಂಬೈ, ದೆಹಲಿಯಲ್ಲಿ ವಾಸ ಮಾಡುತ್ತಿರುವ ಉತ್ತರ ಕರ್ನಾಟಕದ ಮಂದಿ ಇಲ್ಲಿನ ಬಹುಮುಖ್ಯ ಆಹಾರ ಪದಾರ್ಥ ಜೋಳದ ರೊಟ್ಟಿಯನ್ನು ಅತಿಹೆಚ್ಚು ಮಿಸ್ ಮಾಡಿಕೊಳ್ಳುತ್ತಾರೆ. ತಮ್ಮ ಮನೆಯವರಿಂದ ರೊಟ್ಟಿಯನ್ನು ಪಾರ್ಸೆಲ್ ತರಿಸಿಕೊಂಡು ಅದರ ಸ್ವಾದ ಅನುಭವಿಸಿದ್ದನ್ನು ನಾವೆಲ್ಲರೂ ನೋಡಿರ್ತೀವಿ, ಇದೀಗ ಅಂತಹ ದೂರದ ಊರಲ್ಲಿ ಇರುವವರಿಗಾಗಿ ಕಲಬುರಗಿ ಜಿಲ್ಲಾಡಳಿತ ಮಹತ್ತರ ಹೆಜ್ಜೆಯೊಂದನ್ನು ಇಟ್ಟಿದೆ.

ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರಗಿ ಜಿಲ್ಲೆ ಎಂದರೆ ಥಟ್ಟನೆ ನೆನಪಾಗುವುದೇ ಒಂದು ತೊಗರಿ ಬೆಳೆ, ಇನ್ನೊಂದು ಬಿಳಿಜೋಳ. ತೊಗರಿ ಬೆಳೆಗೆ ಈಗಾಗಲೇ ಜಿಐ ಟ್ಯಾಗ್ ದೊರಕಿದ್ದು, 'ಭೀಮಾ ಪಲ್ಸ್' ಎಂಬ ಬ್ರ್ಯಾಂಡ್ ನೊಂದಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಕಷ್ಟು ಹೆಸರು ಮಾಡುತ್ತಿದೆ. ಇದೀಗ ಅದರಂತೆಯೇ ಜೋಳದ ಖಡಕ್ ರೊಟ್ಟಿಗೆ ಮಾನ್ಯತೆ ಹೆಚ್ಚಿಸಲು ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ.

ಜೋಳದ ರೊಟ್ಟಿ ಉತ್ತರ ಕರ್ನಾಟಕದ ಪ್ರಮುಖ ಆಹಾರವಾಗಿದೆ. ಅದರಲ್ಲೂ ಇಲ್ಲಿನ ಚಿತ್ತಾಪುರದ ಮಾಲ್ದಂಡಿ ಜೋಳದ ರೊಟ್ಟಿ ಬಹು ಉತ್ಕೃಷ್ಟವಾಗಿದೆ. ಇದನ್ನೇ ಇದೀಗ 'ಕಲಬುರಗಿ ರೊಟ್ಟಿ' ಎಂಬ ಬ್ರ್ಯಾಂಡ್ ಮೂಲಕ ರಾಜ್ಯದ ಮೂಲೆ ಮೂಲೆಗಳಿಗೆ, ದೇಶ- ವಿದೇಶಗಳಿಗೂ ಈ ಖಡಕ್ ರೊಟ್ಟಿಯನ್ನು ಆನ್‌ಲೈನ್‌ನಲ್ಲಿ ಸಿಗುವಂತೆ ಮಾಡಲಾಗುತ್ತಿದೆ. ಜಿಲ್ಲಾಡಳಿತದಿಂದಲೇ ರೊಟ್ಟಿ ಬಾಕ್ಸಿಂಗ್, ಪ್ಯಾಕಿಂಗ್ ಸೇರಿದಂತೆ 'ಕಲಬುರಗಿ ರೊಟ್ಟಿ' ಎಂಬ ಜಾಲತಾಣದ ಸೃಜನೆ, ಸಾಮಾಜಿಕ ಜಾಲತಾಣಗಳ ಮೂಲಕ ಮಾರ್ಕೆಟಿಂಗ್ ಮಾಡಲಾಗುತ್ತಿದೆ. ಈ ಮೂಲಕ ರೊಟ್ಟಿ ಮಾರಾಟಕ್ಕೆ ಈಗಾಗಲೇ ಮಾರುಕಟ್ಟೆ ಪ್ರಾರಂಭವಾಗಿದೆ.ಆನ್ ಲೈನ್ ನಲ್ಲಿ ರೊಟ್ಟಿ ಮಾರಾಟಕ್ಕೆ ಇದೀಗ ಫ್ಲಿಪ್ ಕಾರ್ಟ್, ಅಮೇಜಾನ್, ಬಿಗ್ ಬಾಸ್ಕೆಟ್ ಸೇರಿದಂತೆ ಇತರ ಕೊರಿಯರ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಕಲಬುರಗಿಯಲ್ಲಿ ರೊಟ್ಟಿಯನ್ನು ಖರೀದಿಸುವ ಬಗ್ಗೆ 2 ಹೋಟೆಲ್ ಗಳೊಂದಿಗೂ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎನ್ನುತ್ತಾರೆ ಇಲ್ಲಿನ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್.

ಜಿಲ್ಲಾಡಳಿತದಿಂದ ರೊಟ್ಟಿ ಉತ್ಪಾದಕರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ರೊಟ್ಟಿಯನ್ನು ಬ್ರ್ಯಾಂಡ್ ಮಾಡಿಕೊಂಡು ಆನ್ ಲೈನ್ ನಲ್ಲಿ ಮಾರಾಟ ಮಾಡುತ್ತಿರುವ ಕಾರ್ಯ ರಾಜ್ಯದಲ್ಲೇ ವಿನೂತನ ಪ್ರಯತ್ನವಾಗಿದೆ. ಇದರಿಂದ ಜೋಳ ಬೆಳೆಗಾರರಿಗೆ, ರೊಟ್ಟಿ ಉತ್ಪಾದಕರಿಗೆ ಹೆಚ್ಚಿನ ಲಾಭ ಬರುವುದರ ಜೊತೆಗೆ ಉದ್ಯೋಗ ಸೃಷ್ಟಿಯೂ ಆಗಲಿದೆ.

- ಸಮದ್ ಪಟೇಲ್, ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ

ರೊಟಿಗೆ ಬಾರ್ ಕೋಡ್, ವಿದೇಶಗಳಿಂದಲೂ ಬೇಡಿಕೆ

ಕಲಬುರಗಿ ರೊಟ್ಟಿ ಬ್ರ್ಯಾಂಡ್ ಮಾರಾಟಕ್ಕೆ ಬಾರ್ ಕೋಡ್ ರಚಿಸಲಾಗಿದ್ದು, 'ಕ್ಯೂಆರ್' ಕೋಡ್ ಮೂಲಕ ಗ್ರಾಹಕರು ಆರ್ಡರ್ ಮಾಡಬಹುದು. ಆನ್ ಲೈನ್ ನಲ್ಲಿ ರೊಟ್ಟಿ ಮಾರಾಟ ಪ್ರಾರಂಭಿಸುತ್ತಿದ್ದಂತೆ ಈಗಾಗಲೇ ದೇಶ ವಿದೇಶ ಗಳಿಂದಲೂ ಬೇಡಿಕೆ ಹೆಚ್ಚಾಗಿದೆ. ಅವರಿಗೂ ಈ ರೊಟ್ಟಿ ಸಿಗಲಿದೆ.ಈಗಾಗಲೇ 20 ಜನ ಸದಸ್ಯರನ್ನು ಒಳಗೊಂಡ ರೊಟ್ಟಿ ಉತ್ಪಾದಕರ ಸಂಘ ರಚಿಸಲಾಗಿದ್ದು, 2 ಪ್ರಮುಖ ಕೇಂದ್ರಗಳಲ್ಲಿ ರೊಟ್ಟಿ ಉತ್ಪಾದನೆ ನಡೆಯುತ್ತಿದೆ. ಕೃಷಿ ಇಲಾ ಖೆಯಿಂದ ಸಹಾಯಧನ ಮೂಲಕ 100 ಫಲಾನುಭವಿಗಳಿಗೆ ರೊಟ್ಟಿ ತಯಾರಿಸುವ ಯಂತ್ರ ನೀಡಲಾಗಿದೆ. ಅವರ ರೊಟ್ಟಿಗಳು ಸಹ ಮಾರುಕಟ್ಟೆಗೆ ಇಳಿಯಲಿವೆ.

ಸದ್ಯ ಏನೇನು, ಎಲ್ಲೆಲ್ಲಿ ಸಿಗಲಿವೆ ಕಲಬುರಗಿ ರೊಟ್ಟಿ?

ಸದ್ಯ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆ ಕಲಬುರಗಿ ರೊಟ್ಟಿಗಳನ್ನು ನಗರದ 3 ಪ್ರಮುಖ ಸ್ಥಳಗಳಲ್ಲಿ ಇರಿಸಲು ಕೆಲಸ ನಡೆಯುತ್ತಿದೆ. ಜಿಲ್ಲೆ ಬಿಟ್ಟರೆ ಮೊದಲ ಹಂತವಾಗಿ ಟೈರ್ 1 ನಗರಗಳಾದ ಬೆಂಗಳೂರು, ಹೈದ್ರಾಬಾದ್, ಪುಣೆ ಮತ್ತು ಮುಂಬೈಯಲ್ಲಿ ದೊರೆಯಲಿವೆ. ಖಡಕ್ ರೊಟ್ಟಿ ಜೊತೆಗೆ ಧಪಾಠಿ, ಹಪ್ಪಳ, ಶೇಂಗಾದ ಹಿಂಡಿ, ಸಜ್ಜೆ ರೊಟ್ಟಿ, ಕಾರ್ಯಳ ಹಿಂಡಿ ಮತ್ತಿತರ ಉತ್ಪನ್ನಗಳೂ ಸಿಗಲಿವೆ.

ಸ್ವದೇಶದಲ್ಲೇ ಗಾಂಧಿಯ ಚಾರಿತ್ರ್ಯ ಹರಣವಾಗುತ್ತಿದೆ: ಬಿಆರ್ ಪಾಟೀಲ್

ಕಲಬುರಗಿ: ಮಹಾತ್ಮ ಗಾಂಧೀಜಿ ಅವರನ್ನೂ ಜಗತ್ತಿನ ಇತರೆ ದೇಶಗಳು ಗೌವರವಿಸಿ ಪೂಜಿಸುತ್ತಾರೆ. ಆದರೆ, ಸ್ವಂತ ದೇಶದ ಭಾರತದಲ್ಲಿ ಗಾಂಧೀಜಿಯ ಚಾರಿತ್ರ್ಯ ಹರಣ ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಶಾಸಕ, ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್ ಪಾಟೀಲ್ ವಿಷಾದ ವ್ಯಕ್ತಪಡಿಸಿದರು.

ಇಲ್ಲಿನ ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಯಣದ ವತಿಯಿಂದ ಆಯೋಜಿಸಿದ ಗಾಂಧಿ ಜಯಂತಿ ಪ್ರಯುಕ್ತ ಬಾಪೂಜಿ'' ತೊಗಲು ಬೊಂಬೆ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಬಸವಣ್ಣನವರ ಬಗ್ಗೆ ಗಾಂಧೀಜಿಗೆ ಸಾಕಷ್ಟು ಒಲವಿತ್ತು. ಬಸವಣ್ಣ ಹೇಳಿದ್ದನ್ನೇ ಗಾಂಧೀಜಿ ಅವರು ತಮ್ಮ ಅಹಿಂಸಾ ತತ್ವದ ಮೂಲಕ ಗಾಂಧೀಜಿ ಜಗತ್ತಿನ 186ಕ್ಕೂ ಹೆಚ್ಚಿನ ದೇಶಗಳಿಗೆ ಮಾದರಿಯಾಗಿದ್ದಾರೆ. ಗಾಂಧಿ ಕುರಿತು ಅನೇಕ ಲೇಖನ,ಕಾದಂಬರಿ, ಆತ್ಮಚರಿತೆ ಓದಿದ್ದೇವೆ. ಆದರೆ, ಗಾಂಧೀಜಿಯನ್ನು ಮೀರಿಸುವ ಎರಡನೇ ಶಕ್ತಿ ಇಂದಿಗೂ ಜಗತ್ತಿನಲ್ಲಿ ಹುಟ್ಟಿಲ್ಲ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ, ಕಲಬುರಗಿ ರಂಗಾಯಣದ ಆಡಳಿತಾಧಿಕಾರಿ ಜಗದೀಶ್ವರಿ ನಾಸಿ ಮಾತನಾಡಿದರು. ಸಿದ್ದಾರ್ಥ ಚಿಮ್ಮ ಇದ್ಲಾಯಿ ತಂಡದಿಂದ ಗೀತ ಗಾಯನ. ಬಳ್ಳಾರಿ ಶ್ರೀರಾಮಾಂಜನೇಯ ತೊಗಲು ಬೊಂಬೆ ಮೇಳ ಟ್ರಸ್ಟ್‌ನ ಬೆಳಗಲ್ಲು ಹನುಮಂತ ತೊಗಲು ಬೊಂಬೆ ಆಟ, ಬಳ್ಳಾರಿಯ ನಾಡೋಜ ಶ್ರೀಬೆಳಗಲ್ಲು ವೀರಣ್ಣ ಅವರ ನಿರ್ದೇಶನ ಹಾಗೂ ಕಲಬುರಗಿಯ ಕಪಿಲ ಚಕ್ರವರ್ತಿ ನಿರೂಪಣೆ ಮಾಡಿದರು.

ರಾಮನನ್ನು ಉಗ್ರವಾಗಿ ಬಿಂಬಿಸಲಾಗುತ್ತಿದೆ

ವಾಲ್ಮೀಕಿ ಕಂಡ ರಾಮನೇ ಬೇರೆ, ಸೀತಾ ಕಂಡ ರಾಮನೇ ಬೇರೆ, ಕಬೀರ್ ಕಂಡ ರಾಮನೇ ಬೇರೆ, ಗಾಂಧಿ ಕಂಡ ರಾಮನೇ ಬೇರೆಯಾಗಿದ್ದಾನೆ. ಸದಾ ಶಾಂತ ಪ್ರೀತಿ, ಕರುಣಾಮಯಿಯಾಗಿದ್ದ ರಾಮನ ಚರಿತ್ರೆಯನ್ನು ಇಂದು ಕೆಲವರು ತಿರುಚಿ, ರಾಮನನ್ನು ಉಗ್ರವಾದಿ ರೂಪದಲ್ಲಿ ಬಿಂಬಿಸುವ ಯತ್ನ ನಡೆಸುತ್ತಿದ್ದಾರೆ. ನಮಗೆ ಬಿಲ್ಲು ಬಿಡುವ, ಕೊಲ್ಲುವ, ಜಾತಿ ಭೇದ-ಭಾವ ಮಾಡುವ ರಾಮ ಬೇಡ, ಸದಾ ಪ್ರೀತಿ ವಿಶ್ವಾಸ ನೀಡುತ್ತಿದ್ದ ರಾಮ ನಮಗೆ ಬೇಕು ಎಂದು ಶಾಸಕ ಬಿ. ಆರ್ ಪಾಟೀಲ್ ಅಭಿಮತಪಟ್ಟರು.

ಗಾಂಧಿ ಹೇಳಿದ ಸರಳ ಸ್ವಾವಲಂಬಿ ಬದುಕಿಗೆ ನಾವು ಮರಳಬೇಕಿದೆ. ಗಾಂಧಿಯ ಆದರ್ಶಗಳಿಂದ ನಾಗರೀಕತೆ ಉಳಿಯಲು ಸಾಧ್ಯ. ಗಾಂಧಿ ಕಂಡಂತೆ ಹೆಣ್ಣು ಮಕ್ಕಳನ್ನೂ ಮುನ್ನಲೆಗೆ ತರಬೇಕಾಗಿದೆ. ಗಾಂಧೀಯನ್ನು ಇವ ನಮ್ಮವ ಎಂದು ಒಪ್ಪುವ ಮನೋಭಾವನೆ ಎಲ್ಲರು ಬೆಳೆಸಿಕೊಳ್ಳಬೇಕು.

- ಆಶಾದೇವಿ, ಹಿರಿಯ ಲೇಖಕಿ

ವಿದ್ಯಾರ್ಥಿಗಳು ಯಶಸ್ಸಿನತ್ತ ಸಾಗಬೇಕು: ಅಲ್ತಾಫ್

ಕಲಬುರಗಿ: ಓದುವದು, ಬರೆಯುವುದು, ಆಲಿಸುವುದು, ಕಲಿಕೆಯ ಆಸಕ್ತಿ, ಪ್ರದರ್ಶಿಸುವಿಕೆಯ ವೈಶಿಷ್ಟತೆ ಈ ಐದು ಕೌಶಲ್ಯಗಳು ಯಶಸ್ಸಿನ ಮಂತ್ರಗಳಾಗಿವೆ. ವಿದ್ಯಾರ್ಥಿಗಳು ಯಶಸ್ಸಿನತ್ತ ಸಾಗಬೇಕು ಎಂದು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರ ಅಧ್ಯಕ್ಷ ಅಲ್ತಾಫ್ ಹುಸೇನ್ ಅಭಿಪ್ರಾಯ ಪಟ್ಟರು.

ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪಾ ಸಭಾ ಮಂಟಪದಲ್ಲಿ ಶರಣಬಸವ ವಿಶ್ವವಿದ್ಯಾಲಯ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರ ಆಯೋಜಿಸಿದ (IIche-hrc) (Indian institute of chemical engineers Hyderabad Regional centre IIche-hrc student chapter inauguration program) ವಿದ್ಯಾರ್ಥಿ ಅಧ್ಯಾಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಿಕೆಯಲ್ಲಿ ಪಠ್ಯ, ಪಠ್ಯೇತರ ಹಾಗೂ ಇತರೆ ಪಠ್ಯೇತರ ಕಲಿಕೆಯತ್ತ ವಿದ್ಯಾರ್ಥಿಗಳು ಗಮನವಹಿಸಬೇಕು. ಇಂತಹ ಕಲಿಕೆಯಿಂದ ಮಾತ್ರ ವ್ಯಕ್ತಿತ್ವ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ನ್ಯೂ ಎಜುಕೇಶನ್ ಪಾಲಿಸಿಯಿಂದ ಇಂತಹ ಕಲಿಕೆ ಅವಕಾಶ ಸಿಕ್ಕಿದೆ ಎಂದರು.

ಈ ಅಧ್ಯಯನದಿಂದ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಹೆಚ್ಚು ಹೆಚ್ಚು ಕಲಿಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಈ ಮೂಲಕ ಅಪ್ರೆಂಟಿಸ್, ಇಂಟರ್‌ಶಿಪ್ ಹಾಗೂ ಇತರೇ ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ ಮತ್ತು ಸಂಶೋಧನಾತ್ಮಕ ಕ್ರಿಯಾತ್ಮಕ ಮನಸ್ಥಿತಿ ಅಭಿವೃದ್ಧಿಗೊಳಿಸಿಕೊಳ್ಳಬಹುದು ಎಂದರು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಇಂಜಿನಿಯರ್ಸ್ ಹೈದರಾಬಾದ್ ಪ್ರಾದೇಶಿಕ ಕೇಂದ್ರದ ಕಾರ್ಯದರ್ಶಿ ಸಿ.ಎಚ್. ಅಪ್ಪಾರಾವ ಮಾತನಾಡಿ, ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯಬೇಕು ಮತ್ತು ಕಲಿತ ವಿಷಯವನ್ನು ಹೇಗೆ ಅನ್ವಯಿಸಿಕೊಳ್ಳಬೇಕು ಎನ್ನುವ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು. ವಿವಿ ಪ್ರಾಧ್ಯಾಪಕ ಡಾ. ಬಸವರಾಜ ಶ್ರೀಗಿರಿ ಹಾಗೂ ವಿವಿ ಕುಲಸಚಿವ ಡಾ. ಎಸ್ ಜಿ. ಡೊಳ್ಳೇಗೌಡರ ಮಾತನಾಡಿದರು. ವೇದಿಕೆಯಲ್ಲಿ ವಿವಿ ಕುಲಪತಿ ಡಾ. ಅನೀಲ ಕುಮಾರ ಜಿ. ಬಿಡವೆ, ಕುಲಸಚಿವ ಮೌಲ್ಯಮಾಪನ ಡಾ. ಎಸ.ಎಸ್.ಹೊನ್ನಳ್ಳಿ, ಎಂಜನಿಯರಿಂಗ್ ವಿಭಾಗದ ಡೀನ ಡಾ. ಶಿವಕುಮಾರ ಜವಳಗಿ, ಪ್ರೊ. ವಿಕಾಸ ಕೆ. ಅಣಕಲ್ ಇತರರು ಇದ್ದರು.

ವಿದ್ಯಾರ್ಥಿಗಳು ಹಲವಾರು ಕ್ಷೇತ್ರದ ಕಲಿಕೆಯ ಮುಖಾಂತರ ಉತ್ತಮ ಪಾಠ ಪಡೆದುಕೊಳ್ಳಬಲ್ಲರು. ಈ ಜಗತ್ತಿನ ಭವಿಷ್ಯ ನಿಮ್ಮ ಕೈಯಲಿದೆ. ಉತ್ತಮ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಿ.

- ಡಾ. ಎಸ್ ಜಿ. ಡೊಳ್ಳೇಗೌಡರ, ಕುಲಸಚಿವ, ಶರಣಬಸವ ವಿವಿ

ಮಾಹಿತಿ ಹಕ್ಕು ಕುರಿತು ಜಾಗೃತಿ ಮೂಡಿಸಿ

ಕಲಬುರಗಿ: ಕರ್ನಾಟಕ ಮಾಹಿತಿ ಆಯೋಗ ಜಾರಿಗೆ ಬಂದಾಗಿನಿಂದ ಭ್ರಷ್ಟಾಚಾರಕ್ಕೆ ಒಂದಿಷ್ಟು ಕಡಿವಾಣ ಬಿದ್ದಿದೆ ಇದರ ಬಗ್ಗೆ ಇನ್ನಷ್ಟು ಜನರಲ್ಲಿ ಅರಿವು ಮೂಡಿಸಬೇಕು ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ರವೀಂದ್ರ ಗುರುನಾಥ ಢಾಕಪ್ಪ ಹೇಳಿದರು.

ಜಿಲ್ಲಾ ಪಂಚಾಯತ್ ಹೊಸ ಸಭಾಂಗಣದಲ್ಲಿ ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ವತಿಯಿಂದ ಹಮ್ಮಿಕೊಂಡಿದ್ದ ಮಾಹಿತಿ ಹಕ್ಕು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾಹಿತಿ ಹಕ್ಕು ದಿನಚಾರಣೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹಮ್ಮಿಕೊಂಡಿರುವುದು ತುಂಬ ಸಂತೋಷ ತಂದಿದ್ದು, ಮಾಹಿತಿ ಆಯೋಗ ಪೀಠ ಸ್ಥಾಪನೆಯಿಂದ ಈ ಏಳು ಜಿಲ್ಲೆಗಳಿಗೆ ಇದರ ಪ್ರಯೋಜನವಾಗಲಿದೆ. ಈ ಪೀಠಕ್ಕೆ ಶಾಶ್ವತ ಕಟ್ಟಡ ಒದಗಿಸುವಂತೆ ಸರಕಾರದ ಮೇಲೆ ಪ್ರಭಾವ ಬಿರುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಹಿರಿಯ ಸಾಮಾಜಿಕ ಕಾರ್ಯಕರ್ತ ಶ್ರೀನಿವಾಸ ಸಿರನೂರಕರ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯಲ್ಲಿ ಪರಿಣಾಮಕಾರಿ ಅನುಷ್ಠಾನದಲ್ಲಿ ಮಾಧ್ಯಮದ ಪಾತ್ರ ಬಹಳ ಮುಖ್ಯವಾಗಿದೆ ಓದುಗರ ವೀಕ್ಷಕರ ಕೇಳುಗರ ಪರವಾಗಿ ಮಾಧ್ಯಮ ಕಾರ್ಯಮಾಡಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನಿಯರ್ ಜಗನಾಥ ಹಂಲಿಗೆ, ಗ್ರಾಹಕರ ವೇದಿಕೆಯ ಸಂಘದ ಅಧ್ಯಕ್ಷೆ ಮಾಲತಿ ರೇಷ್ಮೆ, ಕಲ್ಯಾಣ ಕರ್ನಾಟಕ ಪರಿಸರ ಪ್ರಜ್ಞೆ ಹಾಗೂ ಸಂರಕ್ಷಣೆ ಸಂಘಟನೆಯ ಅಧ್ಯಕ್ಷ ದೀಪಕ ಗಾಲಾ ಮಾತನಾಡಿದರು. ಎ.ಪಿ.ಸಿ.ಆರ್. ಸ್ಟೇಟ್ ಆರ್ ಟಿ ಐ ಕೋರ್ಡಿನೇಟರ್ ಶೇಖ ಶಫಿ ಅಹಮದ್ 4(1)ಎ,4(1)ಬಿ ಕಾಯ್ದೆಗಳ ಅನುಷ್ಠಾನ ಕುರಿತು ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹಾಗೂ ಸಂಘಟನೆಗಳ ಅಧ್ಯಕ್ಷರು ಆರ್.ಟಿ.ಐ. ಕಾರ್ಯಕರ್ತರು ಭಾಗವಹಿಸಿದ್ದರು.

ಕಲಬುರಗಿ ಪೀಠದಲ್ಲಿ ಹುದ್ದೆಗಳ ಕೊರತೆಯಿದೆ. 371 (ಜೆ) ಕಲಂ ಅಡಿಯಲ್ಲಿ ಹುದ್ದೆಗಳನ್ನ ಭರ್ತಿ ಮಾಡಬೇಕಾಗಿದೆ. ಈ ಹುದ್ದೆಗಳನ್ನ ತುಂಬಿದಲ್ಲಿ ಕೆಲಸ ನಿರ್ವಹಿಸುವಲ್ಲಿ ಸಹಕಾರ ಆಗಲಿದೆ.

- ರವೀಂದ್ರ ಗುರುನಾಥ ಧಾಕಪ್ಪ,ಆಯುಕ್ತ, ರಾಜ್ಯ ಮಾಹಿತಿ ಆಯೋಗ

ಮಿಲ್‌ನಲ್ಲಿ ತೊಗರಿ ಬೇಳೆ ಕಳ್ಳರ ಬಂಧನ

ಕಲಬುರಗಿ: ನಂದಿಕೂರು ಕೈಗಾರಿಕಾ ಪ್ರದೇಶದ ದಾಲ್ ಮಿಲ್ ಶಟರ್ ಮುರಿದು 17 ಕ್ವಿಂಟಾಲ್ ತೊಗರಿ ಬೇಳೆ ಕಳವು ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿ ವಿಶ್ವವಿದ್ಯಾಲಯ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಈಶ್ವರ ಕಾಳನೂರ, ಮಹೇಶ್ ವಾಡೇಕರ್ ಬಂಧಿತ ಆರೋಪಿಗಳಾಗಿದ್ದಾರೆ. ನಂದಿಕೂರು ಕೈಗಾರಿಕಾ ಪ್ರದೇಶದಲ್ಲಿರುವ ದಾಲ್ ಮಿಲ್ ಶೆಟರ್ ಮುರಿದು ಸುಮಾರು ರು.1.48 ಲಕ್ಷ ಮೌಲ್ಯದ ತೊಗರಿ ಬೇಳೆ ತುಂಬಿದ್ದ ಚೀಲಗಳನ್ನು ಈ ಆರೋಪಿಗಳು ಹೊತ್ತೊಯ್ದಿದ್ದರು. ಈ ಕುರಿತು ವಿಶ್ವವಿದ್ಯಾಲಯ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಇದೀಗ ಆರೋಪಿಗಳನ್ನು ಬಂಧಿಸುವ ಮೂಲಕ ಪ್ರಕರಣ ಬೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾಲ್ವರು ಕಳ್ಳರ ಬಂಧನ, ಜಾನುವಾರುಗಳು ವಶಕ್ಕೆ

ಶಹಾಬಾದ: ಶಹಾಬಾದ್ ಮತ್ತು ಕಾಳಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರೈತರ ಜಾನುವಾರುಗಳನ್ನು ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಜಾನುವಾರು ಕಳ್ಳರನ್ನು ಬಂಧಿಸಿರುವ ಕಾಳಗಿ ಮತ್ತು ಶಹಾಬಾದ ಪೊಲೀಸರು ಜಾನುವಾರು, ವಾಹನ ಸೇರಿ 1 ಲಕ್ಷ ರು.ಮೊತ್ತದ ಸ್ವತ್ತನ್ನು ಜಪ್ತಿ ಮಾಡಿದ್ದಾರೆ.

ಕಾಳಗಿಯಲ್ಲಿ ಜಾನುವಾರು ಕಳ್ಳತನ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಳಗಿ ಗ್ರಾಮದ ಜಿಲಾನಿ ಮುಜಾವರ, ಶ್ರೀಮಂತ ನಾಶೇರ್, ನಯೂಮ್ ಹುಳಗೇರಾ ಮತ್ತು ಶಹಾಬಾದನಲ್ಲಿ ಜಾನುವಾರು ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಹಾಬಾದನ ಬಸವೇಶ್ವರ ನಗರದ ಮಹ್ಮದ್ ಅಖಲಾಕ್ ಖುರೇಷಿ ಎಂಬುವ ವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶಹಾಬಾದ ಮತ್ತು ಕಾಳಗಿಯಲ್ಲಿ ನಡೆ ದ ಜಾನುವಾರು ಕಳ್ಳತನ ಪ್ರಕರಣದ ಪತ್ತೆಗೆ ಹೆಚ್ಚುವರಿ ಎಸ್‌ಪಿ ಶ್ರೀನಿಧಿ, ಶಹಾಬಾದ ಡಿಎಸ್‌ಪಿ ಶಂಕರಗೌಡ ಪಾಟೀಲ ನೇತೃತ್ವದಲ್ಲಿ ಕಾಳಗಿ ಸಿಪಿಐ ಜಗದೇವಪ್ಪ ಪಾಳಾ, ಪಿಐ ನಟರಾಜ ಲಾಡೆ, ಪಿಎಸ್‌ಐ ತಿಮ್ಮಯ್ಯ, ಎಎಸ್‌ಐಗಳಾದ ಶ್ರೀನಿವಾಸ ರೆಡ್ಡಿ, ಅಶೋಕ ಕಟ್ಟಿ, ಸಿಬ್ಬಂದಿಗಳಾದ, ದೊಡ್ಡಪ್ಪ, ಬಸವರಾಜ, ಸಂತೋಷ, ಮಂಜುನಾಥ, ಹುಸೇನ ಪಾಷಾ, ಬಸಪ್ಪ, ಅಂಬರೀಷ, ಮಾರುತಿ ಮತ್ತು ಮಂಜು ನಾಥ ಅವರನ್ನೊಳಗೊಂಡ ಎರಡು ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡಗಳು ತನಿಖೆ ನಡೆಸಿ ನಾಲ್ವರು ಜಾನುವಾರು ಕಳ್ಳರನ್ನು ಬಂಧಿಸಿ ವಾಹನ ಮತ್ತು ಜಾನುವಾರು ಸೇರಿ 1 ಲಕ್ಷ ರು.ಮೊತ್ತದ ಸ್ವತ್ತನ್ನು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿವೆ. ಜಾನುವಾರು ಕಳ್ಳರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

ಕಸಾಪದಿಂದ ವಿಭಿನ್ನ ಕನ್ನಡ ರಾಜ್ಯೋತ್ಸವ

ಕಲಬುರಗಿ: ಈ ಬಾರಿಯ ಕರ್ನಾಟಕ ರಾಜ್ಯೋತ್ಸವವನ್ನು ವಿಭಿನ್ನ- ವಿಶೇಷತೆ ಉಳ್ಳ ಕಾರ್ಯಕ್ರಮಗಳನ್ನು ನವೆಂಬರ್ ತಿಂಗಳಾದ್ಯಂತ ಹಮ್ಮಿಕೊಳ್ಳುವುದರಿಂದ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ತಿಳಿಸಿದರು. ನಗರದ ಕನ್ನಡ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕನ್ನಡ ಭಾಷೆಯನ್ನು ಕೇವಲ ನವೆಂಬರಗೆ ಸೀಮಿತಗೊಳಿಸದೆ ಕವಿ ನಿಸಾರ್ ಅಹ್ಮದ್ ಅವರ ನಿತ್ಯೋತ್ಸವದಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳೂ ಸಹ ನಿತ್ಯವಾಗಿರುವಂತೆ, ಕನ್ನಡ ನಾಡು-ನುಡಿ, ಭಾಷೆ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗುತ್ತಿದೆ. ಇಂಥ ಕಾರ್ಯಕ್ರಮಗಳು ರೂಪಿಸುವ ಮೂಲಕ ಕನ್ನಡ ರಾಜ್ಯೋತ್ಸವದ ದೀಪ ಹಚ್ಚುವ ಮೂಲಕ ಜಿಲ್ಲೆಯಾದ್ಯಂತ ಕನ್ನಡ ಕ್ರಾಂತಿ ಮೊಳಗಿಸುವ ಮಹತ್ತರ ಕಾರ್ಯ ನಿರಂತರವಾಗಿ ಪರಿಷತ್ತು ಮಾಡತ್ತಿದೆ ಎಂದು ವಿವರಿಸಿದರು.

ಅ.30 ರಂದು ಬೆಳಗ್ಗ 10.15 ಕ್ಕೆ ಜಗತ್ ವೃತ್ತದಿಂದ ಕನ್ನಡ ಭವನದ ವರೆಗೆ ನಡೆಯುವ ಕನ್ನಡ ಜಾಗೃತಿ ಜಾಥಾ ಕ್ಕೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಚಾಲನೆ ನೀಡಲಿದ್ದು, ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್ ಡಿ. ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಂಗಳ ಪೂರ್ತಿ ಕಾರ್ಯಕ್ರಮಗಳ ಮಾಹಿತಿ ನೀಡಿದ್ದರು.

ಆರೋಗ್ಯಕರ ಕಣ್ಣಿಗೆ ಧೂಮಪಾನ ದೂರವಿಡಿ

ವ್ಯಸನಗಳಿಂದ ದೃಷ್ಟಿ ದೋಷ ಉಂಟಾಗುತ್ತದೆ: ಡಾ.ವಿಶ್ವನಾಥರೆಡ್ಡಿ

ಸೇಡಂ: ಮದ್ಯ, ಧೂಮಪಾನದಂತಹ ವ್ಯಸನಗಳಿಂದ ಹಲವು ಕಾಯಿಲೆಗಳು ಎದುರಾಗುತ್ತವೆ. ಸಾಮಾನ್ಯವಾಗಿ, ತಂಬಾಕು ಮತ್ತದರ ಹೊಗೆ ದೇಹದೊಳಗೆ ಸೇರಿ ಕ್ಯಾನ್ಸರ್ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಹೇಗೆ ಉಂಟಾಗುತ್ತವೆ ಅದೇ ರೀತಿಯಲ್ಲಿ ದೃಷ್ಟಿ ದೋಷವು ಉಂಟಾಗಲಿದೆ ಎಂದು ಶ್ರೀ ಸಿದ್ದರಾಮೇಶ್ವರ ಕಣ್ಣಿನ ಆಸ್ಪತ್ರೆಯ ಹಿರಿಯ ವೈದ್ಯ ಡಾ.ವಿಶ್ವನಾಥರೆಡ್ಡಿ ಹೇಳಿದರು.

ಪಟ್ಟಣದ ಚಿಂಚೋಳಿ ರಸ್ತೆಯ ವಿಜಯ ಸಭಾಂಗಣದಲ್ಲಿ ಸೇಡಂ ತಾಲೂಕು ವೈದ್ಯರ ಸಂಘದ ಸಹಯೋಗದಲ್ಲಿ ಶ್ರೀ ಸಿದ್ದರಾಮೇಶ್ವರ ಕಣ್ಣಿನ ಆಸ್ಪತ್ರೆ ಆಯೋಜಿಸಿದ್ದ ದೃಷ್ಠಿದೋಷದ ಕಾರಣ ಮತ್ತು ಪರಿಹಾರದ ಕುರಿತ ಸಮಾಲೋಚನೆ ಸಭೆಯನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ದೃಷ್ಟಿ ಮಾಂದ್ಯತೆ, ಮ್ಯಾಕ್ಯುಲಾರ್ ಡಿಜೆನರೇಶನ್ ಅಥವಾ ಕಣ್ಣಿನ ಕೇಂದ್ರ ಭಾಗದ ಮ್ಯಾಕ್ಯುಲಾ ಎಂಬ ಅತೀ ಸೂಕ್ಷ?? ಭಾಗ ಶೀಘ್ರವಾಗಿ ಸವೆಯುವುದು ಮತ್ತು ಕ್ಯಾಟ್‌ರಾಕ್ಟ್ ಅಥವಾ ಕಣ್ಣಿನ ಪೊರೆ ಈ ಎರಡು ಪ್ರಮುಖ ಕಣ್ಣಿನ ಕಾಯಿಲೆಗಳಿಗೂ ಧೂಮಪಾನಕ್ಕೂ ನೇರವಾದ ಸಂಬಂಧ ಇದೆ. ವಿಶೇಷವಾಗಿ ಧೂಮಪಾನವು ಆರೋಗ್ಯಕ್ಕೆ ಮಾರಕ, ಕ್ಯಾನ್ಸರ್ ಸೇರಿ ಹಲವು ಕಾಯಿಲೆಗಳನ್ನು ತಂದೊಡ್ಡಬಹುದು. ವಯಸ್ಕರು ಮತ್ತು ಮಕ್ಕಳೂ ಸೇರಿದಂತೆ ಪ್ರತ್ಯಕ್ಷ ಧೂಮಪಾನಿಗಳಿಗೂ ಮತ್ತು ಪರೋಕ್ಷ ಧೂಮಪಾನಿಗಳಿಗೂ ಧೂಮಪಾನದ ಹೊಗೆ ಕಣ್ಣಿಗೆ ಮತ್ತು ದೃಷ್ಟಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು.

ಡಾ.ರಾಜಶ್ರೀರೆಡ್ಡಿ ಮಾತನಾಡಿ, ಕಣ್ಣಿನ ಕೆಂಪಾಗುವಿಕೆ ಇದು ಹಲವಾರು ವಿಭಿನ್ನ ಆರೋಗ್ಯ ಸಮಸ್ಯೆಗಳನ್ನು ಸೂಚಿಸುತ್ತದೆ. ಈ ರೀತಿಯ ಸಮಸ್ಯೆ ಹೊಂದಿದವರಲ್ಲಿ ಕೆಲವರಿಗೆ ಯಾವುದೇ ಹಾನಿ ಇಲ್ಲದಿದ್ದರೆ ಕೆಲವರಿಗೆ ಗಂಭೀರವಾಗಿ ಪರಿಣಮಿಸುತ್ತದೆ ಮತ್ತು ತುರ್ತು ವೈದ್ಯಕೀಯ ಆರೈಕೆಯ ಅಗತ್ಯವಿರುತ್ತದೆ ಎಂದರು.

ಡಾ.ನೀತಾ ಕುಮಾರಿ, ಡಾ. ಶರಣಕುಮಾರ ಮಾತನಾಡಿದರು. ಈ ವೇಳೆ ವೈದ್ಯರ ಸಂಘದ ತಾಲೂಕು ಅಧ್ಯಕ್ಷ ಡಾ.ರಾಜಕುಮಾರ ಬಿರಾದಾರ, ಶ್ರೀ ಸಿದ್ದರಾಮೇಶ್ವರ ಆಸ್ಪತ್ರೆಯ ನೇತ್ರ ತಜ್ಞ ಡಾ. ಸಿದ್ದಲಿಂಗರೆಡ್ಡಿ, ಹಿರಿಯ ವೈದ್ಯರಾದ ಡಾ.ಸದಾನಂದ ಬೂದಿ, ಡಾ.ಮುರಳಿಧರ ದೇಶಪಾಂಡೆ, ಡಾ.ಉದಯಕುಮಾರ ಶಹ, ಡಾ.ನಿರ್ಮಲಾ ಪಾಟೀಲ್, ಡಾ.ರಾಧಿಕಾ ಶಹ, ಡಾ.ಪ್ರವೀಣ ಜೋಶಿ ಸೇರಿ ತಾಲೂಕಿನ ವೈದ್ಯರು ಉಪಸ್ಥಿತರಿದ್ದರು.

ವಾರದ ಸಂತೆ ಕಾಮಗಾರಿ ಆರಂಭ

ಆಳಂದ: ಮಾದನಹಿಪ್ಪರಗಿ ಗ್ರಾಮದಲ್ಲಿ ಚರಂಡಿ ನೀರಿನಿಂದ ಆವರಿಸಿಕೊಂಡಿದ್ದ ವಾರದ ಸಂತೆಯ ಜಾಗಕ್ಕೆ ಈಗ ಮುಕ್ತಿ ದೊರಕಿದ್ದರಿಂದ ವರ್ತಕರಲ್ಲಿ ಹರ್ಷ ತುಂಬಿದೆ. ಸಂತೆ ನೆರೆಯುವ ಜಾಗದಲ್ಲಿ ನೀರಿ ಸಂಗ್ರಹವಾಗಿ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗಿತ್ತು . ಇದನ್ನು ಬಹಳ ಗಭೀರವಾಗಿ ಪರಿಗಣಿಸಿದ ಮುಖಂಡುರಗಳು ಹಾಗೂ ಗ್ರಾಮ ಪಂಚಾಯತ ಸದಸ್ಯರುಗಳು ಪಂಚಾಯತಿ ಅನುದಾನದಲ್ಲಿ ಚರಂಡಿ ಕಾಮಗಾರಿ ಅಸಾಧ್ಯವೆಂದು ಮನಗಂಡು ಮಾನ್ಯ ಶಾಸಕ ಹಾಗೂ ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್.ಪಾಟೀಲ ಅನುದಾನದಲ್ಲಿ ಕಾಮಗಾರಿ ಮಡಿಕೊಂಡಲು ಕೇಳಿಕೊಂಡಾಗ ಶಾಸಕರು ಮನವಿಯನ್ನು ಪುರಸ್ಕರಿಸಿ ಕಾಮಗಾರಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಸಿದ್ದಲಿಂಗ ಕೈವಲ್ಯಾಶ್ರಮದಿಂದ ಭಾರತೀಯ ಸ್ಟೇಟ್ ಬ್ಯಾಂಕನವರೆಗೆ ಸುಮಾರು 15 ಮೀಟರ ಉದ್ದದ ಎರಡು ಬದಿಯಲ್ಲಿ ಚರಂಡಿ ನಿರ್ಮಾಣ ಆರಂಭಗೊಂಡಿದೆ. ಈ ಕಾಮಗಾರಿಯಿಂದ ವರ್ತಕರು ಹರ್ಷ ವ್ಯಕ್ತಪಡಿಸಿದ್ದಾರೆ. ಈ ಕಾಮಗಾರಿ ನೆರವೇರಲು ಕಾರಣರಾದ ಕೆಎಮ್‌ಎಫ್ ಅಧ್ಯಕ್ಷ ಆರ್.ಕೆ.ಪಾಟೀಲ, ಮುಖಂಡರಾದ ಮಲ್ಲಯ್ಯ ಸ್ವಾಮಿ, ಶಿವಲಿಂಗಪ್ಪ ಜಮಾದಾರ, ಮಹಾದೇವಯ್ಯ ಸ್ವಾಮಿ, ಈರಣ್ಣ ಮೈಂದರಗಿ, ಶಿವಲಿಂಗಪ್ಪ ಮಾತಂಗಿ, ಹರಿದಾಸ್ ಹಜಾರೆ, ಧರ್ಮಣ್ಣ ಕೌಲಗಿ, ಸೋಮನಾಥ ಕೌಲಗಿ ವ್ಯಾಪಾಸ್ಥರು ಧನ್ಯವಾದಗಳು ತಿಳಿಸಿದ್ದಾರೆ.

ಅದ್ದೂರಿ ಕನ್ನಡ ರಾಜ್ಯೋತ್ಸವದ ಯಶಸ್ಸಿಗೆ ಜಿಲ್ಲಾಧಿಕಾರಿ ಸೂಚನೆ

ಕನ್ನಡ ರಾಜ್ಯೋತ್ಸವ ಆಚರಣೆ ಕುರಿತು ಪೂರ್ವಭಾವಿ ಸಭೆ

ಗದಗ: ಜಿಲ್ಲೆಯಲ್ಲಿ ನವೆಂಬರ್.1 ರಂದು ಕನ್ನಡ ರಾಜ್ಯೋತ್ಸವವನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಕನ್ನಡ ರಾಜ್ಯೋತ್ಸವ ಆಚರಣೆಯ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಪ್ರತಿ ವರ್ಷದಂತೆ ಈ ವರ್ಷವೂ ಸಹ ಕನ್ನಡ ರಾಜ್ಯೋತ್ಸವದ ದಿನದ ಹಿಂದಿನ ದಿನ ಹಾಗೂ ಕನ್ನಡ ರಾಜ್ಯೋತ್ಸವದ ದಿನ ಎರಡು ದಿನ ಸರಕಾರಿ ಕಚೇರಿ ಹಾಗೂ ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಚತೆಯೊಂದಿಗೆ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಬೆಳಿಗ್ಗೆ 7.30 ಗಂಟೆಗೆ ಗದಗ ಬೆಟಗೇರಿ ನಗರಸಭೆ ಪದವಿ ಪೂರ್ವ ಕಾಲೇಜ ಆವರಣದಿಂದ ತಾಯಿ ಭುವನೇಶ್ವರಿಯ ಮೆರವಣಿಗೆಯು ವಿವಿಧ ವೃತ್ತಗಳಲ್ಲಿ ಸಂಚರಿಸಿ ನಂತರ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪಲಿದೆ. ಬೆ.9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸುವರು. ಕಾರ್ಯಕ್ರಮಕ್ಕೆ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ಜಿಲ್ಲೆಯ ಎಲ್ಲಾ ಶಾಲಾ ಕಾಲೇಜು ಮಕ್ಕಳು ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಸೂಚನೆ ನೀಡಿದರು.

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಭೆ ಜರುಗಿತು.

> **ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಯಾವುದೇ ಲೋಪಗಳಿಲ್ಲದಂತೆ ಆಚರಿಸಲು ವಿವಿಧ ಸಮಿತಿ ರಚಿಸಲಾಗಿದ್ದು ಸಮಿತಿಯವರು ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಬೇಕು.**
> -ಗೋವಿಂದರೆಡ್ಡಿ ಜಿಲ್ಲಾಧಿಕಾರಿ

ಪೊಲೀಸ್ ಪಡೆ, ಹೋಮಗಾರ್ಡ, ಭಾರತ ಸೇವಾ ದಳಗಳಿಂದ ಪರೇಡ್, ಪಥ ಸಂಚಲನ ಜರುಗಲಿವೆ. ಕಾರ್ಯಕ್ರಮದ ಸ್ಥಳದ ಸ್ವಚ್ಚತೆ ಹಾಗೂ ಅತಿಥಿಗಳಿಗೆ ಆಸನದ ವ್ಯವಸ್ಥೆ , ಅಲ್ಪೋಪಹಾರದ ವ್ಯವಸ್ಥೆ ಕುರಿತು ಕ್ರಮ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಅತಿಥಿ ಗಣ್ಯರ ಆಹ್ವಾನ ಹಾಗೂ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ವಿವಿಧ ರಂಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪರಿಣಿತರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯಿತಿ ಯೋಜನಾಧಿಕಾರಿ ನಿರ್ಮಲಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟ್ಟೂರು, ಯುವಜನ ಮತ್ತು ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಕನ್ನಡಮ್ಮನ ಉತ್ಸವದ ಸಕಲ ಸಿದ್ಧತೆಗೆ ಸಲಹೆ

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಸಿದ್ಧತೆಯ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಮಾತನಾಡಿದರು.

ಹಾವೇರಿ: ಜಿಲ್ಲಾಡಳಿತದಿಂದ ನವೆಂಬರ್ 1 ರಂದು ಅರ್ಥಪೂರ್ಣ ಕನ್ನಡ ರಾಜ್ಯೋತ್ಸವ ಆಚರಣೆಗೆ ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ. ನಾಗರಾಜ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಕನ್ನಡ ರಾಜ್ಯೋತ್ಸವ ಆಚರಣೆ ಸಿದ್ಧತೆ ಕುರಿತು ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗಣರಾ ಜ್ಯೋತ್ಸವ ಆಚರಣೆ ಕಾರ್ಯಕ್ರಮದ ಸಿದ್ಧತೆಗೆ ಈಗಾಗಲೇ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡಗಳನ್ನು ರಚಿಸಲಾಗಿದ್ದು, ಆಯಾ ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಯಾವುದೇ ಲೋಪವಾ ಗದಂತೆ ಅಚ್ಚುಕಟ್ಟಾಗಿ ಮಾಡಬೇಕು ಎಂದರು.

ನಗರದ ಮೈಲಾರ ಮಹದೇವಪ್ಪ ವೃತ್ತದಿಂದ ಹೊರಡುವ ಭುವನೇಶ್ವರಿ ಭಾವಚಿತ್ರ ಮೆರವಣಿಗೆಯಲ್ಲಿ ಎಲ್ಲ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಸೂಚನೆ ನೀಡಿದರು.

> **ಸ್ತಬ್ಧಚಿತ್ರ, ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾಂಗಣ ಸ್ವಚ್ಛತೆ, ವೇದಿಕೆ ಅಲಂಕಾರ, ಆಸನ ವ್ಯವಸ್ಥೆ, ಪಥಸಂಚಲನ, ಅಂಬ್ಯುಲೆನ್ಸ್, ಕುಡಿಯುವ ನೀರು, ಧ್ವನಿವರ್ಧಕ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಎಲ್ಲ ಅಧಿಕಾರಿಗಳು ಸಮನ್ವಯದಿಂದ ಮಾಡಬೇಕು. ನಗರದ ಎಲ್ಲ ವೃತ್ತಗಳಿಗೆ ಹಾಗೂ ಸರಕಾರಿ ಕಚೇರಿಗಳಿಗೆ ದೀಪಾಲಂಕಾರ ಕೈಗೊಳ್ಳಬೇಕು.**
> -ಡಾ.ನಾಗರಾಜ ಅಪರ ಜಿಲ್ಲಾಧಿಕಾರಿ

ಸಭೆಯಲ್ಲಿ ಹಾವೇರಿ ಉಪವಿಭಾಗಾಧಿಕಾರಿ ಚೆನ್ನಪ್ಪ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಹುಗ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಆರ್.ವಿ.ಚಿನ್ನಿಕಟ್ಟಿ, ತಹಸೀಲ್ದಾರ ಶರಣಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ಮೌನೇಶ ಬಡಿಗೇರ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಶಾದಿಮಹಲ್‌ಗೆ ಮರು ಜೀವ

ಕಲಘಟಗಿ: ಸುಮಾರು 7 ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಕಲಘಟಗಿ ಪಟ್ಟಣದ ಹೊರವಲಯದಲ್ಲಿ ಇರುವ ಶಾದಿ ಮಹಲ್ ಇದೀಗ ಮತ್ತೆ ಮರುಜೀವ ಪಡೆದಂತೆ ಆಗಿದ್ದು, ನಿಂತು ಹೋಗಿದ್ದ ಕಟ್ಟಡ ಕಾಮಗಾರಿ ಶುರುವಾಗಿದೆ. ಕಳೆದ ಬಾರಿ ಅಧಿಕಾರದಲ್ಲಿ ಇದ್ದ ಸಚಿವ ಸಂತೋಷ ಲಾಡ್ ಸುಮಾರು 1 ಕೋಟಿ ರು.ವೆಚ್ಚದ ಶಾದಿ ಮಹಲ್ ನಿರ್ಮಾಣಕ್ಕಾಗಿ ಭೂಮಿ ಪೂಜೆ ನೆರವೇರಿಸಿದ್ದರು. ನಂತರ ಸರಕಾರ ಬದಲಾವಣೆಯಿಂದಾಗಿ ಬಿಜೆಪಿ ಸರಕಾರವು ಬಂದ ನಂತರ ಅನುದಾನ ಬಿಡುಗಡೆಯಾಗದೆ ಕಟ್ಟಡ ಕಾಮಗಾರಿ ಅರ್ಧಕ್ಕೆ ನಿಲ್ಲಿಸಲಾಗಿತ್ತು. ಸಚಿವ ಸಂತೋಷ್ ಲಾಡ್ ಅಧಿಕಾರಕ್ಕೆ ಬಂದಿರುವ ಕಾರಣ ಅರ್ಧಕ್ಕೆ ನಿಂತಿರುವ ಶಾದಿ ಮಹಲ್ ಕಾಮಗಾರಿ ಮತ್ತೆ ಮರುಜೀವ ಪಡೆದುಕೊಂಡಿದ್ದು, ಹೆಚ್ಚಿನ ಅನುದಾನ ಕೊಟ್ಟಿದ್ದಾರೆ. ಹೀಗಾಗಿ ಕಾಮಗಾರಿ ಕೆಲಸಗಳು ಶುರುವಾಗಿವೆ. ತಾಲೂಕಿನಲ್ಲಿ ಮದುವೆ ಸಮಾರಂಭಗಳಿಗೆ ಉತ್ತಮವಾದ ಕಟ್ಟಡ ಇಲ್ಲದೆ ಇರುವ ಉದ್ದೇಶದಿಂದ ಈ ಒಂದು ಶಾದಿ ಮಹಲ್ ಜನರಿಗೆ ಅನುಕೂಲವಾಗಲಿದ್ದು ಇನ್ನಾದರೂ ಕಟ್ಟಡ ಕಾಮಗಾರಿ ಅಡೆತಡೆ ಇಲ್ಲದೆ ಪೂರ್ಣಗೊಂಡು ಜನರಿಗೆ ಉಪಯೋಗವಾಗಬೇಕಾಗಿದೆ.

ಕಾಸ್ಮಸ್ ಟೇಬಲ್ ಟೆನ್ನಿಸ್ ಕಪ್‌ಗೆ ಚಾಲನೆ

ಧಾರವಾಡ: ಕಾಸ್ಮಸ್ ಕ್ಲಬ್‌ನಲ್ಲಿ ಆಯೋಜಿಸಿರುವ ಕೆಟಿಟಿಎ ಸಂಯೋಜಿತ ಕಾಸ್ಮಸ್ ಶತಮಾನೋತ್ಸವ ಕಪ್ ಟೇಬಲ್ ಟೆನಿಸ್ ಟೂರ್ನಿಗೆ ಐಎಫ್‌ಎಸ್ ಯತೀಶ್ ಕುಮಾರ್ ಚಾಲನೆ ನೀಡಿದರು. ಸತೀಶ ಕುಮಾರ ಮಾತನಾಡಿ, ಆಟದಲ್ಲಿ ಗೆಲವು ಸೋಲು ಇರುವುದು ಸಹಜ. ಎಲ್ಲರೂ ಕ್ರೀಡಾಮನೋಭಾವದಿಂದ ಆಟ ಆಡಿ ಎಂದು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಟೂರ್ನಿ ಅ.27 ರಿಂದ 29 ರವರೆಗೆ ನಡೆಯಲಿದೆ. ಇದರಲ್ಲಿ ಬೆಂಗಳೂರು, ಮೈಸೂರು, ದಾವಣಗೇರಿ, ಮಂಗಳೂರು, ಬಾಗಲಕೋಟೆ, ಹಳಿಯಾಳ, ದಾಂಡೇಲಿ ಸೇರಿದಂತೆ ವಿವಿಧ ಜಿಲ್ಲೆಯ ಸುಮಾರು 250ಕ್ಕೂ ಹೆಚ್ಚು ಕ್ರೀಡಾ ಪಟುಗಳು ಭಾಗವಹಿಸಿದ್ದಾರೆ. 8 ವಿಭಾಗದಲ್ಲಿ ಪಂದ್ಯಗಳು ನಡೆಯಲಿದೆ. ಇದರಲ್ಲಿ ಅಂಡರ್ 15, 17, 19 ವಯಸ್ಸಿನಲ್ಲಿ ಪುರುಷ ಹಾಗೂ ಮಹಿಳಾ ತಂಡಗಳ ಪಂದ್ಯಗಳು ಭಾಗವಹಿಸಲಿವೆ. ಕ್ಲಬ್ ಜಿ ಸಮಿತಿ ಸದಸ್ಯ ಎ.ಎಸ್.ಹಿರೇಮಠ, ಎಸ್.ಬಿ.ಕಿತ್ತೂರು, ಎಚ್.ಎಫ್. ಹೆಬ್ಬಾಳ, ಎಂ.ಎಸ್.ಹಾಲಭಾವಿ, ವಿಜಯ ಸುಣಗಾರ, ಬಿ.ಎನ್.ಜಮಕಂಡಿ, ರವಿ ನಾಯಕ, ಸೈಯದ ಸನದಿ ಇತರರಿದ್ದರು.

ಮಕ್ಕಳಿಗೆ ಬೇಬಿ ಚೇರ್ ವಿತರಣೆ

ಅಣ್ಣಿಗೇರಿ: ತಾಲೂಕು ವ್ಯಾಪ್ತಿಗೆ ಒಳಪಡುವ ಸಾಸ್ವೆಹಳ್ಳಿ ಗ್ರಾಮದಲ್ಲಿ ಸಾಮಾಜಿಕ ಸೇವಾ ಕಾರ್ಯಕ್ರಮ ಅನ್ವಯ ಗ್ರಾಮೀಣ ಕೂಟ ಅವರಿಂದ ಸಿಎಸ್‌ಆರ್ ಅಡಿಯಲ್ಲಿ ಪುಟಾಣಿ ಮಕ್ಕಳಿಗೆ ಬೇಬಿ ಚೇರ್, ವಿಸಿಟರ್ ಚೇರ್ ಮತ್ತು ಜಮಕಾನ್ ಗಳನ್ನು ಉಚಿತವಾಗಿ ನೀಡಲಾಯಿತು. ಈ ಸಂದರ್ಭದಲ್ಲಿ ಏರಿಯಾ ಮ್ಯಾನೇಜರ್ ದೊಡ್ಡಪ್ಪ ಹೊಸಮನಿ, ಎನ್.ಡಿ.ಪವನ್ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಕುಂತಲಾ ಮಾಡೊಳ್ಳಿ, ಉಪಾಧ್ಯಕ್ಷ ಕುರಿ, ಸದಸ್ಯರು, ಗ್ರಾಮಾಭಿವೃದ್ಧಿ ಅಧಿಕಾರಿ ಮೀನಾಕ್ಷಿ ಭಜಂತ್ರಿ, ಹಾಗೂ ಅಂಗನವಾಡಿ ಸಿಬ್ಬಂದಿ ಸೇರಿದಂತೆ ನಾಗರಿಕರು ಉಪಸ್ಥಿತರಿದ್ದರು.

‘ನಮ್ಮ ಕ್ಲಿನಿಕ್’ ಉದ್ಘಾಟಣೆ

ಯಲ್ಲಾಪುರ: ಆರೋಗ್ಯ ಸೇವೆಗಳನ್ನು ಸಮುದಾಯಕ್ಕೆ ಇನ್ನಷ್ಟು ಹತ್ತಿರಗೊಳಿಸಲು ನಮ್ಮ ಕ್ಲಿನಿಕ್ ಸಹಕಾರಿಯಾಗಿದ್ದು ನಗರದ ಜನತೆ ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕ ಶಿವರಾಮ ಹೆಬ್ಬಾರ ಕರೆ ನೀಡಿದರು. ಸೋಮವಾರ ಪಟ್ಟಣದ ಉದ್ಯಮ ನಗರದಲ್ಲಿ ‘ನಮ್ಮ ಕ್ಲಿನಿಕ್’ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರು ಉತ್ತಮ ಗುಣಮಟ್ಟದ ಸೇವೆಯನ್ನು ಸಾರ್ವಜನಿಕರಿಗೆ ನೀಡುವಂತಾಗಲಿ ಎಂದರಲ್ಲದೇ, ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ವೈದ್ಯರು ಹಿಂದೇಟು ಹಾಕುತ್ತಿರುವುದರ ಕುರಿತು ಅವರು ವಿಷಾದ ವ್ಯಕ್ತ ಪಡಿಸಿದರು. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ನಟರಾಜ್ ಕೆ. ಮಾತನಾಡಿ, ಪ್ರತಿ ತಾಲೂಕಿಗೆ ಒಂದರಂತೆ ನಗರ ಪ್ರದೇಶಕ್ಕೆ ಸೀಮಿತಗೊಳಿಸಿ ನಮ್ಮ ಕ್ಲಿನಿಕ್ ಅನ್ನು 15ನೇ ಹಣಕಾಸು ಆಯವ್ಯಯದಲ್ಲಿ ಆರಂಭಿಸಿಲಾಗಿರುತ್ತದೆ. ನಗರ ಪ್ರದೇಶದ 15-20 ಸಾವಿರ ಜನಸಂಖ್ಯೆಗೆ ಆರೋಗ್ಯ ಸೇವೆಗಳನ್ನು ಇನ್ನೂ ಗುಣಮಟ್ಟದ ಸೇವೆಗಳನ್ನು ನೀಡಲು ಅನುಕೂಲವಾಗುವಂತೆ ನಮ್ಮ ಕ್ಲಿನಿಕ್ ಸ್ಥಾಪಿಸಲಾಗಿದೆ. ಪಟ್ಟಣ ಪಂಚಾಯತ ಉಪಾಧ್ಯಕ್ಷ ಅಮಿತ ಅಂಗಡಿ, ಸದಸ್ಯ ಸತೀಶ ನಾಯ್ಕ, ಗೀತಾ ದೇಶಭಂಡಾರಿ, ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಸುನೀಲ ಗಾವಡೆ, ತಾಲೂಕು ಆರೋಗ್ಯಾಧಿಕಾರಿ ಡಾ. ನರೇಂದ್ರ ಪವಾರ, ಉಪಸ್ಥಿತರಿದ್ದರು.

{ಬಸನಗೌಡ ಪಾಟೀಲ್ ಯತ್ನಾಳ್} ಬಿಜೆಪಿ ಶಾಸಕ

ವಿಜಯೇಂದ್ರ ತಂಡ ಎಲ್ಲ ಮುಗಿದ ಮೇಲೆ ಸಮಿತಿ ಮಾಡಿದ್ದಾರೆ. ಇದು ಕಾಟಾಚಾರಕ್ಕೆ ಮಾಡಿದ ತಂಡ. ಹಾಗಾಗಿ ನಾನು ಹಾಗೂ ಲೋಕಸಭಾ ಸದಸ್ಯರು ಇದನ್ನು ಬಹಿಷ್ಕರಿಸಿದ್ದೇವೆ. ಇದನ್ನು ನಾನು ಪ್ರಸ್ತಾಪಿಸಿ ವಿರೋಧ ಮಾಡಿದ್ದಕ್ಕೆ ಅದನ್ನು ವಾಪಸ್ ಪಡೆದರು.

ಶ್ರೀ ಧನ್ವಂತರಿ ಜಯಂತಿ ಆಯುರ್ವೇದ ದಿನಾಚರಣೆ

ಗದಗ: ಶ್ರೀಧನ್ವಯಂತಿ ಜಯಂತಿ 9 ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಪ್ರಯುಕ್ತ ಸೋಮವಾರ ಆಯುರ್ವೇದ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ ಮತ್ತು ಡಿವೈಎಸ್‌ಪಿ ಇನಾಮದಾರ ಅವರು ಜಾಥಾಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಯುಷ್ ಇಲಾಖೆಯ ಅಧಿಕಾರಿ ಡಾ. ಮಲ್ಲಿಕಾರ್ಜುನ ಉಪ್ಪಿನ, ಡಿಜಿಎಂ ಆಯುರ್ವೇದಿಕ ಕಾಲೇಜಿನ ಪ್ರಿನಿಪಾಲರಾದ ಡಾ.ಸಂತೋಷ ಬೆಳವಡಿ, ಡಾ. ವೀರೇಶ ಕೊಟ್ರಶೆಟ್ಟರ್, ವೈದ್ಯಾಧಿಕಾರಿಗಳು, ಕಾಲೇಜು ವಿದ್ಯಾರ್ಥಿಗಳು ಇದ್ದರು. ಆಯುರ್ವೇದ ಜಾಥಾವು ನಗರದ ಮುನ್ಸಿಪಲ್ ಕಾಲೇಜಿನಿಂದ ರೋಟರಿ ಸರ್ಕಲ್, ಟಾಂಗಾ ಕೂಟ, ಮಹೇಂದ್ರಕರ ಸರ್ಕಲ್, ಗಾಂಧಿ ಸರ್ಕಲ್ ನಂತರ ಮುನ್ಸಿಪಲ್ ಕಾಲೇಜಿಗೆ ಬಂದು ತಲುಪಿತು .

ವಿದ್ಯಾಲಯದ ಸುವರ್ಣ ಮಹೋತ್ಸವ ಸಮಾರೋಪ

ಧಾರವಾಡ: ಸಮುದಾಯದ ಏಳಿಗೆಯಲ್ಲಿ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಪಾತ್ರ ಹಾಗೂ ಸವಾಲುಗಳ ಕಾರ್ಯ ಮಹತ್ವದ್ದಾಗಿದೆ ಎಂದು ಭುವನೇಶ್ವರ ರಾಜ್ಯದ, ಅಖಿಲ ಭಾರತ ಸಮನ್ವಯ ಸಂಶೋಧನಾ ಕೇಂದ್ರದ ಮಾಜಿ ಅಧ್ಯಕ್ಷರು ಹಾಗೂ ರೈತ ಮಹಿಳೆ ಡಾ. ಜತಿಂದರ್ ಕಿಸ್ತವಾರಿಯಾ ಹೇಳಿದರು.

ಕೃಷಿ ವಿಶ್ವವಿದ್ಯಾಲಯದ, ವಿಜ್ಞಾನ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ, ಸಮುದಾಯ ಶಿಕ್ಷಣದ ಸವಾಲುಗಳು ಹಾಗೂ ಅವಕಾಶಗಳು ಎಂಬ ವಿಶೇಷ ಕಾರ್ಯಾಗಾರ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಅವರು ಮಾತನಾಡಿ, ಸಮುದಾಯದ ಏಳಿಗೆಯಲ್ಲಿ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಪಾತ್ರ ಹಾಗೂ ಸವಾಲುಗಳ ಬಗ್ಗೆ ಚರ್ಚಿಸಿದರು ಮತ್ತು ಅವುಗಳನ್ನು ಸಮರ್ಪಕವಾಗಿ ಬಗೆಹರಿಸುವ ನಿದರ್ಶನ ವಿವರಿಸಿದರು.

ಕಾರ್ಯಕ್ರಮದಲ್ಲಿ ಐದು ವಿಭಾಗಗಳ ವಿಷಯ ತಜ್ಞ ಡಾ.ಜತಿಂದರ್ ಕಿಸ್ತವಾರಿಯಾ, ರಿಟಾ ಸೋನಾವತ್, ಡಾ. ಸೂರ್ಯ ರಾಥೋರ್, ಡಾ. ಲಕ್ಷ್ಮೀ ಜಗನ್ಮೋಹಿನಿ ಮತ್ತು ಡಾ. ಅನುಲ್ ಚೌಧರಿ ಅವರು ಸಮುದಾಯ ವಿಜ್ಞಾನ ವಿದ್ಯಾರ್ಥಿಗಳಿಗೆ ಇರುವಂತಹ ಉದ್ಯೋಗಾವಕಾಶಗಳ ಕುರಿತು ಎಳೆ ಎಳೆಯಾಗಿ ವಿವರಿಸಿದರು.

ವಿಜ್ಞಾನ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಸಮಾರೋಪದ ವಿಶೇಷ ಕಾರ್ಯಾಗಾರ ಕಾರ್ಯಕ್ರಮದಲ್ಲಿ ರೈತ ಮಹಿಳೆ ಡಾ. ಜತಿಂದರ್ ಕಿಸ್ತವಾರಿಯಾ ಮಾತನಾಡಿದರು.

ಕುಲಪತಿ ಪಿ.ಎಲ್.ಪಾಟೀಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ಹಾಗೂ ಗಣ್ಯಮಾನ್ಯರನ್ನು ಆದರಪೂರ್ವಕವಾಗಿ ಸ್ವಾಗತಿಸಿ ಮುಖ್ಯ ಅತಿಥಿಗಳ ಕಿರುಪರಿಚಯ ಮಾಡಿದರು. ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ವಿವಿಧ ವಿಭಾಗಗಳ ವಿಜ್ಞಾನಿಗಳ ಸೇವೆ ಮತ್ತು ಕಾರ್ಯವೈಖರಿಯನ್ನು ಇದೇ ಸಂದರ್ಭದಲ್ಲಿ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಡಾ. ಲತಾ ಪೂಜಾರ ಅವರು ವಂದನಾರ್ಪಣೆ ಮಾಡಿದರು. ಡಾ.ರೇಣುಕಾ ಸಾಳುಂಕೆ, ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸಮಾರಂಭದಲ್ಲಿ ಡಾ. ವಿ. ಆರ್. ಕೀರೆಸೂರ, ಡಾ. ಜಯಲಕ್ಷ್ಮೀ ರಾಯಕೋಡ ಕುಲಸಚಿವರು, ಡಾ. ಸರೋಜಿನಿ ಕರಕಣ್ಣವರ, ವಿದ್ಯಾರ್ಥಿ ಕಲ್ಯಾಣ ಸಂಘದ ವಿದ್ಯಾಧಿಕಾರಿಗಳು, ಡಾ. ಶೈಲಜಾ ನಾಯ್ಕ, ಹಳೆಯವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳು ಮತ್ತು ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಧಾರವಾಡದ ಶಿಕ್ಷಕ- ಶಿಕ್ಷಕೇತರ ಸಿಬ್ಬಂದಿ ಹಾಗೂವಿದ್ಯಾರ್ಥಿಗಳು ಹಾಜರಿದ್ದರು.

ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುವ ವೈದ್ಯರಾಗಿ

ಧಾರವಾಡ: ಎಸಡಿಎಂ ವೈದ್ಯಕೀಯ ಮಹಾವಿದ್ಯಾಲಯದ ಪ್ರಥಮ ವರ್ಷದ ಬ್ಯಾಚ್ 2024-25 ರ, 150 ವೈದ್ಯಕೀಯ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ಡಾ.ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಎಸಡಿಎಂ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಡಿ.ವೀರೇಂದ್ರ ಹೆಗ್ಗಡೆಯವರು ವಿದ್ಯಾರ್ಥಿಗಳಿಗೆ ಆಶೀರ್ವದಿಸಿ, ವೈದ್ಯಕೀಯ ಕೋರ್ಸ್‌ನ್ನು ಮೊದಲಿನಿಂದಲೇ ಗಂಭೀರವಾಗಿ ಪರಿಗಣಿಸಿ, ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಲು ಜವಾಬ್ದಾರಿಯುತ ವೈದ್ಯರಾಗ ಬೇಕೆಂದು ಹೇಳಿದರು.

> **ಒಳ್ಳೆಯ ಅಭ್ಯಾಸಗಳು ಮತ್ತು ಉತ್ತಮ ನಿದ್ರೆಯು ನಿಮ್ಮ ವೃತ್ತಿಯ ಜತೆಗೆ ನಿಮ್ಮ ಸರ್ವಾಂಗೀಣ ವ್ಯಕ್ತಿತ್ವಕ್ಕೆ ಸಹಾಯ ಮಾಡುತ್ತದೆ. ಉತ್ತಮ ರೀತಿಯಲ್ಲಿ ಅಧ್ಯಯನ ಮಾಡುವುದಕ್ಕಾಗಿ ನಿರಂ ತರ ಓದುವಿನ ನಡುವೆ ಮಧ್ಯಂತರ ವಿರಾಮವು ಅಗತ್ಯ. ಶಿಕ್ಷಣದ ಉದ್ದೇಶ ಅರ್ಥಮಾಡಿಕೊಳ್ಳಬೇಕು.**
> -ಡಾ. ನಿರಂಜನ ಕುಮಾರ್ ಉಪ ಕುಲಪತಿ

ನಿರ್ದೇಶಕಿ ಪದ್ಮಲತಾ ನಿರಂಜನ್ ಅವರು ವಿದ್ಯಾರ್ಥಿಗಳಿಗೆ ಕಲಿಕಾ ಪರಿಕರಗಳನ್ನು ವಿತರಿಸಿದರು.

ಗೌರವ ಅತಿಥಿಗಳಾದ ಎಸಡಿಎಂ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ನಿರಂಜನ ಕುಮಾರ್ ಮಾತನಾಡಿ, ವೈದ್ಯ ರು ತಮ್ಮ ರೋಗಿಗಳಿಗೆ ಅಮೂಲ್ಯವಾದ ಆರೋಗ್ಯ ನೀಡಬೇಕು. ಉತ್ತಮ ವೈದ್ಯ ರಾಗಲು ಮಹಾವಿದ್ಯಾಲಯದಲ್ಲಿ ಲಭ್ಯವಿ ರುವ ಅತ್ಯುತ್ತಮ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಸಹ ಉಪ ಕುಲಪತಿ (ಆಡಳಿತ ವಿಭಾಗದ) ವಿ. ಜೀವಂಧರ್ ಕುಮಾರ್, ಕುಲಸಚಿವ ಡಾ. ಚಿದೇಂದ್ರ ಶೆಟ್ಟರ್, ಆಡಳಿತ ನಿರ್ದೇಶಕ ಸಾಕೇತ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾದ ಕಾರ್ಯನಿರ್ವಾ ಹಕ ನಿರ್ದೇಶಕಿ ಪದ್ಮಲತಾ ನಿರಂಜನ್ ಅವರು ವಿದ್ಯಾರ್ಥಿಗಳಿಗೆ ಕಲಿಕಾ ಪರಿಕರಗಳನ್ನು ವಿತರಿಸಿದರು. ಎಸ್‌ಡಿಎಂ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂ ಶುಪಾಲ ಡಾ. ರತ್ನಮಾಲಾ ಎಂ.ದೇಸಾಯಿ ಅವರು ಅತಿಥಿಗಳನ್ನು, ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಸ್ವಾಗತಿಸಿದರು.

ಡಾ. ಶ್ವೇತಾ ಪ್ರಭು ಮತ್ತು ಡಾ. ಸುಘೋಷ್ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ಡಾ. ದೀಪಕ ಕಣಬೂರ್ ವಿಭಾಗಗಳ ಮುಖ್ಯಸ್ಥರನ್ನು ಪರಿಚಯಿಸಿದರು ಮತ್ತು ಡಾ. ವಿಜಯ್ ಕುಲಕರ್ಣಿ ವಂದಿಸಿದರು.

ಅಕ್ರಮ ವಾಣಿಜ್ಯ ಕಟ್ಟಡ ತೆರವಿಗೆ ಪ್ರತಿಭಟನೆ

ಹಾವೇರಿ: ನಗರದ ದಾನಮ್ಮ ದೇವಸ್ಥಾನ ಎದುರುಗಡೆ ಅವರ ಸ್ಮಶಾನದ ಜಾಗದಲ್ಲಿ ಮುಸ್ಲಿಮರು ವಾಣಿಜ್ಯ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದನ್ನು ವಿರೋಧಿಸಿ ಕಾನೂನು ಬಾಹಿರ ಕಟ್ಟಡ ನಿರ್ಮಾಣ ನಡೆಯ ಕೂಡದು ತೆರವುಗೊಳಿಸುವಂತೆ ಆಗ್ರಹಿಸಿ ನಗರದ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ಮೂಲಕ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ಬಿಜೆಪಿ ನೇತೃತ್ವದಲ್ಲಿ ನೀಡಲಾಗಿದ್ದ ಈ ಪ್ರತಿಭಟನೆಗೆ ಹಾವೇರಿಯ ಶ್ರೀರಾಮ ಸೇನೆ ಸಂಘ, ವೀರಶೈವ ತರುಣ ಸಂಘ ದಲಿತ ಸಂಘಟನೆಗಳು ಸೇರಿದಂತೆ ಅನೇಕ ಮುಂಜೂಣಿ ಸಂಘಟನೆಗಳು ಈ ಹೋರಾಟದಲ್ಲಿ ಭಾಗವಹಿಸಿ ಬೆಂಬಲ ನೀಡಿದವು. ಪ್ರತಿಭಟನೆಯು ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಎಂ.ಜಿ ರಸ್ತೆ ಮೂಲಕ ಹೊಸಮನಿ ಸಿದ್ದಪ್ಪ ವೃತ್ತಕ್ಕೆ ಆಗಮಿಸಿ ಬೃಹತ್ ಮಾನವ ಸರಪಳಿ ನಿರ್ಮಿಸಿ ಹೆದ್ದಾರಿ ಬಂದ್ ಮಾಡಿದ ಸಮಯದಲ್ಲಿ ಹೋರಾಟ ಉಗ್ರ ಸ್ವರೂಪ ಪಡೆದಾಕ್ಷ ಪೊಲೀಸ್‌ರು ಹತ್ತಾರು ಪ್ರತಿಭಟನಾಕಾರರನ್ನು ಬಂಧಿಸಿ ಪೊಲೀಸ್ ವಾಹನದಲ್ಲಿ ಹೊತ್ತೊಯ್ಯುದರು.

ಈ ಸಮಯದಲ್ಲಿ ಪೊಲೀಸರಿಂದ ಬಂಧನ ಪ್ರಮುಖರಾದ ಮಾಜಿ ಶಾಸಕ ಶಿವರಾಜ್ ಸಜ್ಜನರ, ಬಿಜೆಪಿ ಮುಖಂಡರಾದ ಸಿದ್ದರಾಜು ಕಲಕೋಟಿ,ಗವಿಸಿದ್ದಪ್ಪ ದ್ಯಾಮಣ್ಣನವರ್, ಕಿರಣ್ ಕೊಳ್ಳಿ,ಶಂಬಣ್ಣ ಜತ್ತಿ ,ಪ್ರಭು ಹಿಟ್ನಳ್ಳಿ,ನಿರಂಜನ್ ಹೇರೂರು, ಸಂತೋಷ ಆಲದ ಕಟ್ಟಿ, ಮುತ್ತಣ್ಣ ಮುಷ್ಟಿ, ಕೆ ಸಿ ಪಾವಲಿ, ಬಸವರಾಜ್ ಹಾಲಪ್ಪನವರ್, ಜಗದೀಶ್ ಬಶೇಗಣ್ಣಿ,ಪ್ರವೀಣ್ ಶೆಟ್ಟರ್, ಶಿವಯೋಗಿ ಕೊಳ್ಳಿ, ಚೆನ್ನಮ್ಮ ಬ್ಯಾಡಗಿ, ರೋಹಿಣಿ ಪಾಟೀಲ್, ಎಂಎಸ್ ಪಾಟೀಲ್ ,ರಟ್ಟಿಹಳ್ಳಿ ಜಾವಗಲ್, ಗಿರೀಶ್ ಗುಮಾಕಾರ್, ಅಭಿಷೇಕ್ ಉಪ್ಪಿನ್, ನಾಗರಾಜ್ ಹರಿಗೋಲ್ ,ಮಾಲಿಂಗ್ ಸ್ವಾಮಿ ಹಿರೇಮಠ,ಗುರುಬಸಯ್ಯ ಹಿರೇಮಠ, ನಾಗರಾಜ್ ಸುಂಕದ ಸೇರಿದಂತೆ ಇನ್ನೂ ಮುಂತಾದ ಪ್ರಮುಖರನ್ನ ಪೊಲೀಸರು ಬಂಧಿಸಿದರು.

ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ಮೂಲಕ ಬೃಹತ್ ಪ್ರತಿಭಟನೆ ನಡೆಸಿದವರನ್ನು ಪೊಲೀಸ್‌ರು ಹತ್ತಾರು ಪ್ರತಿಭಟನಾಕಾರರನ್ನು ಬಂಧಿಸಿದರು.

ದೀಪಾವಳಿ ಪಟಾಕಿ ಮಾರಾಟಕ್ಕೆ ಸ್ಥಳ ನಿಗದಿ

ಹಾವೇರಿ: ದೀಪಾವಳಿ ಹಬ್ಬದ ಅಂಗವಾಗಿ ಸಾರ್ವಜನಿಕ ಸುರಕ್ಷತೆ ಹಿತದೃಷ್ಟಿಯಿಂದ ಹಾಗೂ ಅಹಿತಕರ ಘಟನೆಗಳನ್ನು ತಪ್ಪಿಸಲು ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಲ್ಲಿ ಅ.28 ರಿಂದ ನ.6ರವರೆಗೆ ಮದ್ದು ಮಾರಾಟ ಮಾಡಲು ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳ ನಿಗದಿ ಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ. ಅಧಿ ಕೃತವಾಗಿ ಪರವಾನಿಗೆ ಪಡೆದ ಮಾರಾಟಗಾರರು ಮಾತ್ರ ಕೇವಲ ಹಸಿರು ಪಟಾಕಿಗಳನ್ನಷ್ಟೇ ತಾತ್ಕಾಲಿಕ ಶೆಡ್ಡುಗಳನ್ನು ಅಗ್ನಿಶಾಮಕ ಇಲಾ ಖೆಯ ನಿರ್ದೇಶನದಂತೆ ನಿರ್ಮಿಸಿಕೊಂಡು, ಮದ್ದು ಮಾರಾಟ ಸ್ಥಳ:ಹಾವೇರಿ ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನ, ಗುತ್ತಲ ಗ್ರಾಮದ ಆಸ್ತಿ ನಂ.2552 ಡಿ.ಸ.ನಂ.219/1 ಪ್ಲಾಟ ನಂ.05, ಹೊಸರಿತ್ತಿ ಗ್ರಾಮ, ಬ್ಯಾಡಗಿ ಹಾಗೂ ರಾಣೇಬೆನ್ನೂರು ತಾಲೂಕು ಕ್ರೀಡಾಂಗಣ, ಹಿರೇಕೆರೂರು ಪೊಲೀಸ್ ಮೈದಾನದ ಬಯಲು ಪ್ರದೇಶ, ಚಿಕ್ಕೇರೂರು ಗ್ರಾಮ ಪಂಚಾಯಿತಿ ಆಸ್ತಿ ನಂ.284/4ರ ಖುಲ್ಲಾ ಜಾಗೆ ಶಿಗ್ಗಾಂವ ಪುರಸಭೆ ವ್ಯಾಪ್ತಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬಯಲು ಜಾಗೆ, ಬಂಕಾಪುರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಬಯಲು ಪ್ರದೇಶ ನಿಗದಿಪಡಿಸಲಾಗಿದೆ.

ಭೃಂಗದ ಬೆನ್ನೇರಿದ ಊರಲ್ಲಿ ಬೇಂದ್ರೆ ಭಾವಗೀತ

ಧಾರವಾಡ: ಅಂಬಿಕಾತನಯದತ್ತ ದ.ರಾ. ಬೇಂದ್ರೆ ಅವರಿಗೆ ಕಾವ್ಯ ರಚನೆಗೆ ಸ್ಫೂರ್ತಿ ನೀಡಿದ ಮುಗದ ಕೆರೆ ದಡದಲ್ಲಿ ವರಕವಿಯ ಕಾವ್ಯ ವಾಚನ, ಗಾಯನ, ನೃತ್ಯ ಸಾವಿರದ ಕವಿಯ 43 ನೇ ಪುಣ್ಯಸ್ಮರಣೆಯನ್ನು ಸ್ಮರಣೀಯವಾಗಿಸಿತು.

ಜಿ.ಬಿ.ಜೋಶಿ ಮೆಮೋರಿಯಲ್ ಟ್ರಸ್ಟ್, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಸಕ್ರಿ ಬಾಳಾಚಾರ್ಯ (ಶಾಂತಕವಿ) ಟ್ರಸ್ಟ್, ಮುಗದ ಗ್ರಾಮ ಪಂಚಾಯತಿ ಹಾಗೂ ಗ್ರಾಮದ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಶನಿವಾರ ಸಂಜೆ ಗ್ರಾಮದಲ್ಲಿ ನಡೆದ ಭೃಂಗದ ಬೆನ್ನೇರಿ ಕಾರ್ಯಕ್ರಮ ಯಶಸ್ವಿಯಾಯಿತು.

ಹಿರಿಯ ಸಾಹಿತಿ ಡಾ. ಶಾಮಸುಂದರ ಬಿದರಕುಂದಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ.ರಮಾಕಾಂತ ಜೋಶಿ, ಅತಿಥಿಗಳಾಗಿ ಕಲ್ಲಪ್ಪ ಹಟ್ಟಿಯವರ, ಡಾ. ಕೃಷ್ಣ ಕಟ್ಟಿ ವೇದಿಕೆ ಮೇಲಿದ್ದರು.

ದ.ರಾ. ಬೇಂದ್ರೆ ಅವರ ಶಬ್ದಗಳನ್ನು ತಮ್ಮಲಯ, ಪ್ರಾಸಕ್ಕೆ ಅನುಗುಣವಾಗಿ ಕುಣಿಸ್ಯಾಡಿದ ಬೇಂದ್ರೆಯವರ ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾಂವಾ, ಘಮಘಮಘಮಾಡಸ್ತಾವ ಮಲ್ಲಿಗೆ ಹಾಡುಗಳಿಗೆ ಗ್ರಾಮದ ನವಭಾರತ ಕಾನ್ವೆಂಟ್ ಸ್ಕೂಲ್ ಮಕ್ಕಳು ಹೆಜ್ಜೆ ಹಾಕಿದ್ದು ಕುಣಿಯೋಣು ಬಾರಾ ಎಂಬ ಕವಿಯ ಕರೆಗೆ ಓಗೊಟ್ಟು ಮಕ್ಕಳು ಕುಣಿದಂತಿತ್ತು.

ಗ್ರಾಮದ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಭೃಂಗದ ಬೆನ್ನೇರಿ ಕಾರ್ಯಕ್ರಮ ನಡೆಯಿತು.

ಅಂಬಿಕಾತನಯದತ್ತ ಕುರಿತ ಸಾಕ್ಷ್ಯ ಚಿತ್ರ ಪ್ರದರ್ಶನದೊಂದಿಗೆ ಬೇಂದ್ರೆ ಕಾವ್ಯ ದೀಪಾವಳಿ ಸಂಪನ್ನಗೊಂಡಿತು. ರಾಧಿಕಾ ಕಾಖಂಡಿಕಿ ಪ್ರಾರ್ಥಿಸಿದರು. ಡಾ. ಹ.ವೆಂ. ಕಾಖಂಡಿಕಿ ನಿರೂಪಿಸಿದರು.

ಈ ಸಂದರ್ಭದಲ್ಲಿ ಡಾ. ಕೃಷ್ಣ ಕಟ್ಟಿ, ಡಾ. ಪ್ರಕಾಶ ಗರೂಡ, ರಶ್ಮಿ ಶಿರಹಟ್ಟಿ, ಡಾ. ಅರವಿಂದ ಯಾಳಗಿ, ಡಾ. ಶಶಿಧರ ತೋಡಕರ, ಆನಂದ ಝುಂಝುರವಾಡ, ಶ್ರೀದೇವಿ ಜೋಶಿ, ಡಾ. ರಾಜೇಶ್ವರಿ ಮಹೇಶ್ವರಯ್ಯ, ಅಶ್ವಿನಿ ಕಾಶೀಕರ, ನರಸಿಂಹ ಪರಾಂಜಪೆ, ಡಾ. ಬಾಳಣ್ಣ ಶೀಗಿಹಳ್ಳಿ, ಮುಕುಂದ ಕುಲಕರ್ಣಿ , ಡಾ. ರಮಾಕಾಂತ ಜೋಶಿ, , ರವಿ ಕಸಮಳಗಿ, ಕಲ್ಲಪ್ಪ ಹಟ್ಟಿಯವರ, ಡಾ. ಹ. ವೆಂ. ಕಾಖಂಡಿಕಿ ಇದ್ದರು.

ಎಫ್‌ಎಕ್ಯೂ ಶೇಂಗಾ ಖರೀದಿಗೆ ಬೆಲೆ ನಿಗದಿ

ಗದಗ : ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್‌ಎಕ್ಯೂ ಗುಣಮಟ್ಟದ ಶೇಂಗಾ ಹುಟ್ಟುವಳಿ ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ನೋಂದಣಿ ಪ್ರಕ್ರಿಯೆಯಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸು ವಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದರು. ಗದಗ ಜಿಲ್ಲಾಧಿಕಾ ರಿಗಳ ಕಚೇರಿ ಸಭಾಂಗಣದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕೃಷಿ ಹುಟ್ಟುವಳಿಯಿಂದ ಶೇಂಗಾ ಖರೀದಿಸುವ ಕುರಿತು ಜಿಲ್ಲಾ ಟಾಸ್ಕ್ ಫೋರ್ಸ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರಕಾರದ ಆದೇಶದನುಸಾರ ರೈತರು ನೋಂದಣಿ ಕಾಲಾವಧಿಯನ್ನು 45 ದಿನಗಳವರೆಗೆ ಮತ್ತು ಖರೀದಿ ಅವಧಿಯನ್ನು 90 ದಿನಗಳವರೆಗೆ ನೊಂದಣಿ ಕಾರ್ಯದ ಜತೆಗೆ ಖರೀದಿ ಪ್ರಕ್ರಿಯೆ ಪ್ರಾರಂಭಿಸತಕ್ಕದ್ದು. ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕ ಸುಧಾ ಆರ್ ಬಂಡಿ ಮಾತನಾಡಿ, ಎಫ್‌ಎಕ್ಯೂ ಗುಣಮಟ್ಟದ ಶೇಂಗಾ ಹುಟ್ಟುವಳಿಗೆ ಪ್ರತಿ ಕ್ವಿಂಟಾಲ್‌ಗೆ 6,783 ರಂತೆ ನಿಗದಿಪಡಿಸಲಾಗಿದೆ. ಜಿಲ್ಲೆಯ 10 ಕಡೆಗಳಲ್ಲಿನ ಶೇಂಗಾ ಖರೀದಿ ಕೇಂದ್ರಗಳು. ಗದಗ- ಬಳಗಾನೂರು, ಹೊಂಬಳ, ಮುಳಗುಂದ,ಶಿರಹಟ್ಟಿ- ರಣತೂರ, ಶಿಗ್ಲಿ, ರೋಣ ಅಬ್ಬಿಗೇರಿ, ಸೂಡಿ: ನರಗುಂದ- ಕಣಕಿಕೊಪ್ಪ, ಮುಂಡರಗಿ- ಬರದೂರು, ಕಲಕೇರಿ.